ಶನಿವಾರ, ಆಗಸ್ಟ್ 24, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 236 | ಪುಟ 24

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶರಾವತಿ ನೀರನ್ನು ಬೆಂಗಳೂರಿಗೆ ತರುವ ಯೋಜನೆ

ನೇಪಾಳ: ನದಿಗೆ ಉರುಳಿದ ಬಸ್– 18 ಭಾರತೀಯರ ಸಾವು 13

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ 11

ಸೆನ್ಸೆಕ್ಸ್	ನಿಫ್ಟಿ	₹/$
81,086	24,823	83.90

‘ಶಾಸಕ ರೇವಣ್ಣ ಕಿರುಕುಳ ದೃಢ’

ದೋಷಾರೋಪ ಪಟ್ಟಿ ಸಲ್ಲಿಸಿದ ಎಸ್‌ಐಟಿ: ಮಾಜಿ ಸಂಸದ ಪ್ರಜ್ವಲ್ ಮೇಲಿನ ಆರೋಪ ಸಾಬೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಮೊದಲ ಪ್ರಕರಣದ ಸಂತ್ರಸ್ತೆಗೆ ಜೆಡಿಎಸ್ ಶಾಸಕ ಎಚ್‌.ಡಿ. ರೇವಣ್ಣ ಅವರು ಲೈಂಗಿಕ ಕಿರುಕುಳ ನೀಡಿರುವುದು ಮತ್ತು ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರ ನಡೆಸಿ, ವಿಡಿಯೊ ಚಿತ್ರೀಕರಿಸಿಕೊಂಡಿರುವುದು ತನಿಖೆಯಲ್ಲಿ ದೃಢಪಟ್ಟಿದೆ ಎಂದು ಸಿಐಡಿ ವಿಶೇಷ ತನಿಖಾ ದಳ (ಎಸ್‌ಐಟಿ) ನ್ಯಾಯಾಲಯಕ್ಕೆ ಶುಕ್ರವಾರ ಸಲ್ಲಿಸಿದ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದೆ.

ತನಿಖಾಧಿಕಾರಿ ಬಿ.ಸುಮಾರಾಣಿ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ 2,144 ಪುಟಗಳ ಆರೋಪ ಪಟ್ಟಿ ಸಲ್ಲಿಸಿದರು.

ರೇವಣ್ಣ ಮೇಲಿನ ದೋಷಾರೋಪ: ‘ಎಚ್‌.ಡಿ.ರೇವಣ್ಣ ಅವರು ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ಕೈಹಿಡಿದು ಎಳೆದು, ಅವರ ಮೈ–ಕೈ ಮುಟ್ಟಿ ಹತ್ತಿರಕ್ಕೆ ಎಳೆದುಕೊಂಡು ಲೈಂಗಿಕ ಕಿರುಕುಳ ನೀಡಿರುವುದು ಸಾಬೀತಾಗಿದೆ’ ಎಂದು ಆರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ.

ಎಚ್‌.ಡಿ.ರೇವಣ್ಣ

ಪ್ರಜ್ವಲ್ ರೇವಣ್ಣ

‘ಹೊಳೆನರಸೀಪುರದಲ್ಲಿ ರೇವಣ್ಣ ಅವರಿಗೆ ಸೇರಿದ ಮನೆಯಿದ್ದು, ಅವರ ಪತ್ನಿ ಭವಾನಿ ರೇವಣ್ಣ ಅವರ ಅನುಮತಿ ಮೇರೆಗೆ ಹಾಸ್ಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದರು (2019ರಿಂದ 2020ರ ವರೆಗೆ). ಭವಾನಿ ಅವರು ಮನೆಯಲ್ಲಿ ಇಲ್ಲದಿರುವಾಗ ಸಂತ್ರಸ್ತೆಯನ್ನು ಕೊಠಡಿಗೆ ಬಾ... ಏಕೆ ಕೆಳಗೆ ಹೋಗುತ್ತೀಯಾ... ನಾನೇನು ಮಾಡಲ್ಲ’ ಎಂದು ಆಗಾಗ್ಗೆ ಕರೆಯುತ್ತಿದ್ದರು. ಅಲ್ಲದೇ ಅವರ ಮನೆಯ ಮೊದಲ ಮಹಡಿಯಲ್ಲಿದ್ದ ವಸ್ತುಗಳನ್ನು ಇಡುವ ಕೊಠಡಿಗೆ ಎಲ್ಲ ಕಾರ್ಮಿಕರನ್ನು ಕರೆಸಿ ಕೊಂಡು ಎಲ್ಲರಿಗೂ ಹಣ್ಣು ವಿತರಣೆ ಮಾಡುತ್ತಿದ್ದರು. ಸಂತ್ರಸ್ತೆಗೆ ಲೈಂಗಿಕ ಕಿರುಕುಳ ನೀಡುವ ಉದ್ದೇಶದಿಂದ ಕೊನೆಯಲ್ಲಿ ಹಣ್ಣು ಕೊಡಲು ಕೊಠಡಿಯಲ್ಲೇ ಇರಿಸಿಕೊಳ್ಳುತ್ತಿದ್ದರು. ಇತರೆ ಕೆಲಸಗಾರರು ಹಣ್ಣು ಪಡೆದು ತೆರಳಿದ ನಂತರ ಸಂತ್ರಸ್ತೆಗೆ ಲೈಂಗಿಕ ಕಿರುಕುಳ ನೀಡಿದ್ದರು’ ಎಂದು ಉಲ್ಲೇಖಿಸಲಾಗಿದೆ.

ಪ್ರಜ್ವಲ್ ಮೇಲಿನ ದೋಷಾರೋಪ: ‘ಬೆಂಗಳೂರಿನ ಬಸವನಗುಡಿಯ ಮನೆಯ ಸ್ವಚ್ಛತೆ ಕೆಲಸಕ್ಕೆಂದು ಭವಾನಿ ರೇವಣ್ಣ ಅವರು ಅದೇ ಸಂತ್ರಸ್ತೆಯನ್ನು ಒಮ್ಮೆ ಕರೆ ತಂದಿದ್ದರು. ಭವಾನಿ ಅವರು ಖರೀದಿಗೆಂದು ಹೊರಕ್ಕೆ ತೆರಳಿದ್ದ ವೇಳೆ, ಪ್ರಜ್ವಲ್ ಏಕಾಏಕಿ ಮೊಬೈಲ್ ಹಿಡಿದು ಕೊಠಡಿಯ ಒಳಕ್ಕೆ ಪ್ರವೇಶಿಸಿದ್ದರು. ಆಗ ಸಂತ್ರಸ್ತೆ ಹೊರಕ್ಕೆ ಬರಲು ಪ್ರಯತ್ನಿಸಿದ್ದರು.

‘ಇಷ್ಟು ದಿನ ನನ್ನಿಂದ ತಪ್ಪಿಸಿಕೊಂಡು ಓಡಾಟ ನಡೆಸಿದ್ದೀಯಾ. ಎಣ್ಣೆ ಹಚ್ಚಲು ಬಾ ಎಂದರೆ ಸಬೂಬು ಹೇಳುತ್ತೀಯಾ. ಈಗ ಒಂಟಿಯಾಗಿ ಸಿಕ್ಕಿದ್ದೀಯಾ ಎಂದು ಹೇಳಿ ಬಟ್ಟೆ ಬಿಚ್ಚಲು ಪ್ರಯತ್ನಿಸಿದ್ದರು. ಸಂತ್ರಸ್ತೆ ‘ಬೇಡ ಅಣ್ಣ, ತಪ್ಪಾಯ್ತು ಬಿಟ್ಟುಬಿಡಿ’ ಎಂದು ಅಂಗಲಾಚಿದ್ದರು. ಆಗ ಆಕೆಯ ಸೀರೆ ಹರಿದು ಅತ್ಯಾಚಾರ ಎಸಗಿದ್ದಾರೆ. ಅಲ್ಲದೇ ಅದನ್ನು ತನ್ನ ಮೊಬೈಲ್‌ನಲ್ಲಿ ವಿಡಿಯೊ ರೆಕಾರ್ಡ್ ಮಾಡಿಕೊಂಡಿದ್ದರು. ‘ವಿಷಯವನ್ನು ಬಹಿರಂಗ ಪಡಿಸಿದರೆ ನಿನ್ನ ಪತಿಯನ್ನು ಜೈಲು ಪಾಲು ಮಾಡುತ್ತೇನೆ. ನಿನ್ನ ಪುತ್ರಿಗೂ ಇದೇ ಗತಿ ಮಾಡುತ್ತೇನೆ. ಏನೇ ಕೆಲಸ ಮಾಡಿದರೂ ಪ್ರಕರಣ ಮುಚ್ಚಿ ಹಾಕಲು ನನಗೆ ಗೊತ್ತಿದೆ. ಸಂಸದನಾಗಿದ್ದು, ಏನೂ ಮಾಡಲು ಆಗುವುದಿಲ್ಲ. ಬಾಯಿ ಬಿಟ್ಟರೆ ಸಾಯಿಸುತ್ತೇನೆ ಎಂದು ಬೆದರಿಸಿದ್ದರು’ ಎಂಬುದು ಸಾಬೀತಾಗಿದೆ’ ಎಂದು ವಿವರಿಸಲಾಗಿದೆ.

ಆರೋಪ ಪಟ್ಟಿಯ ವಿವರಗಳು			
	150	2,144	ಎಫ್‌ಎಸ್‌ಎಲ್ ವರದಿ ಮೂಲ
	ಸಾಕ್ಷಿದಾರರ ಹೇಳಿಕೆ	ಪುಟಗಳ ಆರೋಪ ಪಟ್ಟಿ	ಪ್ರತಿಗಳು ಸಲ್ಲಿಕೆ

‘ಫೋಟೊ ಹರಿದಾಡಲು ಕಾರಣಕರ್ತ’

‘ಪ್ರಜ್ವಲ್ ಅವರು ಲೈಂಗಿಕ ದೌರ್ಜನ್ಯ ಎಸಗಿ, ಸಂತ್ರಸ್ತೆಯ ಅರಿವಿಗೆ ಬಾರದಂತೆ ತನ್ನ ಮೊಬೈಲ್‌ನಲ್ಲಿ ಫೋಟೊ ತೆಗೆದುಕೊಳ್ಳುತ್ತಿದ್ದರು. ಆ ಫೋಟೊಗಳು ಸಾಮಾಜಿಕ ಜಾಲತಾಣ ಹಾಗೂ ದೃಶ್ಯಮಾಧ್ಯಮ ದಲ್ಲಿ ಹರಿದಾಡಲು ಪ್ರಜ್ವಲ್ ಅವರೇ ಕಾರಣಕರ್ತರಾಗಿದ್ದಾರೆ’ ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ.

‘ವಿದೇಶಕ್ಕೆ ಪಲಾಯನ

ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಪ್ರಜ್ವಲ್ ಅವರು ವಿದೇಶಕ್ಕೆ ಪಲಾಯನ ಮಾಡಿದ್ದರು. ಅಲ್ಲದೇ ವಿದ್ಯುನ್ಮಾನ ಸಾಕ್ಷ್ಯನಾಶದ ಉದ್ದೇಶದಿಂದ ಮೊಬೈಲ್ ನಾಶ ಪಡಿಸಿದ್ದರು ಎಂಬುದು ದೃಢಪಟ್ಟಿದೆ ಎಂದು ಎಸ್‌ಐಟಿ ನ್ಯಾಯಾಲಯಕ್ಕೆ ತಿಳಿಸಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಅನಿಲ್ ಅಂಬಾನಿಗೆ ಐದು ವರ್ಷ ನಿರ್ಬಂಧ

ನವದೆಹಲಿ (ಪಿಟಿಐ): ರಿಲಯನ್ಸ್ ಹೋಮ್ ಫೈನಾನ್ಸ್ ಲಿಮಿಟೆಡ್‌ನಿಂದ (ಆರ್‌ಎಚ್‌ಎಫ್‌ಎಲ್) ಹಣವನ್ನು ಬೇರೆಡೆಗೆ ಅಕ್ರಮವಾಗಿ ವರ್ಗಾಯಿಸಿದ ಪ್ರಕರಣದಲ್ಲಿ ಕೈಗಾರಿಕೋದ್ಯಮಿ ಅನಿಲ್ ಅಂಬಾನಿ ಮತ್ತು ಇತರ 24 ಕಂಪನಿಗಳನ್ನು ಸೆಕ್ಯುರಿಟೀಸ್ ಮಾರುಕಟ್ಟೆಯಿಂದ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಐದು ವರ್ಷ ನಿರ್ಬಂಧಿಸಿದೆ.

ಅನಿಲ್ ಅಂಬಾನಿ

ಅನಿಲ್ ಅಂಬಾನಿಗೆ ₹25 ಕೋಟಿ ದಂಡವನ್ನೂ ವಿಧಿಸಿದೆ. ಐದು ವರ್ಷಗಳವರೆಗೆ ಯಾವುದೇ ನೋಂದಾಯಿತ ಕಂಪನಿ ಅಥವಾ ಸೆಬಿಯಿಂದ ನೋಂದಣಿಯಾಗಿರುವ ಸಂಸ್ಥೆಯಲ್ಲಿ ನಿರ್ದೇಶಕ ಅಥವಾ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯಾಗಿ (ಕೆಎಂಪಿ) ಕೆಲಸ ಮಾಡುವುದನ್ನೂ ನಿರ್ಬಂಧಿಸಿದೆ.

24 ಕಂಪನಿಗಳಿಗೆ ₹21 ಕೋಟಿಯಿಂದ ₹25 ಕೋಟಿವರೆಗೆ ದಂಡ ವಿಧಿಸಲಾಗಿದೆ. ಆರ್‌ಎಚ್‌ಎಫ್‌ಎಲ್ ಅನ್ನು 6 ತಿಂಗಳು ಷೇರು ಮಾರುಕಟ್ಟೆಯಿಂದ ನಿರ್ಬಂಧಿಸಿದ್ದು, ₹6 ಲಕ್ಷ ದಂಡ ವಿಧಿಸಿದೆ.

12ನೇ ಪುಟ ನೋಡಿ

ಸಿ.ಎಂ ಬೆನ್ನಿಗೆ ಹೈಕಮಾಂಡ್

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮುಡಾ ಅಕ್ರಮಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ರಾಜ್ಯಪಾಲರು ಅನುಮತಿ ನೀಡಿರುವುದರಿಂದ ಸಿದ್ದರಾಮಯ್ಯ, ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಹಿರಿಯ ಸಚಿವರ ಜತೆಗೆ ಕಾಂಗ್ರೆಸ್‌ನ ಉನ್ನತ ನಾಯಕರು ಶುಕ್ರವಾರ ಸಮಾಲೋಚನೆ ನಡೆಸಿದರು.

‘ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಷಡ್ಯಂತ್ರವನ್ನು ಕಾನೂನು ಹಾಗೂ ರಾಜಕೀಯ ಹೋರಾಟದ ಮೂಲಕವೇ ಎದುರಿಸಬೇಕು’ ಎಂದು ಹೈಕಮಾಂಡ್‌ನ ನಾಯಕರು ರಾಜ್ಯ ನಾಯಕರಿಗೆ ಸೂಚಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ‘ಈ ಪ್ರಕರಣದಲ್ಲಿ ನಾವು ಎಲ್ಲರೂ ಒಟ್ಟಿಗೆ ಇದ್ದೇವೆ. ನಾವೆಲ್ಲ ಮುಖ್ಯಮಂತ್ರಿ ಬೆನ್ನಿಗೆ ನಿಂತಿದ್ದೇವೆ’ ಎಂದು ಪ್ರಕಟಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಹಿರಿಯ ನಾಯಕರು ತೆಲಂಗಾಣದ ಮುಖ್ಯಮಂತ್ರಿ, ರಾಜ್ಯದ ನಾಯಕರೊಂದಿಗೆ ಸಭೆ ನಡೆಸಿದರು.

10ನೇ ಪುಟ ನೋಡಿ

ಜಾಹೀರಾತು

ಮಂಡಿನೋವಿಗೆ ಸರ್ಜರಿ ಇಲ್ಲದೇ ಚಿಕಿತ್ಸೆ

10,000ಕ್ಕೂ ಹೆಚ್ಚು ಮಂದಿಗೆ ನೋವು ಮುಕ್ತ ಜೀವನವನ್ನು ಅಲಿವಿಯೇಟ್ ನೀಡಿದೆ

ಮೊಣಕಾಲಿನ ಸಂಧಿವಾತಕ್ಕೆ ಸ್ಟೆಮ್ ಸೆಲ್ ಚಿಕಿತ್ಸೆ (ಪುನರುತ್ಪಾದಕ ಚಿಕಿತ್ಸೆ) ಅಂಗಾಂಶ ಗುಣಪಡಿಸುವಿಕೆಯನ್ನು ಉತ್ತೇಜಿಸಲು ಮತ್ತು ಸಂಧಿವಾತದಿಂದ ಪ್ರಭಾವಿತವಾಗಿರುವ ಮೊಣಕಾಲಿನ ಜಂಟಿ ಉರಿಯೂತವನ್ನು ಕಡಿಮೆ ಮಾಡಲು ಕಾಂಡಕೋಶಗಳ ವಿಶಿಷ್ಟ ಗುಣಲಕ್ಷಣಗಳನ್ನು ಬಳಸಿಕೊಳ್ಳುತ್ತದೆ. ಈ ಚಿಕಿತ್ಸೆಯ ಗುರಿಯು ನೋವನ್ನು ಹಂತ ಹಂತವಾಗಿ ಉಪಶಮನ ಗೊಳಿಸುವುದು, ಜಂಟಿ ಕಾರ್ಯವನ್ನು ಇನ್ನಷ್ಟು ಉತ್ತೇಜಿಸುವುದು ಮತ್ತು ಸಂಧಿವಾತದ ಪ್ರಗತಿಯನ್ನು ನಿಧಾನ ಗೊಳಿಸುವುದು ಆಗಿರುತ್ತದೆ.



ಮೊಣಕಾಲು ನೋವಿನ ಉಪಶಮನಕ್ಕೆ ಕಾಂಡಕೋಶಗಳ ಚುಚ್ಚುಮದ್ದು

ಈ ಚಿಕಿತ್ಸೆಯನ್ನು ಏಕೆ ಆಯ್ಕೆ ಮಾಡುವುದು?
- 60 ನಿಮಿಷದ ವಿಧಾನ
- ಆಸ್ಪತ್ರೆ ವಾಸವಿಲ್ಲ
- 48 ಗಂಟೆಗಳಲ್ಲಿ ನಿಮ್ಮ ಕೆಲಸಕ್ಕೆ ತೆರಳಬಹುದು

ಮೊಣಕಾಲಿನ ಸಂಧಿವಾತದ ವಿಷಯದಲ್ಲಿ, ಹಾನಿಗೊಳಗಾದ ಜಂಟಿ ಅಥವಾ ಕ್ಷೀಣಿಸಿದ ಅಂಗಾಂಶಗಳನ್ನು ಪುನರುತ್ಪಾದಿಸುವಲ್ಲಿ ಕಾಂಡಕೋಶಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ.

ಸ್ಟೆಮ್ ಸೆಲ್ ಚಿಕಿತ್ಸೆಯ ವಿಧಾನವು ಹೀಗಿದೆ:

1. ಕಾಂಡಕೋಶಗಳ ಕೊಯ್ಲು:

ಈ ಪ್ರಕ್ರಿಯೆಯು ಕಾಂಡಕೋಶಗಳ ಸಂಗ್ರಹದೊಂದಿಗೆ ಪ್ರಾರಂಭವಾಗುತ್ತದೆ. ಮೂಳೆ ಮಜ್ಜೆ ಅಥವಾ ಅಡಿಪೋಸ್ (ಕೊಬ್ಬು) ಅಂಗಾಂಶ ಸೇರಿದಂತೆ ದೇಹದ ವಿವಿಧ ಸ್ಥಳಗಳಿಂದ ಈ ಕೋಶಗಳನ್ನು ಪಡೆಯಬಹುದು.

2. ಕಾಂಡಕೋಶಗಳನ್ನು ಸಂಸ್ಕರಿಸುವುದು ಮತ್ತು ಕೇಂದ್ರೀಕರಿಸುವುದು:

ಕೊಯ್ಲು ಮಾಡಿದ ನಂತರ, ಆಧುನಿಕ ವಿಧಾನಗಳನ್ನು ಬಳಸಿಕೊಂಡು, ಕಾಂಡಕೋಶಗಳನ್ನು ಇತರ ಘಟಕಗಳಿಂದ ಬೇರ್ಪಡಿಸಲಾಗುತ್ತದೆ.

3.ಮೊಣಕಾಲು ಜಂಟಿಗೆ ಚುಚ್ಚುಮದ್ದು

ನಂತರ ಸಂಸ್ಕರಿಸಿ ಕೇಂದ್ರೀಕರಿಸಿದ ಕಾಂಡಕೋಶಗಳನ್ನು ನೇರವಾಗಿ ಪೀಡಿತ ಮೊಣಕಾಲಿನ ಜಂಟಿಗೆ ಚುಚ್ಚಲಾಗುತ್ತದೆ. ಈ ಚುಚ್ಚುಮದ್ದನ್ನು ಸಾಮಾನ್ಯವಾಗಿ ಅಲ್ಟ್ರಾಸೌಂಡ್ ಅಥವಾ ಫ್ಲೋರೋಸ್ಕೋಪಿಯಂತಹ ಆಧುನಿಕ ಇಮೇಜಿಂಗ್ ತಂತ್ರಗಳಿಂದ ಗಮನಿಸಿ ಮಾರ್ಗದರ್ಶಿಸಲಾಗುತ್ತದೆ. ಇದನ್ನು ಬಳಸುವುದರಿಂದ, ಮೊಣಕಾಲಿನ ಪೀಡಿತ ಪ್ರದೇಶದಲ್ಲಿ ಕಾಂಡಕೋಶಗಳನ್ನು ನಿಖರವಾಗಿ ಇರಿಸಲಾಗುತ್ತದೆ, ಇದರಿಂದಾಗಿ ನೋವು ಕ್ರಮೇಣ ಉಪಶಮನಗೊಳ್ಳುತ್ತದೆ.

ಬಹುಪಾಲು ಜನರಿಗೆ ಸಂಧಿವಾತ ನೋವನ್ನು ಸರ್ಜರಿ ಇಲ್ಲದೇ ಉಪಶಮನಗೊಳಿಸುವ ಭರವಸೆ ಅಲಿವಿಯೇಟ್ ನೀಡುತ್ತದೆ. 45–60 ವರ್ಷ ವಯಸ್ಸಿನ ಆರಂಭಿಕ ಹಂತಗಳಲ್ಲಿ ಸಂಧಿವಾತ ರೋಗ ಲಕ್ಷಣಗಳನ್ನು ಹೊಂದಿರುವ ಜನರು, ನಂತರದ ವರ್ಷಗಳಲ್ಲಿ ತೀವ್ರವಾದ ಹಾನಿಯನ್ನು ತಡೆಗಟ್ಟಲು ಅಲಿವಿಯೇಟ್ ಕ್ಲಿನಿಕ್‌ನಲ್ಲಿ ಸಹಾಯ ಪಡೆಯುವುದು ಉತ್ತಮ.

ಕೂಡಲೇ ಕೆಳಗಿನ ಸಂಖ್ಯೆಗಳಿಗೆ ಕರೆ ಮಾಡಿಮತ್ತು ನಮ್ಮ ವೈದ್ಯರೊಂದಿಗೆ ಅಪಾಯಿಂಟ್‌ಮೆಂಟ್ ಪಡೆಯಿರಿ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಅಲಿವಿಯೇಟ್‌ನಲ್ಲಿ ಪರಿಣಾಮಕಾರಿ ಚಿಕಿತ್ಸೆ.

ಅಲಿವಿಯೇಟ್

ಕ್ಲಿನಿಕ್ಕುಗಳು ಬೆಂಗಳೂರಿನಲ್ಲಿ ಇಲ್ಲಿವೆ:
ಪೀಣ್ಯಾ ದಾಸರಹಳ್ಳಿ
ಸದಾಶಿವನಗರ
ವೈಟ್‌ಫೀಲ್ಡ್ ಜಯನಗರ
ಇಂದಿರಾನಗರ

CALL NOW 81475 50855 080 23614888

ವಿದ್ಯಾರ್ಥಿನಿ ಆತ್ಮಹತ್ಯೆಗೆ ಯತ್ನ

ಬೆಂಗಳೂರು: ಪ್ರಾಂಶುಪಾಲರು ನಿಂದಿಸಿದರು ಎಂಬ ಕಾರಣಕ್ಕೆ ಶಾಲೆಯ ಕಟ್ಟಡದ ಮಹಡಿಯಿಂದಲೇ ಜಿಗಿದು ವಿದ್ಯಾರ್ಥಿನಿ ಆತ್ಮಹತ್ಯೆಗೆ ಯತ್ನಿಸಿದ್ದಾಳೆ.

ಬಾಪೂಜಿನಗರದ ಅಲ್ ಫಹಾದ್ ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿನಿ ಶುಕ್ರವಾರ ಮಧ್ಯಾಹ್ನ ಮೂರನೇ ಮಹಡಿಯಿಂದ ಜಿಗಿದಿದ್ದಾಳೆ. ತಲೆ, ಕಾಲಿಗೆ ತೀವ್ರ ಪೆಟ್ಟು ಬಿದ್ದಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ.

ಸ್ಥಳಕ್ಕೆ ಬ್ಯಾಟರಾಯನಪುರ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ಪರಿಸರ ಸ್ನೇಹಿಯಾಗಿ ಗಣೇಶೋತ್ಸವ ಹಬ್ಬ ಆಚರಣೆಗೆ ಅಗತ್ಯ ಕ್ರಮ: ಸೂಚನೆ

ಅನುಮತಿಗೆ 63 ಏಕಗವಾಕ್ಷಿ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಗಣೇಶ ಪ್ರತಿಷ್ಠಾಪನೆಗಾಗಿ ಅನುಮತಿ ನೀಡಲು 63 ಉಪ ವಿಭಾಗ ಕಚೇರಿಗಳಲ್ಲಿ ಏಕಗವಾಕ್ಷಿ ಕೇಂದ್ರಗಳನ್ನು ತೆರೆದು, ಪಾಲಿಕೆ, ಪೊಲೀಸ್, ಬೆಸ್ಕಾಂ ಹಾಗೂ ಅಗ್ನಿಶಾಮಕ ಅಧಿಕಾರಿಗಳನ್ನು ತುರ್ತಾಗಿ ನಿಯೋಜಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗಣೇಶ ಚತುರ್ಥಿ ಆಚರಣೆ ಸಂಬಂಧ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಅವರು ಶುಕ್ರವಾರ ಸಭೆ ನಡೆಸಿದರು.

ನಿಯೋಜಿಸಿದ ಅಧಿಕಾರಿಗಳ ಮಾಹಿತಿಯ ಪಟ್ಟಿಯನ್ನು ಪಾಲಿಕೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಅನುಮತಿ ಕೋರಿ ಬರುವವರಿಗೆ ಕಾಲಮಿತಿಯೊಳಗೆ ಅನುಮತಿ ನೀಡುವ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.



ಕೆರೆಗಳ ಬಳಿಯಿರುವ ಕಲ್ಯಾಣಿಗಳನ್ನು ಸ್ವಚ್ಛಗೊಳಿಸಬೇಕು. ಗಣೇಶ ವಿಸರ್ಜನೆಗಾಗಿ ಅಗತ್ಯ ಸಿಬ್ಬಂದಿಯನ್ನು ನಿಯೋಜನೆ ಮಾಡುವುದರ ಜೊತೆಗೆ ಬ್ಯಾರಿಕೇಡ್, ಸಿಸಿಟಿವಿ ಕ್ಯಾಮೆರಾ, ವಿದ್ಯುತ್ ದೀಪ, ನುರಿತ ಈಜುಗಾರರ ವ್ಯವಸ್ಥೆ, ಕ್ರೇನ್ ಸೌಲಭ್ಯವನ್ನು ಕಲ್ಪಿಸಬೇಕು ಎಂದು ಹೇಳಿದರು.

ಗಣೇಶ ವಿಸರ್ಜನೆ ಮೆರವಣಿಗೆ ಸಾಗುವ ಮಾರ್ಗದಲ್ಲಿ ವಿದ್ಯುತ್ ತಂತಿ ಪರಿಶೀಲಿಸಿ, ಯಾವುದೇ ತೊಂದರೆ ಆಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಬೀದಿ ದೀಪ ಸರಿಯಾಗಿರುವಂತೆ ಪಾಲಿಕೆ ವಿದ್ಯುತ್ ವಿಭಾಗದ ಅಧಿಕಾರಿಗಳು ನೋಡಿಕೊಳ್ಳಬೇಕು. ರಸ್ತೆ ಹಾಳಾಗಿದ್ದಲ್ಲಿ ಅಥವಾ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದಲ್ಲಿ ಸರಿಪಡಿಸಬೇಕು ಎಂದು ಸೂಚಿಸಿದರು.

ಗಣೇಶ ವಿಸರ್ಜನೆ ಮಾಡುವ ಕಲ್ಯಾಣಿಗಳ ಬಳಿ ಆಂಬುಲೆನ್ಸ್, ಆರೋಗ್ಯ ಸಿಬ್ಬಂದಿ ನಿಯೋಜಿಸಬೇಕು. ಕಲ್ಯಾಣಿಗಳ ಬಳಿ ಗಣೇಶ ವಿಸರ್ಜನೆ ಮಾಡುವ ವೇಳೆ ಇಲಾಖಾವಾರು ನಿಯೋಜನೆ ಮಾಡಿರುವ ಸಿಬ್ಬಂದಿಗೆ 'ಡ್ರೆಸ್ ಕೋಡ್' ನೀಡಬೇಕು. ಗೃಹರಕ್ಷಕ ದಳದ ಸಿಬ್ಬಂದಿಯನ್ನು ನಿಯೋಜನೆ ಮಾಡಬೇಕು. ಮನೆಗಳಲ್ಲಿ ಪ್ರತಿಷ್ಠಾಪಿಸಿದ ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲು ವಾರ್ಡ್ ವ್ಯಾಪ್ತಿಯ ಪ್ರಮುಖ ಸ್ಥಳ, ಜಂಕ್ಷನ್‌ಗಳಲ್ಲಿ ತಾತ್ಕಾಲಿಕವಾಗಿ ಸಂಚಾರಿ ವಿಸರ್ಜನಾ ಘಟಕ(ಮೊಬೈಲ್ ಟ್ಯಾಂಕ್) ವ್ಯವಸ್ಥೆ ಮಾಡಬೇಕು ಎಂದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ್, ವಿಶೇಷ ಆಯುಕ್ತರಾದ ಸುರಳ್ಕರ್ ವಿಕಾಸ್ ಕಿಶೋರ್, ಅವಿನಾಶ್ ಮೆನನ್ ರಾಜೇಂದ್ರನ್, ಉಪ ಆಯುಕ್ತ ಮಂಜುನಾಥ ಸ್ವಾಮಿ ಉಪಸ್ಥಿತರಿದ್ದರು.

'ಮೂರ್ತಿ ತಯಾರಿಕಾ ಘಟಕ ಪರಿಶೀಲಿಸಿ'

ಪರಿಸರ ಸ್ನೇಹಿಯಾಗಿ ಹಬ್ಬ ಆಚರಿಸಬೇಕು. ಪಿಒಪಿ ಗಣೇಶ ಮೂರ್ತಿ ತಯಾರಿಸುವುದನ್ನು ನಿಷೇಧಿಸಲಾಗಿದೆ. ಮೂರ್ತಿ ತಯಾರಿಕಾ ಘಟಕಗಳಿಗೆ ಪಾಲಿಕೆ, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪೊಲೀಸ್ ಅಧಿಕಾರಿಗಳ ತಂಡ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಪಿಒಪಿ ಗಣೇಶ ಮೂರ್ತಿಗಳನ್ನು ತಯಾರಿಸುತ್ತಿರುವುದು ಕಂಡು ಬಂದರೆ ವಶಕ್ಕೆ ಪಡೆದು ಅವರಿಗೆ ದಂಡ ವಿಧಿಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನಿರ್ದೇಶನ ನೀಡಿದರು.

ಬಿಬಿಎಂಪಿ ಆಹಾರ ಸುರಕ್ಷತಾಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ತವ್ಯ ನಿರ್ಲಕ್ಷ್ಯ, ಲಂಚಕ್ಕೆ ಬೇಡಿಕೆಯ ದೂರು ಸೇರಿ ವಿವಿಧ ಆರೋಪಗಳ ಕಾರಣದಿಂದ ಬಿಬಿಎಂಪಿ ದಕ್ಷಿಣ ವಲಯದ ಆಹಾರ ಸುರಕ್ಷತಾಧಿಕಾರಿ ಸುರೇಶ್ ಎಚ್. ಅವರನ್ನು ಅಮಾನತು ಮಾಡಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಮಲ್ಲೇಶ್ವರದ ಮಂತ್ರಿ ಮಾಲ್‌ನಲ್ಲಿನ ಹೋಟೆಲ್‌ಗಳು, ಸೂಪರ್ ಮಾರುಕಟ್ಟೆಗಳು ಹಾಗೂ ಐಸ್‌ಕ್ರೀಂ ಪಾರ್ಲರ್‌ಗಳನ್ನು ಆಗಸ್ಟ್ 3 ರಂದು ಪರಿಶೀಲಿಸಲಾಗಿತ್ತು. ಅವಧಿ ಮೀರಿದ ವಿವಿಧ ಮೊಟ್ಟೆಗಳು ಕಂಡುಬಂದಿದ್ದವು. ಈ ಮೊಟ್ಟೆಗಳನ್ನು ಹೊಂಗಸಂದ್ರದ ಕಂಪನಿಯೊಂದರಿಂದ ಪೂರೈಸಲಾಗಿತ್ತು. ಸ್ಥಳ ಪರಿಶೀಲನೆ ನಡೆಸಿದ ಬಗ್ಗೆ ವರದಿ ಸಲ್ಲಿಸುವಂತೆ ಸುರೇಶ್ ಅವರಿಗೆ ಸೂಚಿಸಲಾಗಿತ್ತು. ಆದರೆ, ಅವರು ಈವರೆಗೂ ವರದಿ ನೀಡಿಲ್ಲ. ಆರು ತಿಂಗಳ ಮಾಸಿಕ ವರದಿಯನ್ನೂ ಸಲ್ಲಿಸಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಆಹಾರ ಉದ್ದಿಮೆಗಳಿಗೆ ಭೇಟಿ ನೀಡಿ, ತಪಾಸಣೆ ಮಾಡುವ ನೆಪದಲ್ಲಿ ಲಂಚಕ್ಕೆ ಬೇಡಿಕೆ ಇಡುತ್ತಾರೆ' ಎಂದು ಆಹಾರ ಉದ್ದಿಮೆದಾರರಿಂದ ಸುರೇಶ್ ಅವರ ವಿರುದ್ಧ ದೂರುಗಳಿವೆ. ಅವರು ಸಾರ್ವಜನಿಕರಿಂದ ಸ್ವೀಕೃತಗೊಂಡ ದೂರುಗಳ ಬಗ್ಗೆಯೂ ಪರಿಶೀಲಿಸಿ, ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಇಲಾಖಾ ವಿಚಾರಣೆ ಬಾಕಿ ಇರಿಸಿ, ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ಅರೆ ವೈದ್ಯಕೀಯ ಪಿಯುಗೆ ತತ್ಸಮಾನ: ಮನವಿ

ಬೆಂಗಳೂರು: ಅರೆ ವೈದ್ಯಕೀಯ ಕೋರ್ಸ್‌ಗಳನ್ನು (ಪ್ಯಾರಾ ಮೆಡಿಕಲ್) ಪದವಿಪೂರ್ವ ಶಿಕ್ಷಣಕ್ಕೆ ತತ್ಸಮಾನ ಎಂದು ಪರಿಗಣಿಸಲು ಕೋರಿ ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ ಪ್ರಾಧಿಕಾರ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ.

ಪದವಿಪೂರ್ವ ಶಿಕ್ಷಣಕ್ಕೆ ತತ್ಸಮಾನ ಎಂದು ಪರಿಗಣಿಸದ ಕಾರಣ ಸಾವಿರಾರು ವಿದ್ಯಾರ್ಥಿಗಳು ಪದವಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಈ ಕುರಿತು ಸರ್ಕಾರ ಆದೇಶ ಹೊರಡಿಸಬೇಕು ಎಂದು ಪ್ರಾಧಿಕಾರದ ವಿಶೇಷ ಅಧಿಕಾರಿ ಪತ್ರದಲ್ಲಿ ಕೋರಿದ್ದಾರೆ.

ಅರಕೆರೆ ಗ್ರಾ.ಪಂ: ಉಪಾಧ್ಯಕ್ಷರಾಗಿ ಅರಸೇಗೌಡ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ಅರಕೆರೆ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ಕೆ.ಎಂ.ಅರಸೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದೆ ಉಪಾಧ್ಯಕ್ಷರಾಗಿದ್ದ ನೇತ್ರಾವತಿ ಅಂಬರೀಶ್ ಬಾಬು ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಶುಕ್ರವಾರ ಚುನಾವಣೆ ನಡೆಯಿತು. ಒಟ್ಟು 21 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಅರಸೇಗೌಡ ಅವರೊಬ್ಬರೆ ನಾಮಪತ್ರ ಸಲ್ಲಿಸಿದ್ದರು.

ಕೆ.ಎಂ. ಅರಸೇಗೌಡ

ಬಿಜೆಪಿ ರಾಜ್ಯ ರೈತ ಮೋರ್ಚಾ ಕಾರ್ಯದರ್ಶಿ ಸತೀಶ್ ಕಡತನಮಲೆ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಆಂಜಿನಮ್ಮ, ಮಾಜಿ ಅಧ್ಯಕ್ಷರಾದ ಕೆ.ಆರ್.ತಿಮ್ಮೇಗೌಡ, ಮುನಿಲಕ್ಷ್ಮಮ್ಮ ಪರಶುರಾಂ, ಬಿ.ಸಿ.ಶಶಿಕುಮಾರ್, ಲಕ್ಷ್ಮೀನಾರಾಯಣಗೌಡ, ಸದಸ್ಯರಾದ ನೇತ್ರಾವತಿ, ಶಿಲ್ಪ ರಾಜಣ್ಣ, ಪದ್ಮ ಮುನಿಕೃಷ್ಣಪ್ಪ, ಚನ್ನಪ್ಪ, ಎಸ್.ಮಂಜುನಾಥ್, ಮುಖಂಡ ಮುನಿದಾಸಪ್ಪ ಉಪಸ್ಥಿತರಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-42/1145/2024-25 ದಿನಾಂಕ:22.08.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎಂ.ಚೈತನ್ಯ ಕುಮಾರ್ ಮತ್ತು ಇತರರು	ಬೆಂಗಳೂರು ಪೂರ್ವ	ವರ್ತೂರು	ಕಾಚಮಾರನಹಳ್ಳಿ	45/3ರ ಪೈಕಿ	0-21.50	ವ್ಯವಸಾಯ	ವಸತಿ
2					46/2ರ ಪೈಕಿ	0-03.50		
3				ಮುಳ್ಳೂರು	14/2	0-15		
4					14/3	0-30		
5					14/4	0-26		
6					14/5	0-15		
7					14/6	0-30		
8					14/7	0-29		
9					14/8	0-15		
10					14/9	0-10		
					ಒಟ್ಟು	4-35		

ಷರಾ: ಈ ಜಮೀನುಗಳಲ್ಲಿ ವಸತಿ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ. ವಸತಿ ಕಟ್ಟಡ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಸತಿ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

IN THE COURT OF THE I ADDL., SENIOR CIVIL JUDGE, BANGALORE RURAL DISTRICT AT BANGALORE

FDP. No.28/1999

Between:
Sri.P.Muniswamy Reddy and Another ...Petitioners
AND
Sri.B.Pilla Reddy since dead by his LRs & Others ...Respondents

NOTICE TO PROPOSED RESPONDENTS
No.76, 78, 79, 82, 83, 95 to 97.

RESPONDENT No.76: smt PRABHAVATHI D/o Late. Jayarama Reddy, aged about 43 years R/at No 101, CSR Aster Apartment, 7th Cross, Vijaya Bank colony, Doddabanasawadi, Bangalore-560043.

RESPONDENT No.78:SUMALATHA D/o Govardhana Naidu, aged about 37yrs, R/at #112 Sathya Park View 2nd Main Road, Kasthurinagar, BANGALORE 560043

RESPONDENT No.79: SHASHANK KUMAR.M. S/o Manimaran, aged about 24 years, R/at. No.44, point Care Street, Modaliyar pet, Puducheri-605004.

RESPONDENT No.82:DARSH TEJKUMAR RUJA S/o TejKumar Balakrishna Ruja, aged about 53yrs Director M/s.Killick Nixsen Limited, Killick House, Baji Pasalkar Marg, Chandi Vali, Andheri (East), Mumbai-400072.

RESPONDENT No.83: K. RAMAKRISHNAN Branch Manager of M/s.Killick Nixsen Limited, Bangalore Branch, Bangalore.

RESPONDENT No.95: Smt.SARALA NANSI Wife of late Ramesh, Alakgandar, aged about 56 years, R/at. No.31, 2nd cross,1st Main Pilla Reddy Layout, Dodda banasawadi, BANGALORE-560043

RESPONDENT No.96:Smt.R.LATHA W/o Sri Ramesh, aged about 38 years, R/at.No.31, 2nd cross,1st Main Pilla Reddy Lyt, Doddabanasawadi, BANGALORE-560043

RESPONDENT No.97:Smt.R.SUNITHA W/o.Sri Lucas aged about 36 yrs. R/at. 31, 2nd Cross, 1st Main, Pilla Reddy Layout, Doddabanasawadi, Bangalore-560043

where it has been proved to the satisfaction of the Court, that the Respondents above named cannot be served through Court Notice and RPAD thrice of Service. Hence, this Notice is issued against above mentioned all of you are hereby appear before court personally or through your Counsel on **01/10/ 2024, at 11-00AM**

Take Notice that, in default of your appearance on the day before mentioned, the above said case will be heard and determined in your absence.

Given under my hand and the seal of the court, on this the 22/08/2024.

By order of the court
CHIEF MINISTERIAL OFFICE
Senior Civil Judge court
Bangalore Rural Dist/
Bengaluru

K.N. Narahari Rao
Advocate.
No.2. 2nd Floor, Hanumanthappa Building, CBI Road,Vasanthappa Block, Ganganagar, Bangalore-560032

ಭಾರತ ಸರ್ಕಾರ
ಹಣಕಾಸು ಸಚಿವಾಲಯ
ಹಣಕಾಸು ಸೇವೆಗಳ ಇಲಾಖೆ

ಫಾರಂ ನಂ. 22 [ನಿಯಮಾವಳಿ 37(1) ನೋಡಿರಿ]

ಸಾಲಗಳ ವಸೂಲಾತಿ ನ್ಯಾಯಾಧಿಕರಣ 1 (ಕರ್ನಾಟಕ) ಟೆಲಿಫೋನ್ ಹೌಸ್, ರಾಜಭವನ ರಸ್ತೆ, ಬೆಂಗಳೂರು 560001

ಮಾರಾಟ ಮತ್ತು ಇ-ಹರಾಜು ಮಾರಾಟ ಘೋಷಣಾ ಪ್ರಕಟಣೆ

(ಆದಾಯ ತೆರಿಗೆ ಕಾಯ್ದೆ, 1961ರ ಎರಡನೇಯ ಷೆಡ್ಯೂಲ್‌ನ ನಿಯಮ 52(2) ಅನ್ನು ತಿದ್ದುಪಡಿ ಮಾಡಲಾಗಿರುವ ಸಾಲಗಳ ವಸೂಲಾತಿ ಮತ್ತು ಬ್ಯಾಂಕ್‌ರಪ್ಸಿ ಕಾಯ್ದೆ, 1993 ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಹೊರಡಿಸಲಾಗಿದೆ)

ಒ.ಎ ನಂ. 338/2014 ರಲ್ಲಿನ ಆರ್.ಸಿ ನಂ. 14168/2018

ಇವರುಗಳ ಮಧ್ಯೆ:

ಮೆ. ಪೃಥ್ವಿ ಅಸೆಟ್ ರಿಕನ್‌ಸ್ಟ್ರಕ್ಷನ್ & ಸೆಕ್ಯೂರಿಟೈಸೇಶನ್ ಕಂಪನಿ ಲಿ., ಕಚೇರಿ ವಿಳಾಸ: ನಂ. 1-55, 4ನೇ ಮಹಡಿ, ರಾಜ ಪ್ರಸದಾಮು, ಮಸೀದಿ ಬಂದಾ ರೋಡ್, ಕೊಂಡಾಪುರ, ಹೈದರಾಬಾದ್-500084. ... ಸರ್ಟಿಫಿಕೇಟ್ ಹೋಲ್ಡರ್

ವಿರುದ್ಧ

ಮೆ. ಪಿ.ಎಸ್.ಎನ್.ಮೈನ್ಸ್ & ಮಿನರಲ್ಸ್ ಮತ್ತು ಇತರರು ... ಸರ್ಟಿಫಿಕೇಟ್ ಸಾಲಗಾರರು

ಗೆ,

ಸರ್ಟಿಫಿಕೇಟ್ ಸಾಲಗಾರರು:

1. ಮೆ. ಪಿ.ಎಸ್.ಎನ್.ಮೈನ್ಸ್ & ಮಿನರಲ್ಸ್, ಇದೊಂದು ಪಾಲುದಾರಿಕೆ ಸಂಸ್ಥೆಯಾಗಿದ್ದು, ಇದರ ವ್ಯವಹಾರದ ವಿಳಾಸ ನಂ. 204-ಎ, 2ನೇ ಮಹಡಿ, ನಂ. 136, ಸಿಯರ್ಸ್ ಪ್ಲಾಜಾ, ರೆಸಿಡೆನ್ಸಿ ರೋಡ್, ಬೆಂಗಳೂರು 560025 (ಇದನ್ನು ಪ್ರತಿನಿಧಿಸುವ ಇದರ ಒಬ್ಬ ಪಾಲುದಾರರು ಶ್ರೀ. ಪರ್ವೇಜ್ ರಹೀಂ ಖಾನ್)
2. ಮೆ. ಎ.ಆರ್.ಮೆಟಲರ್ಜಿಕಲ್ಸ್ ಪ್ರೈ. ಲಿ., ಕಂಪನಿಗಳ ಕಾಯ್ದೆ, 1956ರ ಅಡಿಯಲ್ಲಿ ಸಂಸ್ಥಾಪಿತ ಸಂಸ್ಥೆ, ಇದರ ಆಡಳಿತ ಕಚೇರಿ ವಿಳಾಸ ನಂ. 202-ಎ, 2ನೇ ಮಹಡಿ, ನಂ. 136, ಸಿಯರ್ಸ್ ಪ್ಲಾಜಾ, ರೆಸಿಡೆನ್ಸಿ ರೋಡ್, ಬೆಂಗಳೂರು 560025 (ಇದನ್ನು ಪ್ರತಿನಿಧಿಸುವವರು ಇದರ ವ್ಯವಸ್ಥಾಪಕ ನಿರ್ದೇಶಕ ಶ್ರೀ. ಪರ್ವೇಜ್ ರಹೀಂ ಖಾನ್)
3. ಶ್ರೀ. ಪರ್ವೇಜ್ ರಹೀಂ ಖಾನ್ ಬಿನ್ ಅಬ್ದುಲ್ ರಹೀಂ ಖಾನ್
4. ಶ್ರೀಮತಿ. ಸುಹಾ ಪರ್ವೇಜ್ ಕೋಂ. ಶ್ರೀ. ಪರ್ವೇಜ್ ರಹೀಂ ಖಾನ್
   ನಂ. 3 ಮತ್ತು 4 ಇವರಿಬ್ಬರ ಮನೆ ವಿಳಾಸ ಜಿ-02, ಸ್ಕೈಲೈನ್ ಅಪಾರ್ಟ್‌ಮೆಂಟ್ಸ್, ನಂ.1, ಲಿಯೊನಾರ್ಡ್ ಲೇನ್, ರಿಚ್ಮಂಡ್ ಟೌನ್, ಬೆಂಗಳೂರು 560025
   ನಂ 4 ಮತ್ತು 4 ಇವರ ಮತ್ತೊಂದು ವಿಳಾಸ ನಂ. ಎ-3, ಹುಲ್ಕಲ್ ರೆಸಿಡೆನ್ಸಿ, ಲ್ಯಾವೆಲ್ಲೆ ರೋಡ್, ಬೆಂಗಳೂರು 560001
5. ಶ್ರೀಮತಿ. ನಸ್ರೀನ್ ತಾಜ್ ರಹೀಂ ಕೋಂ. ಡಾ. ಇಕ್ಬಾಲ್ ಅಹ್ಮದ್, ವಿಳಾಸ ನಂ. 603, 5ನೇ ಮುಖ್ಯರಸ್ತೆ, ಒಎಂಬಿಆರ್ ಬಡಾವಣೆ, ಬಾಣಸವಾಡಿ, ಬೆಂಗಳೂರು 560043.
   ನಂ. 5 ಇವರ ಪ್ರಸಕ್ತ ಮನೆ ವಿಳಾಸ ನಂ. 780, 1ನೇ ಅಡ್ಡರಸ್ತೆ, ಹೆಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು 560071
   ಅದಾಗ್ಯೂ, ಮೆ. ಪೃಥ್ವಿ ಅಸೆಟ್ ರಿಕನ್‌ಸ್ಟ್ರಕ್ಷನ್ & ಸೆಕ್ಯೂರಿಟೈಸೇಶನ್ ಕಂಪನಿ ಲಿ., ವಿರುದ್ಧ ಮೆ. ಪಿ.ಎಸ್.ಎನ್.ಮೈನ್ಸ್ & ಮಿನರಲ್ಸ್ ಮತ್ತು ಇತರರ ನಡುವಿನ ಒಎ ನಂ. 338/2024 ರಲ್ಲಿ, ಸಾಲಗಳ ವಸೂಲಾತಿ ಮತ್ತು ಬ್ಯಾಂಕ್‌ರಪ್ಸಿ ಕಾಯ್ದೆ, 1993ರ ಸೆಕ್ಷನ್ 19(22)ರ ಅಡಿಯಲ್ಲಿ, ಮಾನ್ಯ ಪ್ರಿಸೈಡಿಂಗ್ ಆಫೀಸರ್, ಸಾಲಗಳ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು ಇವರು ರಿಕವರಿ ಸರ್ಟಿಫಿಕೇಟ್ ನಂ. 14168 ಹೊರಡಿಸಿರುತ್ತಾರೆ ಮತ್ತು ಇದನ್ನು ಜಾರಿಗೊಳಿಸಲು ಈ ಕೆಳಗಿನ ಸಹಿದಾರರಿಗೆ ವರ್ಗಾಯಿಸಲಾಗಿದೆ.

2. ಅದಾಗ್ಯೂ, ಈ ಕೆಳಗಿನ ಸಹಿದಾರ ಪ್ರಾಧಿಕಾರವು, ಸರ್ಟಿಫಿಕೇಟ್ ಸಾಲಗಾರರ ರಿಕವರಿ ಸರ್ಟಿಫಿಕೇಟ್‌ನಲ್ಲಿ ಉಲ್ಲೇಖಿಸಲಾಗಿರುವ, ರೂ. 5,71,09,541/- (ರೂಪಾಯಿ ಐದು ಕೋಟಿ ಎಪ್ಪತ್ತೊಂದು ಲಕ್ಷ ಒಂಬತ್ತು ಸಾವಿರದ ಐದು ನೂರ ನಲವತ್ತೊಂದು ಮಾತ್ರ) ಮೊತ್ತವನ್ನು, ಒಎ ಫೈಲಿಂಗ್ ದಿನಾಂಕದಿಂದ ಎಂದರೆ., 08.01.2014 ರಿಂದ ಅಂತಿಮ ರಿಯಲೈಸೇಶನ್ ದಿನಾಂಕದವರೆಗಿನ ಖರ್ಚು ವೆಚ್ಚಗಳು ಮತ್ತು ವಾರ್ಷಿಕ 16.75% ದರದಲ್ಲಿ ಭವಿಷ್ಯದ ಬಡ್ಡಿ ಸಮೇತ ವಸೂಲಾತಿ ಮಾಡಿಕೊಳ್ಳಲೆಂದು, ಕೆಳಗಿನ ಸಹಿದಾರ ಪ್ರಾಧಿಕಾರಿಯು ಆರ್‌ಸಿ ನಂ. 14168/2018ಕ್ಕೆ ಸಂಬಂಧಿತ ನಡಾವಳಿ ಕ್ರಮವನ್ನು ಆರಂಭಿಸಿರುತ್ತಾರೆ.
3. ಸರ್ಟಿಫಿಕೇಟ್ ಸಾಲಗಾರರು ಪಾವತಿಸಬೇಕಾಗಿರುವ 31.07.2024 ರಂತೆಗಿನ ಬಾಕಿಮೊತ್ತ ರೂ. 30,51,66,401/- (ರೂಪಾಯಿ ಮೂವತ್ತು ಕೋಟಿ ಐವತ್ತೊಂದು ಲಕ್ಷ ಅರವತ್ತಾರು ಸಾವಿರದ ನಾಲ್ಕು ನೂರ ಒಂದು ಮಾತ್ರ) ಆಗಿರುತ್ತದೆ ಮತ್ತು ಈ ಮೊತ್ತದಲ್ಲಿ ಖರ್ಚು ವೆಚ್ಚಗಳು ಹಾಗೂ 01.08.2024 ರಿಂದ ಅನ್ವಯಿಕ ಬಡ್ಡಿ, ವಸೂಲಾತಿ ಪ್ರಕಿತಯೆಗೆ ತಗುಲಿದ/ತಗುಲಲಿರುವ ವೆಚ್ಚ ಜೊತೆಗೆ ಆರ್‌ಸಿ ಪ್ರಕಾರ ರಿಯಲೈಸೇಶನ್‌ವರೆಗೆ ಅನ್ವಯಿಕ ಬಡ್ಡಿ ಒಳಗೊಂಡಿರುವುದಿಲ್ಲ.
4. ಕೆಳಗಿನ ಸಹಿದಾರ ಪ್ರಾಧಿಕಾರಿಯ ಆದೇಶದ ಮೇರೆಗೆ, ಈ ಕೆಳಗೆ ಉಲ್ಲೇಖಿಸಲಾಗಿರುವ ಸರ್ಟಿಫಿಕೇಟ್ ಸಾಲಗಾರರ ಅಟ್ಯಾಚ್ಡ್ ಸ್ವತ್ತನ್ನು, ಸೇವಾ ಪೂರೈಕೆದಾರರ ವೆಬ್‌ಸೈಟ್ ಮುಖಾಂತರ "ಆನ್‌ಲೈನ್ ಇ-ಆಕ್ಷನ್ ಸೇಲ್" ವಿಧಾನದಲ್ಲಿ ಷೆಡ್ಯೂಲ್ ಮಾರಾಟ ಮಾಡಿ ರಿಕವರಿ ಸರ್ಟಿಫಿಕೇಟ್‌ನ ತೃಪ್ತಿಗನುಸಾರ ವಸೂಲಾತಿ ಮಾಡಿಕೊಳ್ಳಲಾಗುತ್ತದೆ. ಹರಾಜು ದಿನಾಂಕ, ಬಿಡ್ ಫಾರಂ ಸಲ್ಲಿಸುವ ಕೊನೆಯ ದಿನಾಂಕ, ಮೀಸಲು ಬೆಲೆ, ಭದ್ರತಾ ಠೇವಣಿ ಮೊತ್ತ, ಬಿಡ್ ಹೆಚ್ಚಳ ಮೊತ್ತ ಮತ್ತು ಹರಾಜು ಸಮಯದ ವಿವರಗಳು ಈ ಕೆಳಗಿನಂತಿರುತ್ತವೆ.

1.	ಮೀಸಲು ಬೆಲೆ:	ರೂ. 9,00,00,000/- (ರೂಪಾಯಿ ಒಂಬತ್ತು ಕೋಟಿ ಮಾತ್ರ)
2.	ಭದ್ರತಾ ಠೇವಣಿ ಮೊತ್ತ ಹಾಗೂ ದಿನಾಂಕ ಮತ್ತು ಸಮಯ:	ಇಎಂಡಿ: ರೂ. 90,00,000/- (ರೂಪಾಯಿ ತೊಂಬತ್ತು ಲಕ್ಷ ಮಾತ್ರ) ದಿನಾಂಕ 24.09.2024 ರಂದು ಅಪರಾಹ್ನ 3 ಗಂಟೆಯೊಳಗೆ
3.	ಬಿಡ್ ಹೆಚ್ಚಳ ಮೊತ್ತ:	ರೂ. 1,00,000/- (ರೂಪಾಯಿ ಒಂದು ಲಕ್ಷ ಮಾತ್ರ)
4.	ಹರಾಜು ದಿನಾಂಕ ಮತ್ತು ಸಮಯ*:	26.09.2024 ರಂದು ಬೆಳಗ್ಗೆ 11.30 ರಿಂದ 12.00 ಗಂಟೆಯೊಳಗೆ

* ಸದರಿ ಹರಾಜು ಪ್ರಕ್ರಿಯೆಯಲ್ಲಿ ತಲಾ 5 ನಿಮಿಷಗಳ ಆಟೋ ಟೈಮ್ ಎಕ್ಸ್‌ಟೆನ್ಷನ್ ಕ್ಲಾಜ್ ಅಡಕಗೊಂಡಿರುತ್ತದೆ, ಎಂದರೆ., ಒಂದು ವೇಳೆ ಹರಾಜು ಅಂತ್ಯಗೊಳ್ಳುವ ಸಮಯದಲ್ಲಿ ಬಿಡ್ ಮಾಡಿದರೆ ಇ-ಹರಾಜು ಪ್ರಕ್ರಿಯೆಯ ಅಂತ್ಯಗೊಳ್ಳುವ ಸಮಯವನ್ನು 5 ನಿಮಿಷ ವಿಸ್ತರಿಸಲಾಗುತ್ತದೆ. ಬಿಡ್ ಹೆಚ್ಚಳ ಮೊತ್ತವನ್ನು ರೂ. 1,00,000/- (ರೂಪಾಯಿ ಒಂದು ಲಕ್ಷ ಮಾತ್ರ) ಗುಣಾಂಕಗಳಲ್ಲಿ ಹೆಚ್ಚಿಸಬಹುದು. ಹರಾಜು ಪ್ರಕ್ರಿಯೆಯಲ್ಲಿ ಬಿಡ್ ಮೊತ್ತಕ್ಕೆ ಅಥವಾ ಬಿಡ್‌ದಾರರಿಗೆ ಸಂಬಂಧಿಸಿದಂತೆ ಯಾವುದೇ ವಿವಾದದ ಉಂಟಾದಲ್ಲಿ, ಸದರಿ ಹರಾಜು ಲಾಟ್ ಅನ್ನು ಪುನಃ ಹರಾಜಿಗೆ ಹಾಕಲಾಗುತ್ತದೆ.

5. ಸದರಿ ಹರಾಜು ಮಾರಾಟ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು, ಸೇವಾ ಪೂರೈಕೆದಾರರಾದ ಮೆ. ಸಿ1 ಇಂಡಿಯಾ ಪ್ರೈವೇಟ್ ಲಿಮಿಟೆಡ್, ಗುರುಗ್ರಾಮ, ಹರ್ಯಾಣ 122003 ಇವರ "ಆನ್‌ಲೈನ್ ಇ-ಹರಾಜು" ವಿಧಾನದಲ್ಲಿ ಭಾಗವಹಿಸುವಂತೆ ಸಾರ್ವಜನಿಕರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಮಾರಾಟಕ್ಕೆ ಸಂಬಂಧಿತ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ಸೇವಾ ಪೂರೈಕೆದಾರರ https://www.bankeauctions.com ವೆಬ್‌ಸೈಟ್‌ನ್ನು ಸಂಪರ್ಕಿಸಲು ಸೂಚಿಸಲಾಗಿದೆ ಮತ್ತು ಆನ್‌ಲೈನ್ ನೋಂದಣಿ, ಯೂಸರ್ ಐಡಿ, ಪಾಸ್‌ವರ್ಡ್, ನೆರವು, ಪ್ರಕ್ರಿಯೆ ತಿಳಿದುಕೊಳ್ಳಲು, ಇ-ಹರಾಜಿನ ಕುರಿತು ಆನ್‌ಲೈನ್ ತರಬೇತಿ ಇತ್ಯಾದಿಗಾ ಕೂಡ ಇ-ಹರಾಜು ಸೇವಾ ಪೂರೈಕೆದಾರರನ್ನು ಸಂಪರ್ಕಿಸಬಹುದು (ಸಂಪರ್ಕ ಸಂ. 9948182222 ಇಮೇಲ್ ಐಡಿ: andhra@c1india.com, ಸಂಪರ್ಕ ವ್ಯಕ್ತಿ: ಶ್ರೀ ಧರಣಿ ಕೃಷ್ಣ), ಬಿಡ್ ಫಾರ್ಮ್‌ಗಳನ್ನು ಸಲ್ಲಿಸಲು ಮತ್ತು ಇ-ಹರಾಜಿನಲ್ಲಿ ಪಾಲ್ಗೊಳ್ಳುವುದಕ್ಕಾಗಿ ಸಂಪರ್ಕಿಸುವುದು.
6. ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಯಸುವ ಬಿಡ್‌ದಾರರು **24.09.2024 ರಂದು ಮಧ್ಯಾಹ್ನ 3 ಗಂಟೆಯೊಳಗೆ, ರಿಕವರಿ ಆಫೀಸರ್-2, ಸಾಲ ವಸೂಲಾತಿ ನ್ಯಾಯಾಧಿಕರಣ-1 ಇವರ ಹೆಸರಿನಲ್ಲಿರುವ, ಕೆನರಾ ಬ್ಯಾಂಕ್, ನಂದಿದುರ್ಗ ರಸ್ತೆ ಶಾಖೆ, ಬೆಂಗಳೂರು ಇವರಲ್ಲಿರುವ ಚಾಲ್ತಿ ಖಾತೆ ಸಂಖ್ಯೆ. 8407201005930, ಐಎಫ್‌ಎಸ್ ಕೋಡ್ ನಂ. CNRB0000793, ಅಕೌಂಟ್‌ಗೆ** ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಫಂಡ್ ಟ್ರಾನ್ಸ್‌ಫರ್ ಮುಖಾಂತರ ತಮ್ಮ ಇಎಂಡಿ ಮೊತ್ತವನ್ನು ಪಾವತಿಸಬೇಕು, ಮತ್ತು ಅಗತ್ಯ ವಿವರಗಳಾದ ಇಎಂಡಿ ಪಾವತಿಸಿರುವ ಪುರಾವೆ, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ವಿಳಾಸ ಮತ್ತು ಗುರುತಿನ ಪುರಾವೆಗಳ ಸಮೇತ, ಮೇಲೆ ತಿಳಿಸಿರುವಂತೆ ಆನ್‌ಲೈನ್ ವಿಧಾನದಲ್ಲಿ ಬಿಡ್ ಫಾರಂ ಸಲ್ಲಿಸಬೇಕು. ಸಂಪೂರ್ಣ ಭರ್ತಿ ಮಾಡಿ ಸಹಿ ಹಾಕಿರುವ ಬಿಡ್ ಫಾರಂ ಕರಡು ಪ್ರತಿಗಳನ್ನು ಮೇಲ್ಕಂಡ ದಾಖಲಾತಿಗಳ ಸ್ವಯಂ-ದೃಢೀಕರಿಸಿದ ಪ್ರತಿಗಳೊಂದಿಗೆ, ಮೇಲೆ ತಿಳಿಸಿರುವ ನಿಗದಿತ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಅಥವಾ ಅದಕ್ಕೂ ಮುಂಚೆಯೇ ತಲುಪುವಂತೆ, ಕೆಳಗಿನ ಸಹಿದಾರರಿಗೆ ಖುದ್ದಾಗಿಯಾಗಲಿ / ನೋಂದಾಯಿತ / ತ್ವರಿತ ಅಂಚೆ / ಕೊರಿಯರ್ ಮುಖಾಂತರ ದಾಖಲೆಗಳನ್ನು ತಲುಪಿಸಬೇಕು. ಮೇಲ್ಕಂಡ ನಿಗದಿತ ದಿನಾಂಕ ಮತ್ತು ಸಮಯದ ನಂತರ ಪಾವತಿಸಲಾಗುವ ಇಎಂಡಿ ಮೊತ್ತ ಹಾಗೂ ಇ-ಹರಾಜು ಸೇವಾ ಪೂರೈಕೆದಾರರ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುವ ಬಿಡ್ ಫಾರಂಗಳನ್ನು ಪರಿಗಣಿಸಲಾಗುವುದಿಲ್ಲ. ಅಂಚೆ ವಿಳಂಬವನ್ನು ಕೂಡ ಪರಿಗಣಿಸಲಾಗುವುದಿಲ್ಲ. ಒಂದು ವೇಳೆ, ಒಂದಕ್ಕಿಂತ ಹೆಚ್ಚು ಐಟಂಗಳಿಗೆ ಬಿಡ್ ಸಲ್ಲಿಸುವುದಾದಲ್ಲಿ, ಪ್ರತಿ ಐಟಂಗೂ ಪ್ರತ್ಯೇಕ ಇಎಮ್‌ಡಿ ಪಾವತಿಸಿರುವ ಪುರಾವೆಯ ಸಮೇತ ಪ್ರತ್ಯೇಕ ಬಿಡ್ ಫಾರಂ ಸಲ್ಲಿಸಬೇಕು.
7. ಯಶಸ್ವಿ ಬಿಡ್‌ದಾರರು ಪಾವತಿಸಿರುವ ಇಎಂಡಿ ಮೊತ್ತವನ್ನು, ಅಂತಿಮ ಬಿಡ್ ಮೊತ್ತದಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ. ಇ-ಹರಾಜು ಮಾರಾಟ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ, ಇ-ಹರಾಜು ಸೇವಾ ಪೂರೈಕೆದಾರರಿಂದ / ಬ್ಯಾಂಕ್‌ನಿಂದ / ಹಣಕಾಸು ಸಂಸ್ಥೆಯಿಂದ ವರದಿಯ ಸಲ್ಲಿಕೆಯಾದ ನಂತರವಷ್ಟೆ, ಯಶಸ್ವಿಯಾಗದಿರುವ ಬಿಡ್‌ದಾರರ ಇಎಮ್‌ಡಿ ಮೊತ್ತವನ್ನು ನೇರವಾಗಿ ಬ್ಯಾಂಕ್‌ನಿಂದ ಹಿಂತಿರುಗಿಸಲಾಗುತ್ತದೆ.
8. ಆಸಕ್ತಿಯುಳ್ಳ ಬಿಡ್‌ದಾರರು ಪೋರ್ಟಲ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಮತ್ತು ಮೇಲ್ಕಂಡ ಇ-ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಬಿಡ್ ಮಾಡುವುದಕ್ಕಾಗಿ ಕಡ್ಡಾಯವಾಗಿರುವ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು, ಇ-ಹರಾಜು ಸೇವಾ ಪೂರೈಕೆದಾರರ ಮೂಲಕ ಸಾಕಷ್ಟು ಮುಂಚಿತವಾಗಿಯೇ ಪಡೆದುಕೊಳ್ಳಬೇಕು.
9. ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳ ಬಿಡ್‌ದಾರರು/ಭಾಗವಹಿಸುವವರು, ಸ್ವತ್ತಿನ ವಿವರಗಳನ್ನು ತಿಳಿದುಕೊಳ್ಳಲು ಮತ್ತು ಸ್ವತ್ತು ಪರಿಶೀಲನೆಗಾಗಿ, ಶ್ರೀ ಕೆ.ವಿ. ರಾಮಕೃಷ್ಣ ಪ್ರಸಾದ್, ವೈಸ್ ಪ್ರೆಸಿಡೆಂಟ್, (ಲೀಗಲ್ & ರೆಸೊಲೂಷನ್ಸ್) ಮೆ. ಪೃಥ್ವಿ ಅಸೆಕಟ್ ರಿಕನ್‌ಸ್ಟ್ರಕ್ಷನ್ & ಸೆಕ್ಯೂರಿಟೈಸೇಶನ್ ಕಂಪನಿ ಲಿ., ಕಚೇರಿ ವಿಳಾಸ: ನಂ.1-55, 4 ನೇ ಮಹಡಿ, ರಾಜ ಪ್ರಸಾದಮು, ಮಸೀದಿ ರಸ್ತೆ, ಕೊಂಡಾಪುರ, ಹೈದರಾಬಾದ್- 500084 ಇವರನ್ನು ಸಂಪರ್ಕಿಸಬಹುದು. (ಮೊಬೈಲ್ ನಂ. 9652250044; ಇ-ಮೇಲ್: co@paras.org.in) ಇ-ಹರಾಜು ಪ್ರಕ್ರಿಯೆಗೆ ಸಂಬಂಧಿತ ವಿವರಗಳಿಗಾಗಿ, ನೆರವಿಗಾಗಿ, ಪ್ರಕ್ರಿಯೆ ಮತ್ತು ಆನ್‌ಲೈನ್ ತರಬೇತಿಗಾಗಿ ಆಸಕ್ತಿಯುಳ್ಳ ಬಿಡ್‌ದಾರರು ಹರಾಜು ಮಾರಾಟ ದಿನಾಂಕಕ್ಕೆ ಮುಂಚಿತವಾಗಿಯೇ, ಮೆ. ಪೃಥ್ವಿ ಅಸೆಕಟ್ ರಿಕನ್‌ಸ್ಟ್ರಕ್ಷನ್ & ಸೆಕ್ಯೂರಿಟೈಸೇಶನ್ ಕಂಪನಿ ಲಿಮಿಟೆಡ್‌ನ ವೈಸ್ ಪ್ರೆಸಿಡೆಂಟ್ (ಲೀಗಲ್ & ರೆಸೊಲ್ಯೂಷನ್ಸ್) ಇವರನ್ನು 040-41413333 / 9652250044 ಸಂಖ್ಯೆಗಳಲ್ಲಿ ಸಂಪರ್ಕಿಸಬಹುದು. ಹರಾಜು ಮಾರಾಟಕ್ಕೆ ನಿಗದಿಯಾಗಿರುವ ಸ್ವತ್ತಿಗೆ ಸಂಬಂಧಿತ ಹಕ್ಕುಪತ್ರಗಳ ಪರಿಶೀಲನೆಗಾಗಿ ಮತ್ತು ಸ್ವತ್ತಿನ ಮೇಲೆ ಇರಬಹುದಾದ ಋಣಭಾರದ ವಿವರಗಳಿಗಾಗಿ, ಮಾರಾಟ ಪ್ರಕ್ರಿಯೆಯ ವಿವರವಾದ ಷರತ್ತು ಮತ್ತು ನಿಬಂಧನೆಗಳು, ವಿಚಾರಣೆಗಳು, ಸ್ವತ್ತಿಗೆ ಸಂಬಂಧಿಸಿದಂತೆ ಬಾಕಿ ಇರುವ ವ್ಯಾಜ್ಯಗಳ ಬಗ್ಗೆ ತಿಳಿದುಕೊಳ್ಳಲು, ಮಾರ್ಗದರ್ಶನಕ್ಕಾಗಿ, ಸ್ವತ್ತು ಪರಿಶೀಲನೆಗಾಗಿ, ಸ್ವತ್ತಿನ ಹಕ್ಕುಗಳ ಬಗ್ಗೆ ತಮ್ಮನ್ನು ತಾವು ತೃಪ್ತಿಪಡಿಸಿಕೊಳ್ಳಲು ಕೂಡ ಇವರನ್ನು ಸಂಪರ್ಕಿಸಬಹುದು. ಹರಾಜು ಪ್ರಕ್ರಿಯೆ ಪೂರ್ಣಗೊಂಡ ಬಳಿಕ, ಈ ಕೆಳಗಿನ ಸಹಿದಾರರು ಯಶಸ್ವಿ ಬಿಡ್‌ದಾರರನ್ನು ಘೋಷಿಸುತ್ತಾರೆ ಮತ್ತು ಹೀಗೆ ಯಶಸ್ವಿಯಾಗಿರುವ ಬಿಡ್‌ದಾರರಿಗೆ, ಮೆ. ಪೃಥ್ವಿ ಅಸೆಟ್ ರಿಕನ್‌ಸ್ಟ್ರಕ್ಷನ್ & ಸೆಕ್ಯೂರಿಟೈಸೇಶನ್ ಕಂಪನಿ ಲಿಮಿಟೆಡ್‌ನಿಂದ ಅಗತ್ಯ ಹಕ್ಕುಪತ್ರ ದಾಖಲಾತಿಗಳ ಸಮೇತ ಹರಾಜು ಸ್ವತ್ತನ್ನು ವರ್ಗಾಯಿಸುತ್ತಾರೆ.
10. ಒಂದು ವೇಳೆ ಈ ಕೆಳಗಿನ ಸಹಿದಾರರಿಗೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಸಮಂಜಸವೆಂದು ಕಂಡುಬಂದಲ್ಲಿ, ಅವುಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಮತ್ತು ಯಾವುದೇ ಸಮಯದಲ್ಲಿ ಯಾವುದೇ ಕಾರಣ ನೀಡದೆಯೇ ಸದರಿ ಹರಾಜು ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಪಡಿಸುವ ಹಕ್ಕನ್ನು ಕೂಡ ಕಾಯ್ದಿರಿಸಿಕೊಂಡಿರುತ್ತಾರೆ.
11. ಒಂದು ವೇಳೆ, ಷೆಡ್ಯೂಲ್‌ನಲ್ಲಿ ಒಂದಕ್ಕಿಂತ ಹೆಚ್ಚು ಐಟಂ/ಪ್ರಾಪರ್ಟಿ ಇದ್ದಲ್ಲಿ, ಅಂತಹ ಪ್ರಾಪರ್ಟಿಯನ್ನು ಷೆಡ್ಯೂಲ್‌ನಲ್ಲಿ ನಿಗದಿಪಡಿಸಲಾಗಿರುವ ಲಾಟ್/ಐಟಂನಲ್ಲಿ ಮಾರಾಟಕ್ಕೆ ನಿಗದಿಪಡಿಸಲಾಗುತ್ತದೆ. ಒಂದು ವೇಳೆ, ಪ್ರಾಪರ್ಟಿಯ ಯಾವುದೇ ಭಾಗ/ಐಟಂನ ಮಾರಾಟದಿಂದ ಸಂದಾಯವಾಗಬೇಕಾಗಿದ್ದ ಮೊತ್ತವು ಸಂಗ್ರಹವಾದಲ್ಲಿ, ರಿಮೈಂಡರ್ ಪ್ರಕಾರ ತಕ್ಷಣವೇ ಆ ಪ್ರಾಪರ್ಟಿಯ ಮಾರಾಟವನ್ನು ಸ್ಥಗಿತಗೊಳಿಸಲಾಗುತ್ತದೆ. ಒಂದು ವೇಳೆ, ಯಾವುದೇ ಲಾಟ್‌ನ ಪ್ರಕ್ರಿಯೆಯು ಪೂರ್ಣಗೊಳ್ಳುವುದಕ್ಕೂ ಮುನ್ನವೇ, ಸದರಿ ಸರ್ಟಿಫಿಕೇಟ್‌ನಲ್ಲಿ ಉಲ್ಲೇಖಿಸಲಾಗಿರುವ ಬಾಕಿ, ಬಡ್ಡಿ ಶುಲ್ಕಗಳು (ಮಾರಾಟ ಶುಲ್ಕವೂ ಸೇರಿದಂತೆ) ಮಾರಾಟ ಕೈಗೊಳ್ಳುತ್ತಿರುವ ಅಧಿಕಾರಿಗೆ ಸಲ್ಲಿಕೆಯಾದಲ್ಲಿ ಅಥವಾ ಸರ್ಟಿಫಿಕೇಟ್‌ನಲ್ಲಿರುವ ಬಾಕಿಮೊತ್ತವನ್ನು ಬಡ್ಡಿ ಮತ್ತು ಶುಲ್ಕಗಳ ಸಮೇತ ಕೆಳಗಿನ ಸಹಿದಾರರಿಗೆ ಪಾವತಿಸಿರುವಂತಹ ತೃಪ್ತಿಕರ ಪುರಾವೆ ನೀಡಿದಲ್ಲಿ ಕೂಡ ಮಾರಾಟ ಸ್ಥಗಿತಗೊಳಿಸಲಾಗುತ್ತದೆ.
12. ಸದರಿ ಮಾರಾಟವು, ಆದಾಯ ತೆರಿಗೆ ಕಾಯ್ದೆ, 1961ರ ಎರಡನೇ ಷೆಡ್ಯೂಲ್‌ನಲ್ಲಿ ಸೂಚಿಸಲಾಗಿರುವ ಷರತ್ತುಗಳು ಮತ್ತು ಕಾಯ್ದೆ ಅಡಿಯಲ್ಲಿ ರೂಪಿಸಲಾಗಿರುವ ಷರತ್ತುಗಳು ಹಾಗೂ ಕೆಳಕಂಡ ಷರತ್ತುಗಳ ನಿಬಂಧನೆಗೆ ಒಳಪಡುತ್ತದೆ.
13. ಮೀಸಲು ಬೆಲೆಗಿಂತ ಕಡಿಮೆ ಇಲ್ಲದಿರುವ ಬಿಡ್ ಅಥವಾ ಖರೀದಿ ಮೊತ್ತವನ್ನು ಕೂಗಿರುವ ಯಶಸ್ವಿ ಬಿಡ್‌ದಾರರನ್ನು ಅಥವಾ ಗರಿಷ್ಠ ಬಿಡ್‌ದಾರರನ್ನು ಆಯಾ ಲಾಟ್ ಅಥವಾ ಐಟಂನ ಯಶಸ್ವಿ ಬಿಡ್‌ದಾರ ಎಂದು ಘೋಷಿಸಲಾಗುತ್ತದೆ. ಒಂದು ವೇಳೆ, ಕೂಗಲಾಗಿರುವ ಗರಿಷ್ಠ ಬಿಡ್ ಮೊತ್ತವು ಸರ್ಟಿಫಿಕೇಟ್‌ನಲ್ಲಿ ಉಲ್ಲೇಖಿಸಲಾಗಿರುವ ಬಾಕಿಮೊತ್ತಕ್ಕೆ ಸರಿದೂಗುವುದಿಲ್ಲ ಎಂದೆನಿಸಿದಲ್ಲಿ, ಅಂತಹ ಗರಿಷ್ಠ ಬಿಡ್ ಘೋಷಣೆಯನ್ನು ತಿರಸ್ಕರಿಸುವುದು ಈ ಕೆಳಗಿನ ಸಹಿದಾರರ ವಿವೇಚನೆಗೆ ಒಳಪಡುತ್ತದೆ.
14. ಯಶಸ್ವಿ / ಗರಿಷ್ಠ ಬಿಡ್‌ದಾರರು ಘೋಷಣೆಯಾದ ಬಳಿಕ, ಮಾರನೇಯ ದಿನದೊಳಗೆ ಎಂದರೆ., **27.09.2024 ರಂದು ಅಪರಾಹ್ನ 3.00 ಗಂಟೆಯೊಳಗೆ,** ತಮ್ಮ ಖರೀದಿ ಮೌಲ್ಯದ 25% ಮೊತ್ತವನ್ನು (ಬಿಡ್ ಮೊತ್ತ ಸೇರಿದಂತೆ) ಮೇಲಿನ ಪ್ಯಾರಾ 6ರಲ್ಲಿ ಸೂಚಿಸಲಾಗಿರುವ ಖಾತೆಗೆ ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಫಂಡ್ ಟ್ರಾನ್ಸ್‌ಫರ್ ವಿಧಾನದಲ್ಲಿ ಪಾವತಿಸಬೇಕು. ಒಂದು ವೇಳೆ, ಮಾರನೇಯ ದಿನವು ರಜಾದಿನ ಅಥವಾ ಭಾನುವಾರ ಆಗಿದ್ದಲ್ಲಿ, ಅದರ ಮಾರನೇಯ ಪ್ರಥಮ ದಿನದಂದು ಕಚೇರಿ ಕೆಲಸದ ಸಮಯದೊಳಗೆ ಮೇಲ್ಕಂಡ ಭಾಗಶಃ ಖರೀದಿ ಮೊತ್ತವನ್ನು ಪಾವತಿಸಬೇಕು, ಇಲ್ಲವಾದಲ್ಲಿ ಭದ್ರತಾ ಠೇವಣಿ ಮೊತ್ತವನ್ನು (ಇಎಂಡಿ) ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
15. ಮುಂದುವರಿದಂತೆ, ಯಶಸ್ವಿ ಬಿಡ್‌ದಾರ/ಗರಿಷ್ಠ ಬಿಡ್‌ದಾರರು, ಬಿಡ್ ಮೌಲ್ಯ ಇನ್ನುಳಿದ 75% ಮೊಬಲಗನ್ನು, ಸ್ವತ್ತು ಹರಾಜುಗೊಂಡ ದಿನಾಂಕದಿಂದ 15ನೇ ದಿನದೊಳಗೆ, ಮೇಲಿನ ಪ್ಯಾರಾ 6ರಲ್ಲಿ ತಿಳಿಸಲಾಗಿರುವ ಖಾತೆಗೆ ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಫಂಡ್ ಟ್ರಾನ್ಸ್‌ಫರ್ ಮೂಲಕ ಪಾವತಿಸಬೇಕು, **ಆ ದಿನವನ್ನು ಹೊರತುಪಡಿಸಿ ಅಥವಾ ಆ 15ನೇ ದಿನವು ಭಾನುವಾರ ಅಥವಾ ಸಾರ್ವಜನಿಕ ರಜಾದಿನವಾಗಿದ್ದಲ್ಲಿ,** 15ನೇ ದಿನದ ಬಳಿಕದ ಮೊದಲ ದಿನದಂದು ಕಚೇರಿ ಸಮಯದಲ್ಲಿ ರೂ. 1,000 ವರೆಗಿನ @2% ಪೌಂಡೇಜ್ ಶುಲ್ಕ ಮತ್ತು ಖರೀದಿ ಅಥವಾ ಮಾರಾಟ ಮೊತ್ತ ಮೀರಿದ ರೂ. 1000/-ಕ್ಕಿಂತ ಹೆಚ್ಚಿನ ಸರಾಸರಿ ಮೊತ್ತಕ್ಕೆ @1% ಹೆಚ್ಚುವರಿ ಮೊತ್ತವನ್ನು ರಿಕವರಿ ಆಫೀಸರ್-2, ಬೆಂಗಳೂರು ಇವರಿಗೆ ಕೆಳಗಿನ ಆಯ್ಕೆಯ ಪ್ರಕಾರ, www.bharatkosh.gov.in ಆನ್‌ಲೈನ್ ಮುಖಾಂತರ ಪಾವತಿಸತಕ್ಕದ್ದು:

ಹಣಕಾಸು ಸಚಿವಾಲಯ-ಹಣಕಾಸು ಸೇವೆಗಳ ಇಲಾಖೆ-ಕಾರ್ಯಕಾರಿ ಮುಖ್ಯಸ್ಥ-ಸೇವಾ ಶುಲ್ಕಗಳು-ಪಿಎಒ ಕೋಡ್ 006701, ಪಿಎಒ, ಡಿಎಫ್‌ಎಸ್, ನಾಗಪುರ ಮತ್ತು ಡಿಡಿಒ ಕೋಡ್ 206857, ಎಸ್‌ಒ/ಡಿಆರ್‌ಟಿ 1, ಬೆಂಗಳೂರು

16. ಮೇಲೆ ತಿಳಿಸಲಾಗಿರುವ ನಿಗದಿತ ಅವಧಿಯೊಳಗೆ ಮೊಬಲಗನ್ನು ಪಾವತಿಸಲು ವಿಫಲರಾದ ಸಂದರ್ಭದಲ್ಲಿ, ಹೊಸ ಮಾರಾಟ ಘೋಷಣೆ ಹೊರಡಿಸಿದ ಬಳಿಕ, ಸದರಿ ಸ್ವತ್ತನ್ನು ಪುನಃ ಮಾರಾಟ ಮಾಡಲಾಗುತ್ತದೆ. ಕೆಳಗಿನ ಸಹಿದಾರರಿಗೆ ಸೂಕ್ತವೆನಿಸಿದಲ್ಲಿ, ವಿಫಲಗೊಂಡಿರುವ ಯಶಸ್ವಿ ಬಿಡ್‌ದಾರ ಪಾವತಿಸಿರುವ ಠೇವಣಿಯಲ್ಲಿ ಮಾರಾಟ ವೆಚ್ಚವನ್ನು ಕಳೆದು, ಇನ್ನುಳಿದ ಮೊತ್ತವನ್ನು ಸರ್ಕಾರದ ಒಕ್ಕೂಟ ವ್ಯವಸ್ಥೆಗೆ ಮುಟ್ಟುಗೋಲು ನೀಡಲಾಗುತ್ತದೆ ಮತ್ತು ವಿಫಲ ಖರೀದಿದಾರರು ಸ್ವತ್ತಿಗೆ ಸಂಬಂಧಿತ ಕ್ಲೇಮ್‌ಗಳನ್ನು ಕಳೆದುಕೊಳ್ಳುತ್ತಾರೆ ಅಥವಾ ಸ್ವತ್ತನ್ನು ಪುನಃ ಮಾರಾಟ ಮಾಡಿದಾಗ ಸಂಗ್ರಹವಾಗುವ ಮೊತ್ತದಲ್ಲಿ ಕ್ಲೇಮ್‌ಗಳನ್ನೂ ಕಳೆದುಕೊಳ್ಳುತ್ತಾರೆ.
17. ಇಲ್ಲಿ, ಉಲ್ಲೇಖಿತ ಸ್ವತ್ತಿಗೆ ಸಂಬಂಧಿತ ಸರ್ಟಿಫಿಕೇಟ್ ಸಾಲಗಾರರಿಗೆ ಲಭ್ಯವಿರುವ ಹಕ್ಕುಗಳನ್ನು ಮಾರಾಟ ಮಾಡಲು ಉದ್ದೇಶಿಸಲಾಗಿರುತ್ತದೆ. ಸದರಿ ಸ್ವತ್ತಿನ ಮೇಲೆ ಯಾವುದಾದರೂ ಋಣಭಾರಗಳಿದ್ದರೆ, ಅವುಗಳ ಸಮೇತವೇ ಸ್ವತ್ತನ್ನು ಮಾರಾಟ ಮಾಡಲಾಗುತ್ತದೆ. ಘೋಷಣೆಯಲ್ಲಿ ವಿವರಿಸಲಾಗಿರುವ ಸ್ವತ್ತುಗಳ ವಿಸ್ತೀರ್ಣವು, ಮೇಲಿನ ಪ್ರಕ್ರಿಯೆಗಳಲ್ಲಿ ಅಟ್ಯಾಚ್ ಆಗಿರುವ ಸ್ವತ್ತಿನ ಪ್ರಕಾರ ಇರುತ್ತದೆ. ಯಾವುದೇ ಕಾರಣಕ್ಕೆ ವಿಸ್ತೀರ್ಣದಲ್ಲಿ ವ್ಯತ್ಯಾಸ ಕಂಡುಬಂದರೆ, ಅದಕ್ಕೆ ಕೆಳಗಿನ ಸಹಿದಾರ ಪ್ರಾಧಿಕಾರಿಯು ಹೊಣೆಯಾಗಿರುವುದಿಲ್ಲ. ಸದರಿ ಸ್ವತ್ತನ್ನು **"ಹೇಗಿದೆಯೋ ಎಲ್ಲಿದೆಯೋ, ಹೇಗಿದೆಯೊ ಏನಿದೆಯೊ ಮತ್ತು ಯಾವುದೇ ದೂರುರಹಿತ"** ಆಧಾರದಲ್ಲಿ ಮಾರಾಟ ಮಾಡಲಾಗುತ್ತದೆ. ಆಸಕ್ತಿಯುಳ್ಳ ಬಿಡ್‌ದಾರರು ಬ್ಯಾಂಕ್‌ನಲ್ಲಿ ಲಭ್ಯವಿರುವ ಸ್ವತ್ತಿನ ಹಕ್ಕುಪತ್ರಗಳ ಪ್ರತಿಗಳನ್ನು ಪಡೆದುಕೊಂಡು, ಸ್ವತ್ತಿನ ವಿವರಗಳು, ಋಣಭಾರಗಳು, ಸ್ವತ್ತಿನ ಮೇಲೆ ಬಾಕಿ ಇರುವ ತಗಾದೆ ಇತ್ಯಾದಿಗಳನ್ನು ಪರಿಶೀಲಿಸಿಕೊಳ್ಳಬೇಕು ಮತ್ತು ಷೆಡ್ಯೂಲ್ ಪ್ರಾಪರ್ಟಿಯನ್ನು ಕೂಡ ಪರಿಶೀಲನೆ ಮಾಡಿಕೊಳ್ಳಬೇಕೆಂದು ಸೂಚಿಸಲಾಗಿದೆ.
18. ವಿವರವಾದ ಷರತ್ತು ಮತ್ತು ನಿಬಂಧನೆಗಳು ಈ ಮಾರಾಟ ಘೋಷಣೆ ಭಾಗವಾಗಿರುತ್ತವೆ ಮತ್ತು ಇವುಗಳನ್ನು ಇಲ್ಲಿ ಅನುಬಂಧ-ಎ ರೂಪದಲ್ಲಿ ಅಡಕಗೊಳಿಸಲಾಗಿರುತ್ತದೆ.
19. ಮೇಲೆ ಹೆಸರಿಸಲಾಗಿರುವ ಸರ್ಟಿಫಿಕೇಟ್ ಸಾಲಗಾರರ ಈ ಕೆಳಗಿನ ಸ್ವತ್ತನ್ನು ಮಾರಾಟ ಮಾಡಲಾಗುತ್ತಿದೆ ಮತ್ತು ಸದರಿ ಸ್ವತ್ತಿಗೆ ಅಟ್ಯಾಚ್ ಆಗಿರುವ, ಇಲ್ಲಿಯವರೆಗೆ ಕಂಡುಬಂದಿರುವ ಹೊಣೆಗಾರಿಕೆಗಳು ಹಾಗೂ ಕ್ಲೇಮ್‌ಗಳು ವಿವರಗಳು ಕೆಳಗಿನಂತಿರುತ್ತವೆ.

	ಮಾರಾಟಕ್ಕೆ ನಿಗದಿಪಡಿಸಲಾಗಿರುವ ಸ್ವತ್ತಿನ ವಿವರ ಮತ್ತು ಸ್ವತ್ತಿನ ಡಿಫಾಲ್ಟರ್ ಮಾಲೀಕರ ಅಥವಾ ಇನ್ನಿತರ ಸಹ-ಮಾಲೀಕ ವ್ಯಕ್ತಿಯ ಹೆಸರು.	ಸ್ವತ್ತಿನ ಅಥವಾ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಮಾಡಲಾಗಿರುವ ಮೌಲ್ಯ	ಸ್ವತ್ತಿನ ಮೇಲೆ ಹೊಣೆಗಾರಿಕೆ ರೂಪಿಸಬಲ್ಲ ಯಾವುದೇ ಋಣಭಾರದ ವಿವರ	ಸ್ವತ್ತಿನ ಮೇಲೆ ಇರುವ ಯಾವುದೇ ಕ್ಲೇಮ್‌ಗಳು ಮತ್ತು ಸ್ವತ್ತಿನ ಸ್ವರೂಪ ಮತ್ತು ಮೌಲ್ಯದ ಮೇಲಿರಬಹುದಾದ ಇನ್ನಿತರ ಯಾವುದೇ ಬಲ್ಲ ವಿವರಗಳು.	ಮೀಸಲು ಬೆಲೆ	ಇಎಂಡಿ
1)	2)	3)	4)	5)	6)	7)
	ಹೆಚ್‌ಎಎಲ್ 2ನೇ ಹಂತ, 1ನೇ ಅಡ್ಡರಸ್ತೆ, 12ನೇ ಮುಖ್ಯರಸ್ತೆ, ಇಂದಿರಾನಗರ, ಬೆಂಗಳೂರು-560038 ವಿಳಾಸದಲ್ಲಿರುವ; ಪೂರ್ವ-ಪಶ್ಚಿಮ 75 ಅಡಿ ಮತ್ತು ಉತ್ತರ-ದಕ್ಷಿಣ 50 ಅಡಿ ವಿಸ್ತೀರ್ಣವುಳ್ಳ, ನಂ. 780 ಹೊಂದಿರುವ ಜಮೀನು ಮತ್ತು ಅದರಲ್ಲಿನ ಕಟ್ಟಡದ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:- ಪೂರ್ವಕ್ಕೆ: ಪ್ರಾಪರ್ಟಿ ನಂ. 776; ಪಶ್ಚಿಮಕ್ಕೆ: ರಸ್ತೆ; ಉತ್ತರಕ್ಕೆ: ಪ್ರಾಪರ್ಟಿ ನಂ. 781; ಮತ್ತು ದಕ್ಷಿಣಕ್ಕೆ: ಪ್ರಾಪರ್ಟಿ ನಂ. 779.	ಅನ್ವಯವಿಲ್ಲ	ಆರ್‌ಸಿ ಪ್ರಕಾರ	ತಿಳಿದಿರುವುದಿಲ್ಲ	ರೂ. 9,00,00,000/- (ರೂಪಾಯಿ ಒಂಬತ್ತು ಕೋಟಿ ಮಾತ್ರ)	ರೂ. 90,00,000/- (ರೂಪಾಯಿ ತೊಂಬತ್ತು ಲಕ್ಷ ಮಾತ್ರ)

ಷೆಡ್ಯೂಲ್ ಪ್ರಾಪರ್ಟಿ-(ಪ್ರತಿವಾದಿ ನಂ. 5 ಇವರಿಂದ ಅಡಮಾನ ನೀಡಲ್ಪಟ್ಟಿದ್ದು)

ಹೆಚ್‌ಎಎಲ್ 2ನೇ ಹಂತ, 1ನೇ ಅಡ್ಡರಸ್ತೆ, 12ನೇ ಮುಖ್ಯರಸ್ತೆ, ಇಂದಿರಾನಗರ, ಬೆಂಗಳೂರು-560038 ವಿಳಾಸದಲ್ಲಿರುವ; ಪೂರ್ವ-ಪಶ್ಚಿಮ 75 ಅಡಿ ಮತ್ತು ಉತ್ತರ-ದಕ್ಷಿಣ 50 ಅಡಿ ವಿಸ್ತೀರ್ಣವುಳ್ಳ, ನಂ. 780 ಹೊಂದಿರುವ ಜಮೀನು ಮತ್ತು ಅದರಲ್ಲಿನ ಕಟ್ಟಡದ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:- ಪೂರ್ವಕ್ಕೆ: ಪ್ರಾಪರ್ಟಿ ನಂ. 776; ಪಶ್ಚಿಮಕ್ಕೆ: ರಸ್ತೆ; ಉತ್ತರಕ್ಕೆ: ಪ್ರಾಪರ್ಟಿ ನಂ. 781; ಮತ್ತು ದಕ್ಷಿಣಕ್ಕೆ: ಪ್ರಾಪರ್ಟಿ ನಂ. 779.

ನನ್ನ ಕೈಯಾರೆ ಮತ್ತು ಈ ನ್ಯಾಯಾಧಿಕರಣದ ಮೊಹರಿನೊಂದಿಗೆ **ಆಗಸ್ಟ್ 19, 2024** ರಂದು ನೀಡಲಾಗಿರುತ್ತದೆ.

ಸಹಿ/-
(ಪಿ ಹೆಚ್ ಹೇಮಂತಕುಮಾರ್, ಐಆರ್‌ಎಸ್)
ರಿಕವರಿ ಆಫೀಸರ್-2

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್.,

Kirloskar

ನೋಂದಾಯಿತ ಕಛೇರಿ : ಸಂ. 19, 2ನೇ ಮುಖ್ಯ ರಸ್ತೆ, ಪೀಣ್ಯ 1ನೇ ಸ್ಟೇಜ್, ಫೇಸ್-1, ಪೀಣ್ಯ, ಬೆಂಗಳೂರು - 560058. **ದೂರವಾಣಿ** : 080 28397256; **ಫ್ಯಾಕ್ಸ್** : 080 28396727;
ವೆಬ್‌ಸೈಟ್ : www.kirloskarelectric.com **ಇ-ಮೇಲ್** : investors@kirloskarelectric.com
CIN : L31100KA1946PLC000415

77ನೇ ವಾರ್ಷಿಕ ಮಹಾಸಭೆಯ ಉದ್ದೇಶಕ್ಕಾಗಿ, ಪುಸ್ತಕ ಮುಚ್ಚುವಿಕೆ ಮತ್ತು ಇ-ಮತದಾನ, ಇತ್ಯಾದಿಗಳ ಮಾಹಿತಿ ಮತ್ತು ಸೂಚನೆ

ಈ ಮೂಲಕ ಸೂಚನೆ ನೀಡುವುದೇನೆಂದರೆ, ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯ (**'ಎಂ.ಸಿ.ಎ'**) ಹಾಗೂ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (**'ಸೆಬಿ'**) ದ ಸಾಮಾನ್ಯ ಸುತ್ತೋಲೆಗಳ ಎಲ್ಲಾ ಕಾಯಿದೆ ಕಟ್ಟಳೆಗಳನ್ವಯ ಕಂಪನಿ ಕಾಯ್ದೆ 2013ರ (ಕಾಯ್ದೆ) ಅನ್ವಯವಾಗುವ ಎಲ್ಲಾ ನಿಯಮಗಳೂ ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳು ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಪಟ್ಟಿಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು 2015ರ ಅನುಸಾರವಾಗಿ ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್ (**'ಕಂಪನಿ'**) ಯ 77ನೇ ವಾರ್ಷಿಕ ಮಹಾಸಭೆಯು (**'ಎಜಿಎಂ'**) ಸೂಚನೆಯಲ್ಲಿ ಹೇಳಲಾದ ವ್ಯವಹಾರಗಳನ್ನು ನಿರ್ವಹಿಸಲು ಸೋಮವಾರ, ಸೆಪ್ಟೆಂಬರ್ 16, 2024ರಂದು ಬೆಳಿಗ್ಗೆ 11.00 ಗಂಟೆಗೆ ವಿಡಿಯೋ ಕಾನ್ಫರೆನ್ಸ್ (**'ವಿಸಿ'**) / ಇತರೆ ಆಡಿಯೋ ವಿಷುಯಲ್ ಮೀನ್ಸ್ (**'ಒಎವಿಎಂ'**) ಮೂಲಕ ನಡೆಯಲಿದೆ.

ಎಂಸಿಎ ಮತ್ತು ಸೆಬಿ ಸುತ್ತೋಲೆಗಳ ಅನುಸಾರ ಹಣಕಾಸು ವರ್ಷ 2023-24ರ 77ನೇ ವಾರ್ಷಿಕ ವರದಿಯೊಂದಿಗಿರುವ ಎಜಿಎಂ ಸೂಚನಾ ಪತ್ರವನ್ನು ಕಂಪನಿ / ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ / ಡೆಪಾಸಿಟರೀಸ್ / ಡೆಪಾಸಿಟರಿ ಪಾರ್ಟಿಸಿಪೆಂಟ್‌ರಲ್ಲಿ ನೋಂದಾಯಿತವಾದ ಸದಸ್ಯರ ಇ-ಮೇಲ್ ವಿಳಾಸಗಳಿಗೆ ಕಳುಹಿಸಲಾಗಿದೆ. 77ನೇ ಎಜಿಎಂ ಸೂಚನೆ ಮತ್ತು ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ www.kirloskarelectric.com ನಲ್ಲಿ ಲಭ್ಯವಿದ್ದು, ಸ್ಟಾಕ್ ಎಕ್ಸ್‌ಚೇಂಜ್ ಅಂದರೆ, ಕ್ರಮವಾಗಿ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ ವೆಬ್‌ಸೈಟ್ www.bseindia.com ಮತ್ತು www.nseindia.com ನಿಂದ ಹಾಗೂ ಸಿಡಿಎಸ್‌ಎಲ್ ನ ವೆಬ್‌ಸೈಟ್ www.evotingindia.com ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮತ್ತು ಪ್ರಶ್ನೆಗಳನ್ನು ಸಭೆಯ ಅವಧಿಯಲ್ಲಿ ವ್ಯಕ್ತಪಡಿಸಲು ಇಚ್ಛಿಸುವ ಸದಸ್ಯರು ಸಭೆಯ 7 ದಿನಗಳ ಮುಂಚೆ ಅವರ ಹೆಸರು, ಡಿಮ್ಯಾಟ್ ಅಕೌಂಟ್ ಸಂಖ್ಯೆ / ಫೋಲಿಯೋ ಸಂಖ್ಯೆ, ಇ-ಮೇಲ್ ಐಡಿ, ಮೊಬೈಲ್ ಸಂಖ್ಯೆಗಳನ್ನು ನಮೂದಿಸಿ investors@kirloskarelectric.com ಗೆ ಕಳುಹಿಸಬೇಕು. ಯಾವ ಸದಸ್ಯರು ಸ್ಪೀಕರ್ ಆಗಿ ಅವರ ಹೆಸರನ್ನು ನೋಂದಾಯಿಸಿಕೊಂಡಿರುತ್ತಾರೋ ಅಂತಹ ಷೇರುದಾರರಿಗೆ ಮಾತ್ರ ಪ್ರಶ್ನೆಗಳನ್ನು ಸಭೆಯಲ್ಲಿ ಕೇಳುವುದಕ್ಕಾಗಿ ಅನುಮತಿಸಲಾಗುವುದು. ಎಜಿಎಂನ ಉದ್ದೇಶಕ್ಕಾಗಿ, ಸದಸ್ಯರ ರಿಜಿಸ್ಟರ್ ಮತ್ತು ಷೇರು ವರ್ಗಾವಣೆ ಪುಸ್ತಕಗಳನ್ನು ಮಂಗಳವಾರ, ಸೆಪ್ಟೆಂಬರ್ 10, 2024 ರಿಂದ ಸೋಮವಾರ, ಸೆಪ್ಟೆಂಬರ್ 16, 2024 ರವರೆಗೆ (ಎರಡೂ ದಿನಗಳು ಸೇರಿದಂತೆ) ಮುಚ್ಚಲಾಗುತ್ತದೆ.

2013ರ ಕಂಪನಿಯ ಕಾಯಿದೆಯ ಕಲಂ 108ರ ಷರತ್ತುಗಳಂತೆ ಕಂಪನಿಯು ತನ್ನ ಸದಸ್ಯರುಗಳಿಗೆ ದೂರದ ಇ-ಮತದಾನವನ್ನು ಒದಗಿಸಿದ್ದು ಸದಸ್ಯರು ವಿದ್ಯುನ್ಮಾನದ ಮೂಲಕ ಇ-ಮತಗಳನ್ನು ಚಲಾಯಿಸುವಂತಾಗಲು ದೂರದ ಇ-ಮತದಾನ ಸೇವೆಗಳನ್ನು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ಸಿಡಿಎಸ್‌ಎಲ್ ನಿಂದ ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ ಅಂತಿಮ (ಕಟ್-ಆಫ್), ಸೋಮವಾರ, ದಿನಾಂಕ ಸೆಪ್ಟೆಂಬರ್ 09, 2024 ಆಗಿರುತ್ತದೆ. ಕಟ್-ಆಫ್ ದಿನಾಂಕದಂದು ಸದಸ್ಯರ ರಿಜಿಸ್ಟರ್‌ನಲ್ಲಿ ಹೆಸರು ಇರುವ ಸದಸ್ಯರು ಅಥವಾ ಲಾಭದಾಯಕ ಮಾಲೀಕರ ರೆಜಿಸ್ಟರ್‌ನಲ್ಲಿರುವ ಸದಸ್ಯರು ಇ-ಮತದಾನದ ಸೇವೆಗಳನ್ನು ಪಡೆಯಲು ಅರ್ಹರಾಗುತ್ತಾರೆ. ಇ-ಮತದಾನದ ಅವಧಿಯು ಗುರುವಾರ, ಸೆಪ್ಟೆಂಬರ್ 12, 2024 ರ ಬೆಳಿಗ್ಗೆ 9.00ಕ್ಕೆ (ಐಎಸ್‌ಟಿ) ಆರಂಭವಾಗಿ ಭಾನುವಾರ, ಸೆಪ್ಟೆಂಬರ್ 15, 2024 ಸಂಜೆ 5.00ಕ್ಕೆ (ಐಎಸ್‌ಟಿ) ಮುಕ್ತಾಯಗೊಳ್ಳುತ್ತದೆ. ತದನಂತರ ಇ-ವೋಟಿಂಗ್ ಮಾಡ್ಯೂಲ್‌ನ್ನು ಸಿಡಿಎಸ್‌ಎಲ್ ನಿಷ್ಕ್ರಿಯಗೊಳಿಸುತ್ತದೆ. ಇ-ಮತದಾನದ ಮೂಲಕ ಸಭೆಗೆ ಮೊದಲು ರಿಮೋಟ್ ಮತದಾನ ಚಲಾಯಿಸಿದ ಸದಸ್ಯರು ಸಭೆಯಲ್ಲಿ ಭಾಗವಹಿಸಬಹುದು, ಆದರೆ ಮತ್ತೊಮ್ಮೆ ಮತದಾನ ಮಾಡಲು ಅವಕಾಶವಿರುವುದಿಲ್ಲ.

ಇ-ಮತದಾನದ ಮೂಲಕ ಮತದಾನದ ಸೌಲಭ್ಯವು ಸಭೆಯ ಸಮಯದಲ್ಲಿ ಲಭ್ಯವಿರುತ್ತದೆ ಮತ್ತು ಸಭೆಯಲ್ಲಿ ಭಾಗವಹಿಸುವ ಸದಸ್ಯರು ರಿಮೋಟ್ ಇ-ಮತದಾನದ ಮೂಲಕ ಈಗಾಗಲೇ ಮತ ಚಲಾಯಿಸದಿದ್ದಲ್ಲಿ ಸಭೆಯಲ್ಲಿ ತಮ್ಮ ಹಕ್ಕನ್ನು ಚಲಾಯಿಸಲು ಸಾಧ್ಯವಾಗುತ್ತದೆ. ಎಜಿಎಂ ಸಮಯದಲ್ಲಿ ರಿಮೋಟ್ ಇ-ಮತದಾನ / ಇ-ಮತದಾನ ಮತ್ತು ವಿಸಿ / ಒಎವಿಎಂ ಮೂಲಕ ಸಭೆಗೆ ಹಾಜರಾಗುವ ಸದಸ್ಯರಿಗೆ ಮಾಹಿತಿಯನ್ನು ಎಜಿಎಂ ನೋಟೀಸ್‌ನಲ್ಲಿ ನೀಡಲಾಗಿದೆ. ಒಂದು ಬಾರಿ ನಿರ್ಣಯದ ಮೇಲೆ ಮತವನ್ನು ಸದಸ್ಯರು ಚಲಾಯಿಸಿದರೆ, ನಂತರ ಅದನ್ನು ಬದಲಾಯಿಸಲು ಅಥವಾ ಮತ್ತೊಮ್ಮೆ ಮತ ಚಲಾಯಿಸಲು ಅನುಮತಿ ನೀಡಲಾಗುವುದಿಲ್ಲ.

ಎಜಿಎಂನ ಸೂಚನಾ ಪತ್ರದ ವಿತರಣೆಯ ನಂತರ ಯಾವುದೇ ವ್ಯಕ್ತಿ ಕಂಪನಿಯ ಸದಸ್ಯನಾಗಿದ್ದಲ್ಲಿ ಮತ್ತು ಅಂತಿಮ (ಕಟ್-ಆಫ್) ದಿನಾಂಕದಂದು ಷೇರುಗಳನ್ನು ಹೊಂದಿದ್ದಲ್ಲಿ ಅವರು ಆರ್‌ಟಿಎ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮೇನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ರವರನ್ನು ಯೂಸರ್ ಐಡಿ, ಪಾಸ್‌ವರ್ಡ್ ಮತ್ತಿತರ ಸಂಗತಿಗಳ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಿ ದೂರವಾಣಿ ಸಂ. 91-80-23460815-818ಗೆ ಕರೆ ಮಾಡಿ ಅಥವಾ irg@integratedindia.in ಗೆ ಇ-ಮೇಲ್ ಕಳುಹಿಸಬಹುದು.

ಕಂಪನಿಗಳ ಕಾಯಿದೆ 2013ರ ಸೆಕ್ಷನ್ 160 ರ ಪ್ರಕಾರ ಕಂಪನಿಗಳ ನಿಯಮ 13 (ನೇಮಕಾತಿ ಮತ್ತು ಅರ್ಹತೆ) ನಿಯಮಗಳು, 2014ರ ಸೆಬಿ (ಪಟ್ಟಿ ಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015ರ ಪ್ರಕಾರ, ಕಂಪನಿಯು ಶ್ರೀ ಮೊಹಮ್ಮದ್ ಸಾದ್ ಬಿನ್ ಜಂಗ್ (ಡಿಐಎನ್: 00264525) ಮತ್ತು ಡಾ. ಪಂಗಲ್ ರಂಗನಾಥ್ ನಾಯಕ್ (ಡಿಐಎನ್: 01507096) ಇವರನ್ನು, ಕಂಪನಿಯ ಸ್ವತಂತ್ರ ನಿರ್ದೇಶಕರ ಸಾಮರ್ಥ್ಯದಲ್ಲಿ ನೇಮಕ ಮಾಡಲು ಪ್ರಸ್ತಾಪಿಸುವ ಲಿಖಿತ ನೋಟೀಸನ್ನು ಸದಸ್ಯರುಗಳಿಂದ ಸ್ವೀಕರಿಸಿದೆ. ಅವರ ನೇಮಕಾತಿಗೆ ಸಂಬಂಧಿಸಿದ ಐಟಂಗಳನ್ನು ಕಂಪನಿಯ 77ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯಲ್ಲಿ ಪ್ರಕಟಿಸಲಾಗಿದೆ.

ಇ-ಮತದಾನದ ಬಗ್ಗೆ ಮತ್ತು ಎಜಿಎಂನಲ್ಲಿ ಭಾಗವಹಿಸುವ ಬಗ್ಗೆ ಯಾವುದೇ ದೂರುಗಳಿದ್ದಲ್ಲಿ ಸಿಡಿಎಸ್‌ಎಲ್ ಅವರ ಇ-ಮೇಲ್ ಐಡಿ helpdesk.evoting@cdslindia.com ಗೆ ಬರೆದು ತಿಳಿಸಬಹುದು ಅಥವಾ 022-23058738 / 23058542 / 23058543 ಗೆ ಕರೆ ಮಾಡಿ ತಿಳಿಸಬಹುದು ಮತ್ತು / ಅಥವಾ NSDL ಅವರ ಇ-ಮೇಲ್ ಐಡಿ evoting@nsdl.co.in ಗೆ ಬರೆದು ತಿಳಿಸಬಹುದು ಅಥವಾ 022-48867000 / 24997000 ಗೆ ಕರೆ ಮಾಡಿ ತಿಳಿಸಬಹುದು ಹಾಗೂ ಒಂದು ಪ್ರತಿಯನ್ನು investors@kirloskarelectric.com ಗೆ ಕಳುಹಿಸಬೇಕು.

ನಿರ್ದೇಶಕರ ಮಂಡಳಿಯ ಆದೇಶದ ಅನುಸಾರ,
ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್ನ ಪರವಾಗಿ,

ಸಹಿ/-
ಮಹಾಬಲೇಶ್ವರ ಭಟ್,
ಕಂಪನಿ ಕಾರ್ಯದರ್ಶಿ ಮತ್ತು ಕಂಪ್ಲಯೆನ್ಸ್ ಆಫಿಸರ್

ಸ್ಥಳ : ಬೆಂಗಳೂರು
ದಿನಾಂಕ: ಆಗಸ್ಟ್ 24, 2024

ಭಾರತ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
(ಆರೋಗ್ಯ ಸಂಶೋಧನೆ ಇಲಾಖೆ)

ಆರೋಗ್ಯ ಸಂಶೋಧನೆ ಇಲಾಖೆ ರವರು, ಡೆಪ್ಯೂಟೇಶನ್ ಆಧಾರದಲ್ಲಿ (ಅಲ್ಪಾವಧಿ ಗುತ್ತಿಗೆ ಸೇರಿದಂತೆ) ತಲಾ ಎರಡು ಸೈಂಟಿಸ್ಟ್ ಡಿ ಮತ್ತು ಇ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅರ್ಹ ಮತ್ತು ಸೂಕ್ತ ಅಧಿಕಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಅಕ್ಟೋಬರ್ 24, 2024 ಆಗಿರುತ್ತದೆ. ಸೈಂಟಿಸ್ಟ್ ಡಿ ಮತ್ತು ಇ ಹುದ್ದೆಗಳ ನೇಮಕಾತಿಗೆ ಸಂಬಂಧಿತ ಹುದ್ದೆ, ಅರ್ಹತಾ ಮಾನದಂಡ ಮುಂತಾದ ವಿವರಗಳು ಆರೋಗ್ಯ ಸಂಶೋಧನೆ ಇಲಾಖೆಯ https://dhr.gov.in/vacancies ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

A.12025/02/2022-HR
CBC 17301/11/0006/2425

ಸಹಿ/-
ರಾಜೀವ್ ಸಕ್ಸೇನಾ
ಅಧೀನ ಕಾರ್ಯದರ್ಶಿ

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್

(ಭಾರತ ಸರ್ಕಾರದ ಅಧೀನ ಸಂಸ್ಥೆ - ಅಣುಶಕ್ತಿ ಇಲಾಖೆ)
ಪ್ರಭಾದೇವಿ, ಮುಂಬೈ-400028
ಸಿಐಎನ್: U15100MH1950GOI008187

IREL Unleashing Values

ಜಾಹೀರಾತು ಸಂ. ಸಿಒ/ಎಚ್‌ಆರ್‌ಎಂ/31/2024

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ಮಿನಿರತ್ನ-1 ಸಿಪಿಎಸ್‌ಇ, ಇವರು ಕೆಳಕಂಡ ಹುದ್ದೆಗಾಗಿ ನಿವೃತ್ತ ಮಾಜಿ ಯೋಧರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ 11.09.2024.

ಹುದ್ದೆಯ ಹೆಸರು	ದರ್ಜೆ	ವೇತನ ಶ್ರೇಣಿ (ರೂ.ಗಳಲ್ಲಿ)	ಹುದ್ದೆಗಳ ಸಂಖ್ಯೆ & ಮೀಸಲಾತಿ
ಸೀನಿಯರ್ ಮ್ಯಾನೇಜರ್ (ಸೆಕ್ಯೂರಿಟಿ)	ಇ-4	70000-200000	1 ಯುಆರ್

ಅರ್ಹ ಮತ್ತು ಆಸಕ್ತಿಯುಳ್ಳ ಅಭ್ಯರ್ಥಿಗಳು ವಿವರಗಳಿಗಾಗಿ ಮತ್ತು ಅರ್ಜಿ ಸಲ್ಲಿಸುವುದಕ್ಕಾಗಿ ಐಆರ್‌ಇಎಲ್ ಸಂಸ್ಥೆಯ www.irel.co.in ವೆಬ್‌ಸೈಟ್‌ಗೆ ಭೇಟಿ ನೀಡಬೇಕೆಂದು ಕೋರಲಾಗಿದೆ.

CBC 48129/12/0002/2425

ರಾಮನಗರ ಜಿಲ್ಲಾ ಪಂಚಾಯತ್

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಛೇರಿ,
ರೈಲ್ವೆ ನಿಲ್ದಾಣ ರಸ್ತೆ, ರಾಮನಗರ. ರಾಮನಗರ ಜಿಲ್ಲೆ - 562 159.
ದೂರವಾಣಿ : 080-2727 3060, ಇಮೇಲ್ : dtokarmn@rntcp.org

ಸಂಖ್ಯೆ : ಜಿ.ಕ್ಷ.ಕೇ./ರಾ./115/2024-25 ದಿನಾಂಕ : 23-08-2024

ಇ-ಟೆಂಡರ್ ಅಧಿಸೂಚನೆ

ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕಛೇರಿಯಿಂದ ರಾಮನಗರ ಜಿಲ್ಲೆಯ ಎಲ್ಲಾ ಡಿಎಂಸಿಗಳಿಗೆ ವಿತರಿಸಲು ಪ್ರಯೋಗ ಶಾಲಾ ಸಾಮಗ್ರಿಗಳನ್ನು ಖರೀದಿಸಲು ಇ-ಟೆಂಡರ್ ಪ್ರಕಟಣೆ ಹೊರಡಿಸುತ್ತಿರುವ ಬಗ್ಗೆ ಅಧಿನಿಯಮ ಕೆ.ಪಿ.ಪಿ.ಪಿ. 1999 ನಿಯಮಗಳು 2000 ರ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಮೂಲಕ ಪಡೆಯುವ ಬಗ್ಗೆ.

1) ಟೆಂಡರ್ ಸಂಖ್ಯೆ : DHFWS/2024-25/IND0902, 2) ಟೆಂಡರ್ ಪ್ರಕಟಣೆ ದಿನಾಂಕ : 23-08-2024, 3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : 22-08-2024, 4) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 06-09-2024 ರ ಸಂಜೆ 5.30 ಗಂಟೆಗೆ, 5) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ಸಮಯ ಮತ್ತು ದಿನಾಂಕ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ ದಿನಾಂಕ : 09-09-2024 ರ ಬೆಳಿಗ್ಗೆ 11.30 ಗಂಟೆಗೆ, 6) ಆರ್ಥಿಕ ಲಕೋಟೆ ತೆರೆಯುವ ಸಮಯ ಮತ್ತು ದಿನಾಂಕ : 10-09-2024 ರ ಬೆಳಿಗ್ಗೆ 11.30 ಗಂಟೆಗೆ, 7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ : ರೂ. 50,000/-, 8) ಟೆಂಡರ್‌ನ ಒಟ್ಟು ಮೊತ್ತ : ರೂ. 20,00,000/-, 9) ವ್ಯವಹರಿಸಬೇಕಾದ ಕಛೇರಿ ಹಾಗೂ ವಿಳಾಸ : ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ, ರಾಮನಗರ, ದೂರವಾಣಿ ಸಂಖ್ಯೆ : 93412 28986, ಇ-ಮೇಲ್ : dtokarmn@rntcp.org

ಸಹಿ/- ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ,
ರಾಮನಗರ ಜಿಲ್ಲೆ, ರಾಮನಗರ.

ಡಿಐಪಿಆರ್/ರಾಮನಗರ/267/ಮಣಿಪಾಲ್/2024-25

DS-MAX PROPERTIES

EXPERIENCE THE JOY OF LIVING

www.dsmaxproperties.com

Admired by All Owned by You!

Architectural Excellence | Superior Locations
Outstanding Conveniences | Best-in-Class Amenities
Excellent Connectivity | Lifetime Support and Assurance

AS YOUR TRUSTED BUILDER
We Assure You A Living Experience That Surpasses Your Expectations.

ಡಿಎಸ್ ಮ್ಯಾಕ್ಸ್

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1251/310/PR/150223/005721 MYSORE ROAD NR. R R DENTAL COLLEGE ₹ 49.63 - 79.66 Lakhs* 8088 445 445	PRM/KA/RERA/1251/308/PR/160824/006972 ELECTRONIC CITY HOSA ROAD JUNCTION ₹ 54.10 L - 1.15 Cr* 9164 045 000	PRM/KA/RERA/1251/308/PR/280222/004739 CHANDAPURA 10 MINS. BOMMASANDRA METRO ₹ 37.60 - 49.60 Lakhs* 8880 013 310	PRM/KA/RERA/1251/309/PR/211209/004576 YELAHANKA NEAR RAJANAKUNTE TOLL ₹ 37.52 - 88.58 Lakhs* 8880 758 758
PRM/KA/RERA/1250/304/PR/150224/006622 WHITEFIELD 15 MINS. HOPEFARM METRO ₹ 60.84 L - 1.07 Cr.* 8088 773 773	PRM/KA/RERA/1251/309/PR/060923/006244 TUMKUR ROAD NEAR HIMALAYA FACTORY ₹ 41.89 - 59.72 Lakhs* 8880 465 465	PRM/KA/RERA/1251/310/PR/151223/006489 UTTARAHALLI OPP. NPS SCHOOL ₹ 77.77 L - 1.74 Cr.* 8050 161 222	PRM/KA/RERA/1251/309/PR/030524/006841 HENNUR ROAD 5 MINS. HENNUR DECATHLON ₹ 55.85 L - 1.04 Cr* 8880 003 003
PRM/KA/RERA/1251/310/PR/210324/006724 BEGUR NR. SINGASANDRA METRO ₹ 71.36 L - 1.16 Cr* 8880 472 472	PRM/KA/RERA/1251/308/PR/290122/004660 SARJAPURA SARJAPUR - ATTIBELE ROAD ₹ 38.72 - 44.12 Lakhs* 9164 122 000	PRM/KA/RERA/1251/446/PR/210312/004002 K R PURAM NEAR GARDEN CITY UNIV. ₹ 63.66 - 84.24 Lakhs* 8880 438 000	PRM/KA/RERA/1251/308/PR/160824/006973 BANNERGHATTA RD. NEAR KOPPA GATE ₹ 44.01 L - 1.02 Cr.* 8880 461 461

*T & C Apply

FACILITY MANAGEMENT SERVICES

For Apartments & Commercial Complexes

MEP | Security Services | Gardening | Landscaping
STP | WTP | RO Maintenance | Housekeeping
Swimming Pool Maintenance

CALL : 9164 022 000

ELEGANT INTERIORS



Directly From Our Factory

Modular Kitchens | TV Units | Wardrobes
Painting & Wallpapers | Storage Units
False Ceilings | Furniture

CALL : 9164 056 000

REFER & EARN

Refer Us To Your Friends & Relatives And Get Handsomely Rewarded

2, 3 & 4-BHK Homes | Full / Partial Interiors
Facility Management Services
(For Apartment & Commercial Complexes) *T & C Apply

CALL : 9164 043 000

REFER & EARN

Refer Us To A Landowner For JV / Outright Purchase In Any Part Of Bengaluru And Get A 2-BHK ABSOLUTELY FREE*

Residential Land | Commercial Land

*T & C Apply

CALL : 8880 463 463

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ರಾತ್ರಿ ಪಾಳಿಯಲ್ಲಿಯೂ ಮಹಿಳಾ ಸಂಚಾರ ಪೊಲೀಸರಿಂದ ಕರ್ತವ್ಯ ನಿರ್ವಹಣೆ

ಸ್ತ್ರೀಯರಿಗೆ ನೆರವು: 100 ಸಿಬ್ಬಂದಿ ನಿಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾತ್ರಿ ವೇಳೆ ಮಹಿಳೆಯರಿಗೆ ನೆರವು ನೀಡಲು ಪ್ರತ್ಯೇಕವಾಗಿ 100 ಮಹಿಳಾ ಸಿಬ್ಬಂದಿಯನ್ನು ನಗರ ಪೊಲೀಸ್ ಇಲಾಖೆ ನಿಯೋಜಿಸಿದೆ.

ಮಹಿಳಾ ಚಾಲಕರ ಅಪಘಾತ ಪ್ರಕರಣಗಳನ್ನು ನಿಯಂತ್ರಿಸಲು ಇನ್ನು ಮುಂದೆ ಮಹಿಳಾ ಸಂಚಾರ ಪೊಲೀಸರು ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲಿದ್ದಾರೆ. ಪ್ರತಿ ಠಾಣೆಯಲ್ಲಿ ಇಬ್ಬರು ಮಹಿಳಾ ಸಿಬ್ಬಂದಿ ರಾತ್ರಿ ವೇಳೆ ಪಾಳಿ ರೀತಿಯಲ್ಲಿ ಕೆಲಸ ಮಾಡಲಿದ್ದಾರೆ.

ರಾತ್ರಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಅಪಘಾತ ಹಾಗೂ ನ್ಯಾಯ ಕೋರಿ ಠಾಣೆಗಳಿಗೆ ಬರುವ ಮಹಿಳೆಯರಿಗೆ ನೆರವು ನೀಡಲು ಒಬ್ಬ ಮಹಿಳಾ ಸಿಬ್ಬಂದಿ ಠಾಣೆಯಲ್ಲೇ ಕಾರ್ಯನಿರ್ವಹಿಸುತ್ತಾರೆ. ಮತ್ತೊಬ್ಬ ಮಹಿಳಾ ಸಿಬ್ಬಂದಿ ಅಪಘಾತ ಸ್ಥಳದ ಪರಿಶೀಲನೆ ನಡೆಸಲಿದ್ದಾರೆ.

ದಟ್ಟಣೆ ಪ್ರದೇಶದಲ್ಲಿ ಗಸ್ತು ಹಾಗೂ ಮದ್ಯ ಸೇವನೆ ತಪಾಸಣೆ ನಡೆಸುವ ಪುರುಷ ಸಿಬ್ಬಂದಿ ಜತೆಗೆ ಒಬ್ಬರು ಮಹಿಳಾ ಸಿಬ್ಬಂದಿಯೂ ಕರ್ತವ್ಯ ನಿರ್ವಹಿಸಲಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಚಾಲಕರು ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿರುವುದರಿಂದ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ. ಈ ರೀತಿಯ ಅಪಘಾತ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಪ್ರತಿ ಠಾಣೆಯಲ್ಲಿ ರಾತ್ರಿ ವೇಳೆ ಇಬ್ಬರು ಮಹಿಳಾ ಸಿಬ್ಬಂದಿಯನ್ನು ಕರ್ತವ್ಯಕ್ಕೆ ನಿಯೋಜಿಸಲು ನಿರ್ದೇಶನ ನೀಡಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದ್ದಾರೆ.

ನಗರದಲ್ಲಿ ಅಪಘಾತ ಪ್ರಕರಣಗಳಿಗೆ ಕಡಿವಾಣ ಹಾಕಲು ಸಂಚಾರ ವಿಭಾಗದ ಎಲ್ಲ ಪೊಲೀಸ್ ಠಾಣೆಗಳಲ್ಲಿ ವಾರಾಂತ್ಯದ ಗುರುವಾರದಿಂದ ಭಾನುವಾರದವರೆಗೆ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವ ವಾಹನ ಸವಾರರು ಹಾಗೂ ಚಾಲಕರ ವಿರುದ್ಧ ಕಡ್ಡಾಯವಾಗಿ ವಿಶೇಷ ಕಾರ್ಯಾಚರಣೆ ನಡೆಸುವಂತೆ ಪೊಲೀಸ್ ಸಬ್ ಇನ್‌ಸ್ಪೆಕ್ಟ‌ರ್‌ಗಳಿಗೆ ಸೂಚನೆ ನೀಡಲಾಗಿದೆ.

ಠಾಣಾ ವ್ಯಾಪ್ತಿಯಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿರುವ ಜಂಕ್ಷನ್‌ಗಳಲ್ಲಿ ಮಾತ್ರ ತಪಾಸಣೆ ನಡೆಸಿ, ಪ್ರಕರಣ ದಾಖಲಿಸಬೇಕು ಎಂದು ಸೂಚನೆ ನೀಡಲಾಗಿದೆ.

ಸೂಚನೆ ಬೆನ್ನಲ್ಲೇ ಗುರುವಾರ ತಡರಾತ್ರಿ ಒಟ್ಟು 8,550 ವಾಹನಗಳ ಚಾಲಕರನ್ನು ತಪಾಸಣೆಗೆ ಒಳಪಡಿಸಿದ ಸಂಚಾರ ಪೊಲೀಸರು, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಒಟ್ಟು 167 ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮುಖ್ಯಾಂಶಗಳು

- ದಟ್ಟಣೆ ಪ್ರದೇಶದಲ್ಲಿ ಗಸ್ತು ಕರ್ತವ್ಯಕ್ಕೆ ನಿಯೋಜನೆ
- ಗುರುವಾರದಿಂದ ಭಾನುವಾರ ವಿಶೇಷ ಕಾರ್ಯಾಚರಣೆಗೆ ಸೂಚನೆ

ಬಾಲಕಿ ಬಳಸಿಕೊಂಡು ಚಿನ್ನಾಭರಣ ದರೋಡೆ: ಮಹಿಳೆ ಬಂಧನ

ಬೆಂಗಳೂರು: ಬಾಲಕಿಯನ್ನು ಬಳಸಿಕೊಂಡು ಚಿನ್ನಾಭರಣ ಕಳವು ಮಾಡುತ್ತಿದ್ದ ಮಹಿಳೆಯೊಬ್ಬರನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಡಿ.ಜೆ. ಹಳ್ಳಿಯ ನೀಲೋಫರ್ ಅಲಿಯಾಸ್ ನೀಲು ಬಂಧಿತ ಆರೋಪಿ. ಆರೋಪಿಯಿಂದ ₹4.9 ಲಕ್ಷ ಮೌಲ್ಯದ 70 ಗ್ರಾಂ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ಆಟೊ ಜಪ್ತಿ ಮಾಡಲಾಗಿದೆ. ಇದೇ ಪ್ರಕರಣದಲ್ಲಿ ಇನ್ನೂ ನಾಲ್ವರು ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ದಾಸರಹಳ್ಳಿಯ ಕಲ್ಯಾಣನಗರದಲ್ಲಿ ವ್ಯಕ್ತಿಯೊಬ್ಬರು ಮನೆಗೆ ಹೊಂದಿಕೊಂಡಂತೆಯೇ ಗೊಂಬೆಗಳ ಮಾರಾಟ ಅಂಗಡಿಯನ್ನು ಇಟ್ಟುಕೊಂಡಿದ್ದಾರೆ. ಗ್ರಾಹಕರ ಸೋಗಿನಲ್ಲಿ ಪುರುಷರ ವೇಷದಲ್ಲಿ ನಾಲ್ವರು ಮಹಿಳೆಯರು ಅಂಗಡಿಗೆ ಬಂದಿದ್ದರು. ಜತೆಗೆ, ಬಾಲಕಿಯನ್ನೂ ಕರೆದುಕೊಂಡು ಬಂದಿದ್ದರು. ಮಾಲೀಕರ ಪುತ್ರಿ ಅಂಗಡಿಯಲ್ಲಿ ಇದ್ದರು. ದೊಡ್ಡವರನ್ನು ಅಂಗಡಿಗೆ ಕರೆಯುವಂತೆ ಹೇಳುತ್ತಾರೆ. ಆಕೆಯ ತಾಯಿ ಅಂಗಡಿಗೆ ಬಂದ ಮೇಲೆ ಬಾಲಕಿಯನ್ನು ಮನೆಗೆ ಕಳುಹಿಸಿ ಬೀರುವಿನಲ್ಲಿದ್ದ 125 ಗ್ರಾಂ ಚಿನ್ನಾಭರಣವನ್ನು ಕಳವು ಮಾಡಿದ್ದರು' ಎಂದು ಪೊಲೀಸರು ಹೇಳಿದರು.

'ಡಿ.ಜೆ ಹಳ್ಳಿಯ ಶಾಂಪೂರ ಬಸ್ ನಿಲ್ದಾಣದ ಬಳಿ ಆರೋಪಿಯನ್ನು ವಶಕ್ಕೆ ಪಡೆಯಲಾಯಿತು. ಆಕೆಯನ್ನು ವಿಚಾರಣೆ ನಡೆಸಿದಾಗ ಕೃತ್ಯ ಎಸಗಿದ್ದನ್ನು ಒಪ್ಪಿಕೊಂಡಿದ್ದಾಳೆ. ತಲೆಮರೆಸಿಕೊಂಡಿರುವ ಆರೋಪಿಗಳ ಬಳಿ 55 ಗ್ರಾಂ. ಚಿನ್ನಾಭರಣ ಇದೆ' ಎಂದು ಪೊಲೀಸರು ಹೇಳಿದರು.

ಸ್ನೇಹಿತೆಯಿಂದ ಚಿನ್ನಾಭರಣ ಸುಲಿಗೆ

ಖಾಸಗಿ ವಿಡಿಯೊ ಬಿಡುಗಡೆ ಮಾಡುವುದಾಗಿ ಬೆದರಿಕೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪ್ರಿಯಕರನ ಜತೆಗಿರುವ ಖಾಸಗಿ ವಿಡಿಯೊ ಬಿಡುಗಡೆ ಮಾಡುವುದಾಗಿ ಬ್ಲ್ಯಾಕ್‌ಮೇಲ್ ಮಾಡಿ ಸ್ನೇಹಿತೆಯಿಂದ ಲಕ್ಷಾಂತರ ಮೌಲ್ಯದ ಚಿನ್ನಾಭರಣ ಸುಲಿಗೆ ಮಾಡಿದ್ದ ಆರೋಪಿಯನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.

ಆರ್.ಟಿ.ನಗರ ನಿವಾಸಿ ಅರಾಫತ್ ಎಂಬಾತನನ್ನು ಬಂಧಿಸಿ, ₹15 ಲಕ್ಷ ಮೌಲ್ಯದ 264 ಗ್ರಾಂ. ತೂಕದ ಚಿನ್ನಾಭರಣ ವಪಡಿಸಿಕೊಂಡಿದ್ದಾರೆ.

'ಜಯನಗರದ ನಿವಾಸಿಯಾದ ಯುವತಿ, ನಗರದ ಖಾಸಗಿ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಅರ್ಧಕ್ಕೆ ಮೊಟಕುಗೊಳಿಸಿದ್ದಳು. ಕಾಲೇಜಿನಲ್ಲಿ ವ್ಯಾಸಂಗ ಮಾಡುವಾಗ ಡ್ಯಾನಿಶ್ ಎಂಬಾತನ ಜತೆ ಸಲುಗೆಯಿಂದ ಇದ್ದಳು. ಡ್ಯಾನಿಶ್ ಸ್ನೇಹಿತ ಅರಾಫತ್ , ಯುವತಿಗೂ ಪರಿಚಿತ. ಈ ಮಧ್ಯೆ ಯುವತಿ ಹಾಗೂ ಡ್ಯಾನಿಶ್ ಅಂತರ ಕಾಯ್ದುಕೊಂಡಿದ್ದರು. ಇದನ್ನೇ ಬಂಡವಾಳ ಮಾಡಿಕೊಂಡ ಆರೋಪಿ, ಯುವತಿಗೆ ಕರೆ ಮಾಡಿ ಡ್ಯಾನಿಶ್ ಜೊತೆ ಇರುವ ಖಾಸಗಿ ವಿಡಿಯೊ ಹಾಗೂ ಫೋಟೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವುದಾಗಿ ಹೆದರಿಸಿದ್ದ. ಮನೆಯಲ್ಲಿನ ಚಿನ್ನಾಭರಣ ತಂದು ಕೊಡದಿದ್ದರೆ ವಿಡಿಯೊ ಹರಿಯ ಬಿಡುವುದಾಗಿ ಬ್ಲ್ಯಾಕ್‌ಮೇಲ್ ಮಾಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಮನೆಯಲ್ಲಿ ಚಿನ್ನಾಭರಣ ನಾಪತ್ತೆ ಸಂಬಂಧ ಮಗಳ ಮೇಲೆಯೇ ಪೋಷಕರು ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದರು. ಯುವತಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಿಸಿದಾಗ ಸತ್ಯಾಂಶ ಗೊತ್ತಾಗಿದೆ.

'ಖಾಸಗಿ ವಿಡಿಯೊ ಬಿಡುಗಡೆ ಮಾಡುವುದಾಗಿ ಬೆದರಿಸಿ ಚಿನ್ನಾಭರಣ ಕೊಡುವಂತೆ ಅರಾಫತ್ ಒತ್ತಾಯಿಸಿದ್ದ. ಒತ್ತಡಕ್ಕೆ ಮಣಿದು ಹಂತ, ಹಂತವಾಗಿ ಚಿನ್ನಾಭರಣ ನೀಡಿದ್ದೆ' ಎಂದು ವಿಚಾರಣೆ ವೇಳೆ ತಿಳಿಸಿದ್ದಾಳೆ. ಈ ಸಂಬಂಧ ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಯುವತಿಯ ಖಾಸಗಿ ವಿಡಿಯೊ ಇರುವುದಾಗಿ ಸುಳ್ಳು ಹೇಳಿ ಚಿನ್ನಾಭರಣ ಸುಲಿಗೆ ಮಾಡಿದ್ದಾಗಿ ಒಪ್ಪಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದ್ದಾರೆ.

ಕೃಷ್ಣವೇಷ... ಶ್ರೀಕೃಷ್ಣ ಜನ್ಮಾಷ್ಟಮಿಗೆ ಕೆಲವೇ ದಿನ ಇರುವುದರಿಂದ ಬೆಂಗಳೂರಿನ ಗಿರಿನಗರದಲ್ಲಿ ಮಾರಾಟಕ್ಕಾಗಿ ಕೃಷ್ಣವೇಷ ದಿರಿಸುಗಳನ್ನು ಸಾಲಾಗಿ ಜೋಡಿಸುತ್ತಿರುವುದು ಕಂಡು ಬಂತು –ಪ್ರಜಾವಾಣಿ ಚಿತ್ರ/ ರಂಜು ಪಿ.

₹50 ಲಕ್ಷ ಮೌಲ್ಯದ ಚಿನ್ನಾಭರಣ, ವಿದೇಶಿ ಕರೆನ್ಸಿ ವಶ

ಜೈಲಿನಿಂದ ಹೊರಬಂದು ಮನೆಗಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಮನೆಗಳ ಬೀಗ ಮುರಿದು ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಡುಗೋಡಿಯ ರಾಜೇಂದ್ರ ನಗರದ ಅಪ್ಪು ಆಲಿಯಾಸ್ ಕೊಳಾಯಿ, ಧರ್ಮಪುರಿಯ ಪೆರಿಸ್ವಾಮಿ ಹಾಗೂ ತಾಂಬ್ರೆ ಸೆಲ್ವನ್ ಎಂಬುವರನ್ನು ಬಂಧಿಸಿ, ₹ 50 ಲಕ್ಷ ಮೌಲ್ಯದ 674 ಗ್ರಾಂ ಚಿನ್ನ, 240 ಗ್ರಾಂ ಬೆಳ್ಳಿ ಹಾಗೂ ವಿದೇಶಿ ಕರೆನ್ಸಿ ವಶಕ್ಕೆ ಪಡೆಯಲಾಗಿದೆ.

'ಪ್ರಮುಖ ಆರೋಪಿ ಅಪ್ಪು ಮನೆಗಳ್ಳತನ ಮಾಡುವುದನ್ನೇ ವೃತ್ತಿಯಾಗಿಸಿಕೊಂಡಿದ್ದಾನೆ. ಹತ್ತು ವರ್ಷಗಳಿಂದ ಮನೆಯ ಬೀಗ ಒಡೆದು ಚಿನ್ನಾಭರಣ, ನಗದು ಕಳ್ಳತನ ಮಾಡುತ್ತಿದ್ದ. ಆಗಸ್ಟ್ 16ರಂದು ಬೊಮ್ಮನಹಳ್ಳಿಯ ಕೋಡಿಚಿಕ್ಕನಹಳ್ಳಿ ಮನೆಯೊಂದರ ಬೀಗ ಮುರಿದು ಲಕ್ಷಾಂತರ ಮೌಲ್ಯದ ಚಿನ್ನಾಭರಣ ಹಾಗೂ ವಿದೇಶಿ ಕರೆನ್ಸಿ ಕಳ್ಳತನ ಮಾಡಿದ್ದ. ಆತನನ್ನು ಬಂಧಿಸಿ ವಿಚಾರಣೆ ನಡೆಸಲಾಯಿತು. ಅಪ್ಪು ನೀಡಿದ ಮಾಹಿತಿ ಆಧರಿಸಿ ಮತ್ತಿಬ್ಬರನ್ನು ಬಂಧಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದ್ದಾರೆ.

'ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಂಬತ್ತು ಮನೆ ಕಳ್ಳತನ ಪ್ರಕರಣದಲ್ಲಿ ಅಪ್ಪು ಭಾಗಿಯಾಗಿದ್ದಾನೆ. ಕಳ್ಳತನ ಪ್ರಕರಣವೊಂದರಲ್ಲಿ ಜೈಲು ಸೇರಿದ್ದ ಅಪ್ಪು, ಜಾಮೀನ ಮೇಲೆ 13 ದಿನಗಳ ಹಿಂದೆ ಹೊರ ಬಂದಿದ್ದ. ಮದ್ಯ ಹಾಗೂ ಗಾಂಜಾ ಸೇವಿಸುತ್ತಿದ್ದ ಆರೋಪಿ, ಹಣಕ್ಕಾಗಿ ಕಳ್ಳತನ ಮಾಡುತ್ತಿದ್ದ' ಎಂದು ತಿಳಿಸಿದ್ದಾರೆ.

ಕೋಡಿಚಿಕ್ಕನಹಳ್ಳಿಯ ಮನೆಯೊಂದರಲ್ಲಿ ಯಾರೂ ಇಲ್ಲದಿರುವುದನ್ನ ಖಚಿತಪಡಿಸಿಕೊಂಡು ಮನೆ ಕಳ್ಳತನ ಮಾಡಿದ್ದ. ಕದ್ದ ಚಿನ್ನಾಭರಣವನ್ನು ಧರ್ಮಪುರಿಯಲ್ಲಿರುವ ತನ್ನ ಸಂಬಂಧಿಕ ಪೆರಿಸ್ವಾಮಿಗೆ ನೀಡಿದ್ದ. ಈತನ ಸ್ನೇಹಿತ ತಾಂಬ್ರೆ ಸೆಲ್ವನ್ ಜೊತೆಗೂಡಿ ಚಿನ್ನಾಭರಣ ಗಿರವಿ ಇಡಲು ಮುಂದಾಗಿದ್ದರು. ತಾಂಬ್ರೆ ಸೆಲ್ವನ್ ವಿರುದ್ಧ ಸರ್ಜಾಪುರ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಮಿಕನ ಕೊಲೆ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಣ್ಣದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕನ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ನಾಲ್ವರು ಆರೋಪಿಗಳನ್ನು ಕಾಟನ್‌ಪೇಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಜೈಭೀಮ್ ನಗರದ ಮನೋಜ್, ದೊರೆಸ್ವಾಮಿ ನಗರದ ನಿರಂಜನ್, ರಾಮಕೃಷ್ಣ ಸೇವಾನಗರದ ನವೀನ್ ಹಾಗೂ ಎ.ಶರತ್ ಬಂಧಿತರು.

ಯುವತಿ ತಲೆಮರೆಸಿಕೊಂಡಿದ್ದು, ಆಕೆಯ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಕೆ.ಪಿ.ಅಗ್ರಹಾರದ ಮಾರ್ಕಂಡೇಶ್ವರ ನಗರದ ನಿವಾಸಿ ಶರತ್ ಕುಮಾರ್ ಎಂಬುವವರನ್ನು ಕೊಲೆ ಮಾಡಿದ್ದರು.

ದೀಪಕ್

ಮನೋಜ್

ಶರತ್

ನಿರಂಜನ್

'ಗುರುವಾರ ಬೆಳಿಗ್ಗೆ ಅಂಜನಪ್ಪ ಗಾರ್ಡನ್‌ನಲ್ಲಿ ನೆಲೆಸಿದ್ದ ಶರತ್ ಅವರ ಪರಿಚಯಸ್ಥರೊಬ್ಬರು ಮೃತಪಟ್ಟಿದ್ದರು. ಅಂತಿಮ ದರ್ಶನ ಪಡೆಯಲು ಶರತ್ ಬಂದಿದ್ದರು. ಅಂತಿಮ ದರ್ಶನದ ವೇಳೆ ಶರತ್ ಅವರು ಯುವತಿಗೆ ನಿಂದಿಸಿದ್ದರು. ಆ ಯುವತಿ ತನ್ನ ಸ್ನೇಹಿತರಿಗೆ ವಿಷಯ ತಿಳಿಸಿದ್ದರು. ಅವರು ಶರತ್ ಅವರನ್ನು ಅಡ್ಡಗಟ್ಟಿ ಕೊಲೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಮಂತ್ರಿ ಡೆವಲಪರ್ಸ್ ಪ್ರವರ್ತಕರ ವಿರುದ್ಧ ಮತ್ತೆ ವಾರಂಟ್

ಬೆಂಗಳೂರು: ಮಂತ್ರಿ ಡೆವಲಪರ್ಸ್ ನಿರ್ದೇಶಕ ಸುಶೀಲ್ ಮಂತ್ರಿ ವಿರುದ್ಧ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗವು ಜಾಮೀನು ರಹಿತ ವಾರಂಟ್ ಹೊರಡಿಸಿದೆ.

ಫ್ಲ್ಯಾಟ್‌ಗಳನ್ನು ನೀಡುವುದಾಗಿ ಸಾವಿರಾರು ಕೋಟಿ ರೂಪಾಯಿ ಸಂಗ್ರಹಿಸಿ, ವಂಚಿಸಿದ ಪ್ರಕರಣದಲ್ಲಿ ಸುಶೀಲ್ ಮಂತ್ರಿ ವಿರುದ್ಧ ಜೂನ್ 31ರಂದು ಜಾಮೀನುರಹಿತ ವಾರಂಟ್ ಹೊರಡಿಸಿತ್ತು. ಕಂಪನಿಯ ಮತ್ತಿಬ್ಬರು ನಿರ್ದೇಶಕರಾದ ಸ್ನೇಹಲ್ ಮತ್ತು ಪ್ರತೀಕ್ ಮಂತ್ರಿ ವಿರುದ್ಧ ಜಾಮೀನು ಸಹಿತ ವಾರಂಟ್ ಹೊರಡಿಸಲಾಗಿತ್ತು. ಆ.23ರಂದು ಆಯೋಗದ ಎದುರು ಅವರನ್ನೂ ಹಾಜರುಪಡಿಸಲು ಸೂಚಿಸಿತ್ತು.

ಆದರೆ ಶುಕ್ರವಾರ ವಿಚಾರಣೆಗೆ ಮೂವರೂ ಹಾಜರಾಗಿರಲಿಲ್ಲ. 'ಮೂವರ ವಿರುದ್ಧರ ವಾರಂಟ್‌ಗಳನ್ನು ಕಬ್ಬನ್‌ಪಾರ್ಕ್ ಠಾಣೆಯ ಠಾಣಾಧಿಕಾರಿ ಸ್ವೀಕರಿಸಿದ್ದರೂ, ಜಾರಿಗೊಳಿಸಿಲ್ಲ' ಎಂದು ಆಯೋಗವು ಹೇಳಿತು.

ಆಯೋಗವು ಮೂವರ ವಿರುದ್ಧ ಮತ್ತೆ ವಾರಂಟ್ ಹೊರಡಿಸಿ, ಸೆಪ್ಟೆಂಬರ್ 23ರಂದು ಅವರನ್ನು ಹಾಜರುಪಡಿಸುವಂತೆ ಹೇಳಿದೆ. ಜತೆಗೆ, ಆದೇಶ ಪಾಲಿಸದ ಠಾಣಾಧಿಕಾರಿಯೂ ಮುಂದಿನ ವಿಚಾರಣೆ ವೇಳೆ ಹಾಜರಿರಬೇಕು ಎಂದು ಸೂಚಿಸಿದೆ.

ಅಪರಾಧಿಕ ನಂಬಿಕೆ ದ್ರೋಹ, ವಂಚನೆ ನಡುವೆ ವ್ಯತ್ಯಾಸವಿದೆ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ದಂಡ ಸಂಹಿತೆಯು (ಐಪಿಸಿ) ಹಲವಾರು ವರ್ಷಗಳಿಂದ ಜಾರಿಯಲ್ಲಿದ್ದರೂ ನ್ಯಾಯಾಲಯ ಮತ್ತು ಪೊಲೀಸರು ಅಪರಾಧಿಕ ನಂಬಿಕೆ ದ್ರೋಹ ಮತ್ತು ವಂಚನೆ ನಡುವಿನ ವ್ಯತ್ಯಾಸವನ್ನು ಅರ್ಥೈಸಿಕೊಂಡಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ವಿಷಾದ ವ್ಯಕ್ತಪಡಿಸಿದೆ. ಐಪಿಸಿ ಬದಲಿಗೆ ಇತ್ತೀಚೆಗೆ ಭಾರತೀಯ ನ್ಯಾಯ ಸಂಹಿತೆ ಅನುಷ್ಠಾನಕ್ಕೆ ಬಂದಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ನ್ಯಾಯಪೀಠವು, ಅಪರಾಧಿಕ ನಂಬಿಕೆ ದ್ರೋಹ ಮತ್ತು ವಂಚನೆಗೆ ಸಂಬಂಧಿಸಿದ ದೂರುಗಳಿಗೆ ಒಂದೇ ರೀತಿಯ ಎಫ್‌ಐಆರ್ ದಾಖಲಿಸುವುದು ಪೊಲೀಸರಿಗೆ ರೂಢಿಯಾಗಿದೆ ಎಂದಿದೆ.

ವಾಸ್ತವವಾಗಿ ಎರಡೂ ಅಪರಾಧಗಳು ವಿಭಿನ್ನವಾಗಿವೆ ಎಂದ ಪೀಠ, ದೇಶದಲ್ಲಿನ ಪೊಲೀಸ್ ಅಧಿಕಾರಿಗಳಿಗೆ ಕಾನೂನುಗಳ ಬಗ್ಗೆ ಸೂಕ್ತ ತರಬೇತಿ ನೀಡಬೇಕಾದ ಅಗತ್ಯವಿದೆ ಎಂದು ಹೇಳಿದೆ. ಅಪರಾಧಿಕ ನಂಬಿಕೆ ದ್ರೋಹ ಮತ್ತು ವಂಚನೆಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಉತ್ತರಪ್ರದೇಶದ ಕುರ್ಜಾ ನಗರದ ಹೆಚ್ಚುವರಿ ಮುಖ್ಯ ಮ್ಯಾಜಿಸ್ಟ್ರೇಟ್ ಅವರು ಜಾರಿಗೊಳಿಸಿದ್ದ ಸಮನ್ಸ್ ಅನ್ನು ಪ್ರಶ್ನಿಸಿ ದೆಹಲಿ ರೇಸ್ ಕ್ಲಬ್(1949) ಲಿಮಿಟೆಡ್ ಮತ್ತು ಇತರರು ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಪುರಸ್ಕರಿಸಿದೆ.

ದೂರುದಾರರು ಕ್ರಿಮಿನಲ್ ಮೊಕದ್ದಮೆ ಬದಲು ಮೇಲ್ಮನವಿದಾರರ ವಿರುದ್ಧ ಸಿವಿಲ್ ಮೊಕದ್ದಮೆಯನ್ನು ಹೂಡಬಹುದು ಎಂದು ಕೋರ್ಟ್ ಸಲಹೆ ನೀಡಿದೆ.

'ಕೊಡಿಗೆಹಳ್ಳಿಯಲ್ಲಿ ಕೃಷಿ ಭೂಮಿ ಸ್ವಾಧೀನ ಬೇಡ'

• ಮಹಾಂತೇಶ್.ಎಂ.ನೆಗಳೂರ

ನೆಲಮಂಗಲ: ಕೃಷಿಯೋಗ್ಯ ಜಮೀನನ್ನು ಕೃಷಿಯೇತರ ಚಟುವಟಿಕೆಗಳಿಗಾಗಿ ಭೂ ಸ್ವಾಧೀನ ಮಾಡಿಕೊಳ್ಳುವುದನ್ನು ತಡೆಯುವಂತೆ ತಾಲ್ಲೂಕಿನ ಕೊಡಿಗೆಹಳ್ಳಿ ರೈತರು, ಗ್ರಾಮ ಪಂಚಾಯಿತ್ಗೆ ಮನವಿ ಮಾಡಿದ್ದಾರೆ.

ತಾಲ್ಲೂಕಿನ ಕೊಡಿಗೆಹಳ್ಳಿ, ಕೆಂಚನಪುರ, ಬಳ್ಳಗೆರೆ ಪಂಚಾಯತಿ ವ್ಯಾಪ್ತಿಯ ಗ್ರಾಮಸ್ಥರು ಕೃಷಿಯನ್ನೇ ನಂಬಿ ಬದುಕುತ್ತಿದ್ದಾರೆ. ಕೃಷಿ ಭೂಮಿ ಫಲವತ್ತಾಗಿದೆ. ತಕ್ಕಮಟ್ಟಿಗೆ ನೀರಿನ ಸೌಲಭ್ಯಗಳನ್ನು ಬಳಸಿಕೊಂಡು ರೈತರು ತರಕಾರಿ ಬೆಳೆಯುತ್ತಾ, ಹೈನುಗಾರಿಕೆ ಮಾಡುತ್ತಾ, ನಿತ್ಯ ತುಮಕೂರು ಮತ್ತು ಬೆಂಗಳೂರಿಗೆ ತರಕಾರಿ, ಹಾಲು ಪೂರೈಸುತ್ತಿದ್ದಾರೆ. ಇಲ್ಲಿ ಸಣ್ಣ ಹಿಡುವಳಿದಾರರೇ ಹೆಚ್ಚಿದ್ದಾರೆ.

ಕೈಗಾರಿಕೆಗಳನ್ನು ನೆಪವಾಗಿಟ್ಟುಕೊಂಡು ರೈತರ ಜಮೀನು ಸ್ವಾಧೀನ ಪಡಿಸಿಕೊಂಡರೆ ಈ ಭಾಗದ ರೈತರನ್ನು ಒಕ್ಕಲೆಬ್ಬಿಸಿದಂತಾಗುತ್ತದೆ. ಸ್ವಾಭಿಮಾನದಿಂದ ವ್ಯವಸಾಯ ಮಾಡಿಕೊಂಡಿದ್ದ ರೈತರು ಕೂಲಿಗೆ ಹೋಗಬೇಕಾಗುತ್ತದೆ. ಸರ್ಕಾರ, ಸಣ್ಣ ರೈತರನ್ನು ಭೂ ರಹಿತರನ್ನಾಗಿಸುವ ಈ ಕೆಲಸವನ್ನು ಕೈಬಿಡಬೇಕು. ಬದಲಿಗೆ ಸುಸ್ಥಿರ ಕೃಷಿಯ ಕೈಗೊಳ್ಳಲು ರೈತರಿಗೆ ತಾಂತ್ರಿಕ ಮಾರ್ಗದರ್ಶನ ನೀಡಬೇಕು ಎಂದು ಮನವಿಯಲ್ಲಿ ಕೇಳಿಕೊಂಡಿದ್ದಾರೆ.

ಗ್ರಾಮಸ್ಥರ ಮನವಿ ಆಧರಿಸಿ, ಕೊಡಿಗೇಹಳ್ಳಿ ಗ್ರಾಮ ಪಂಚಾಯ್ತಿಯ ಸದಸ್ಯರು, ಸರ್ವಸದಸ್ಯರ ಸಭೆಯಲ್ಲಿ ನಡವಳಿ ತಯಾರಿಸಿ ತಹಶೀಲ್ದಾರ್, ವಿಶೇಷ ಭೂ ಸ್ವಾಧೀನ ಅಧಿಕಾರಿಗಳಿಗೆ ಭೂ ಸ್ವಾಧೀನ ಪ್ರಕ್ರಿಯೆ ಕೈ ಬಿಡುವಂತೆ ಕೋರಿದ್ದಾರೆ.

ಕೊಡಿಗೆಹಳ್ಳಿ ವ್ಯಾಪ್ತಿಯ ಜಮೀನಿನಲ್ಲಿ ಫಸಲನ್ನು ಹೊತ್ತು ಫಲವತ್ತಾಗಿರುವ ಭೂಮಿ

ಸ್ವಾಧೀನ ಪ್ರಕ್ರಿಯೆಯಿಂದ ಜನರ ಆರೋಗ್ಯ, ಪರಿಸರದ ಮೇಲೆ ಪರಿಣಾಮ ಬೀರುತ್ತದೆ. ಕೈಗಾರಿಕೆ ಸ್ಥಾಪಿಸಲು ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಿ

ಜಿ.ಬೈರೇಗೌಡ, ವಿಜ್ಞಾನಿ

ಬೆಂಗಳೂರಿಗರ ಬಗ್ಗೆ ಕೋಪ ಏಕೆ: ಛಲವಾದಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನ ಜನರ ಬಗ್ಗೆ ಉದ್ಧಟತನದ ಮಾತುಗಳನ್ನು ಆಡಿದ್ದು, ಅವರು ಬೆಂಗಳೂರಿಗರ ಕ್ಷಮೆ ಕೇಳಬೇಕು ಎಂದು ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಂಗಳೂರಿನ ಜನರಿಗೆ ಕೃತಜ್ಞತೆ ಇಲ್ಲ; ವಿಪಕ್ಷಗಳು ಎಷ್ಟೇ ಬೈದರೂ, ಪತ್ರಕರ್ತರು ಎಷ್ಟೇ ಬೈದರೂ ನೀರಿನ ದರ ಏರಿಸದೆ ಬಿಡುವುದಿಲ್ಲ' ಎಂದು ಹೇಳಿದ್ದಾರೆ. ಇದರಿಂದ ಇವರಿಗೆ ಬೆಂಗಳೂರಿನ ಜನರ ಬಗ್ಗೆ ವಿಪರೀತ ಸಿಟ್ಟು ಇದೆ ಎಂಬುದು ಗೊತ್ತಾಗುತ್ತದೆ' ಎಂದರು.

'ಬೆಂಗಳೂರಿನ ನಾಗರಿಕರು ಹೆಚ್ಚು ತೆರಿಗೆ ಪಾವತಿಸುತ್ತಾರೆ. ಆದರೆ, ಸವಲತ್ತುಗಳನ್ನು ಕೇಳಬಾರದೆ? ಇಲ್ಲಿನ ಜನರ ಬಗ್ಗೆ ಉಗ್ರವಾಗಿ ಮಾತನಾಡುವ ನಿಮ್ಮ ಅವಶ್ಯಕತೆ ಬೆಂಗಳೂರಿನ ಜನತೆಗೆ ಇದೆಯೆ' ಎಂದು ಅವರು ಪ್ರಶ್ನಿಸಿದರು.

'ಅಧಿಕೃತ ತೆರಿಗೆಗಳ ಜತೆಗೆ ಅನಧಿಕೃತವಾಗಿ 'ಚದರಡಿ ಟ್ಯಾಕ್ಸ್' ಕೂಡ ಹಾಕಿದ್ದೀರಲ್ಲವೇ? ಅವರಿಗೆ ಉತ್ತಮ ರಸ್ತೆ, ಸಮರ್ಪಕ ಚರಂಡಿ ಸೌಲಭ್ಯ ಸೇರಿ ಎಲ್ಲ ಸವಲತ್ತು ಕೊಟ್ಟು ಜನರನ್ನು ಸಮಾಧಾನಪಡಿಸಬೇಕಿತ್ತು' ಎಂದು ಹೇಳಿದರು.

'ಬಿಬಿಎಂಪಿ ವಲಯ ಆಯುಕ್ತರ ಕಚೇರಿಯಲ್ಲಿ ಅವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಇಲ್ಲಿನ ಬಿಬಿಎಂಪಿ ವಲಯ ಆಯುಕ್ತರ ಕಚೇರಿಯಲ್ಲಿರುವ ಹಲವು ವಿಭಾಗಗಳ ಕೊಠಡಿಯ ಕಿಟಕಿ ಗಾಜುಗಳು ಒಡೆದಿವೆ. ಬಾಗಿಲು, ಕಿಟಕಿಗಳ ಚಿಲಕಗಳು ಕಿತ್ತು ಹೋಗಿವೆ.

ಸಂದರ್ಶಕರು ಕುಳಿತುಕೊಳ್ಳುವ ಆಸನಗಳು ಮುರಿದಿವೆ. ಶೌಚಾಲಯವೂ ಅವ್ಯವಸ್ಥೆಯಾಗಿದೆ. ಕಿಟಕಿ ಗಾಜುಗಳು ಒಡೆದಿರುವುದರಿಂದ ಮಳೆ ಬಂದಾಗ ಇರಿಚಲು(ಹನಿಗಳು) ಕೊಠಡಿ ಒಳಕ್ಕೆ ಬರುತ್ತವೆ. ಜೋರಾಗಿ ಗಾಳಿ ಬೀಸಿದರೆ ಟೇಬಲ್ ಮೇಲಿದ್ದ ಹಾಳೆಗಳು ಹಾರಿ ಹೋಗುತ್ತವೆ. ಕೆಲಸ ನಿರ್ವಹಿಸುವುದೂ ಕಷ್ಟ. ಎಲೆಕ್ಟ್ರಾನಿಕ್ಸ್ ಉಪಕರಣಗಳು ಮತ್ತು ಕಂಪ್ಯೂಟರ್‌ಗಳ ಮೇಲೆ ನೀರು ಬಿದ್ದು ಹಾಳಾಗುತ್ತವೆ. ಕೊಠಡಿಯೊಳಗೆ ನೀರು ತುಂಬಿಕೊಂಡರೆ, ಅದನ್ನು ಹೊರ ಹಾಕುವುದು ಕಷ್ಟದ ಕೆಲಸ ಎಂದು ಕಚೇರಿ ಸಿಬ್ಬಂದಿ ಬೇಸರ ವ್ಯಕ್ತಪಡಿಸುತ್ತಾರೆ.

ಒಡೆದಿರುವ ಕಿಟಕಿಗಳಿಗೆ ಪ್ಲಾಸ್ಟಿಕ್ ಚೀಲ, ರಟ್ಟುಗಳನ್ನು ಇಟ್ಟು, ಮಳೆ ನೀರು ಬರದಂತೆ ಸಿಬ್ಬಂದಿ ತಡೆಯುತ್ತಿದ್ದಾರೆ. ಕಿಟಕಿಗಳನ್ನು ಮುಚ್ಚದಿದ್ದರೆ ಫೈಲ್‌ಗಳು, ಕಂಪ್ಯೂಟರ್‌ಗಳು ಮಳೆ ನೀರಿನಲ್ಲಿ ತೋಯ್ದು ಹಾಳಾಗುತ್ತವೆ ಎಂಬುದು ಅವರ ಆತಂಕ.

ವಲಯ ಆಯುಕ್ತರ ಕಚೇರಿಯಲ್ಲಿ ಕಂದಾಯ, ನಗರ ಯೋಜನೆ, ಕಲ್ಯಾಣ ಶಾಖೆ, ಆರೋಗ್ಯ, ಮುಖ್ಯ ಎಂಜಿನಿಯರ್ ಕಚೇರಿಗಳಿವೆ. ಎಲ್ಲ ಕಿಟಕಿಗಳಿಗೆ ಚೀಲ ಕಟ್ಟಿಕೊಂಡು ಕೆಲಸ ನಿರ್ವಹಿಸುವ ಪರಿಸ್ಥಿತಿ ಬಂದಿದೆ ಎಂದು ಹೆಸರು ಹೇಳಲು ಇಚ್ಛಿಸದ ಅಧಿಕಾರಿಯೊಬ್ಬರು ಅಳಲು ತೋಡಿಕೊಂಡರು.



ಕಿಟಕಿಗಳಿಗೆ ಬಟ್ಟೆ ರಟ್ಟು ಕಟ್ಟಿಕೊಂಡು ಕೆಲಸ ನಿರ್ವಹಣೆ ಮಾಡುತ್ತಿರುವುದು

ನಾನು ಈ ಕಚೇರಿಗೆ ಬಂದು ಬಂದು ಒಂದು ವಾರವಾಗಿದೆ. ಇಲ್ಲಿನ ಸಮಸ್ಯೆಗಳ ಬಗ್ಗೆ ಗಮನ ಹರಿಸುತ್ತೇನೆ

ಸ್ವಯಂ ಪ್ರಭ.ಕೆ., ಮುಖ್ಯ ಎಂಜಿನಿಯರ್, ರಾಜರಾಜೇಶ್ವರಿ ನಗರ ವಲಯ, ಬಿಬಿಎಂಪಿ

ಕಟ್ಟಡದ ದುರಸ್ತಿ ಮತ್ತು ಲಿಫ್ಟ್ ಅಳವಡಿಸಲು ₹30 ಲಕ್ಷ ವೆಚ್ಚದಲ್ಲಿ ಟೆಂಡರ್ ಆಗಿದೆ. ಕೂಡಲೇ ಕಾಮಗಾರಿ ಆರಂಭಿಸಲಾಗುವುದು

ಟಿ.ಎಂ. ಶಶಿಕುಮಾರ್, ಕಾರ್ಯಪಾಲಕ ಎಂಜಿನಿಯರ್, ಯೋಜನೆ ವಿಭಾಗ

'ಗಾಡ್ಗೀಳ್ ವರದಿ ಶಿಫಾರಸು ಜಾರಿಗೆ ಸಕಾಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇರಳದ ವಯನಾಡಿನಲ್ಲಿ ನಡೆದ ಭೀಕರ ಭೂಕುಸಿತವು ನಮಗೊಂದು ಎಚ್ಚರಿಕೆ ಗಂಟೆ. ಪಶ್ಚಿಮ ಘಟ್ಟ ಪ್ರದೇಶದ ರಕ್ಷಣೆಗೆ ಮಾಧವ ಗಾಡ್ಗೀಳ್ ಅವರ ವರದಿ ಶಿಫಾರಸುಗಳನ್ನು ಅನುಷ್ಠಾನಕ್ಕೆ ಇದು ಸಕಾಲ' ಎಂದು ಪರಿಸರ ತಜ್ಞೆ ವಿಶಾಲಾಕ್ಷಿ ಹೇಳಿದರು.

ಕಥನ ಕರ್ನಾಟಕವು ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಪತ್ರಕರ್ತ ಆಶಿಕ್ ಮುಲ್ಕಿ ಅವರ 'ವಯನಾಡು: ಸಾವು ಬಂದ ಹೊತ್ತಿಗೆ ಹೇಳದೆ ಉಳಿದ ಸತ್ಯಗಳು' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದಲ್ಲೂ ಭೂ ಕುಸಿತಗಳಾಗಿವೆ. ಪ್ರಕೃತಿಯ ಮೇಲೆ ಮಾನವನ ದಬ್ಬಾಳಿಕೆ, ಅರಣ್ಯ ಪ್ರದೇಶಗಳ ಒತ್ತುವರಿ, ಅಕ್ರಮ ಗಣಿಗಾರಿಕೆ, ರೆಸಾರ್ಟ್, ಹೋಂ ಸ್ಟೇ, ಹೋಟೆಲ್‌ಗಳ ನಿರ್ಮಾಣವೇ ಇದಕ್ಕೆ ಕಾರಣ' ಎಂದು ದೂರಿದರು.

'ಪರಿಸರಕ್ಕೆ ಮಾರಕವಾದ ಇಂತಹ ಚಟುವಟಿಕೆಗಳನ್ನು ತಡೆಗಟ್ಟಲು ಸರ್ಕಾರಗಳು ಯಾವುದೇ ಗಂಭೀರ ಪ್ರಯತ್ನ ಮಾಡಿಲ್ಲ. ಕೂಡಲೇ ಪರಿಸರ ಸಂರಕ್ಷಣೆಗಾಗಿ ಮಾಧವ್ ಗಾಡ್ಗೀಳ್ ವರದಿ ಶಿಫಾರಸು ಜಾರಿಗೊಳಿಸಬೇಕು' ಎಂದರು.

ಬೆಂಗಳೂರು ರೇಸ್

ಈಸ್‌ನಾಟ್ ಶೀ ಬ್ಯೂಟಿಫುಲ್ ಗೆಲ್ಲುವ ನಿರೀಕ್ಷೆ

ಚೀಫ್ ಮಿನಿಸ್ಟರ್ಸ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈಸ್‌ನಾಟ್ ಶೀ ಬ್ಯೂಟಿಫುಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಡಬಲ್ ವಿಷನ್ 4, ರಿಕ್ರಿಯೇಟರ್ 6, ಅವಿಸೆನ 3

2ನೇ ರೇಸ್: ಲಿವ್ ಇನ್ ದಿ ಮಿಸ್ಟ್ 8, ದಿ ಮಿಲ್ಲೇನ್ನಿಯಮ್ ಫೋರ್ಸ್ 4, ಕೊರಿನ್‌ಥಿಯನ್ 2

3ನೇ ರೇಸ್: ಪ್ರಾಮಿಸ್‌ಆಫ್‌ದಿಫ್ಯೂಚರ್ 4, ಸ್ಕಾರ್ಲೆಟ್ ಲೇಡಿ 6, ಎಲ್‌ಜೆಸ್ ಸ್ಟಾರ್ 1

4ನೇ ರೇಸ್: ಫಿನ್ಲಿ 8, ರಿಕಾರ್ಡೊ 4, ಮಜಾಲ್ ಟೋವ್ 3

5ನೇ ರೇಸ್: ರಾಡ್ನಿ 7, ಕೈಲಿ 9, ನೆಪೋಲಿಯನ್ 6

6ನೇ ರೇಸ್: ಸೆವೆನ್ತ್ ಸಮುರಾಯ್ 3, ಜೂರಿ 6, ಫರಜಾನ್ 4

7ನೇ ರೇಸ್: ಈಸ್‌ನಾಟ್ ಶೀ ಬ್ಯೂಟಿಫುಲ್ 4, ಆಲ್ಡ್‌ಗೇಟ್ 2, ಓ ಹನ್ನಿನಿ 1

8ನೇ ರೇಸ್: ಪ್ರಿನ್ಸೆಸ್ ಜಾಸ್ಮೈನ್ 9, ಸನ್‌ಲಿಟ್ ಪಾತ್ 6, ರಿಂಗ್ ಮಾಸ್ಟರ್ 3

9ನೇ ರೇಸ್: ರೆಡ್ ಫಾಲ್ಕನ್ 1, ಇಸಾಬೆಲ್ 6, ಸ್ಟ್ರೈಕಿಂಗ್ ಐಸ್ 5

ಉತ್ತಮ ಬೆಟ್: ಪ್ರಾಮಿಸ್ ಆಫ್‌ದಿ ಫ್ಯೂಚರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಎ.ಸಿ.ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಪ್ರಕರಣಗಳು

ಎ.ಸಿ ಗಳ ವಿರುದ್ಧ ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಇರುವ ಪ್ರಕರಣಗಳನ್ನು ವಿಲೇವಾರಿ ಮಾಡದ ಉಪ ವಿಭಾಗಾಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಸರ್ಕಾರದ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಅವರಿಗೆ ಸೂಚಿಸಿದ್ದಾರೆ.

ಮಂಡ್ಯ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ತುಮಕೂರು, ಕೊಪ್ಪಳ, ಮೈಸೂರು, ಮಂಗಳೂರು ಹಾಗೂ ಬೆಳಗಾವಿ ಜಿಲ್ಲೆಗಳ ಆಯ್ದ 30 ಉಪ-ವಿಭಾಗಾಧಿಕಾರಿಗಳು ಹಾಗೂ ವಲಯ ಆಯುಕ್ತರ ಜೊತೆ ಶುಕ್ರವಾರ ವಿಡಿಯೊ ಸಂವಾದದ ಮೂಲಕ ಅವರು ಸಭೆ ನಡೆಸಿದರು. ಲೋಕಸಭಾ ಚುನಾವಣೆಯ ನಂತರ ಪ್ರಕರಣಗಳು ಇತ್ಯರ್ಥವಾಗದೇ ಇರುವುದನ್ನು ಗಮನಿಸಿದ ಅವರು ಅಧಿಕಾರಿಗಳ ಧಿಕಾರಿಗಳ ವಿರುದ್ಧ ಕ್ರಮಕ್ಕೆ ಸೂಚಿಸಿದರು.

ಮುಖ್ಯಾಂಶಗಳು

- ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಸಮಾಧಾನ
- 'ಕೆಲಸ ಮಾಡದವರಿಗೆ ನೋಟಿಸ್ ನೀಡಿ, ಕ್ರಮ ತೆಗೆದುಕೊಳ್ಳಿ'
- ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಸೂಚನೆ

'ಹಲವು ವರ್ಷಗಳಿಂದ ನ್ಯಾಯಾಲಯಗಳಿಗೆ ಅಲೆದಾಡಿ ಜನ ಬಸವಳಿದಿದ್ದಾರೆ. ಹೀಗಾಗಿ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಶೀಘ್ರ ಇತ್ಯರ್ಥಗೊಳಿಸಬೇಕು ಎಂದು ಎಲ್ಲಾ ಅಧಿಕಾರಿಗಳಿಗೂ ಗುರಿ ನಿಗದಿ ಮಾಡಲಾಗಿತ್ತು. ಮಾರ್ಚ್‌ವರೆಗೆ ವಿಲೇವಾರಿ ವೇಗವಾಗಿಯೇ ಇತ್ತು. ನಂತರ ಇಳಿಮುಖವಾಗಿದೆ. ಪ್ರಶ್ನಿಸಿದರೆ ಚುನಾವಣೆಯ ನೆಪ ಹೇಳುತ್ತಾರೆ. ದುಡ್ಡು ಮಾಡೋದಕ್ಕೆ ಚುನಾವಣೆ ಅಡ್ಡ ಬರುವುದಿಲ್ಲ. ಆದರೆ ಜನರ ಕೆಲಸ ಮಾಡಲು ಮಾತ್ರ ಚುನಾವಣೆ ಅಡ್ಡಬರುತ್ತದೆಯೇ' ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

ರಾಜ್ಯದಾದ್ಯಂತ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಒಟ್ಟು 36,430 ಪ್ರಕರಣಗಳು ಬಾಕಿ ಇವೆ. ಬೆಂಗಳೂರು ಉತ್ತರ ವಲಯದಲ್ಲೇ ಗರಿಷ್ಠ, 5,419 ಪ್ರಕರಣಗಳು ಮತ್ತು ಬೆಂಗಳೂರು ದಕ್ಷಿಣ ವಲಯದಲ್ಲಿ 4,351 ಪ್ರಕರಣಗಳು ಬಾಕಿ ಇವೆ. ಜತೆಗೆ ಈ ಎರಡೂ ವಿಭಾಗಗಳಲ್ಲಿ ತಮ್ಮ ವ್ಯಾಪ್ತಿಗೆ ಬರದೇ ಇರುವ ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ ಎಂಬುದನ್ನು ಗಮನಿಸಿದ ಸಚಿವರು, 'ಇಂತಹ ಪ್ರಕರಣಗಳನ್ನು ದಾಖಲಿಸಿಕೊಳ್ಳಲು ಎಷ್ಟು ಹಣ ತೆಗೆದುಕೊಂಡಿದ್ದೀರಿ' ಎಂದು ಉತ್ತರ ವಿಭಾಗದ ವಿಭಾಗಾಧಿಕಾರಿ ಪ್ರಮೋದ್ ಪಾಟೀಲ್‌ಮತ್ತು ದಕ್ಷಿಣ ವಿಭಾಗದ ವಿಭಾಗಾಧಿಕಾರಿ ರಜನೀಕಾಂತ ಚೌಹ್ವಾಣ್ ಅವರನ್ನು ಪ್ರಶ್ನಿಸಿದರು.

ಐದು ತಿಂಗಳಿಂದ ಒಂದೂ ಪ್ರಕರಣ ವಿಲೇವಾರಿ ಮಾಡದ ಮಧುಗಿರಿ ಉಪ-ವಿಭಾಗಾಧಿಕಾರಿ ಶಿವಪ್ಪ ಹಾಗೂ ತುಮಕೂರು ಉಪ-ವಿಭಾಗಾಧಿಕಾರಿ ಗೌರವ್ ಶೆಟ್ಟಿ ಅವರನ್ನು ತರಾಟೆಗೆ ತೆಗೆದುಕೊಂಡರು.

ಬಿಭವ್ ಜಾಮೀನು ಅರ್ಜಿಗೆ ವಿರೋಧ

ನವದೆಹಲಿ (ಪಿಟಿಐ): ಎಎಪಿ ಸಂಸದೆ ಸ್ವಾತಿ ಮಾಲಿವಾಲ್ ಮೇಲಿನ ಹಲ್ಲೆಯು 'ಕ್ರೂರ ಘಟನೆ' ಎಂದು ಹೇಳಿರುವ ದೆಹಲಿ ಪೊಲೀಸರು, ಈ ಪ್ರಕರಣದ ಆರೋಪಿ ಬಿಭವ್ ಕುಮಾರ್ ಜಾಮೀನು ಕೋರಿ ಸಲ್ಲಿಸಿರುವ ಮನವಿಯನ್ನು ತಿರಸ್ಕರಿಸಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದಾರೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಬಿಭವ್ ಅವರ ಜಾಮೀನು ಅರ್ಜಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿರುವ ದೆಹಲಿ ಪೊಲೀಸ್, ಈ ಪ್ರಕರಣದಲ್ಲಿ ಮಾಲಿವಾಲ್ ಅವರ ವಾದವನ್ನು ಆಲಿಸುವಂತೆಯೂ ಕೇಳಿಕೊಂಡಿತು.

'ದೆಹಲಿಯ ಆಡಳಿತ ಪಕ್ಷದ ಹಾಲಿ ಸಂಸದೆಯೊಬ್ಬರ ಮೇಲೆ ಮುಖ್ಯಮಂತ್ರಿಗಳ ನಿವಾಸದಲ್ಲಿ 'ಕ್ರೂರ ಹಲ್ಲೆ' ನಡೆದಿರುವುದರಿಂದ ಇದೊಂದು ಅತ್ಯಂತ ಗಂಭೀರ ಪ್ರಕರಣ' ಎಂದು ಪೊಲೀಸರು ಹೇಳಿದ್ದಾರೆ.

ನಿಧನ

ಮತ್ತೀಕೆರೆಯ ಬುಡ್ಡಯನವರ ಧಿವಂಗತ ಶ್ರೀ ಪಟೇಲ್ ಬಚ್ಚಣ್ಣನವರ ಧರ್ಮಪತ್ನಿ

ಶ್ರೀಮತಿ ಶಾರದಮ್ಮ ನವರು

ದೈವಾಧೀನರಾದರೆಂದು ತಿಳಿಸಲು ವಿಷದಿಸುತ್ತೇವೆ. ತತ್ಸಂಬದ ಅಂತಿಮ ಕಾರ್ಯವನ್ನು ಶನಿವಾರ ಮಧ್ಯಾಹ್ನ 2:30 ನಂತರ ಮತ್ತೀಕೆರೆಯ ಕುಟುಂಬದ ರುದ್ರಭೂಮಿಯಲ್ಲಿ ನೆಡಸಲಾಗುವುದು.

ಮೊಬೈಲ್: 99720 96234

2027ಕ್ಕೆ ಎತ್ತಿನ ಹೊಳೆ ಯೋಜನೆ ಪೂರ್ಣ: ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ನಿರ್ಣಾಯಕ ಘಟ್ಟ ತಲುಪಿದ್ದು, 2027ರ ಮಾರ್ಚ್ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ಹಲವು ಹಂತಗಳಲ್ಲಿ ಪೂರ್ವ ಪರೀಕ್ಷಾರ್ಥ ಪ್ರಯೋಗಗಳು ಯಶಸ್ವಿಯಾಗಿವೆ. ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ, ಪಶ್ಚಿಮಘಟ್ಟದಲ್ಲಿ ಹರಿಯುವ ಎತ್ತಿನಹೊಳೆ, ಕಾಡುಮನೆಹೊಳೆ, ಕೇರಿಹೊಳೆ ಮತ್ತು ಹೊಂಗದಹಳ್ಳ ಗಳಿಂದ ಮುಂಗಾರು ಮಳೆ ಅವಧಿಯಲ್ಲಿ (139 ದಿನಗಳು) 24.01 ಟಿಎಂಸಿ ಅಡಿ ನೀರನ್ನು ಬಳಸಿಕೊಳ್ಳಲಾಗುತ್ತದೆ. ಈ ಯೋಜನೆ ಅನುಷ್ಠಾನದಿಂದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರು ಹಾಗೂ ಅಲ್ಲಿನ ಜಾನುವಾರುಗಳಿಗೆ ಒಟ್ಟು 14.056 ಟಿಎಂಸಿ ಅಡಿ ಕುಡಿಯುವ ನೀರು ಒದಗಿಸಲಾಗುವುದು. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಹಾಸನ ಹಾಗೂ ತುಮಕೂರು ವ್ಯಾಪ್ತಿಯ 527 ಕೆರೆಗಳಿಗೆ 9.953 ಟಿಎಂಸಿ ಅಡಿ ನೀರನ್ನು ಕೆರೆಗಳಿಗೆ ತುಂಬಿಸಲಾಗುವುದು' ಎಂದರು.

'2014ರಲ್ಲಿ ಆರಂಭಗೊಂಡ ₹23,251ಕೋಟಿ ವೆಚ್ಚದ ಯೋಜನೆಯಲ್ಲಿ ಈಗಾಗಲೇ ₹16,152 ಕೋಟಿ ವ್ಯಯಿಸಲಾಗಿದೆ. ಮೂರು ಹಂತಗಳು ಪೂರ್ಣಗೊಂಡಿವೆ. ಪ್ರಸ್ತುತ ಪ್ರಗತಿಯಲ್ಲಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ, ಪ್ರಾಯೋಗಿಕ ಚಾಲನೆ ನೀಡಲಾಗುವುದು. ಎತ್ತಿನಹೊಳೆ ಯೋಜನೆಯ ಜಲಾನಯನ ಪ್ರದೇಶದಲ್ಲಿ ಪ್ರಸಕ್ತ ಮುಂಗಾರಿನಲ್ಲಿ ಆ.20 ರವರೆಗೆ 13.34 ಟಿಎಂಸಿ ಅಡಿ ನೀರು ದಾಖಲಾಗಿದೆ. ಅದರಲ್ಲಿ ಯೋಜನೆಗೆ 9.23 ಟಿಎಂಸಿ ಅಡಿ ಬಳಸಬಹುದಾಗಿದೆ' ಎಂದರು.

ದರ್ಶನ್ ಭೇಟಿ: ಚಿಕ್ಕಣ್ಣ ವಿರುದ್ಧ ಕ್ರಮ

ಹೈದರಾಬಾದ್‌ನ ಎಫ್‌ಎಸ್‌ಎಲ್ ವರದಿಗೆ ಕಾಯುತ್ತಿರುವ ತನಿಖಾಧಿಕಾರಿಗಳು

ಪ್ರಜಾವಾಣಿ ವಾರ್ತೆ

ದರ್ಶನ್

ಚಿಕ್ಕಣ್ಣ

ಬೆಂಗಳೂರು: 'ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನ. ದಲ್ಲಿರುವ ನಟ ದರ್ಶನ್ ಅವರನ್ನು ಭೇಟಿ ಮಾಡಿರುವ ಸಾಕ್ಷಿದಾರರ ವಿರುದ್ಧ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಹೇಳಿದರು.

'ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಇರುವ ಆರೋಪಿಗಳನ್ನು ಯಾರ‍್ಯಾರು ಭೇಟಿ ಮಾಡಿದ್ದರು ಎಂಬ ಮಾಹಿತಿ ಸಿಕ್ಕಿದೆ. ಅವರ ವಿರುದ್ಧ ಕಾನೂನು ಕ್ರಮಕ್ಕೆ ಪರಿಶೀಲಿಸಲಾಗುತ್ತಿದೆ' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

ರೇಣುಕಸ್ವಾಮಿ ಕೊಲೆಗೂ ಮುನ್ನ ಆರೋಪಿ ವಿನಯ್ ಅವರ ರಾಜರಾಜೇಶ್ವರಿ ನಗರದ ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಲ್ಲಿ ಆರೋಪಿಗಳು ಪಾರ್ಟಿ ನಡೆಸಿದ್ದರು. ಆ ಪಾರ್ಟಿಯಲ್ಲಿ ಆರೋಪಿ ದರ್ಶನ್, ಪವಿತ್ರಾಗೌಡ ಜತೆಗೆ ನಟ ಚಿಕ್ಕಣ್ಣ ಕಾಣಿಸಿಕೊಂಡಿದ್ದರು. ಚಿಕ್ಕಣ್ಣ ಅವರಿಗೆ ನೋಟಿಸ್ ನೀಡಿದ್ದ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಂಡಿದ್ದರು. ಅಲ್ಲದೇ, ಚಿಕ್ಕಣ್ಣ ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಪರಿಗಣಿಸಿ ನ್ಯಾಯಾಧೀಶರ ಎದುರು ಸಿಆರ್‌ಪಿಸಿ ಕಲಂ 164ರ ಅಡಿ ಹೇಳಿಕೆ ದಾಖಲಿಸಲಾಗಿತ್ತು.

ಈ ಪ್ರಕರಣದಲ್ಲಿ ಸಾಕ್ಷಿದಾರರ ಪಟ್ಟಿಯಲ್ಲಿರುವ ಚಿಕ್ಕಣ್ಣ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಎರಡನೇ ಆರೋಪಿ ದರ್ಶನ್ ಅವರನ್ನು ಇತ್ತೀಚೆಗೆ ಭೇಟಿಮಾಡಿದ್ದರು.

ಮೆಗ್ಗರ್ ಸಾಧನದಿಂದಲೇ ಸಾವು: 'ರೇಣುಕಸ್ವಾಮಿ ಅವರನ್ನು ಶೆಡ್‌ಗೆ ಕರೆತಂದ ಬಳಿಕ ಆರೋಪಿಗಳು ಹಲ್ಲೆ ನಡೆಸಿದ್ದರು. ಹಲ್ಲೆಯಿಂದ ರೇಣುಕಸ್ವಾಮಿ ಅಸ್ವಸ್ಥಗೊಂಡಿದ್ದರು. ನಂತರ, ಮೆಗ್ಗರ್ ಸಾಧನದಿಂದ ಎಲೆಕ್ಟ್ರಿಕ್ ಶಾಕ್ ನೀಡಲಾಗಿತ್ತು. ಎಲೆಕ್ಟ್ರಿಕ್ ಶಾಕ್ ಕೊಟ್ಟ ಮೇಲೆ ಅವರ ಮೃತಪಟ್ಟದ್ದರೆಂದು ಎಫ್‌ಎಸ್‌ಎಲ್ ವರದಿಯೊಂದು ಹೇಳಿದೆ' ಎಂದು ಮೂಲಗಳು ತಿಳಿಸಿವೆ.

ಶೀಘ್ರದಲ್ಲೇ ಆರೋಪ ಪಟ್ಟಿ

'ಕೊಲೆ ಪ್ರಕರಣದ ತನಿಖೆ ಬಹುತೇಕ ಪೂರ್ಣಗೊಂಡಿದೆ. 90 ದಿನಗಳ ಒಳಗಾಗಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗುವುದು' ಎಂದು ದಯಾನಂದ ಹೇಳಿದರು.

'ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಗಳು ಬಂದಿವೆ. ಆರೋಪಿಗಳ ಮನೆ ಹಾಗೂ ಕೃತ್ಯ ನಡೆದ ಸ್ಥಳದಲ್ಲಿ ಜಪ್ತಿ ಮಾಡಲಾಗಿದ್ದ ಎಲೆಕ್ಟ್ರಾನಿಕ್ ಉಪಕರಣಗಳನ್ನು ಹೈದರಾಬಾದ್‌ನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿತ್ತು. ಅದರ ವರದಿಗಳು ಮಾತ್ರ ಬರಬೇಕಿದೆ' ಎಂದು ಹೇಳಿದರು.

'ಶೇ 75ರಷ್ಟು ಸಿ.ಎ ನಿವೇಶನ ಉಳಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ನಾಗರಿಕ ಸೌಲಭ್ಯದ (ಸಿ.ಎ) ನಿವೇಶನಗಳನ್ನು ನಿಯಮಕ್ಕೆ ಅನುಗುಣವಾಗಿ, ಪಾರದರ್ಶಕವಾಗಿ ಹಂಚಿಕೆ ಮಾಡಿದರೂ, ಶೇ 75ರಷ್ಟು ಹಂಚಿಕೆಗೆ ಬಾಕಿ ಉಳಿದಿವೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ವಾಣಿಜ್ಯ ಉದ್ದೇಶದ ನಿವೇಶನಗಳನ್ನು ಮಾತ್ರ ಹರಾಜು ಹಾಕಲಾಗುತ್ತದೆ. ಸಿ.ಎ ನಿವೇಶನಗಳನ್ನು ಹರಾಜು ಹಾಕುವ ಪದ್ಧತಿಯಿಲ್ಲ. ಅರ್ಜಿ ಸಲ್ಲಿಸಿದ ಅರ್ಹ ಸಂಸ್ಥೆಗಳಿಗೆ ನಿವೇಶನ ಹಂಚಿಕೆ ಮಾಡಲಾಗಿದೆ. ಯಾವ ಅಕ್ರಮವೂ ನಡೆದಿಲ್ಲ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಿವೇಶನಗಳ ಹಂಚಿಕೆಗಾಗಿ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ಮಾಡಲಾಗುತ್ತದೆ. ಇಲಾಖಾ ವೆಬ್‌ಸೈಟ್‌ನಲ್ಲೂ ಪ್ರಕಟಿಸಲಾಗಿದೆ. ಹಿಂದೆಲ್ಲ ಸರ್ಕಾರದ ಅನುಮೋದನೆ ಪಡೆದು ನೇರವಾಗಿ ಹಂಚಿಕೆ ಮಾಡಲಾಗುತ್ತಿತ್ತು. ಈಗ ಮಂಡಳಿ ಸಿಇಒ ಅಧ್ಯಕ್ಷತೆಯಲ್ಲಿನ ಉಪ ಸಮಿತಿ ಅರ್ಹತೆಯನ್ನು ಪರಿಶೀಲಿಸುತ್ತದೆ. ಸಚಿವರ ಅಧ್ಯಕ್ಷತೆಯ ರಾಜ್ಯಮಟ್ಟದ ಏಕ ಗವಾಕ್ಷಿ ಸಮಿತಿ ಶಿಫಾರಸು ಮಾಡಿದ ನಂತರ ರಾಜ್ಯಮಟ್ಟದ ಸಮಿತಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಹೇಳಿದರು. ಈ ಬಾರಿ ಒಟ್ಟು 377.69 ಎಕರೆ ಪ್ರದೇಶದ 193 ನಿವೇಶನಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದರೂ, ಕೇವಲ 43 ನಿವೇಶನಗಳನ್ನು (96.59 ಎಕರೆ) ಹಂಚಿಕೆ ಮಾಡಲಾಗಿದೆ. ರಾಜ್ಯದ 21 ಜಿಲ್ಲೆಗಳಲ್ಲೂ ಇರುವ ಸಿ.ಎ ನಿವೇಶನಗಳ ಹಂಚಿಕೆಗೆ ಅರ್ಜಿ ಅಹ್ವಾನಿಸಿ ಹಂಚಿಕೆ ಮಾಡಲಾಗಿದೆ. 41 ಕಡೆ ಒಂದೊಂದೇ ಅರ್ಜಿ ಬಂದಿದ್ದವು. ಶೇ 75ರಷ್ಟು ಹಂಚಿಕೆಗೆ ಬಾಕಿ ಇವೆ ಎಂದರು.

ಇದೇ ಮೊದಲ ಬಾರಿ ಸಿ.ಎ ನಿವೇಶನಗಳ ಹಂಚಿಕೆಯಲ್ಲೂ ಪರಿಶಿಷ್ಟ ಜಾತಿ, ಪಂಗಡದವರಿಗೆ ಶೇ 24.10ರಷ್ಟು ಮೀಸಲಿಡುವ ಐತಿಹಾಸಿಕ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಗಾಳಕ್ಕೆ ಬಿದ್ದ 46 ಕೆ.ಜಿಯ ಹದ್ದು ಮೀನು

ಆಲಮಟ್ಟಿ ಜಲಾಶಯದಲ್ಲಿ ಸಿಕ್ಕ 46 ಕೆಜಿ ತೂಕದ ಹದ್ದು ಜಾತಿಯ ಮೀನು

ಆಲಮಟ್ಟಿ (ವಿಜಯಪುರ ಜಿಲ್ಲೆ): ಆಲಮಟ್ಟಿ ಜಲಾಶಯದ ಮುಂಭಾಗದಲ್ಲಿ ಕೃಷ್ಣಾ ನದಿಯಲ್ಲಿ ಶುಕ್ರವಾರ ಅರಳದಿನ್ನಿ ಗ್ರಾಮದ ಮೀನುಗಾರರಾದ ಯಲಗೂರದಪ್ಪ ಮಾದರ ಹಾಗೂ ಕೃಷ್ಣಾ ಮಾದರ ಅವರ ಗಾಳಕ್ಕೆ 46 ಕೆಜಿ ತೂಕದ ಹದ್ದು ಜಾತಿಯ ಭಾರಿ ಗಾತ್ರದ ಮೀನು ಸಿಕ್ಕಿದೆ.

'ಬೃಹತ್ ಗಾತ್ರದ ಮೀನನ್ನು ದಡಕ್ಕೆ ತರಲು ಕಷ್ಟವಾಯಿತು. 18 ವರ್ಷಗಳಿಂದ ಮೀನು ಹಿಡಿಯುತ್ತಿರುವೆ. ಇಷ್ಟು ದೊಡ್ಡ ಹದ್ದು ಜಾತಿಯ ಮೀನು ಇದೇ ಮೊದಲು ನೋಡಿದ್ದು. ಈ ಮೀನನ್ನು ಸಗಟು ಮೀನು ವ್ಯಾಪಾರಿ ನಿಜಪ್ಪ ಮಾದರ ಕೆಜಿಗೆ ₹300ರಂತೆ ಖರೀದಿಸಿದರು' ಎಂದು ಅರಳದಿನ್ನಿಯ ಇನ್ನೊಬ್ಬ ಮೀನುಗಾರ ಮಹೇಶ ತಿಳಿಸಿದರು.

ಕಾಲೇಜು ವಿದ್ಯಾರ್ಥಿನಿ ಧೃತಿ ಪ್ರಥಮ

ಮೈಸೂರಿನಲ್ಲಿ 'ಕರುನಾಡ ಸವಿಯೂಟ' ಅಡುಗೆ ಸ್ಪರ್ಧೆ; ಉತ್ತಮ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಮೈಸೂರಿನಲ್ಲಿ ಶುಕ್ರವಾರ ನಡೆದ 'ಕರುನಾಡ ಸವಿಯೂಟ' 3ನೇ ಆವೃತ್ತಿಯ ಸ್ಪರ್ಧೆಯಲ್ಲಿ ವಿಜೇತರಾದ ಎಂ.ಧೃತಿ (ಪ್ರಥಮ), ಭಾಗ್ಯಲಕ್ಷ್ಮಿ (ದ್ವಿತೀಯ), ಜಾಹ್ನವಿ ಮಹೇಶ್ (ತೃತೀಯ) ಅವರಿಗೆ ತೀರ್ಪುಗಾರರಾದ ಆದರ್ಶ್ ತತ್ಪತಿ, ಸಿಹಿಕಹಿ ಚಂದ್ರು ಹಾಗೂ ನಟಿ ಸಿಹಿಕಹಿ ಗೀತಾ ಬಹುಮಾನ ವಿತರಿಸಿದರು–ಪ್ರಜಾವಾಣಿ ಚಿತ್ರ

ಮೈಸೂರು: 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಮತ್ತು 'ಫ್ರೀಡಂ ಹೆಲ್ದಿ ಕುಕ್ಕಿಂಗ್ ಆಯಿಲ್' ಸಹಯೋಗದಲ್ಲಿ ಇಲ್ಲಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಶುಕ್ರವಾರ ನಡೆದ 'ಕರುನಾಡ ಸವಿಯೂಟ' ಅಡುಗೆ ಸ್ಪರ್ಧೆಯಲ್ಲಿ ಇಲ್ಲಿನ ವಿದ್ಯಾವಿಕಾಸ ಹೋಟೆಲ್ ಮ್ಯಾನೇಜ್‌ಮೆಂಟ್ ಕಾಲೇಜಿನ 2ನೇ ವರ್ಷದ ವಿದ್ಯಾರ್ಥಿನಿ ಎಂ.ಧೃತಿ ಪ್ರಥಮ ಸ್ಥಾನದೊಂದಿಗೆ ₹10 ಸಾವಿರ ನಗದು ಬಹುಮಾನವನ್ನು ಗೆದ್ದುಕೊಂಡರು.

ನಗರದವರೇ ಆದ ಭಾಗ್ಯಲಕ್ಷ್ಮಿ ದ್ವಿತೀಯ ಬಹುಮಾನವಾಗಿ ₹7,000 ನಗದು ಹಾಗೂ ಜಾಹ್ನವಿ ಅವರು ತೃತೀಯ ಬಹುಮಾನವಾಗಿ ₹5,000 ತಮ್ಮದಾಗಿಸಿಕೊಂಡರು.

ಎಂ.ಮಂಜುಳಾ, ದೇವಕಿ ಕೃಷ್ಣಪ್ಪ, ಅನ್ನಪೂರ್ಣಾ, ಮಂಜುಳಾ ಎಸ್. ಕೆ. ಸಮಾಧಾನಕರ ಬಹುಮಾನ ಪಡೆದರು. ನಗರದ ಎಲ್ಲೆಡೆಯಿಂದ ಬಂದಿದ್ದ ಮಹಿಳೆಯರು ಸ್ಪರ್ಧೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡರು.

ಆನ್‌ಲೈನ್‌ನಲ್ಲಿ ನೋಂದಾಯಿಸಿದ್ದ 180 ಮಂದಿ ಪೈಕಿ ಹಾಜರಿದ್ದ 87 ಮಂದಿಯಲ್ಲಿ ವೃದ್ಧರು, ಗೃಹಿಣಿಯರೊಂದಿಗೆ, ಕಾಲೇಜು ವಿದ್ಯಾರ್ಥಿಗಳೂ ಇದ್ದರು. ಮನೆಯಲ್ಲೇ ಸಿದ್ಧಪಡಿಸಿ ತಂದಿದ್ದ ತರಹೇವಾರಿ ಖಾದ್ಯಗಳ ಕುರಿತು ತೀರ್ಪುಗಾರರಿಗೆ ಪ್ರಾತ್ಯಕ್ಷಿಕೆ ನೀಡಿದರು. ನಾಟಿ ಶೈಲಿಯ ಖಾದ್ಯಗಳಿಂದ ಹಿಡಿದು ಸಿರಿಧಾನ್ಯದ ತಿನಿಸುಗಳೂ ಇದ್ದವು. ಸಸ್ಯಹಾರದೊಂದಿಗೆ ಮಾಂಸಾಹಾರವನ್ನೂ ತಯಾರಿಸಿ ತಂದಿದ್ದರು.

ಚಲನಚಿತ್ರ ನಟರೂ ಆದ ಸಿಹಿಕಹಿ ಚಂದ್ರು ಹಾಗೂ ಶೆಫ್ ಆದರ್ಶ್ ತತ್ಪತಿ, ತಿನಿಸುಗಳ ರುಚಿ ಸವಿದು ಬಹುಮಾನ ಪ್ರಕಟಿಸಿದರು.

ಶ್ರೀಕೃಷ್ಣ ಶುದ್ಧ ಹಳ್ಳಿತುಪ್ಪ, ಇಂಡೇನ್ ಗ್ಯಾಸ್, ಎಕ್ಕೊ ಕಂಪನಿ, ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಫಿಲಿಪ್ಸ್ ಅಪ್ಲೈಯನ್ಸ್, ಪ್ರೀತಿ ಕಿಚನ್ ಅಪ್ಲಯನ್ಸ್, ಎಸ್‌ಎಸ್‌ಪಿ ಹಿಂಗ್, ವೆಂಕೋಬ್ ಚಿಕನ್, ಇಂಡಿಯಾ ಗೇಟ್ ಬಾಸುಮತಿ ರೈಸ್ ಹಾಗೂ ಸುಜಯ್ ಇರಿಗೇಷನ್ ಪ್ರೈವೇಟ್ ಲಿಮಿಟೆಡ್ ಸ್ಪರ್ಧೆಗೆ ಸಹಯೋಗ ನೀಡಿದ್ದವು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು–560070.
ಸಂ: ಕಾಅ/ಪಂರಾಇಂವಿ/ಬೆಂನ/ಎಇ–1/ಟೆಂಡರ್/17/2024–25 ದಿನಾಂಕ: 21.08.2024
ಟೆಂಡರ್ ಪ್ರಕಟಣೆ ಸಂ: 17/2024–25
(ಏಕ ಲಕೋಟೆ ಪದ್ಧತಿ) (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Samagra Shikshana, MLA & 4235-02-102-0-06-133 Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಏಕ ಲಕೋಟೆಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **09–09–2024ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ, ಬೆಂಗಳೂರು
DIPR/CP/1648/SPAN/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೆ.ಆರ್. ಪುರ ವಿಭಾಗ, ಹಳೇ ಮದ್ರಾಸು ರಸ್ತೆ, ಕೆ.ಆರ್. ಪುರ, ಬೆಂಗಳೂರು–560036.
ಸಂ: ಕಾನಿಅ/ಕೆಆರ್‌ಪುರ/ಸಿಜಿಎನ್‌ಡಿ/04/2024–25 ದಿನಾಂಕ: 23.08.2024
ತಿದ್ದುಪಡಿ ಪ್ರಕಟಣೆ–1
ವಿಷಯ: ದಿನಾಂಕ: 10.08.2024 ರಂದು ಈ ದಿನ ಪತ್ರಿಕೆಯಲ್ಲಿ ಪ್ರಕಟಣೆಯಾದ ಟೆಂಡರ್ **ಸಂ: ಬೃಬೆಂಮಪಾ/ಕಾಪಾಅ/ಕೆ.ಆರ್‌ಪಿ/ಟೆಂಡ್/04/2024–25 ದಿನಾಂಕ: 09.08.2024** ಪ್ರಕಟಣೆಯನ್ನು ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.
ಟೆಂಡರ್ ಕಾರ್ಯಸೂಚಿ: 1) ಟೆಂಡರ್ ಪ್ರಶ್ನಾವಳಿ & ಸ್ಪಷ್ಟೀಕರಣಗಳಿಗೆ ಕೊನೆಯ **ದಿನಾಂಕ: 28.08.2024ರ ಸಂಜೆ 4:00 ಗಂಟೆಯವರೆಗೆ.** 2) ಪೂರ್ವ ಬಿಡ್ ಸಭೆಯು **ದಿನಾಂಕ: 29.08.2024 ರಂದು 11:30 ಗಂಟೆಗೆ ಮೇಲಿನ ವಿಳಾಸದಲ್ಲಿ ನಡೆಯಲಿದೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **02.09.2024 ರ ಸಂಜೆ 4.00 ಗಂಟೆಯವರೆಗೆ** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **03.09.2024ರ ಸಂಜೆ 4.30 ಗಂಟೆಗೆ** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **06.09.2024ರ ಸಂಜೆ 4.30 ಗಂಟೆಗೆ.** ಉಳಿದ ನಿಯಮಗಳು ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ **https://www.kppp.karnataka.gov.in**. ಅನ್ನು ಬೇಟಿ ಮಾಡಿ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್. ಪುರ ವಿಭಾಗ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ, ಮಿಲ್ಲರ್ ಟ್ಯಾಂಕ್ ರಸ್ತೆ, ವಸಂತನಗರ, ಬೆಂಗಳೂರು–560052.
Website: https://dom.karnataka.gov.in
ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ
ಕರ್ನಾಟಕ ರಾಜ್ಯದ ಅರ್ಹ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಮೆಟ್ರಿಕ್ ನಂತರದ ಶುಲ್ಕ ಮರುಪಾವತಿ ಯೋಜನೆಯಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಆನ್‌ಲೈನ್ ಅರ್ಜಿ
2024–25ನೇ ಸಾಲಿಗೆ ಸಂಬಂಧಿಸಿದಂತೆ ಪಿಯುಸಿ, ಡಿಪ್ಲೋಮಾ, ಐಟಿಐ, ಪದವಿ ಮತ್ತು ಸ್ನಾತಕೋತ್ತರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಯೋಜನೆಯಡಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಆನ್‌ಲೈನ್ ಅರ್ಜಿಗಾಗಿ ಈ ಕೆಳಗಿನ ಜಾಲತಾಣಕ್ಕೆ ಭೇಟಿ ನೀಡಿ
https://ssp.postmatric.karnataka.gov.in/
(ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ – SSP)
https://dom.karnataka.gov.in
(ಅಲ್ಪಸಂಖ್ಯಾತರ ನಿರ್ದೇಶನಾಲಯ, ಕರ್ನಾಟಕ ಸರ್ಕಾರ)
ಸಮಯಾವಕಾಶ
ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: **23.08.2024.**
ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **31.10.2024.**
ಅರ್ಹತೆ
- ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಜನಾಂಗಕ್ಕೆ ಸೇರಿದವರಾಗಿರಬೇಕು.
- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಮೆಟ್ರಿಕ್ ನಂತರದ ಕೋರ್ಸುಗಳ ಶುಲ್ಕ ಮರುಪಾವತಿ ಯೋಜನೆಗಾಗಿ ಕುಟುಂಬದ ವಾರ್ಷಿಕ ಆದಾಯವು ರೂ.2.00 ಲಕ್ಷಗಳನ್ನು ಮೀರಿರಬಾರದು ಮತ್ತು ಮೆರಿಟ್–ಕಮ್–ಮೀನ್ಸ್ ಶುಲ್ಕ ಮರುಪಾವತಿ ಯೋಜನೆಗಾಗಿ ಕುಟುಂಬದ ವಾರ್ಷಿಕ ಆದಾಯವು ರೂ.2.5 ಲಕ್ಷ ಮೀರಿರಬಾರದು.
ವಿಶೇಷ ಸೂಚನೆ:
- ಶುಲ್ಕ ಮರುಪಾವತಿ ಯೋಜನೆಯ ಪ್ರಯೋಜನ ಪಡೆಯಲು ವಿದ್ಯಾರ್ಥಿಗಳು ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮತ್ತು NPCI ಮ್ಯಾಪಿಂಗ್ ಆಕ್ಟಿವ್ ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
- ಈ ಹಿಂದೆ ಸದರಿ ಯೋಜನೆಯಡಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು.
- ಸದರಿ ಶುಲ್ಕ ಮರುಪಾವತಿ ಯೋಜನೆಯ ಪ್ರಕ್ರಿಯೆಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶಗಳು ಹಾಗೂ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.

ಅರ್ಜಿಗಳನ್ನು ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ವೆಬ್‌ಸೈಟ್ https://dom.karnataka.gov.in ಅನ್ನು ವೀಕ್ಷಿಸಿ.
ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಜಿಲ್ಲಾ ಮತ್ತು ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು (MIC) ಸಂಪರ್ಕಿಸಬಹುದಾಗಿದೆ.
ದಿನಾಂಕ : 23.08.2024
ಸ್ಥಳ : ಬೆಂಗಳೂರು
ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/1639/ಎಂಎಎ/24–25

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ. ಹೆಚ್. ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು–560 079, ದೂರವಾಣಿ ಸಂಖ್ಯೆ: +91–80–29619801
ಮಿಂಚ್ ಅಂಚೆ : md.ksmscl@gmail.com
No: HFW/KSMSCL/TND/CONSULTANCY/01/2024-25 Dated: 23.08.2024
ಟೆಂಡರ್ ಪ್ರಕಟಣೆ
ಉಲ್ಲೇಖ: 1. ಟೆಂಡರ್ ಅಧಿಸೂಚನೆ ಸಂಖ್ಯೆ: HFW/ KSMSCL/TND/CONSULTANCY /01/2024, Dated: 23.08.2024 (SE_0014).
2. HFW/KSMSCL/TND/ CONSULTANCY/02/2024, Dated: 23.08.2024 (SE_0015).
ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.
1. 2024–25ನೇ ಸಾಲಿಗೆ KSMSCL ಸಂಸ್ಥೆಗೆ Strategic Review and Plan ನೀಡಲು Consultancy Service ಸೇವೆಯನ್ನು ಪಡೆಯುವ ಬಗ್ಗೆ.
2. 2024–25ನೇ ಸಾಲಿಗೆ KSMSCL ಸಂಸ್ಥೆಗೆ Consultancy ಮತ್ತು Implementation Support Service ಸೇವೆಯನ್ನು ಪಡೆಯುವ ಬಗ್ಗೆ.
ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://kppp.karnataka.gov.in** ನಲ್ಲಿ **ದಿನಾಂಕ: 23.8.2024** ರಿಂದ ಟೆಂಡರ್‌ಗಳ ದಾಸ್ತಾವೇಜು ಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಮ್.ಎಸ್.ಸಿ.ಎಲ್., ಬೆಂಗಳೂರು.
DIPR/CP/AAPL/RO1643/24-25

ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ
ಜಿಲ್ಲಾ ಎನ್.ಸಿ.ಡಿ. ಘಟಕ, ಬೆಳಗಾವಿ,
ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಜಿಲ್ಲಾ ಸಮೀಕ್ಷಾ ಘಟಕ, ಲಸಿಕಾ ಕೇಂದ್ರ ಆವರಣ, ಬೆಳಗಾವಿ. ದೂ.: 0831–2424284, ಇ–ಮೇಲ್ : ncdbelagavi2019@gmail.com
ಸಂಖ್ಯೆ: ಡಿ.ಎಸ್.ಯು./ಎನ್.ಸಿ.ಡಿ./10–ಕರೆ–2/24–25 ದಿನಾಂಕ: 21–08–2024
ಟೆಂಡರ್ ಪ್ರಕಟಣೆ
(ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – 2000 ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಷರತ್ತುಗಳನ್ವಯ ನೊಂದಾಯಿತ ಅರ್ಹ ಸಂಸ್ಥೆಗಳಿಂದ **ರಾಷ್ಟ್ರೀಯ ಆರೋಗ್ಯ ಅಭಿಯಾನದ ಎನ್.ಪಿ.ಸಿ.ಡಿ.ಸಿ.ಎಸ್, ಎನ್.ಪಿ.ಹೆಚ್.ಸಿ.ಇ., ಎನ್.ಪಿ.ಪಿ.ಸಿ. ಕಾರ್ಯಕ್ರಮದಡಿಯಲ್ಲಿ ಬೆಳಗಾವಿ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆ, ಸಮೂದಾಯ ಆರೋಗ್ಯ ಕೇಂದ್ರಗಳಲ್ಲಿ ಡಾಟಾ ಎಂಟ್ರಿ ಆಪರೇಟರ (27), ಗ್ರೂಪ್ "ಡಿ" (4) ಮಲ್ಟಿ ಟಾಸ್ಕ ವರ್ಕರ, (2) ಸೇವೆಯನ್ನು ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ** ತಾತ್ಕಾಲಿಕವಾಗಿ ಒದಗಿಸಲು **ಇ–ಟೆಂಡರ್ ಸಂಖ್ಯೆ : ಡಿ.ಎಸ್.ಯು./ಎನ್.ಸಿ.ಡಿ./10–ಕರೆ–2/2024–25,** ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. **ದಿನಾಂಕ : 22–08–2024 ರಿಂದ 06–09–2024 ರವರೆಗೆ ಸಾಯಂಕಾಲ 4.00 ಗಂಟೆಯೊಳಗಾಗಿ ಟೆಂಡರ್ ಅಪ್‌ಲೋಡ್ ಮಾಡಬಹುದಾಗಿದೆ. (https://kppp.karnataka.gov.in) ದಿನಾಂಕ : 09–09–2024 ರಂದು ತಾಂತ್ರಿಕ ಬಿಡ್ ತೆರೆಯಲಾಗುವುದು.** ಟೆಂಡರ್‌ಗೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಾಗಿ **ದೂರವಾಣಿ ಸಂಖ್ಯೆ : 0831–2424284** ಗೆ ಕಛೇರಿ ಸಮಯದಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.
ಸಹಿ/– ಜಿಲ್ಲಾ ಆರೋಗ್ಯ & ಕು. ಕ. ಅಧಿಕಾರಿಗಳು, ಬೆಳಗಾವಿ.
ಡಿಐಪಿಆರ್/ಬೆಳಗಾವಿ/685/ಮಣಿಪಾಲ್/2024–25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಸಾಮಿತ್ವದಲ್ಲಿ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಮುಏನೀ ವಿಭಾಗ ನಂ–1, ಮಟ್ಟಿಹಾಳ, ತಾ: ಕೋಲ್ಹಾರ, ಜಿ: ವಿಜಯಪುರ. ದೂರವಾಣಿ ಸಂ: 08426–286126,
ಇ–ಮೇಲ್: kbjnleemli@gmail.com
ಸಂ:ಕೃಭಾಜನಿ(ನಿ)/ಮುಏನೀ/ವಿ–1ಮ/ಯೋ.ಶಾ/ಟೆಂಡರ್/2024–25/521 ದಿನಾಂಕ:22.08.2024
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಅಧಿಸೂಚನೆ ಮೂರನೇ ಕರೆ
(ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಬೆಂಗಳೂರು, ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಶೇಕಡಾವಾರು ಏಕ ಮಾತ್ರ ಲಕೋಟೆ ಪದ್ಧತಿಯಲ್ಲಿ ಒಟ್ಟು 4 ಕಾಮಗಾರಿಗಳ ಇಂಡೆಂಟ್ ಸಂಖ್ಯೆ: **442, 549, 674, 690, ಟೆಂಡ**ರನ್ನು ಕರೆಯಲಾಗಿದ್ದು ಪರಿಶಿಷ್ಠ ಪಂಗಡದವರಿಗೆ 1 ಸಂಖ್ಯೆ ಕಾಮಗಾರಿ (ಇಂಡೆಂಟ್ ಸಂಖ್ಯೆ:– **674**) ಮೀಸಲಿಡಲಾಗಿದೆ. ಟೆಂಡರಿಗಿಟ್ಟ ಕನಿಷ್ಠ ಹಾಗೂ ಗರಿಷ್ಠ ಮೊತ್ತ ಅನುಕ್ರಮವಾಗಿ ರೂ. 3.28 ಲಕ್ಷಗಳಿಂದ ರೂ.19.64 ಲಕ್ಷಗಳು ಇರುತ್ತವೆ. ನಿಗದಿಪಡಿಸಿದ ಇ.ಎಮ್.ಡಿ ಮೊತ್ತ/ಗುತ್ತಿಗೆದಾರರ ದರ್ಜೆ/ಟೆಂಡರ್ ನಿಯಮ/ಟೆಂಡರ್ ಪ್ರೊಸೆಸಿಂಗ ಶುಲ್ಕ, ಇತ್ಯಾದಿ ವಿವರಗಳನ್ನು https://kppp.karnataka.gov.in/ ಅಥವಾ ಕೆಳಗೆ ಸಹಿ ಮಾಡಿದವರನ್ನು ಕಛೇರಿಯ ಸಮಯದಲ್ಲಿ ದಿನಾಂಕ: 23.08.2024 ಸಮಯ ಸಾಯಂಕಾಲ 05.30 ಗಂಟೆವರೆಗೆ ಸಂಪರ್ಕಿಸಬಹುದು. ದೂರವಾಣಿ 08426–286126. ಸದರಿ ಟೆಂಡರುದಾರರು ಏಕ ಮಾತ್ರ ಲಕೋಟೆ ಅಪಲೋಡ್ ಮಾಡುವುದು.
ಟೆಂಡರ್ ಅಧಿಸೂಚನೆಯ ಪ್ರಕಾರ ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.
1.1 ಇ–ಟೆಂಡರ್ ದಸ್ತಾವೇಜುಗಳ ವಿವರಗಳು ಗುತ್ತಿಗೆದಾರರಿಗೆ ದೊರೆಯುವ ದಿನಾಂಕ ಹಾಗೂ ಪೂರ್ಣಗೊಳಿಸಿದ ಇ–ಟೆಂಡರ್ ದಾಖಲೆಗಳನ್ನು **ದಿನಾಂಕ: 23.08.2024 ರಿಂದ 31.08.2024** ರವರೆಗೆ ಸಮಯ **ಸಾಯಂಕಾಲ 5.30** ಘಂಟೆಯವರೆಗೆ ಸಲ್ಲಿಸುವುದು.
1.2 ಪೂರ್ಣಗೊಳಿಸಿದ ಇ–ಟೆಂಡರ್ ದಾಖಲೆಗಳನ್ನು ಸಲ್ಲಿಸುವುದು ದಿನಾಂಕ: **23.08.2024 ರಿಂದ ದಿನಾಂಕ: 31.08.2024** ರವರೆಗೆ ಸಮಯ ಸಾಯಂಕಾಲ **5.30** ಗಂಟೆಯವರೆಗೆ
1.3 ಏಕ ಮಾತ್ರ ಲಕೋಟೆ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ನ್ನು) ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ದಿನಾಂಕ **02.09.2024** ಸಮಯ **ಬೆಳಗ್ಗೆ 11.00 ಘಂಟೆಗೆ** ತೆರೆಯಲಾಗುವುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಮುಏನೀ ವಿಭಾಗ ನಂ.1, ಮಟ್ಟಿಹಾಳ
ವಾಸಾಸಂಇ/ವಿಜಯಪುರ/192/ಕೆಎಸ್‌ಎಂಸಿಎ/2024–25

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ–3/ಟೆಂಡರ್/16/2024–25 ದಿನಾಂಕ: 20–08–2024
ಕೆಪಿಪಿ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Viveka Yojana & Karnataka Public School ಯೋಜನೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **02–09–2024 ರಂದು ಸಂಜೆ 4.00 ಗಂಟೆಯುವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://www.kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/1634/ಅಡ್ವರ್ಟೋರ್/2024–25

ತುಮಕೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಎನ್.ಹೆಚ್–206, ಬಿ.ಹೆಚ್.ರೋಡ್, ಮಲ್ಲಸಂದ್ರ, ತುಮಕೂರು – 572 107.
ದೂರವಾಣಿ: 0816–2206464/2206472/2206142 ಇಮೇಲ್:tumul.bmc@gmail.com
ಸಂ:ತುಹಾಒ/ಶೇ&ತಾಂ/ಬಿಎಂಸಿ–53/2/2024–25 ದಿನಾಂಕ: 22.08.2024
ಇ–ಟೆಂಡರ್ ಪ್ರಕಟಣೆ
ತುಮಕೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ವ್ಯಾಪ್ತಿಯ ಬಿ.ಎಂ.ಸಿ ಕೇಂದ್ರಗಳಿಂದ ಶೀತಲೀಕರಿಸಿದ ಹಾಲನ್ನು ಮುಖ್ಯ ಡೇರಿಗೆ ಬಿ.ಎಂ.ಸಿ ಮಾರ್ಗಗಳ ಮುಖಾಂತರ ರವಾನೆ ಮಾಡಲು 2012 ಹಾಗೂ ನಂತರದ ಸಾಲಿನಲ್ಲಿ ನೊಂದಾಯಿಸಲಾದ ಒಟ್ಟು 09 ಸಂಖ್ಯೆಯ ಇನ್ಸುಲೇಟೆಡ್ ಬಿ.ಎಂ.ಸಿ ಟ್ಯಾಂಕರ್ ವಾಹನಗಳಿಗೆ ದ್ವೈ ವಾರ್ಷಿಕ ಅವಧಿಗೆ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ದರಖಾಸ್ತನ್ನು ಇ.ಎಂ.ಡಿ ಹಣದ ಸಮೇತ ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿದ ರೀತಿಯಲ್ಲಿ ಮತ್ತು ನಿರ್ಧಿಷ್ಟ ಪಡಿಸಿದ ದಿನಾಂಕ ಮತ್ತು ವೇಳೆಯ ಒಳಗೆ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಬಹುದಾಗಿದೆ. ಆಸಕ್ತಿಯುಳ್ಳ ವಾಹನ ಮಾಲೀಕರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿರುವ ಮಾಹಿತಿಗಳ ರೀತ್ಯಾ ಗುತ್ತಿಗೆ ಮಾರ್ಗಗಳಿಗೆ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ.

ಕ್ರಸಂ.	ವಿವರ	ದಿನಾಂಕ/ವೇಳೆ
1	ಇ–ಟೆಂಡರ್‌ನಲ್ಲಿ ಟೆಂಡರ್ ಪ್ರಕಟಿಸುವ ದಿನಾಂಕ:	22.08.2024 ರಂದು
2	ಇ–ಟೆಂಡರ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	05.09.2024 ರಂದು ಸಂಜೆ 5.00 ಗಂಟೆಯವರೆಗೆ
3	ಇ– ಟೆಂಡರ್‌ನಲ್ಲಿ ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	09.09.2024 ರಂದು ಬೆಳಿಗ್ಗೆ 11.00ಗಂಟೆಗೆ
4	ಇ–ಟೆಂಡರ್‌ನಲ್ಲಿ ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	12.09.2024 ರಂದು ಬೆಳಿಗ್ಗೆ 11.00 ಗಂಟೆಗೆ
5	ಇ–ಟೆಂಡರ್ ಬಗೆಗಿನ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ಅಧಿಕಾರಿಗಳು	ವ್ಯವಸ್ಥಾಪಕರು(ಶೇ&ತಾಂ):9380860462, ಸ.ವ್ಯ(ಡಿ.ಟಿ/ಬಿಎಂಸಿ):9380863795 ತು.ಸ.ಹಾ.ಉ.ಸಂ.ಒ
6	ಇ–ಟೆಂಡರ್ ವೆಬ್‌ಸೈಟ್ ವಿಳಾಸ	www.kppp.karnataka.gov.in

ತು.ಸ.ಹಾ.ಉ.ಸಂ.ಒಕ್ಕೂಟದ ಪರವಾಗಿ,
ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
2ನೇ ಮಹಡಿ, ಟಿಟಿಎಂಸಿ, 'ಎ' ಬ್ಲಾಕ್, ಬಿಎಂಟಿಸಿ ಕಾಂಪ್ಲೆಕ್ಸ್, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು–560027. ದೂ: 080–22225645, ಫ್ಯಾಕ್ಸ್: 080–22232652,
ಸಂಖ್ಯೆ: KSEDCL/ITP-H/002/2024-25 ದಿನಾಂಕ: 23.08.2024
ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಬೆಂಗಳೂರು ಇಲ್ಲಿನ ಅವಶ್ಯವಿರುವ ಬೆಂಗಳೂರಿನ ದೇವನಹಳ್ಳಿ, ಹುಬ್ಬಳ್ಳಿ, ಮಂಗಳೂರು, ಮೈಸೂರಿನಲ್ಲಿ land monetization ಗೆ ವ್ಯವಹಾರ ಸಲಹೆಗಾರರ ಆಯ್ಕೆ ಮಾಡಲು 15 ದಿನಗಳ ಅವಧಿಗೆ ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡುದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp. karnataka.gov.in** ನಲ್ಲಿ ವಿವರವನ್ನು ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **09–09–2024 ರಂದು ಸಂಜೆ 05.00 ಗಂಟೆಯವರೆಗೆ,** ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080–22225645)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ
1	KEONICS/2024-25/ SE0091	ಕಿಯೋನಿಕ್ಸ್ ಕಂಪನಿಯು ದೇವನಹಳ್ಳಿ, ಬೆಂಗಳೂರು ನಗರದಲ್ಲಿರುವ land monetization ಗೆ ವಹಿವಾಟು ಸಲಹಾ ಸೇವೆಗಳನ್ನು ಒದಗಿಸಲು ಅರ್ಹ ಏಜೆನ್ಸಿಯ ಆಯ್ಕೆ.
2	KEONICS/2024-25/ SE0092	ಕಿಯೋನಿಕ್ಸ್ ಕಂಪನಿಯು ಹುಬ್ಬಳ್ಳಿ ನಗರದಲ್ಲಿರುವ land monetization ಗೆ ವಹಿವಾಟು ಸಲಹಾ ಸೇವೆಗಳನ್ನು ಒದಗಿಸಲು ಅರ್ಹ ಏಜೆನ್ಸಿಯ ಆಯ್ಕೆ.
3	KEONICS/2024-25/ SE0094	ಕಿಯೋನಿಕ್ಸ್ ಕಂಪನಿಯು ಮಂಗಳೂರು ನಗರದಲ್ಲಿರುವ land monetization ಗೆ ವಹಿವಾಟು ಸಲಹಾ ಸೇವೆಗಳನ್ನು ಒದಗಿಸಲು ಅರ್ಹ ಏಜೆನ್ಸಿಯ ಆಯ್ಕೆ.
4	KEONICS/2024-25/ SE0095	ಕಿಯೋನಿಕ್ಸ್ ಕಂಪನಿಯು ಮೈಸೂರು ನಗರದಲ್ಲಿರುವ land monetization ಗೆ ವಹಿವಾಟು ಸಲಹಾ ಸೇವೆಗಳನ್ನು ಒದಗಿಸಲು ಅರ್ಹ ಏಜೆನ್ಸಿಯ ಆಯ್ಕೆ.

DIPR/CP/BCPL/1632/2024-25 ಸಹಿ/– ನಿರ್ದೇಶಕರು (ಹಣಕಾಸು)

ಸಮಗ್ರ ಶಿಕ್ಷಣ – ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು–560001.
ಸಂಖ್ಯೆ:ಎಸ್.ಎಸ್.ಕೆ/ಕ್ಯೂ.ಎಂ.ಟಿ/ಜಿ.ಕೆ.ಎ–2.0/ಟೆಂಡರ್/2023–24 ದಿನಾಂಕ: 24.08.2024
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ಗಣಿತ ಕಿಟ್‌ಗಳನ್ನು ತಯಾರಿಸಿ ರಾಜ್ಯದ 17 ಜಿಲ್ಲೆಗಳ ಆಯ್ದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸರಬರಾಜು ಮಾಡಲು ಮರು ಟೆಂಡರ್ ಕರೆಯುವ ಬಗ್ಗೆ.
2024–25ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ಗಣಿತ ಕಿಟ್‌ಗಳನ್ನು ತಯಾರಿಸಿ ರಾಜ್ಯದ 17 ಜಿಲ್ಲೆಗಳ ಆಯ್ದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸರಬರಾಜು ಮಾಡಲು ಅರ್ಹ ಬಿಡ್‌ದಾರರಿಂದ ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://eproc.karnataka.gov.in** ಪೋರ್ಟಲ್ ಮೂಲಕ ಮರು ಟೆಂಡರ್ ಆಹ್ವಾನಿಸಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ: **06.09.2024 ಸಂಜೆ 05:00 ಗಂಟೆಯವರೆಗೆ.**
ಸಹಿ/–
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ –ಕರ್ನಾಟಕ
ವಾಸಾಸಂಇ/ವಾಪ್ರ/1615/2024–25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.
ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ–2/MVSO&M/Ten.Nofi/2024–25/641
ದಿನಾಂಕ:22.08.2024
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ –2000 ರಂತೆ)
ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ರವರು ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳ ವಾರ್ಷಿಕ ನಿರ್ವಾಹಣೆ ಮತ್ತು ಕಾರ್ಯಚರಣೆ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು **ದಿನಾಂಕ:22/08/2024 ರಿಂದ 30/08/2024** ರಂದು ಸಂಜೆ 4.00 ರವರೆಗೆ ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ **ದಿನಾಂಕ: 31/08/2024** ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು. ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು **ದಿ:28/08/2024** ರ ಸಂಜೆ 4.00 ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/379/ಕೆಎಸ್‌ಎಂಸಿಎ/2024–25

ನಗರಸಭಾ ಕಾರ್ಯಾಲಯ, ಉಡುಪಿ
ಸಂಖ್ಯೆ:ಉನಸ:ಬಿ2:ಸಿಆರ್:ಟೆ.ಪ್ರ:2023–24 ದಿನಾಂಕ: 23.08.2024
ಅಲ್ಪಾವಧಿ ಟೆಂಡರು ಪ್ರಕಟಣೆ
(ಕರ್ನಾಟಕ ಸರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಉಡುಪಿ ನಗರಸಭೆಯು ಸ್ವಚ್ಛ ಭಾರತ್ ಮಿಷನ್ (ನಗರ) 2.0 ಯೋಜನೆಯಡಿಯಲ್ಲಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ **Standard Bid Document K.W-4** ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಆಪ್‌ಲೋಡ್ ಮಾಡಿರುವಂತೆ) **e-procurement** ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.
(1) ಪ್ರೀ ಬಿಡ್ ಮೀಟಿಂಗ್ **ದಿನಾಂಕ: 06.09.2024 ಪೂರ್ವಾಹ್ನ 11.00 ಗಂಟೆಗೆ** (2) Queries/Clarifications ಕೊನೆಯ **ದಿನಾಂಕ: 09.09.2024 ಸಂಜೆ 5.00 ಗಂಟೆವರೆಗೆ** (3) ಟೆಂಡರು ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಕೊನೆಯ **ದಿನಾಂಕ: 10.09.2024 ಸಂಜೆ 4.30 ಗಂಟೆಗೆ** (4) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 10.09.2024 ಸಂಜೆ 5.00 ಗಂಟೆಗೆ** (5) ಸ್ವೀಕರಿಸಲಾದ ಟೆಂಡರುಗಳ ತಾಂತ್ರಿಕ ಬಿಡ್ಡು ತೆರೆಯುವ **ದಿನಾಂಕ: 11.09.2024 ಸಂಜೆ 5.01** ಗಂಟೆಗೆ (6) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ ಅರ್ಹ ಬಿಡ್ಡುದಾರರಿಗೆ ಪ್ರತ್ಯೇಕ ತಿಳಿಸಲಾಗುವುದು.
ಕಾಮಗಾರಿಗಳ ವಿವರ: ಉಡುಪಿ ನಗರಸಭಾ ವ್ಯಾಪ್ತಿಗೆ ಸ್ವಚ್ಛ ಭಾರತ್ ಮಿಷನ್ (ನಗರ) 2.00 ಯೋಜನೆಯಡಿಯಲ್ಲಿ 33 TPD ಸಾಮಾರ್ಥ್ಯದ MRF ಘಟಕ ಸ್ಥಾಪಿಸುವ ಕಾಮಗಾರಿ. **DMA/2023-24/BD/WORK_INDENT15218/CALL-2,** ಅಂದಾಜು ಮೊತ್ತ: **276.00 ಲಕ್ಷ,** ಇ.ಎಂ.ಡಿ: **4.14 ಲಕ್ಷ,** ಟ್ರಾನ್ಸಾಕ್ಷನ್ ಫೀ: ಇ–ಪೋರ್ಟಲ್‌ನಂತೆ, ಕಾಮಗಾರಿ ಪೂರ್ತಿ ಗೊಳಿಸುವ ಅವಧಿ: **9 ತಿಂಗಳು**
ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ನಿಂದ ಟೆಂಡರು ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಪಟ್ಟವರಿಂದ ಪಡೆದುಕೊಳ್ಳಬಹುದು.
ವಾಸಾಇ/ಸನಿಉ/ಕೆಎಸ್‌ಎಂಸಿಎ/289/24–25 ದಿ: 23.08.2024 ಸಹಿ/– ಪೌರಾಯುಕ್ತರು, ಉಡುಪಿ ನಗರಸಭೆ

ಗಜಪಡೆಯ ಆಗಮನ

ಅಂಬಾರಿ ಆನೆ 'ಅಭಿಮನ್ಯು' ನೇತೃತ್ವದ ಗಜಪಡೆಗೆ ಶುಕ್ರವಾರ ಮೈಸೂರಿನ ಅರಮನೆಯಲ್ಲಿ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ ಶಾಸಕ ತನ್ವೀರ್ ಸೇಠ್ ಸ್ವಾಗತಿಸಿದರು. ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಹಾಗೂ ವಿವಿಧ ಅಧಿಕಾರಿಗಳು ಹಾಜರಿದ್ದರು
-ಪ್ರಜಾವಾಣಿ ಚಿತ್ರ/ ಅನೂಪ್ ರಾಘ ಟಿ.

'ಫ್ರೆಂಚ್ ಫ್ರೈಸ್ ತಿನ್ನಲು ಬಿಡುತ್ತಿಲ್ಲ'

ಪತಿಯ ಕ್ರೌರ್ಯ ಎಂಬ ಪತ್ನಿ ದೂರಿಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ನನ್ನ ಗಂಡ ನನಗೆ ಫ್ರೆಂಚ್ ಫ್ರೈಸ್, ಅನ್ನ ಮತ್ತು ಮಾಂಸ ತಿನ್ನಲು ಬಿಡುತ್ತಿಲ್ಲ' ಎಂಬ ಆರೋಪವೂ ಸೇರಿದಂತೆ ಗಂಡ, ಅತ್ತೆ ಮತ್ತು ಮಾವನ ವಿರುದ್ಧ ಪತ್ನಿಯೊಬ್ಬರು (29) ವರದಕ್ಷಿಣೆ ನಿಷೇಧ ಕಾಯ್ದೆಯಡಿ ದಾಖಲಿಸಿದ್ದ ಎಫ್‌ಐಆರ್‌ಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಬೆಂಗಳೂರಿನ 36 ವರ್ಷದ (ಸದ್ಯ ಅಮೆರಿಕದ ಟೆಕ್ಸಾಸ್‌ನಲ್ಲಿ ಉದ್ಯೋಗಿ) ಪತಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಗುರುವಾರ ವಿಚಾರಣೆ ನಡೆಸಿದ ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಎಫ್‌ಐಆರ್‌ಗೆ ತಡೆ ನೀಡಿ ಆದೇಶಿಸಿದೆ.

ಅರ್ಜಿಯಲ್ಲಿ ಏನಿದೆ?: 'ಮದುವೆಯಾದ ನಂತರ ಪತ್ನಿಯನ್ನು ಅವಲಂಬಿತ ವೀಸಾದಡಿ ಅಮೆರಿಕಕ್ಕೆ ಕರೆದುಕೊಂಡು ಹೋದೆ. ನಮಗೀಗ ಮಕ್ಕಳೂ ಇವೆ. ನನ್ನ ಪತ್ನಿ ಅತ್ಯಂತ ಕಠಿಣ ಸ್ವಭಾವದವಳಿದ್ದಾಳೆ. ನನಗೆ ಸರಿಯಾಗಿ ಅಡುಗೆ ಮಾಡಿ ಉಣಬಡಿಸುವುದಿಲ್ಲ. ಕೇಳಿದರೆ, ನೀನೇನು ನನ್ನ ಅಡುಗೆ ಮಾಡಿ ಹಾಕುವುದಕ್ಕೆ ಮದುವೆಯಾಗಿದ್ದೀಯ ಅಂತ ಜಬರು ಮಾಡುತ್ತಾಳೆ' ಎಂದು ಪತಿ ಅರ್ಜಿಯಲ್ಲಿ ದೂರಿದ್ದಾರೆ.

'ಸದಾ ಮೊಬೈಲ್ ಹಿಡಿದುಕೊಂಡು, ಸಾಮಾಜಿಕ ಜಾಲತಾಣಗಳಲ್ಲಿ ಪಾಕಿಸ್ತಾನದ ನಾಟಕಗಳು, ಸೀರಿಯಲ್‌ಗಳು, ಫೇಸ್ ಬುಕ್, ಇನ್‌ಸ್ಟಾಗ್ರಾಂಗಳ ವೀಕ್ಷಣೆಯಲ್ಲೇ ಮುಳುಗಿರುತ್ತಾಳೆ. ತನ್ನ ಸೋದರ ಸಂಬಂಧಿಗಳ ಜೊತೆ ರೀಲ್ಸ್ ಮಾಡುವ ಹುಚ್ಚು ಬೇರೆ ಇದೆ. ಅಂಗಡಿಗೆ ಹೋದರೆ ಬೇಕಾಬಿಟ್ಟಿ ಹಣ್ಣು, ಸಾಮಾನುಗಳನ್ನು ತರುತ್ತಾಳೆ. ಆದರೆ, ಅವುಗಳನ್ನು ಸರಿಯಾಗಿ ಉಪಯೋಗಿಸುವುದಿಲ್ಲ. ನಂತರ ಕಸದ ಬುಟ್ಟಿಗೆ ಎಸೆಯುತ್ತಾಳೆ. ಆಕೆಗೆ ಮಾನಸಿಕ ಸ್ಥಿಮಿತ ಇಲ್ಲ. ಆದ್ದರಿಂದ, ಆಕೆ ನನ್ನ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ಗೆ ತಡೆ ನೀಡಬೇಕು' ಎಂದು ಪತಿ ಅರ್ಜಿಯಲ್ಲಿ ಕೋರಿದ್ದಾರೆ.

ಅರ್ಜಿಯಲ್ಲಿ ಪತಿ, ಪತ್ನಿಯ ಸಣ್ಣ ಸಣ್ಣ ಸಂಗತಿಗಳನ್ನೂ ಪಟ್ಟಿ ಮಾಡಿ ಆಕ್ಷೇಪಿಸಿರುವುದು ಮತ್ತು ವಿಚಾರಣೆ ವೇಳೆ 'ಫ್ರೆಂಚ್ ಫ್ರೈಸ್ ತಿನ್ನಲು ಬಿಡುತ್ತಿಲ್ಲ' ಎಂಬ ಆಕ್ಷೇಪಣೆಯನ್ನು ಆಲಿಸಿದ ನ್ಯಾಯಮೂರ್ತಿಯವರು, 'ಇದೊಂದು ಕ್ಷುಲ್ಲಕ ವಿಚಾರ' ಎಂದು ಮೌಖಿಕವಾಗಿ ಹೇಳಿ ತಡೆ ಆದೇಶ ನೀಡಿದರು.

'ಪ್ರಕರಣದಿಂದ ವಿದೇಶಕ್ಕೆ ತೆರಳಲು ತೊಂದರೆ ಆಗುತ್ತಿದೆ' ಎಂಬ ಪತಿಯ ಆಕ್ಷೇಪಣೆಯನ್ನು ನಿವಾರಿಸುವಂತೆ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ಅವರಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ವೈದ್ಯೆಗೆ ಲೈಂಗಿಕ ಕಿರುಕುಳ ಆರೋಪ ಪ್ರಕರಣ ರದ್ದುಪಡಿಸಲು ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸಿ ಅವರ ಘನತೆಗೆ ಧಕ್ಕೆ ತಂದಿದ್ದಾರೆ' ಎಂಬ ಆರೋಪ ಎದುರಿಸುತ್ತಿರುವ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಸರ್ಕಾರಿ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ರಾಬರ್ಟ್ ರೆಬೆಲ್ಲೊ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧ ಕುಂದಾಪುರ ಠಾಣಾ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಡಾ.ರಾಬರ್ಟ್ ರೆಬೆಲ್ಲೊ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಕರ್ತವ್ಯ ನಿರ್ವಹಣೆ ಸ್ಥಳದಲ್ಲಿನ ಸಿಬ್ಬಂದಿಗೆ ಲೈಂಗಿಕ ಕಿರುಕುಳ ನೀಡುವ ಇಂತಹ ವೈದ್ಯರನ್ನು ಸುಮ್ಮನೆ ಬಿಡಲು ಸಾಧ್ಯವೇ ಇಲ್ಲ' ಎಂದು ಗುಡುಗಿರುವ ನ್ಯಾಯಪೀಠ, 'ಅರ್ಜಿದಾರರು ಸರ್ಕಾರಿ ಆಸ್ಪತ್ರೆಯ ನೌಕರ. ಸಿಬ್ಬಂದಿಯನ್ನು ಲೈಂಗಿಕವಾಗಿ ಹಿಂಸಿಸುವ ಇಂತಹ ವೈದ್ಯರನ್ನು ಬಿಡಲು ಸಾಧ್ಯವೇ ಇಲ್ಲ. ದೋಷಾರೋಪ ಪಟ್ಟಿ ಸಲ್ಲಿಸಿದ ನಂತರ ಎಲ್ಲ ಸಂಗತಿಗಳು ತಿಳಿಯಲಿವೆ' ಎಂದು ಆಕ್ರೋಶ ವ್ಯಕ್ತಪಡಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಿ. ನಂತರ ಆರೋಪಗಳನ್ನು ಕೈಬಿಡುವಂತೆ ಕೋರಿ ರೆಬೆಲ್ಲೊ ಅರ್ಜಿ ಸಲ್ಲಿಸಬಹುದು' ಎಂದು ಅರ್ಜಿದಾರರಿಗೆ ಸೂಚಿಸಿದೆ.

'ಅರ್ಜಿ ಮುಂದುವರಿಸಿದರೆ, ಕಠಿಣ ನಿಲುವು ತೆಗೆದುಕೊಳ್ಳಬೇಕಾಗುತ್ತದೆ' ಎಂದೂ ನ್ಯಾಯಪೀಠ ಎಚ್ಚರಿಕೆ ನೀಡಿದೆ.

ಮಧ್ಯರಾತ್ರಿ ಸಂದೇಶ: 'ರೆಬೆಲ್ಲೊ ತಮ್ಮ ಸಿಬ್ಬಂದಿಗೆ ಮಧ್ಯರಾತ್ರಿ ಊಟಕ್ಕೆ ಕರೆದಿದ್ದಾರೆ. ಅಶ್ಲೀಲ ಸಂದೇಶ ಕಳುಹಿಸಿದ್ದಾರೆ. ಮತ್ತು ಆಕೆಯ ಘನತೆಗೆ ಧಕ್ಕೆ ತರುವ ರೀತಿಯಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು ದಾಖಲೆಗಳಿಂದ ಕಂಡು ಬರುತ್ತಿದೆ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಸಂಸದ ಶ್ರೇಯಸ್ ಪಟೇಲ್‌ಗೆ ನೋಟಿಸ್

ಬೆಂಗಳೂರು: ಹಾಸನ ಕ್ಷೇತ್ರದ ಕಾಂಗ್ರೆಸ್ ಸಂಸದ ಶ್ರೇಯಸ್ ಎಂ.ಪಟೇಲ್ ಆಯ್ಕೆ ಅಸಿಂಧು ಕೋರಿ ಹೈಕೋರ್ಟ್ ವಕೀಲ ಜಿ.ದೇವರಾಜೇಗೌಡ ಪುತ್ರ ಡಿ.ಚರಣ್ ಗೌಡ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಶ್ರೇಯಸ್‌ಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಾದ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ಪ್ರತಿವಾದಿ ಸಂಸದ ಶ್ರೇಯಸ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 30ಕ್ಕೆ ಮುಂದೂಡಿತು.

'ಶ್ರೇಯಸ್ ತಮ್ಮ ಆಸ್ತಿ ವಿವರಗಳನ್ನು ಪ್ರಾಮಾಣಿಕವಾಗಿ ನಮೂದಿಸಿಲ್ಲ. ಐದು ವರ್ಷಗಳ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿಲ್ಲ' ಎಂದು ಅರ್ಜಿದಾರರು ತಿಳಿಸಿದ್ದಾರೆ.

ಮಂಕಿಪಾಕ್ಸ್ ಬಗ್ಗೆ ಭಯ ಬೇಡ: ಸಚಿವ ಶರಣಪ್ರಕಾಶ್ ಪಾಟೀಲ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಂಕಿಪಾಕ್ಸ್ ಬಗ್ಗೆ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು ವಿಶ್ವ ಆರೋಗ್ಯ ಸಂಸ್ಥೆ ಘೋಷಿಸಿದೆ. ಆದರೆ, ಭಾರತದಲ್ಲಿ ಈ ಸೋಂಕು ಹರಡುವ ಸಾಧ್ಯತೆ ಕಡಿಮೆ ಇದೆ. ಆದ್ದರಿಂದ ಯಾರೂ ಆತಂಕಕ್ಕೆ ಒಳಗಾಗಬಾರದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಹೇಳಿದ್ದಾರೆ.

ಶುಕ್ರವಾರ ವಿಕಾಸಸೌಧದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಹಿರಿಯ ಅಧಿಕಾರಿಗಳ ಜತೆ ಮಂಕಿಪಾಕ್ಸ್ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಭೆ ನಡೆಸಿ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಆ.14 ರಂದು ವಿಶ್ವ ಆರೋಗ್ಯ ಸಂಸ್ಥೆ ಮಂಕಿಪಾಕ್ಸ್ ಅನ್ನು ಜಾಗತಿಕ ಆರೋಗ್ಯ ತುರ್ತುಸ್ಥಿತಿ ಎಂದು ಘೋಷಿಸಿದೆ. ಈ ಸೋಂಕನ್ನು ಎದುರಿಸಲು ರಾಜ್ಯ ಸರ್ಕಾರ ಎಲ್ಲ ರೀತಿಯ ತಯಾರಿ ಮಾಡಿಕೊಂಡಿದೆ ಎಂದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇದರ ಪರೀಕ್ಷೆ ಮಾಡುವ ಸೌಲಭ್ಯವಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಆಸ್ಪತ್ರೆಯಲ್ಲಿ 50 ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದೆ. ಇದು ಸೋಂಕು ರೋಗ ಆಗಿರುವುದರಿಂದ ರೋಗದ ಪರೀಕ್ಷೆಯೂ ಉಚಿತವಾಗಿದೆ. ಇಲ್ಲಿಯವರೆಗೆ ಒಂದು ಪ್ರಕರಣವೂ ವರದಿಯಾಗಿಲ್ಲ ಎಂದು ಹೇಳಿದರು.

ವಿಮಾನ ನಿಲ್ದಾಣ, ಬಂದರು ಸೇರಿದಂತೆ ಮತ್ತಿತರ ಕಡೆ ಬಿಗಿಕ್ರಮ ಕೈಗೊಳ್ಳಲಾಗಿದೆ ಎಂದರು.

ರಾಜ್ಯಪಾಲರ ಬಳಸಿ ಸರ್ಕಾರ ಬೀಳಿಸುವ ಪ್ರಯತ್ನ: ಡಿಸಿಎಂ

'ಬಿಜೆಪಿ ಶಾಸಕರ ಮಾತು ಕೇಳಿ ಮಸೂದೆ ವಾಪಸ್'

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: ಬಿಜೆಪಿ ಶಾಸಕರ ಮಾತು ಕೇಳಿ ರಾಜ್ಯಪಾಲರು 15 ಮಸೂದೆಗಳನ್ನು ವಾಪಸ್ ಕಳುಹಿಸಿದ್ದಾರೆ. ಬಿಜೆಪಿ ಮಾತು ಕೇಳುವುದಾದರೆ ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಸರ್ಕಾರಗಳು ಏಕೆ ಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ಮಸೂದೆಯ ಬಗ್ಗೆ ಸ್ಪಷ್ಟೀಕರಣದ ಅಗತ್ಯವಿದ್ದರೆ ಕೇಳಲಿ, ಕಳುಹಿಸಿಕೊಡುತ್ತೇವೆ. ಅದನ್ನು ತಪ್ಪು ಎನ್ನಲು ಆಗುತ್ತದೆಯೇ? ಆದರೆ, ಸಂವಿಧಾನಬದ್ಧವಾಗಿ ಜನರಿಂದ ಆಯ್ಕೆಯಾದ ಶಾಸನಸಭೆಗಳು ಅಂಗೀಕರಿಸಿದ ಮಸೂದೆಗಳನ್ನು ಕಾರಣ ನೀಡದೆ ವಾಪಸ್ ಕಳುಹಿಸುವುದು ಸರಿಯಲ್ಲ' ಎಂದರು.

'ರಾಜ್ಯಪಾಲರನ್ನು ಬಳಸಿಕೊಂಡು ಸರ್ಕಾರ ಬೀಳಿಸುವ ಪ್ರಯತ್ನ ನಡೆದರೆ ಸುಮ್ಮನೆ ಕೂರುವುದಿಲ್ಲ. ನಾವು ನಮ್ಮ ಕೆಲಸ ಮಾಡುತ್ತೇವೆ. ದೇವರು ಅವರಿಗೆ ಒಳ್ಳೆಯ ಬುದ್ಧಿ ಕೊಡಲಿ' ಎಂದು ಹೇಳಿದರು.

ಪರಿಷತ್ ಸದಸ್ಯರ ಖಂಡನೆ: ಜನರ ವಿಶ್ವಾಸ ಗಳಿಸಿದ ಜನಪ್ರಿಯ ಸರ್ಕಾರದ ಕಾರ್ಯಚಟುವಟಿಕೆಗೆ ರಾಜ್ಯಪಾಲರು ಅಡ್ಡಿ ಮಾಡುತ್ತಿದ್ದಾರೆ ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯರು ದೂರಿದ್ದಾರೆ.

ವಿಧಾನಸಭೆ, ವಿಧಾನ ಪರಿಷತ್‌ನಲ್ಲಿ ಅಂಗೀಕಾರವಾದ 11 ಮಸೂದೆಗಳನ್ನು ರಾಜ್ಯಪಾಲರು ವಾಪಸ್ ಕಳುಹಿಸುವ ಮೂಲಕ ವಿರೋಧ ಪಕ್ಷದ ನಾಯಕರಂತೆ ವರ್ತಿಸುತ್ತಿದ್ದಾರೆ ಎಂದು ಮಂಜುನಾಥ ಭಂಡಾರಿ, ಎಸ್. ರವಿ, ಅನಿಲ್ ಕುಮಾರ್, ರಾಜೇಂದ್ರ ರಾಜಣ್ಣ, ದಿನೇಶ್ ಗೂಳಿಗೌಡ, ಸುನಿಲ್ ಗೌಡ ಪಾಟೀಲ, ಚಂದ್ರಶೇಖರ ಪಾಟೀಲ, ಚೆನ್ನರಾಜು, ಮಧು ಮಾದೇಗೌಡ, ಡಾ.ತಿಮ್ಮಯ್ಯ, ರಾಮೋಜಿ ಗೌಡ, ಡಿ.ಟಿ. ಶ್ರೀನಿವಾಸ, ಶರಣಗೌಡ ಪಾಟೀಲ, ಭೀಮರಾವ್ ಪಾಟೀಲ, ತಿಪ್ಪಣ್ಣಪ್ಪ ಕಮಕನೂರ ಅವರು ಖಂಡಿಸಿದ್ದಾರೆ.

'ಮಸೂದೆಯಲ್ಲಿ ಲೋಪಗಳಿದ್ದರೆ, ಸ್ಪಷ್ಟನೆ ಕೇಳುವ ಅಧಿಕಾರ ರಾಜ್ಯಪಾಲರಿಗಿದೆ. ಆದರೆ, ವಿರೋಧಪಕ್ಷದವರು ವಿರೋಧಿಸಿದ್ದಾರೆ ಎಂಬ ಕಾರಣಕ್ಕೆ ಮಸೂದೆಗಳನ್ನು ವಾಪಸ್ ಕಳಿಸುವುದು ಸರಿಯಾದ ಕ್ರಮವಲ್ಲ' ಎಂದಿದ್ದಾರೆ.

ವಾಪಸಾದ 11 ಮಸೂದೆಗಳು

ಸುಮಾರು 11 ಮಸೂದೆಗಳಿಗೆ ಹೆಚ್ಚಿನ ವಿವರಣೆಗಳನ್ನು ಕೋರಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದಾರೆ.

ಇವುಗಳಲ್ಲಿ ಆರು ಮಸೂದೆಗಳು ಮುಂಗಾರು ಅಧಿವೇಶನದಲ್ಲಿ ಅಂಗೀಕಾರಗೊಂಡಿದ್ದವು, ಅವುಗಳನ್ನು ಇದೇ ತಿಂಗಳು ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ಉಳಿದವು ಇದೇ ವರ್ಷದ ಮಾರ್ಚ್ ಮತ್ತು ಒಂದು ಮಸೂದೆ 2023 ರ ಡಿಸೆಂಬರ್‌ನಲ್ಲಿ ಕಳುಹಿಸಲಾಗಿತ್ತು.

ವಾಪಸ್ ಆಗಿರುವ ಮಸೂದೆಗಳೆಂದರೆ, ಕರ್ನಾಟಕ ಸಾರ್ವಜನಿಕ ಪರೀಕ್ಷಾ(ನೇಮಕಾತಿಯಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮ ತಡೆ) ಮಸೂದೆ 2023, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳ ದತ್ತಿ ಮಸೂದೆ 2024, ಕರ್ನಾಟಕ ನಗರ ಮತ್ತು ಪಟ್ಟಣಗಳ ಯೋಜನೆ(ತಿದ್ದುಪಡಿ) ಮಸೂದೆ 2023, ಗದಗ ಬೆಟಗೇರಿ ವಾಣಿಜ್ಯ, ಸಂಸ್ಕೃತಿ ಮತ್ತು ಪ್ರದರ್ಶನಗಳ ಪ್ರಾಧಿಕಾರ ಮಸೂದೆ 2023, ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ 2024, ಕರ್ನಾಟಕ ಪುರಸಭೆಗಳು ಇತರ ಕಾನೂನು ತಿದ್ದುಪಡಿ ಮಸೂದೆ,2024, ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮಸೂದೆ 2024, ಕರ್ನಾಟಕ ಸಹಕಾರ ಸಂಘಗಳ ಸೊಸೈಟಿಗಳ ತಿದ್ದುಪಡಿ ಮಸೂದೆ 2024, ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಮಸೂದೆ, ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಮಸೂದೆ 2024, ಕರ್ನಾಟಕ ಶಾಸಕಾಂಗ (ತಡೆ ಮತ್ತು ಅನರ್ಹತೆ) ತಿದ್ದುಪಡಿ ಮಸೂದೆ.

ಹಣ ವರ್ಗಾವಣೆಯಲ್ಲಿ ಅಕ್ರಮ ರಾಜ್ಯಪಾಲರಿಗೆ ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಪಂಚಾಯತ್‌ನ ₹459 ಕೋಟಿ ಮತ್ತು ತಾಲ್ಲೂಕು ಪಂಚಾಯಿತಿಯ ₹1,494 ಕೋಟಿ ವೆಚ್ಚ ಮಾಡದ ಹಣವನ್ನು ರಾಜ್ಯ ಸಂಚಿತ ನಿಧಿಗೆ ಪಾವತಿಸದೇ ಯಾವುದಕ್ಕೆ ಬಳಸಲಾಗಿದೆ ಎಂಬುದರ ಬಗ್ಗೆ ತನಿಖೆಗೆ ಆದೇಶಿಸಬೇಕು ಎಂದು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಡಿ.ಎಸ್.ಅರುಣ್ ರಾಜ್ಯಪಾಲರಿಗೆ ದೂರು ನೀಡಿದ್ದಾರೆ.

ವಿಧಾನಪರಿಷತ್ತಿನಲ್ಲಿ ಈ ವಿಷಯದ ಬಗ್ಗೆ ಪ್ರಶ್ನೆ ಮಾಡಿದಾಗ ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವೆಚ್ಚ ಮಾಡದ ಹಣವನ್ನು ರಾಜ್ಯ ಸಂಚಿತ ನಿಧಿಗೆ ಪಾವತಿ ಮಾಡಲಾಗಿದೆ ಎಂದು ಲಿಖಿತ ಉತ್ತರ ನೀಡಿದ್ದರು. ಇದಕ್ಕೆ ಸಂಬಂಧಿಸಿದ ಕಡತ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಆ ಹಣ ಸಂಚಿತ ನಿಧಿಗೆ ಪಾವತಿ ಆಗಿರಲಿಲ್ಲ. ಮುಖ್ಯಮಂತ್ರಿಯವರ ಉತ್ತರ ತಪ್ಪು ಎಂಬುದು ಗೊತ್ತಾಗಿದೆ ಎಂದು ದೂರಿನಲ್ಲಿ ಹೇಳಿದ್ದಾರೆ.

एनएमडीसी NMDC

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad-500028
Corporate Identity Number (CIN) – L13100TG1958GOI001674

WORKS DIVISION
CONTRACTS DEPARTMENT

Tender Enquiry No.: HO(Works)/Contracts/ERP/MTSS/DIOM/2024/999/216
Dated: 24/08/2024

NMDC Limited, A "NAVARATNA" Public Sector Company under Ministry of Steel, Govt. of India, invites **online bids** through **MSTC Portal** from experienced, reputed and competent **domestic bidders** for the work of **"Selection of System Integrator for implementation of Mine Transport and Surveillance System at Donimalai Complex"**

The detailed NIT and Bid documents can be viewed and/or downloaded from **24/08/2024 to 23/09/2024** from following website links:

1. NMDC website - **https://nmdcportals.nmdc.co.in/nmdctender**
2. Central Public Procurement **http://www.eprocure.gov.in/epublish/app** and Portal (CPP PORTAL)
3. MSTC portal **https://www.mstcecommerce.com/eprocn** and search NMDC **Tender Event No. NMDC/HEAD OFFICE/CONTRACT/13/24-25/ET/402**. For further help refer to 'vendor guide' given in MSTC website.

The bidders are requested to submit their bids online through **MSTC portal only**. The details of submission of bid through online are given in NIT. The Bidders on regular basis are required to visit the NMDC's website/CPP Portal/MSTC website for corrigendum, if any, at a future date.

For further clarification, the following can be contacted:

1) GM (Contracts, Projects & Steel), NMDC Limited, Hyderabad Tel. No. +91-040-23533536, E-mail: **contracts@nmdc.co.in**

Executive Director (Works)

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ತೂಕ ತಾಕತ್ತಿನ ತಾಕಲಾಟ

ಸ್ಪರ್ಧೆಗಳಲ್ಲಿ ಹೆಣ್ಣುಮಕ್ಕಳ ತೂಕದ ಬಗ್ಗೆ ಇರುವ ಅತಾರ್ಕಿಕ, ಅವೈಜ್ಞಾನಿಕ ನಿಯಮಗಳು ಬದಲಾಗಬೇಕು. ತೂಕಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ಸಡಿಲಿಕೆಯನ್ನು ತರಬೇಕು. ಹೆಣ್ಮಕ್ಕಳೂ ಅಷ್ಟೇ, ತಮ್ಮ ತೂಕದ ಬಗ್ಗೆ ಸಣ್ಣ ತಿಳಿವಳಿಕೆ, ಒಂದಷ್ಟು ಮುತುವರ್ಜಿ ಇದ್ದರೆ ಸಾಕು. ತೀರಾ 50 ಗ್ರಾಂ, 100 ಗ್ರಾಂಗಳ ಬಗ್ಗೆ ಚಿಂತಿಸಲು ಬದುಕೇನೂ ಓಲಂಪಿಕ್ಸ್ ಕ್ರೀಡಾಂಗಣವಲ್ಲ...

ಪ್ರತಿತಿಂಗಳು ಋತುಚಕ್ರದ ಅವಧಿಯಲ್ಲಿ ಅವಳ ದೇಹ ನಿರಂತರವಾಗಿ ಹಾರ್ಮೋನುಗಳ ಬದಲಾವಣೆಗಳಿಗೆ ಈಡಾಗುತ್ತಲೇ ಇರುತ್ತದೆ. ಈಸ್ಟ್ರೋಜನ್ ಹಾಗೂ ಪ್ರೊಜೆಸ್ಟರಾನ್ ಹಾರ್ಮೋನುಗಳ ಸ್ರವಿಸುವಿಕೆಯಿಂದ ತೂಕದಲ್ಲಿಯೂ ಏರಿಳಿತ ಸಾಮಾನ್ಯ. ಸಂತಾನೋತ್ಪತ್ತಿಗೆ ದೇಹವನ್ನು ಸಿದ್ಧಗೊಳಿಸುವ ಪ್ರಕ್ರಿಯೆಯಲ್ಲಿ ನಿಸರ್ಗ ಹೆಣ್ಣಿನ ದೇಹದಲ್ಲಿ ಈ ರೀತಿಯ ಹಾರ್ಮೋನ್ ಏರಿಳಿತವನ್ನು ಸೃಷ್ಟಿಸುತ್ತದೆ. ಇದು ಸೃಷ್ಟಿಯ ಮುಂದುವರಿಕೆಗೆ ಅಗತ್ಯ ಕೂಡ. ಪ್ರತಿ ತಿಂಗಳು ಮುಟ್ಟಿನ ಅವಧಿಯಲ್ಲಿ ಹೆಚ್ಚುವ ಹಾಗೂ ಅನಂತರ ಮತ್ತೆ ಸಹಜ ಸ್ಥಿತಿಗೆ ಮರಳುವ ತೂಕದ ಬಗ್ಗೆ ಹೆಚ್ಚು ಚಿಂತಿಸುವ ಅಗತ್ಯವಿಲ್ಲ. ಆದರೆ ನಿರಂತರ ತೂಕ ಹೆಚ್ಚಳ ಕಂಡು ಬಂದರೆ ಮಾತ್ರ ವೈದ್ಯರನ್ನು ಕಾಣಬೇಕು.

ಡಾ. ಚಂದ್ರಿಕಾ ಆನಂದ್, ಸರಸ್ವತಿ ಗೈನೋವರ್ಡ್

ಸುಶೀಲಾ ಡೋಣೂರ

ಇವತ್ತಿನಿಂದಲ್ಲ, ಯಾವತ್ತಿನಿಂದಲೂ ಅಷ್ಟೇ, ಹೆಣ್ಣಿಗೂ ಅವಳ ತೂಕಕ್ಕೂ ಒಂದು ಅತಾರ್ಕಿಕ, ಅವೈಜ್ಞಾನಿಕ ನಂಟು ಜೋಡಿಸಲಾಗಿದೆ. ಹೆಣ್ಣು ಹೇಗಿರಬೇಕು ಎನ್ನುವುದಕ್ಕೆ 'ತೆಳ್ಳಗೆ, ಬೆಳ್ಳಗೆ' ಎನ್ನುವ ಸಿದ್ಧಸೂತ್ರವೇ ಇದೆಯಲ್ಲವೆ? ಆದರೆ ಎಲ್ಲರೂ, ಎಲ್ಲಾ ಸಮಯದಲ್ಲೂ ಒಂದೇ ತೂಕ ಕಾಯ್ದುಕೊಳ್ಳಲು ಹೇಗೆ ಸಾಧ್ಯ? ಯಾವಾಗ ತೂಗಿದರೂ, ಎಷ್ಟು ಸಲ ತೂಗಿದರೂ ಒಂದೇ ರೀತಿಯಾಗಿರಲು ಅವಳೇನು ಕಟೆದಿಟ್ಟ ಕಲ್ಲಿನ ಮೂರ್ತಿಯಲ್ಲ, ಟೊಮೆಟೊ ಅಥವಾ ಸೇಬು ಕೂಡ ಅಲ್ಲ. ಸ್ಪರ್ಧೆಯ ನಿರ್ಣಾಯಕರಾಗಿರುವವರೆಗೂ ಇಷ್ಟು ಮಾತ್ರದ ತಿಳಿವಳಿಕೆ ಇದ್ದೇ ಇರುತ್ತದೆ. ಆದರೂ ಅದನ್ನು ಬದಿಗೊತ್ತಿ ನಿಯಮಗಳ ಪ್ರಕಾರ ಅವಳ ತೂಕವನ್ನು ಗ್ರಾಂಗಳಲ್ಲಿ ಲೆಕ್ಕ ಹಾಕಿ ನಿರ್ಣಯ ಕೈಗೊಳ್ಳಲಾಗುತ್ತದೆ. ಇತ್ತೀಚೆಗೆ ಒಲಂಪಿಕ್ಸ್‌ನಲ್ಲಿ 100 ಗ್ರಾಂ ತೂಕದ ಕಾರಣ ವಿನೇಶ್ ಫೋಗಟ್ ಪದಕ ವಂಚಿತರಾದರು. ಈ ಚರ್ಚೆ ಹೆಣ್ಣುಮಕ್ಕಳ ತೂಕದ ಬಗ್ಗೆ ಮತ್ತೆ ಮಾತನಾಡುವಂತೆ ಮಾಡಿದೆ. ಈ 100 ಗ್ರಾಂ ತೂಕದ ಲೆಕ್ಕಾಚಾರ ಒಲಂಪಿಕ್ಸ್‌ನಂತಹ ನಿರ್ಣಾಯಕ ಘಟ್ಟಗಳಲ್ಲಿ ಮಾತ್ರವಲ್ಲ, ಸೌಂದರ್ಯ ಸ್ಪರ್ಧೆಗಳಲ್ಲಿ, ಮಾಡಲಿಂಗ್, ಜಾಹೀರಾತು ನಟನೆಯಂಥ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳುವ ತಹತಹ ಇರುವ ಹೆಣ್ಣುಮಕ್ಕಳಿಗೂ ಮುಳುವಾಗುವುದಿದೆ. ಕುಸ್ತಿಪಟು ವಿನೇಶ್ ಫೋಗಟ್ ಕನಸು ಭಗ್ನವಾಗಲು ಕಾರಣವಾದ ತೂಕದ ಸಂಗತಿ ಎಲ್ಲೆಡೆ ಚರ್ಚೆ ಆಗುತ್ತಿದೆ. ಆದರೆ ಎಷ್ಟೋ ಸ್ಪರ್ಧೆಗಳಲ್ಲಿ ತೂಕದ ಕಾರಣಕ್ಕೆ ಚಿನ್ನದಂತಹ ಅವಕಾಶಗಳನ್ನು ಕಳೆದುಕೊಂಡ ನೂರಾರು, ಸಾವಿರಾರು ಉದಾರಣೆಗಳು ಎಲ್ಲೋ ಮುಚ್ಚಿ ಹೋಗಿರುತ್ತವೆ.

ಋತುಚಕ್ರದ ಸಮಯದಲ್ಲಿ ಆಕೆಯ ತೂಕ ನೂರಾರು ಗ್ರಾಂ ಏರಿಳಿತವಾಗುವುದು ತೀರಾ ಸಾಮಾನ್ಯ. ಕೆಲವರಲ್ಲಿ 1ರಿಂದ 3ಕೆಜಿಯಷ್ಟು ವ್ಯತ್ಯಾಸವಾಗುವುದೂ ಇದೆ. ಇದಕ್ಕೆ ಅವಳು ಸೇವಿಸುವ ಆಹಾರ, ಪಾನೀಯ ಮಾತ್ರ ಕಾರಣವಲ್ಲ. ತನ್ನ ನಿಯಂತ್ರಣದಲ್ಲಿ ಇಲ್ಲದ, ತನ್ನ ದೇಹದಲ್ಲಿ ನಡೆಯುವ ಸ್ವಭಾವಿಕ, ಜೈವಿಕ ಬದಲಾವಣೆಗಳೂ ಕಾರಣ. ಹೆಣ್ಣು ಎನ್ನುವ ಕಾರಣಕ್ಕೆ ಉಂಟಾಗುವ ಬದಲಾವಣೆಗಳೂ ಹೇಗೆ ಅವಳ ಬದುಕು ಭವಿಷ್ಯದ ಕನಸನ್ನು ಕಸಿಯಬಲ್ಲವು ಎನ್ನುವುದಕ್ಕೆ ವಿನೇಶ್ ಫೋಗಟ್ ಒಂದು ದೃಷ್ಟಾಂತವಾಗಿ ನಿಂತಿದ್ದಾರೆ.

'ಅವಳ ದೇಹದ ಸ್ಥಿತಿ ಹೇಗೇ ಇರಲಿ, ಸ್ಪರ್ಧೆಯ ನಿಯಮಗಳ ಪ್ರಕಾರ ದೇಹದ ತೂಕನವನ್ನು ಕಾಪಾಡಿಕೊಳ್ಳಲೇಬೇಕು' ಎಂದು ಹೇಳಿ ಕ್ರೀಡಾ ಮಧ್ಯಸ್ಥಿಕೆ ನ್ಯಾಯ ಮಂಡಳಿ (ಸಿಎಎಸ್) ಕೈ ತೊಳೆದುಕೊಂಡಿದೆ.

'ಫೋಗಟ್ ಪದಕ ಕಳೆದುಕೊಂಡಿದ್ದು, ಅವರ ತೂಕ ನಿರ್ವಹಣೆಯ ವೈಫಲ್ಯದಿಂದಲೇ ಹೊರತು, ಬಾಹ್ಯ ಕಾರಣಗಳಿಂದಲ್ಲ ಅಥವಾ ನಿಯಮಗಳಲ್ಲಿನ ದೋಷದಿಂದಲೂ ಅಲ್ಲ, ಯಾರದೊ ಹಸ್ತಕ್ಷೇಪದಿಂದಲೂ ಅಲ್ಲ. ತೂಕದ ನಿಯಮ ಎಲ್ಲಾ ಕ್ರೀಡಾಪಟುಗಳಿಗೆ ಒಂದೇ ಆಗಿರುತ್ತದೆ. ಇದರಲ್ಲಿ ಯಾವುದೇ ತಾರತಮ್ಯ ಇಲ್ಲ. ನಿಯಮಗಳ ಅನುಸರವಾಗಿ ತೂಕ ಪರೀಕ್ಷೆ ಮಾಡಲಾಗಿದೆ. ಅದರಂತೆ ಮೊದಲ ಪರೀಕ್ಷೆಯಲ್ಲಿ ವಿನೇಶ್ ಫೋಗಟ್ ತೂಕ 150 ಗ್ರಾಂ. ಹೆಚ್ಚಾಗಿತ್ತು. ಇದಾದ ಬಳಿಕ 15 ನಿಮಿಷದ ಸಮಯದಲ್ಲಿ ಎರಡನೇ ಬಾರಿಗೆ ಪರೀಕ್ಷೆ ನಡೆಸಿದಾಗ ಮಿತಿಗಿಂತ 100 ಗ್ರಾಂ ತೂಕ ಹೆಚ್ಚಳ ಇತ್ತು. ಆದರೆ, ಇಲ್ಲಿ ಯಾವುದೇ ನಿಯಮ ಉಲ್ಲಂಘನೆಯಾಗಿಲ್ಲ' ಎಂದು ಸಿಎಎಸ್ ಸ್ಪಷ್ಟಪಡಿಸಿದೆ.

ಅವಳ ತೂಕ ನಿರ್ವಹಣೆಯಲ್ಲಿ ಅವಳದಲ್ಲದ ತಪ್ಪೂ ನುಸುಳಿರಬಹುದು ಮತ್ತು ಅದು ಅವಳ ದೇಹದಲ್ಲಿ ನಡೆಯುವ ಹಾರ್ಮೋನು ವ್ಯತ್ಯಾಸದಿಂದ ಆಗಿರಬಹುದು ಎನ್ನುವ ಅಂಶ.

ಹೆಣ್ಣಿನ ದೇಹ ಒಂದು ಪ್ರಯೋಗಾಲಯವಿದ್ದಂತೆ. ನಿರಂತರವಾಗಿ ನೈಸರ್ಗಿಕ ಜೈವಿಕ ಬದಲಾವಣೆಗೆ ಒಳಗಾಗುತ್ತಲೇ ಇರುತ್ತದೆ. ಪ್ರತಿ 10 ವರ್ಷಗಳಿಗೊಮ್ಮೆ ಅವಳ ದೇಹ ಹೊಸ ಸ್ಥಿತ್ಯಂತರಗಳಿಗೆ ಸಜ್ಜುಗೊಳುತ್ತ, ಹೊಸ ಹಾರ್ಮೋನುಗಳಿಗೆ ಒಗ್ಗಿಕೊಳ್ಳುತ್ತ, ಮತ್ತೆ ತನ್ನನ್ನು ತಾನು ಸುಸ್ಥಿತಿಗೆ ತಂದುಕೊಳ್ಳುವ ಕ್ರಿಯೆ ನಿರಂತರವಾಗಿ ನಡೆದೇ ಇರುತ್ತದೆ.

ಹತ್ತನೇ ವರ್ಷಕ್ಕೆ ಕಾಲಿಟ್ಟಾಗ ಅವಳು ಹೆಣ್ಣಾಗುವ ಪ್ರಕ್ರಿಯೆ ಆರಂಭವಾಗುತ್ತದೆ. 20ನೇ ವರ್ಷಕ್ಕೆ ಹೊಸ ಹಾರ್ಮೋನುಗಳ ಜೋಡಣೆಯಾಗುತ್ತದೆ. 30ನೇ ವರ್ಷಕ್ಕೆ ಆ ಹಾರ್ಮೋನುಗಳು ದೃಢತೆಯನ್ನು ಕಾಪಾಡಿಕೊಳ್ಳುವ ಪ್ರಕ್ರಿಯೆ ಆರಂಭವಾಗುತ್ತದೆ. 40ನೇ ವರ್ಷಕ್ಕೆ ಮತ್ತೊಂದು ಪರ್ವಕಾಲ ಶುರು. ಋತುಚಕ್ರದ ಶಿಸ್ತು ಕ್ರಮೇಣ ಏರುಪೇರು ಆಗುವ ಕಾಲವದು. 50ನೇ ವರ್ಷಕ್ಕೆ ಋತುಚಕ್ರ ನಿಲ್ಲುವ ಮುನ್ನ ಹಾರ್ಮೋನುಗಳ ಏರುಪೇರು ವಿಪರೀತವಾಗುವುದುಂಟು. ಈ ಎಲ್ಲಾ ಅವಧಿಗಳಲ್ಲೂ ತೂಕದ ವ್ಯತ್ಯಾಸವೂ ಜೊತೆಗಿದ್ದೇ ಇರುತ್ತದೆ. ಅವಳ ತೂಕ 10ವರ್ಷಕ್ಕೆ 30 ಕೆಜಿ ಇದ್ದರೆ ಸಾಕು, 20 ವರ್ಷಕ್ಕೆ 40 ಕೆಜಿ ಇದ್ದರೂ ಅಡ್ಡಿಯಿಲ್ಲ, 30 ರಿಂದ 40 ವರ್ಷಕ್ಕೆ 50 ಕೆಜಿ ದಾಟುವಂತಿಲ್ಲ. ಇದು ಉದಾಹರಣೆ ಮಾತ್ರ. ತೂಕ ಎತ್ತರಕ್ಕೆ ಅನುಗುಣವಾಗಿ ಬದಲಾಗುತ್ತಲೇ ಇರುತ್ತದೆ. 50 ವರ್ಷಕ್ಕೂ ಅದೇ ತೂಕವಿದ್ದರೆ ಇನ್ನೂ ಒಳ್ಳೆಯದು ಎಂದು ವೈದ್ಯಕೀಯ ಬಾಡಿ ಇಂಡೆಕ್ಸ್ ಸೂಚ್ಯಂಕ ಹೇಳುತ್ತದೆ.

'ಯಾವುದೇ ಸ್ಪರ್ಧೆಯ ನಿರ್ಣಯ ಕೈಗೊಳ್ಳುವಾಗ ಆಕೆಯ ತೂಕವನ್ನು ಲೆಕ್ಕ ಹಾಕುವ ಮುನ್ನ ಆ ಸಂದರ್ಭದಲ್ಲಿ ಅವಳ ದೇಹದ ಸ್ಥಿತಿಯನ್ನು ಪರಿಗಣಿಸಲೇಬೇಕು' ಎನ್ನುತ್ತಾರೆ ಸ್ತ್ರೀರೋಗ ತಜ್ಞೆ ಡಾ. ಕಾಮಿನಿ ರಾವ್.

'ಕೆಲ ಸಂದರ್ಭದಲ್ಲಿ ಹೆಣ್ಣಿನ ತೂಕ ಏರಿಳಿತವಾಗುವುದು ಸಾಮಾನ್ಯ. ಋತು ಚಕ್ರದ ಸಮಯದಲ್ಲಿ 1ರಿಂದ 3 ಕೆಜಿ ತೂಕ ವ್ಯತ್ಯಾಸವಾಗಬಹುದು. ಆ ಸಮಯದಲ್ಲಿ ಪ್ರೊಜೆಸ್ಟರಾನ್ (progesterone) ಹಾರ್ಮೋನ್ ಪರಿಣಾಮ ದೇಹದ ಸ್ನಾಯುಗಳು ಊದಿಕೊಳ್ಳುತ್ತವೆ. ಕಾಲು, ಹೊಟ್ಟೆ, ಸ್ತನಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ. ದೇಹದಲ್ಲಿ ನೀರಿನ ಅಂಶ ಶೇಖರಣೆಗೊಳ್ಳುವುದರಿಂದ ತೂಕ ಹೆಚ್ಚುವುದು ಸ್ವಾಭಾವಿಕ. ಋತುಚಕ್ರದ ಅವಧಿ ಮುಗಿದ ತಕ್ಷಣ ದೇಹದ ಸ್ಥಿತಿ ಹಾಗೂ ಈ ತೂಕ ಮತ್ತೆ ಸಾಮಾನ್ಯ ಸ್ಥಿತಿ ತಲುಪುತ್ತವೆ. ಇದನ್ನು ಋತುಚಕ್ರಪೂರ್ವ ಸಿಂಡ್ರೋಮ್ (premenstrual syndrome) ಇನ್ನುತ್ತೇವೆ. ಆ ಕ್ಷಣದ ಅವಳ ದೇಹದ ಪರಿಸ್ಥಿತಿಯನ್ನು ಪಕ್ಕಕ್ಕಿಟ್ಟು ಸ್ಪರ್ಧೆಗಳಿಗೆ ಅವಳ ತೂಕವನ್ನು ಪರಿಗಣಿಸುವುದು ಅಸಹಜ' ಎನ್ನುತ್ತಾರೆ ಡಾ. ಕಾಮಿನಿ ರಾವ್.

ಅಷ್ಟಮಿ ಖಾದ್ಯ

ವೇದಾವತಿ ಎಚ್. ಎಸ್.

ದಿಢೀರ್ ಉದ್ದಿನಬೇಳೆ ಚಕ್ಕುಲಿ

ಬೇಕಾಗುವ ಸಾಮಗ್ರಿಗಳು: ಉದ್ದಿನಬೇಳೆ 1 ಕಪ್, ಜೀರಿಗೆ 1 ಟೇಬಲ್ ಚಮಚ, ಎಳ್ಳು 2 ಟೇಬಲ್ ಚಮಚ, ಹುರಿಗಡಲೆ 1/2 ಕಪ್, ಅಕ್ಕಿ ಹಿಟ್ಟು 3 ಕಪ್, ಅriಶಿನ ಪುಡಿ 1/2 ಟೀ ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಬೆಣ್ಣೆ 2 ಟೇಬಲ್ ಚಮಚ, ಕರಿಯಲು ಎಣ್ಣೆ.

ತಯಾರಿಸುವ ವಿಧಾನ: ಉದ್ದಿನಬೇಳೆಯನ್ನು ಬಾಣಲೆಗೆ ಹಾಕಿ ಬಣ್ಣ ಬದಲಾಗಿ ಪರಿಮಳ ಬರುವವರೆಗೆ ಹುರಿಯಿರಿ. ಜೀರಿಗೆಯನ್ನು ಬೆಚ್ಚಗೆ ಮಾಡಿ. ಎಳ್ಳು ಸಿಡಿಯುವವರೆಗೆ ಹುರಿಯಿರಿ. ಹುರಿದ ಉದ್ದನ್ನು ಮಿಕ್ಸಿ ಜಾರಿಗೆ ಹಾಕಿ ನುಣ್ಣಗೆ ಪುಡಿ ಮಾಡಿಕೊಂಡು ಬಳಿಕ ಜರಡಿ ಹಿಡಿಯಿರಿ. ಹುರಿಗಡಲೆ, ಜೀರಿಗೆಯನ್ನು ಪುಡಿ ಮಾಡಿ ಜರಡಿ ಹಿಡಿಯಿರಿ. ನಂತರ ಅಕ್ಕಿ ಹಿಟ್ಟು, ಅರಶಿನ, ಹುರಿದ ಎಳ್ಳು, ಉಪ್ಪನ್ನು ಹಾಕಿ ಮಿಶ್ರಣ ಮಾಡಿ. ಬಳಿಕ ಬೆಣ್ಣೆಯನ್ನು ಬಿಸಿ ಮಾಡಿಕೊಂಡು ಹಿಟ್ಟಿಗೆ ಸೇರಿಸಿ ಎರಡು ನಿಮಿಷ ಕೈಯಿಂದ ಚೆನ್ನಾಗಿ ಮಿಶ್ರಣ ಮಾಡಿ. ನಂತರ ಸ್ವಲ್ಪ ಸ್ವಲ್ಪವೇ ಬಿಸಿ ನೀರನ್ನು ಹಾಕಿಕೊಳ್ಳುತ್ತಾ ಹಿಟ್ಟನ್ನು ಕಲಸಿಕೊಳ್ಳಿ. ಹಿಟ್ಟು ಮೃದುವಾಗಿರಲಿ. ಬಳಿಕ ಚಕ್ಕುಲಿ ಒರಳಿಗೆ ಎಣ್ಣೆಯನ್ನು ಸವರಿಕೊಂಡು ಹಿಟ್ಟನ್ನು ಹಾಕಿ ನಿಧಾನವಾಗಿ ಒತ್ತಿ ಚಕ್ಕುಲಿ ತಯಾರಿಸಿಕೊಳ್ಳಿ. ಎಣ್ಣೆಯನ್ನು ಬಿಸಿ ಮಾಡಿಕೊಂಡು ತಯಾರಿಸಿದ ಚಕ್ಕುಲಿಯನ್ನು ಹಾಕಿ ಮಧ್ಯಮ ಉರಿಯಲ್ಲಿ ಎರಡೂ ಬದಿಯನ್ನು ಗರಿ ಗರಿಯಾಗುವರೆಗೆ ಬೇಯಸಿ.

ರಸಾಸ್ವಾದ

ಅವಲಕ್ಕಿ ಉಂಡೆ

ಬೇಕಾಗುವ ಸಾಮಗ್ರಿಗಳು: ಗಟ್ಟಿ ಅವಲಕ್ಕಿ 2 ಕಪ್, ಬೆಲ್ಲದ ಪುಡಿ 3/4 ಕಪ್, ಒಣಕೊಬ್ಬರಿ ತುರಿ 1/2 ಕಪ್, ಏಲಕ್ಕಿ ಪುಡಿ ಕಾಲು ಚಮಚ, ಕತ್ತರಿಸಿದ ಗೋಡಂಬಿ 10, ಕತ್ತರಿಸಿದ ಬಾದಾಮಿ 10, ದ್ರಾಕ್ಷಿ 10, ತುಪ್ಪ 4 ಟೇಬಲ್ ಚಮಚ.

ತಯಾರಿಸುವ ವಿಧಾನ: ಅವಲಕ್ಕಿಯನ್ನು ಬಾಣಲೆಯಲ್ಲಿ ಹಾಕಿ ಸಣ್ಣ ಉರಿಯಲ್ಲಿ ಗರಿ ಗರಿಯಾಗುವರೆಗೆ ಹುರಿದುಕೊಳ್ಳಿ. ಬಳಿಕ ಹಾಕಿ ಆರಲು ಬಿಡಿ. ಆರಿದ ನಂತರ ಮಿಕ್ಸಿಯಲ್ಲಿ ರವೆ ರೀತಿಯಲ್ಲಿ ಪುಡಿಯನ್ನು ಮಾಡಿ. ಪುಡಿಮಾಡಿದ ಅಲವಕ್ಕಿ ಜೊತೆಗೆ ಬೆಲ್ಲ, ಒಣಕೊಬ್ಬರಿ ಮತ್ತು ಏಲಕ್ಕಿಪುಡಿಯನ್ನು ಸೇರಿಸಿ ಮಿಕ್ಸಿಯಲ್ಲಿ ಒಂದು ಸಲ ಪುಡಿ ಮಾಡಿ. ಈಗ ಮಿಶ್ರಣವು ಚಿರೋಟಿ ರವೆಯ ರೀತಿಯಲ್ಲಿ ಆಗಿರುತ್ತದೆ. ಕೈಬಾಣಲೆಯಲ್ಲಿ ತುಪ್ಪವನ್ನು ಬಿಸಿ ಮಾಡಿ ಗೋಡಂಬಿ, ಬಾದಾಮಿಯನ್ನು ಚಿಕ್ಕದಾಗಿ ಕತ್ತರಿಸಿ ಹಾಕಿ. ನಂತರ ಓಣ ದ್ರಾಕ್ಷಿಯನ್ನು ಹಾಕಿ ಬಣ್ಣ ಬದಲಾಗುವರೆಗೆ ಹುರಿಯಿರಿ. ಬಳಿಕ ಪುಡಿ ಮಾಡಿಕೊಂಡ ಮಿಶ್ರಣಕ್ಕೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಈಗ ನಿಮಗೆ ಬೇಕಾದ ಗಾತ್ರದಲ್ಲಿ ಉಂಡೆಗಳನ್ನು ಕಟ್ಟಿ.

ಕೋಡುಬಳೆ

ಬೇಕಾಗುವ ಸಾಮಗ್ರಿಗಳು: ಚಿರೋಟಿ ರವೆ 1/4 ಕಪ್, ಮೈದಾ 1/4 ಕಪ್, ಅಕ್ಕಿ ಹಿಟ್ಟು 1 ಕಪ್, ಹುರಿಕಡಲೆ 1/4 ಕಪ್, ಒಣಕೊಬ್ಬರಿ ತುರಿ 1/2 ಕಪ್, ಅಜವಾನ 1 ಟೀ ಚಮಚ, 1/4 ಟೀ ಚಮಚ ಇಂಗು, 1 ಟೀ ಚಮಚ ಅಚ್ಚಖಾರದಪುಡಿ, ರುಚಿಗೆ ತಕ್ಕಷ್ಟು ಉಪ್ಪು, 10 ರಿಂದ 15 ಕರಿಬೇವು, ಬೆಣ್ಣೆ 2 ಟೇಬಲ್ ಚಮಚ, ನೀರು ಹಿಟ್ಟು ಕಲಸಲು, ಎಣ್ಣೆ ಕರಿಯಲು.

ತಯಾರಿಸುವ ವಿಧಾನ: ಚಿರೋಟಿ ರವೆ, ಮೈದಾ, ಅಕ್ಕಿಹಿಟ್ಟು ಇವುಗಳನ್ನು ಬೆಚ್ಚಗಾಗುವರೆಗೆ ಹುರಿಯಿರಿ. ಹುರಿಗಡಲೆ, ಒಣಕೊಬ್ಬರಿ, ಅಜವಾನ, ಇಂಗು ಅಚ್ಚಖಾರದಪುಡಿ, ಉಪ್ಪು, ಕರಿಬೇವು ಇವುಗಳನ್ನು ಮಿಕ್ಸಿಯಲ್ಲಿ ಹಾಕಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಬಾಣಲೆಗೆ ಹಿಟ್ಟುಗಳನ್ನು ಮತ್ತು ಪುಡಿ ಮಾಡಿಕೊಂಡ ಮಿಶ್ರಣವನ್ನು ಸೇರಿಸಿ. ಈ ಮಿಶ್ರಣಕ್ಕೆ ಬೆಣ್ಣೆಯನ್ನು ಹಾಕಿ ಚೆನ್ನಾಗಿ ಕಲಸಿ. ಬಳಿಕ ಹಿಟ್ಟಿಗೆ ಸ್ವಲ್ಪ ಸ್ವಲ್ಪವೇ ನೀರನ್ನು ಹಾಕಿಕೊಳ್ಳುತ್ತಾ ಗಟ್ಟಿಯಾಗಿ ಕಲಸಿಕೊಳ್ಳಿ. ಗಟ್ಟಿಯಾಗಿರುವ ಹಿಟ್ಟು ಮೃದುವಾಗುವರೆಗೆ 10 ನಿಮಿಷ ಚೆನ್ನಾಗಿ ನಾದಿಕೊಳ್ಳಿ. ಬಳಿಕ ಚಿಕ್ಕ ಚಿಕ್ಕ ಉಂಡೆಗಳನ್ನು ತಯಾರಿಸಿಕೊಂಡು ಅದನ್ನು ನಾದಿಕೊಂಡು ಬಳೆಯಾಕಾರ ಮಾಡಿಕೊಳ್ಳಿ. ತಯಾರಿಸಿಕೊಂಡ ಕೋಡುಬಳೆಯನ್ನು ಬಿಸಿ ಎಣ್ಣೆಯಲ್ಲಿ ಎರಡೂ ಬದಿಯೂ ಕೆಂಬಣ್ಣ ಬರುವರೆಗೆ ಕರೆಯಿರಿ.

ರಿಬ್ಬನ್ ಪಕೋಡ

ಬೇಕಾಗುವ ಸಾಮಗ್ರಿಗಳು: ಅಕ್ಕಿ ಹಿಟ್ಟು 1 ಕಪ್, ಹುರಿಗಡಲೆ 1/2 ಕಪ್, ಕಡಲೆಹಿಟ್ಟು 1/2 ಕಪ್, ಅಚ್ಚಖಾರದಪುಡಿ 1 ಟೀ ಚಮಚ, ಜೀರಿಗೆಪುಡಿ 1/2 ಟೀ ಚಮಚ, ಎಳ್ಳು 1 ಟೇಬಲ್ ಚಮಚ, ಇಂಗು 1/4 ಟೀ ಚಮಚ, ಬೆಣ್ಣೆ/ಎಣ್ಣೆ 2 ಟೇಬಲ್ ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಕರಿಯಲು ಎಣ್ಣೆ, ನೀರು ಹಿಟ್ಟು ಕಲಸಲು.

ತಯಾರಿಸುವ ವಿಧಾನ: ಹುರಿಗಡಲೆಯನ್ನು ನುಣ್ಣಗೆ ಪುಡಿ ಮಾಡಿಕೊಳ್ಳಿ. ಬೌಲಿನಲ್ಲಿ ಅಕ್ಕಿಹಿಟ್ಟು, ಕಡಲೆಹಿಟ್ಟು, ಪುಡಿ ಮಾಡಿದ ಹುರಿಗಡಲೆ, ಅಚ್ಚಖಾರದ ಪುಡಿ, ಜೀರಿಗೆಪುಡಿ, ಅರಿಶಿನ, ಎಳ್ಳು, ಇಂಗು, ರುಚಿಗೆ ತಕ್ಕಷ್ಟು ಉಪ್ಪನ್ನು ಹಾಕಿ ಮಿಶ್ರಣ ಮಾಡಿ. ಬೆಣ್ಣೆ ಅಥವಾ ಎಣ್ಣೆಯನ್ನು ಬಿಸಿ ಮಾಡಿ. ಮಿಶ್ರಣಕ್ಕೆ ಸೇರಿಸಿ. ಚೆನ್ನಾಗಿ ಮಿಶ್ರಣ ಮಾಡಿ. ಹಿಟ್ಟಿಗೆ ಸ್ವಲ್ಪ ಸ್ವಲ್ಪವೇ ನೀರನ್ನು ಹಾಕಿಕೊಂಡು ಮೃದುವಾಗಿ ಕಲಸಿಕೊಳ್ಳಿ. ಚಕ್ಕಲಿ ಒರಳಿಗೆ ರಿಬ್ಬನ್ ಪ್ಲೇಟನ್ನು ಹಾಕಿ. ಎಣ್ಣೆಯನ್ನು ಸವರಿ. ಹಿಟ್ಟನ್ನು ಚಕ್ಕಲಿ ಒರಳಿಗೆ ಹಾಕಿ. ಎಣ್ಣೆಯನ್ನು ಮಧ್ಯಮ ಉರಿಯಲ್ಲಿ ಬಿಸಿ ಮಾಡಿಕೊಂಡು ಮೇಲೆನಿಂದ ರಿಬ್ಬನ್ ಪಕೋಡವನ್ನು ಒತ್ತಿ. ನಂತರ 2-3 ನಿಮಿಷಗಳವರೆಗೆ ಬೇಯಿಸಿ.ಬಳಿಕ ಇನ್ನೊಂದು ಬದಿಯನ್ನು ತಿರುಗಿಸಿ ಬೇಯಿಸಿ.ಗರಿಗರಿಯಾಗಿ ಕೆಂಬಣ್ಣ ಬಂದ ನಂತರ ಎಣ್ಣೆಯಿಂದ ತೆಗೆಯಿರಿ.

ಅಕಾಲಿಕ ಹೆರಿಗೆಗೆ ಕಾರಣವೇನು?

ಸ್ಪಂದನ

ಡಾ. ವೀಣಾ ಎಸ್. ಭಟ್

- **ಚೊಚ್ಚಲ ಹೆರಿಗೆ ಏಳು ತಿಂಗಳಿಗೆ ಆಗಿ, ಆರು ತಾಸು ಮಗು ಜೀವವಿದ್ದು, ನಂತರ ತೀರಿಹೋಯಿತು. ಎರಡನೇ ಬಾರಿಗೆ ಎಂಟನೇ ತಿಂಗಳಿಗೆ ಹೆರಿಗೆಯಾಗಿ, ಎನ್‌ಐಸಿಯುನಲ್ಲಿ ಇಟ್ಟು ಬೆಳೆಸಿ, ಈಗ ಮಗುವಿಗೆ ಮೂರು ವರ್ಷವಾಗಿದೆ. ಇನ್ನೊಂದು ಮಗುವಾದರೂ ಹೀಗೆ ಆಗುವುದೇ. ನನ್ನ ತಂಗಿಯೂ ನಾಲ್ಕು ತಿಂಗಳ ಗರ್ಭಿಣಿ. ಅವಳಿಗೂ ಹೀಗೆ ಆಗಬಹುದೇ. ಆತಂಕವಿದೆ. ಸಲಹೆ ನೀಡಿ.**

ಮೊದಲಿಗೆ ಆತಂಕದಿಂದ ಹೊರಬನ್ನಿ. ಒತ್ತಡವೇ ಅಕಾಲಿಕ ಹೆರಿಗೆ ಮರುಕಳಿಸಲು ಕಾರಣವಾಗಬಹುದು. ಅವಧಿಪೂರ್ವ ಹೆರಿಗೆಯಾದಾಗ ಮಗುವಿನ ಉಸಿರಾಟ ವ್ಯವಸ್ಥೆ, ಜೀರ್ಣಾಂಗ ವ್ಯವಸ್ಥೆ ಹಾಗೂ ಮಿದುಳಿನ ಕಾರ್ಯ ಎಲ್ಲವೂ ಸುವ್ಯವಸ್ಥಿತವಾಗಿ ಕಾರ್ಯನಿರ್ವಹಿಸದೇ, ಮಗುವಿಗೆ ತೀವ್ರನಿಗಾಘಟಕದ ಅವಶ್ಯಕತೆ ಹೆಚ್ಚಿರುತ್ತದೆ. ಒಂದು ಬಾರಿ ಅಕಾಲಿಕ ಹೆರಿಗೆಯಾದರೆ, ಮತ್ತೆ ಹೀಗಾಗುವ ಸಂಭಾವ್ಯತೆ ಹೆಚ್ಚಿರುತ್ತದೆ. ಇದಕ್ಕೆ ನಿರ್ದಿಷ್ಟ ಕಾರಣವೆಂಬುದಿಲ್ಲ. ಆದರೂ ಕೆಲವು ಕಾರಣಗಳನ್ನು ಪಟ್ಟಿ ಮಾಡಬಹುದು. ಈ ಮೊದಲು ಅವಧಿಪೂರ್ವ ಹೆರಿಗೆ ಆಗಿದ್ದರೆ, ಅವಳಿ ಗರ್ಭ ಇದ್ದರೆ, ನೆತ್ತಿ ನೀರು ಹೆಚ್ಚಿದ್ದರೆ, ಅಕಾಲಿಕವಾಗಿ ನೆತ್ತಿನೀರು ಹೋಗಲು ಆರಂಭಿಸಿದರೆ ಗರ್ಭಕೊರಳಿನ ಅಸಾಮರ್ಥ್ಯತೆ ಇದ್ದರೆ, ಮೂತ್ರಾಂಗವ್ಯೂಹ, ಯೋನಿ ಅಥವಾ ನೆತ್ತಿನೀರಿನ ಸೋಂಕುಗಳಿದ್ದಾಗಲೂ, ಅಕಾಲಿಕ ಪ್ರಸವ ಆಗಬಹುದು. ಇಷ್ಟಲ್ಲದೇ ದೀರ್ಘಾವಧಿ ಕಾಯಿಲೆಗಳಾದ ಮಧುಮೇಹ, ಏರುರಕ್ತದೊತ್ತಡ, ಮೂತ್ರಪಿಂಡ ಕಾಯಿಲೆ, ಬೊಜ್ಜು ಇತ್ಯಾದಿಗಳಿದ್ದಾಲೂ ಹಾರ್ಮೋನು ಅಸಮತೋಲನ ಇದ್ದಾಗಲೂ, ಗರ್ಭಕೋಶದ ಆಕಾರದಲ್ಲಿ ಯಾವುದೇ ತರಹದ ವ್ಯತ್ಯಾಸಗಳಿದ್ದಾಗಲೂ, ಕಸಕೆಳಗಿದ್ದಾಗ, ಅಥವಾ ಅವಧಿಗೆ ಮುನ್ನವೇ ಕಸಬಿಟ್ಟುಕೊಂಡು ರಕ್ತಸ್ರಾವವಾದಾಗ, ಗರ್ಭಿಣಿಯರ ವಯಸ್ಸು ಅತಿ ಕಡಿಮೆ ಅಥವಾ ಜಾಸ್ತಿ ಇದ್ದಾಗ (18 ವರ್ಷಕ್ಕೂ ಕಡಿಮೆ ಹಾಗೂ 35 ವರ್ಷಕ್ಕಿಂತ ಹೆಚ್ಚಿದ್ದಾಗ) ಹೀಗಾಗುವ ಸಾಧ್ಯತೆ ಹೆಚ್ಚು.

ಕೃತಕ ಗರ್ಭಧಾರಣೆಯಿಂದ ಗರ್ಭಧರಿಸಿದ್ದರೆ, ಜೆನಿಟಿಕ್ ಅಧ್ಯಯನಕ್ಕಾಗಿ ಆಮ್ನಿಯೋಸೆಂಟೆಸಿಸ್ ಅಥವಾ ಕೋರಿಯಾನಿಕ್ ಬಯಾಪ್ಸಿ ಇತ್ಯಾದಿ ಮಾಡಿದಾಗಲೂ, ಇನ್ನೂ ಕೆಲವೊಮ್ಮೆ ಆನುವಂಶೀಯ ಕಾರಣದಿಂದ ಅಕಾಲಿಕೆ ಹೆರಿಗೆ ಸಂಭವಿಸುತ್ತದೆ. ಇದನ್ನು ತಡೆಗಟ್ಟಲು ತಜ್ಞವೈದ್ಯರ ಮೇಲ್ವಿಚಾರಣೆಯಲ್ಲಿ ಸೂಕ್ತ ಪ್ರಸವಪೂರ್ವ ತಪಾಸಣೆ, ಅವಶ್ಯ ಬಂದಲ್ಲಿ ಗರ್ಭಕೊರಳಿಗೆ ಹೊಲಿಗೆ ಹಾಕುವುದು, ಪ್ರೊಜೆಸ್ಟರಾನ್ ಹಾರ್ಮೋನು ಇಂಜೆಕ್ಷನ್‌ಗಳಿಂದ ಚಿಕಿತ್ಸೆ ಕೊಡುವುದು, ಸೋಂಕುಗಳಿದ್ದರೆ ಸೂಕ್ತ ಆಂಟಿಬಯಾಟಿಕ್ಸ್ ಮೂಲಕ ಚಿಕಿತ್ಸೆ ಕೊಡುವುದು, ಗರ್ಭಧಾರಣೆಯಲ್ಲಿ ಮಧುಮೇಹ, ಏರುರಕ್ತದೊತ್ತಡ ಇತ್ಯಾದಿಗಳಿದ್ದಾಗ ಅವುಗಳನ್ನು ನಿಯಂತ್ರಣದಲ್ಲಿಡಬೇಕು. ಸಾಕಷ್ಟು ವಿಶ್ರಾಂತಿ, ಹೆರಿಗೆ ಮುಂದೂಡುವ ಔಷಧಗಳ ಬಳಕೆ, ಶ್ವಾಸಕೋಶದ ಬೆಳವಣಿಗೆಗೆ ಸೂಕ್ತ ಸ್ಟೀರಾಯಿಡ್ ಬಳಕೆ ಇತ್ಯಾದಿಗಳಿಂದ ತಜ್ಞವೈದ್ಯರು ಅಕಾಲಿಕ ಹೆರಿಗೆ ತಡೆಗಟ್ಟಲು ಪ್ರಯತ್ನಿಸುತ್ತಾರೆ. ಮುಂಜಾಗ್ರತೆ ವಹಿಸಿ ಇನ್ನೊಂದು ಮಗು ಪಡೆಯಲು ಪ್ರಯತ್ನಿಸಿ. ನಿಮಗೆ ಆದ ಹಾಗೇ ನಿಮ್ಮ ತಂಗಿಗೂ ಆಗಬೇಕೆಂದಿಲ್ಲ. ಹೆದರಬೇಡಿ. ಕಾಳಜಿ ಇರಲಿ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಸಾಧಕಿಯರು

ಅಚಲ ವಿಶ್ವಾಸದ ಅನಿತಾ

ಅಂಜಲಿ ರಾಮಣ್ಣ

ಮದುವೆಯಾದ ಕೂಡಲೇ ಜೀವನ ಸತ್ವವೇ ಅರ್ಥವಾಗಿ ಹೋಗುತ್ತದೆ ಎಂದು ನಂಬಿಕೊಂಡಿರುವ ಮತ್ತು ಹಾಗೆಯೇ ವರ್ತಿಸುವ ಸ್ನೇಹಿತೆಯರು ನಮ್ಮ ನಡುವೆಯೇ ಓಡಾಡುತ್ತಿರುತ್ತಾರೆ. ಒಂದು ಮಗುವಾಗಿ ಬಿಟ್ಟರಂತೂ ಮುಗಿದೇ ಹೋಯಿತು. ಸ್ವಬದುಕಿನೆಡೆಗೆ ಎಲ್ಲಾ ನಿಜಾರ್ಥದ ಆಸಕ್ತಿಯನ್ನು ಕಳೆದುಕೊಂಡು ಇಲ್ಲ ಸಲ್ಲದ ಕಾರಣ ಕೊಟ್ಟು ಮೈಯನ್ನು ಯದ್ವಾತದ್ವ ಬೆಳೆಸಿಕೊಂಡು ಮನಮುಟ್ಟದ appearance, approach ಮತ್ತು acceptance ಜೊತೆಗೆ ಹೊಂದಾಣಿಕೆ ಮಾಡಿಕೊಂಡಿರುತ್ತಾರೆ.

ಇಂತಹ ಮಹಿಳೆಯರನ್ನು ಹೊಡೆದೆಬ್ಬಿಸಿ ಜೀವಜಲವನ್ನು ಸಿಂಪಡಿಸುವಂತೆ ಇದ್ದಾರೆ ಅನಿತಾ ರಾಠಿ. 42 ವರ್ಷ ವಯಸ್ಸಿನ ಅನಿತಾಗೆ ಮದುವೆಯಾಗಿ 22 ವರ್ಷಗಳು. ಮೂರು ಮಕ್ಕಳ ತಾಯಿ. ತೂಕ ಹೆಚ್ಚಾಗಿ ಆರೋಗ್ಯ ದೂರವಾಗಲು ಆರಂಭವಾದಾಗ ರಾಜಸ್ಥಾನದ ಬಾರ್ಮರ್ ಜಿಲ್ಲೆಯ ಅನಿತಾ ಜಿಮ್‌ಗೆ ಸೇರಿಕೊಳ್ಳುತ್ತಾರೆ. ಬೆಳಗಿನ ಜಾವ 4 ಗಂಟೆಗೆ ಎದ್ದು ಸಂಸಾರದ ಜವಾಬ್ದಾರಿ ನಿರ್ವಹಿಸಿ 3 ಗಂಟೆಗಳ ಕಾಲ ತಮ್ಮ ದೇಹದ ಮೆಲೆ ವ್ಯಯಿಸುವ ಅನಿತಾ ಭಾರ ಎತ್ತುವುದರಲ್ಲಿ ಗಟ್ಟಿಗಿತ್ತಿ ಎನ್ನುವುದನ್ನು ಮನಗೊಂಡ ಆಕೆಯ ಜಿಮ್ ತರಬೇತುದಾರರು ಹೆಚ್ಚಿನ ಗಮನಕೊಟ್ಟು ಆಕೆಯನ್ನು ಭಾರ ಎತ್ತುವ ಸ್ಪರ್ಧೆಗೆ ಸಿದ್ಧಳಾಗುವಂತೆ ತಯಾರು ಮಾಡುತ್ತಾರೆ.

ತನಗೆ ತಾನೇ ಸಖ ಎನ್ನುವುದನ್ನು ಬಲವಾಗಿ ನಂಬಿಕೊಂಡ ಅನಿತಾ ರಾಜಸ್ಥಾನದ ಕೋಟಾದಲ್ಲಿ ನಡೆದ ರಾಜ್ಯ ಮಟ್ಟದ ಭಾರ ಎತ್ತುವಿಕೆ ಸ್ಪರ್ಧೆಯಲ್ಲಿ ಚಿನ್ನದ ಪದಕ ಗಳಿಸುತ್ತಾರೆ. ಔರಂಗಾಬಾದಿನಲ್ಲಿ ನಡೆದ ಸ್ಪರ್ಧೆಯಲ್ಲೂ ವಿಜಯಿ ಈಕೆ. ನಂತರ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಭಾರ ಎತ್ತುವ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದಲ್ಲಿ ಬೆಳ್ಳಿ ಪದಕ ಗಳಿಸುತ್ತಾರೆ. ಅನಿತಾ ಇದೇ ವರ್ಷದ ಮೇ ತಿಂಗಳಲ್ಲಿ ಅಮೆರಿಕದಲ್ಲಿ ನಡೆದ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿ ಬಂದಿದ್ದಾರೆ. ಇಂತಹ ಸ್ಫೂರ್ತಿ ತುಂಬುವ ಕಥೆಗಳನ್ನು ಕೇಳಿದಾಗ 'ಅವಳಿಗೇನು ಕುಟುಂಬದ ಸಪೋರ್ಟ್ ಇರತ್ತೆ. ನಮಗೆ ಹಾಗಿಲ್ಲವಲ್ಲ' ಗೊಣಗುವವರೇ ಹೆಚ್ಚು. ಇಲ್ಲಿ ಬಂಧನವೇ ನಿಜಾರ್ಥದ ಬಿಡುಗಡೆ ಎನ್ನುವುದನ್ನು ಅರ್ಥ ಮಾಡಿಕೊಂಡು ತನ್ನದೇ ಮನದ ಬಾವಿಯ ಹೂಳನ್ನು ತಾನೇ ಎತ್ತುವ ಮಹಿಳೆ ಎಂದೂ ನೆನಪಿನಲ್ಲಿ ಉಳಿಯಬಲ್ಲಳು. ಜೀವನ ಒಂದು hurdle race. ಅದಕ್ಕೇ ಇಷ್ಟು ಸುಂದರ ಎನ್ನುವುದನ್ನು ಮುಂದಿನವರಿಗೂ ಕಲಿಸಿಕೊಡಬಲ್ಲಳು.

ಅನಿತಾ ರಾಠಿ

ಅನಿತಾ ರಾಠಿ

ವಿಜ್ಞಾನ, ಸಂಗೀತದ ಜುಗಲ್‌ಬಂದಿ 'ಫಣಿವೇಣಿ'

ಫಣಿವೇಣಿ ಉದಯಶಂಕರ್

ಸುಧೀರ್ ಕುಮಾರ್ ಎಚ್.ಕೆ

ಅಪಾರ ಶ್ರಮ, ಆಸಕ್ತಿ ಬೇಡುವ ವಿಜ್ಞಾನ ಹಾಗೂ ಸಂಗೀತ ಕ್ಷೇತ್ರಗಳಲ್ಲಿ ಸಾಧನೆ ಸುಲಭದ ಮಾತಲ್ಲ. ಎರಡನ್ನೂ ಒಟ್ಟಿಗೆ ಕೊಂಡೊಯ್ಯುವುದಂತೂ ಸಾಹಸವೇ ಸರಿ. 67ರ ಹರೆಯದ ಭೌತಶಾಸ್ತ್ರಜ್ಞೆ, ಕರ್ನಾಟಕ ಸಂಗೀತ ಗಾಯಕಿ ಫಣಿವೇಣಿ ಉದಯಶಂಕರ್ ಅವರ ಸಾಧನೆ ಈ ಎರಡೂ ಕ್ಷೇತ್ರದಲ್ಲಿ ಮಿಳಿತಗೊಂಡಿದೆ. ನ್ಯಾಷನಲ್ ಸೈನ್ಸ್ ಅಕಾಡೆಮಿಯು ಇತ್ತೀಚೆಗೆ ಬಿಡುಗಡೆಗೊಳಿಸಿದ 'ವುಮೆನ್ ಶೇಪಿಂಗ್ ಸೈಂಟಿಫಿಕ್ ಫ್ರಾಂಟಿಯರ್ಸ್' ಪುಸ್ತಕದಲ್ಲಿನ 27 ಸಾಧಕ ಮಹಿಳಾ ವಿಜ್ಞಾನಿಗಳಲ್ಲಿ ಅವರೂ ಒಬ್ಬರೆಂಬುದು ವಿಶೇಷ.

ಸಂಗೀತ ಕ್ಷೇತ್ರದಲ್ಲಿ ಮಹಿಳೆಯರು ಮುಂದಿದ್ದರೂ ವಿಜ್ಞಾನ ಕ್ಷೇತ್ರವನ್ನೂ ವೃತ್ತಿಯಾಗಿಸಿಕೊಂಡ ಗಾಯಕಿಯರೂ ವಿರಳ. ಖಗೋಳ ಭೌತಶಾಸ್ತ್ರದಲ್ಲಿ ಪಿಎಚ್‌ಡಿ, ವಿವಿಧ ಕಾಲೇಜುಗಳಲ್ಲಿ 35 ವರ್ಷಗಳ ಉಪನ್ಯಾಸ ಅನುಭವ, ದೇಶ–ವಿದೇಶಗಳಲ್ಲಿ 46 ಸಂಕಿರಣ, ಸಮಾವೇಶಗಳಲ್ಲಿ ಪಾಲ್ಗೊಂಡಿರುವ, 29 ಸಂಶೋಧನಾ ಲೇಖನಗಳನ್ನು ಪ್ರಕಟಿಸಿರುವ ಫಣಿವೇಣಿ, 'ಸೂಪರ್‌ನೋವಾ ಫೌಂಡೇಶನ್'ನಲ್ಲಿ ಮಾರ್ಗದರ್ಶಕರಾಗಿ ಭೌತಶಾಸ್ತ್ರ ಕ್ಷೇತ್ರದಲ್ಲಿ ಯುವ ಮಹಿಳೆಯರ ಸಾಧನೆಗೆ ಪ್ರೇರೇಪಿಸುತ್ತಿದ್ದಾರೆ. 54 ಯಶಸ್ವಿ ಸಂಗೀತ ಕಛೇರಿಗಳನ್ನೂ ನೀಡಿದ್ದು, ಆನ್‌ಲೈನ್‌ನಲ್ಲಿ ಸಂಗೀತ ತರಗತಿ ನಡೆಸುತ್ತಾರೆ.

ಎರಡು ಭಿನ್ನ ಹಾದಿಗಳಲ್ಲೂ ಸಮನ್ವಯ ಸಾಧಿಸಿದ್ದು, ಪ್ರಸ್ತುತ ಬೆಂಗಳೂರಿನ ಪೂರ್ಣಪ್ರಜ್ಞ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಗೌರವ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಭಾರತೀಯ ಭೌತಶಾಸ್ತ್ರ ಅಸೋಸಿಯೇಷನ್, ಭಾರತೀಯ ಭೌತಶಾಸ್ತ್ರ ಶಿಕ್ಷಕರ ಅಸೋಸಿಯೇಷನ್ ಮತ್ತು ಭಾರತೀಯ ಖಗೋಳಶಾಸ್ತ್ರ ಸೊಸೈಟಿಯ ಆಜೀವ ಸದಸ್ಯರೂ ಹೌದು. ಅವರ ಮಾರ್ಗದರ್ಶನದಲ್ಲಿ ಕಳೆದ ಜುಲೈನಲ್ಲಿ ಇಬ್ಬರು ವಿದ್ಯಾರ್ಥಿನಿಯರು ಪಿಎಚ್‌ಡಿ ಪಡೆದಿದ್ದಾರೆ.

'ಬಾಲ್ಯದ ದಿನಗಳನ್ನು ಬಳ್ಳಾರಿಯಲ್ಲಿ ಕಳೆದಿದ್ದು, ಅಲ್ಲಿಯೇ ಪದವಿವರೆಗೆ ಶಿಕ್ಷಣ ಪಡೆದೆ. ಬಾಲ್ಯದಿಂದಲೇ ಸಂಗೀತಾಭ್ಯಾಸ ನಡೆಸುತ್ತಿದ್ದೇನೆ. ಬಳ್ಳಾರಿ ಬ್ರದರ್ಸ್ ಎಂದು ಪ್ರಸಿದ್ಧರಾದ ಶೇಷಗಿರಿ ಆಚಾರ್, ವೆಂಕಟೇಶ್ ಆಚಾರ್ ಮನೆಗೆ ಬಂದು ಪಾಠ ಮಾಡುತ್ತಿದ್ದರು. ಅಣ್ಣನ 'ಬಾಲಾಜಿ ಆರ್ಕೆಸ್ಟ್ರಾ'ದಲ್ಲಿ ಹಾಗೂ ಕೆಲ ಫಿಲ್ಮ್‌ಗಳಿಗೂ ಹಾಡಿದ್ದೆ. ಸಂಗೀತದಲ್ಲೇ ಮುಂದುವರಿಯುವ ಆಸಕ್ತಿಯಿದ್ದರೂ ಪೋಷಕರು ಓದನ್ನು ಮುಂದುವರಿಸುವಂತೆ ತಿಳಿಸಿದ್ದರು' ಎಂದು ಫಣಿವೇಣಿ ನೆನಪಿಸಿಕೊಳ್ಳುತ್ತಾರೆ. 'ಉಪನ್ಯಾಸಕ ವೃತ್ತಿ ನಿರ್ವಹಿಸುತ್ತಲೇ, ನೀಲಾ ರಾಮಗೋಪಾಲ್ ಅವರ ಶಿಷ್ಯೆಯಾಗಿ ಇನ್ನಷ್ಟು ಸಂಗೀತ ಅಭ್ಯಾಸ ಮಾಡಿದೆ. ಆಲ್ ಇಂಡಿಯಾ ರೇಡಿಯೊಗೂ ಹಾಡಿದ್ದೇನೆ. 1990ರಿಂದ ಸಂಗೀತ ತರಗತಿ, ಕಛೇರಿ ನೀಡುತ್ತಿದ್ದೇನೆ. ಕೋವಿಡ್ ಬಳಿಕ ಆನ್‌ಲೈನ್ ಮೂಲಕ ತರಗತಿ ನಡೆಯುತ್ತಿವೆ. 22 ವರ್ಷಗಳ ಸಂಶೋಧನೆಯ ಅನುಭವವೂ ಇದೆ. ಸಂಗೀತ, ಉಪನ್ಯಾಸ ಮತ್ತು ಸಂಶೋಧನೆಯ ಕೆಲಸಗಳು ಭಿನ್ನವಾದರೂ, ಒತ್ತಡ ನಿವಾರಣೆಯಲ್ಲಿ ಈ ಮೂರರ ಮಿಶ್ರಣ ಸಹಕಾರಿ' ಎನ್ನುತ್ತಾರೆ ಅವರು.

'ಪತಿ ಉದಯಶಂಕರ್ ಬಿಎಚ್‌ಇಎಲ್ ಪ್ರಧಾನ ವ್ಯವಸ್ಥಾಪಕರಾಗಿ ನಿವೃತ್ತರಾಗಿದ್ದಾರೆ. ಇಬ್ಬರು ಪುತ್ರಿಯರು ಉದ್ಯೋಗದಲ್ಲಿದ್ದಾರೆ. ನಾನು ಉದ್ಯೋಗಸ್ಥ ಮಹಿಳೆ. ಹೆಚ್ಚು ಸಮಯ ಬೇಡುವ ಸಂಗೀತದಂಥ ಪ್ರವೃತ್ತಿ ಇದೆ. ಈ ನಡುವೆ ಮನೆ ನಿರ್ವಹಣೆ ಕಷ್ಟವೆನಿಸಿದರೂ, ಸಮಯವನ್ನು ಉತ್ತಮವಾಗಿ ಬಳಸಿಕೊಂಡರೆ ಮತ್ತು ಕುಟುಂಬದ ಸಹಕಾರವಿದ್ದರೆ ಎಲ್ಲವೂ ಸಾಧ್ಯ' ಎನ್ನುತ್ತಾರೆ. 'ಭೌತಶಾಸ್ತ್ರ ಮತ್ತು ಸಂಗೀತ ಕ್ಷೇತ್ರದಲ್ಲಿ ಅಂತರಶಿಸ್ತೀಯ ಪಿಎಚ್‌ಡಿ ಮಾಡುವ ಉದ್ದೇಶವೂ ಅವರಿಗಿದೆ. ಸಂಗೀತ ತರಗತಿ, ಕಛೇರಿ ಮತ್ತು ಸಂಶೋಧನೆ ಚಟುವಟಿಕೆಗಳು ನಿರಂತರ ನಡೆಯುತ್ತಿವೆ. ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಅವರು ನೀಡಿದ ಕೊಡುಗೆಗೆ ಇಂದಿರಾಗಾಂಧಿ ಸದ್ಭಾವನ ಪ್ರಶಸ್ತಿ, ರಾಜೀವ್ ಗಾಂಧಿ ಎಕ್ಸಲೆನ್ಸ್ ಚಿನ್ನದ ಪದಕವೂ ದೊರೆತಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123,69	4,693	4,189
ಹಾರಂಗಿ	2,859	2,857.58	919	1,200
ಕಬಿನಿ	2,284	2,282.32	2,757	2,350
ಹೇಮಾವತಿ	2,922	2,921.05	7,229	5,505
ಲಿಂಗನಮಕ್ಕಿ	1,819	1,816.75	7,807	7,668
ಸೂಪಾ (ಮೀ)	564	558.42	1,628	1,628.12
ಮಾಣಿ	595	589.30	1,878	0
ತುಂಗಭದ್ರಾ	1,633	1,627.01	37,489	9,488
ಮಲಪ್ರಭಾ	2,079.50	2,077.20	2,706	1,114
ಘಟಪ್ರಭಾ	2,175	2,174.30	3,209	5,627
ಭದ್ರಾ *	186	180.02	6,130	5,841
ಆಲಮಟ್ಟಿ (ಮೀ)	519.60	519.60	44,793	44,793
ನಾರಾಯಣಪುರ (ಮೀ)	492.25	491.88	30,000	6,000

* ನೆಲಮಟ್ಟದಿಂದ

ಕಾರವಾರ ಬೈತಕೋಲ ಮೀನುಗಾರಿಕೆ ಬಂದರು ಸಮೀಪ ಸಮುದ್ರದಲ್ಲಿ ಲಂಗರು ಹಾಕಿ ನಿಂತ ಮಲ್ಪೆ, ಕೇರಳ ರಾಜ್ಯದ ಮೀನುಗಾರಿಕಾ ಬೋಟ್‌ಗಳು
—ಪ್ರಜಾವಾಣಿ ಚಿತ್ರ: ದಿಲೀಪ್ ರೇವಣಕರ್

ಅರಬ್ಬಿ ಸಮುದ್ರ ಪ್ರಕ್ಷುಬ್ಧ: ಬೋಟ್‌ಗಳಿಗೆ ಕಾರವಾರ ಆಸರೆ

ಪ್ರಜಾವಾಣಿ ವಾರ್ತೆ

ಕಾರವಾರ: ಯಾಂತ್ರೀಕೃತ ಮೀನುಗಾರಿಕೆ ಆರಂಭದ ಅವಧಿಯಲ್ಲೇ ಮೀನುಗಳ ಕೊರತೆ ಎದುರಿಸಿದ್ದ ಮೀನುಗಾರರಿಗೆ ಹವಾಮಾನ ವೈಪರೀತ್ಯ ಮತ್ತೆ ಏಟು ನೀಡಿದೆ.

ಅರಬ್ಬಿ ಸಮುದ್ರ ಪ್ರಕ್ಷುಬ್ಧಗೊಂಡಿದ್ದು, ಎರಡು ದಿನಗಳಿಂದ ಇಲ್ಲಿನ ಬೈತಕೋಲ ಮೀನುಗಾರಿಕೆ, ವಾಣಿಜ್ಯ ಬಂದರುಗಳ ಸಮೀಪ ನೂರಾರು ಮೀನುಗಾರಿಕೆ ಬೋಟುಗಳು ಲಂಗರು ಹಾಕಿವೆ.

ಸ್ಥಳೀಯ ಬೋಟ್‌ಗಳಲ್ಲದೆ ಮಂಗಳೂರು, ಮಲ್ಪೆ, ನೆರೆಯ ತಮಿಳುನಾಡು, ಕೇರಳದ ರಾಜ್ಯದ ಹತ್ತಾರು ಮೀನುಗಾರಿಕಾ ಬೋಟ್‌ಗಳೂ ನಿಂತಿವೆ. ಆಗಸ್ಟ್ 2ರಿಂದ ಯಾಂತ್ರೀಕೃತ ಮೀನುಗಾರಿಕೆ ಆರಂಭಗೊಂಡಿದೆ. ಮೀನು ಸಿಗದ ಕಾರಣಕ್ಕೆ ಕೆಲ ದಿನ ಬೋಟ್‌ಗಳು ಮೀನುಗಾರಿಕೆಗೆ ಇಳಿದಿರಲಿಲ್ಲ.

‘ಆಳ ಸಮುದ್ರದ ಮೀನುಗಾರಿಕೆಗೆ ಬಂದ ವೇಳೆಯೇ ಸಮುದ್ರ ಪ್ರಕ್ಷುಬ್ಧಗೊಳ್ಳುವ ಮುನ್ಸೂಚನೆ ಸಿಕ್ಕಿತು. ಆಗಸ್ಟ್ ಆರಂಭದಿಂದ ನಿರೀಕ್ಷಿತ ಪ್ರಮಾಣದಲ್ಲಿ ಮೀನು ಲಭಿಸುತ್ತಿಲ್ಲ’ ಎಂದು ಮಲ್ಪೆಯ ಪರ್ಸಿನ್ ಬೋಟ್‌ನಲ್ಲಿ ಕೆಲಸ ಮಾಡುವ ಭಟ್ಕಳದ ಮಂಜು ಮೊಗೇರ ತಿಳಿಸಿದರು.

‘ಇನ್ನೂ 3 ದಿನ ಸಮುದ್ರ ಪ್ರಕ್ಷುಬ್ಧ ಸ್ಥಿತಿಯಲ್ಲಿ ಇರಲಿದೆ. ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಎಚ್ಚರಿಕೆ ನೀಡಲಾಗಿದೆ’ ಎಂದು ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಬಿಪಿನ್ ಬೋಪಣ್ಣ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಪರ್ವತಗಳಿಂದ ಆವರಿಸಿರುವ ಕಾರಣ ಕಾರವಾರ ಬಂದರು ನೈಸರ್ಗಿಕವಾಗಿ ಸುರಕ್ಷಿತವಾಗಿದೆ. ಸಮುದ್ರ ಪ್ರಕ್ಷುಬ್ಧಗೊಂಡಾಗಲೆ ಹೊರ ಜಿಲ್ಲೆ ಮತ್ತು ಹೊರರಾಜ್ಯದ ಬೋಟುಗಳು ಇಲ್ಲಿಗೆ ಬಂದರು ಲಂಗರು ಹಾಕುತ್ತವೆ’ ಎಂದು ಮೀನುಗಾರ ಮುಖಂಡ ಗಣಪತಿ ಮಾಂಗ್ರೆ ಹೇಳಿದರು.

ಗುಡ್ಡದಲ್ಲಿ ಬಿರುಕು: ಆತಂಕ

ಪ್ರಜಾವಾಣಿ ವಾರ್ತೆ

ಗೋಕರ್ಣ: ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಬರ್ಗಿ ಗ್ರಾಮದ ಕುರಿಗದ್ದೆ ಬಳಿ, ಗುಡ್ಡದಲ್ಲಿ ಬಿರುಕು ಮೂಡಿದ್ದು ಸ್ಥಳೀಯ ನಿವಾಸಿಗಳಲ್ಲಿ ಆತಂಕ ಉಂಟು ಮಾಡಿದೆ.

ಗುಡ್ಡದ ಕೆಳಗೆ ಭಾಸ್ಕರ್ ಪಟಗಾರ ಎಂಬವರ ಮನೆ ಸೇರಿ ಹಲವರ ಮನೆಗಳಿವೆ. ಶುಕ್ರವಾರ ಬೆಳಿಗ್ಗೆ ಬಿರುಕು ಮೂಡಿದ್ದು ಕಂಡು ಬಂದಿದೆ.

‘ರಭಸದ ಮಳೆ ಬಂದರೆ ಬಿರುಕು ಬಿಟ್ಟ ಭಾಗ ಕುಸಿಯಬಹುದು’ ಎಂಬ ಆತಂಕವನ್ನೂ ವ್ಯಕ್ತಪಡಿಸಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ಸಮೀಪದ ಬರ್ಗಿಯ ಕುರಿಗದ್ದೆ ಬಳಿ ಗುಡ್ಡದಲ್ಲಿ ಬಿರುಕು ಉಂಟಾಗಿದೆ

ಐದು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಹಾಗೂ ಉತ್ತರ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಶನಿವಾರ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಐದು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಉತ್ತರ ಕನ್ನಡ, ಕಲಬುರಗಿ, ಯಾದಗಿರಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಕರಾವಳಿಯ ಉಳಿದ ಜಿಲ್ಲೆಗಳ ಬಹುತೇಕ ಕಡೆ ಹಾಗೂ ಉತ್ತರ ಒಳನಾಡಿನ ಉಳಿದ ಜಿಲ್ಲೆಗಳ ಕೆಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿ ಉದ್ದಕ್ಕೂ ಬಿರುಗಾಳಿಯಿಂದ ಕೂಡಿದ ಹವಾಮಾನವು ಮೇಲುಗೈ ಸಾಧಿಸುವ ಸಾಧ್ಯತೆಯಿದೆ. ಗಂಟೆಗೆ 45 ಕಿ.ಮೀ.ಯಿಂದ 55 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಆದ್ದರಿಂದ ಮೀನುಗಾರರು ಎಚ್ಚರ ವಹಿಸಬೇಕು ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಭಾನುವಾರ ಹಾಗೂ ಸೋಮವಾರವೂ ಕರಾವಳಿಯ ಜಿಲ್ಲೆಗಳಲ್ಲಿ ಭಾರಿ ಮಳೆ ಮುಂದುವರಿಯುವ ಸಂಭವವಿದ್ದು, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಸರ್ಕಾರಿ ನಾಮಫಲಕಗಳಲ್ಲಿ ಕನ್ನಡ ಕಡ್ಡಾಯ: ಸಿ.ಎಸ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಎಲ್ಲಾ ಇಲಾಖೆ, ಆಯುಕ್ತಾಲಯ, ನಿರ್ದೇಶನಾಲಯ, ನಿಗಮ, ಮಂಡಳಿ, ಪ್ರಾಧಿಕಾರಗಳ ಆವರಣಗಳಲ್ಲಿನ ಹೆಸರು, ಪದನಾಮ, ಸೇವಾ ಅವಧಿಯ ನಾಮಫಲಕಗಳು, ಮಾರ್ಗಗಳ ಸೂಚನಾ ಫಲಕಗಳು, ಇನ್ನಿತರೇ ನಾಮಫಲಕಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಪ್ರದರ್ಶಿಸಬೇಕು ಎಂದು ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚಿಸಿದ್ದಾರೆ.

ರಾಜ್ಯದಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿರುತ್ತದೆ. ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿಗಾಗಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ, 2022 ಹಾಗೂ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಅಧಿನಿಯಮ, 2024 ಜಾರಿಗೆ ಬಂದಿದೆ. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ, 2022 ರ ಅನ್ವಯ ಕನ್ನಡ ಭಾಷೆಯು ರಾಜ್ಯದ ಹಾಗೂ ಸ್ಥಳೀಯ ಪ್ರಾಧಿಕಾರದ ಅಧಿಕೃತ ಭಾಷೆಯಾಗಿದೆ ಎಂದಿದ್ದಾರೆ.

ತೀರಾ ಅನಿವಾರ್ಯವಿದ್ದಲ್ಲಿ ಮಾತ್ರ ಕಡ್ಡಾಯವಾಗಿ ಕನ್ನಡ ಭಾಷೆಯು ಶೇ 60 ರಷ್ಟು ನಾಮಫಲಕದ ಮೇಲ್ಭಾಗದಲ್ಲಿರುವಂತೆ ಹಾಗೂ ಶೇ 40 ರಷ್ಟು ಆಂಗ್ಲಭಾಷೆಯಲ್ಲಿ ಪ್ರದರ್ಶಿಸಲು ಅಗತ್ಯ ಕ್ರಮ ವಹಿಸಲು ತಿಳಿಸಿದ್ದಾರೆ.

ತುಂಗಾಭದ್ರಾ: 6 ದಿನದಲ್ಲಿ 12 ಟಿಎಂಸಿ ಅಡಿ ನೀರು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯಲ್ಲಿ 19ನೇ ಗೇಟ್ ಇದ್ದ ಕಡೆ, ತಾತ್ಕಾಲಿಕ ಗೇಟ್ ಅಳವಡಿಸಿ 6 ದಿನ ಕಳೆದಿದ್ದು, 12 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಅಣೆಕಟ್ಟೆ ನೀರಿನ ಮಟ್ಟ ಸದ್ಯ 1,627.01 ಅಡಿ (ಗರಿಷ್ಠ 1,633 ಅಡಿ) ಇದೆ. ಗರಿಷ್ಠ 105.78 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 83.24 ಟಿಎಂಸಿ ಅಡಿ ನೀರಿದೆ.

ಕಾಲುವೆಗಳಲ್ಲಿ ಸರಾಸರಿ 9 ಸಾವಿರ ಕ್ಯುಸೆಕ್ ನೀರು ಹರಿಯುತ್ತಿದ್ದು, ಒಳಹರಿವಿನ ಪ್ರಮಾಣ ಸದ್ಯ ಸರಾಸರಿ 37,489 ಕ್ಯುಸೆಕ್ ಇದೆ. 4 ದಿನಗಳಲ್ಲಿ 90 ಟಿಎಂಸಿ ಅಡಿ ನೀರು ಸಂಗ್ರಹವಾಗುವ ನಿರೀಕ್ಷೆ ಇದೆ.

ಇದರಿಂದ ಮೊದಲ ಬೆಳೆಗೆ ನೀರು ಪೂರ್ಣಪ್ರಮಾಣದಲ್ಲಿ ಸಿಗಲಿದೆ. ಕುಡಿಯುವ ನೀರು, ಉದ್ಯಮಗಳಿಗೂ ನೀರು ಖಾತ್ರಿಯಾಗಲಿದೆ. ಈ ಬಾರಿ ಹಿಂಗಾರು ಮಳೆ ಉತ್ತಮವಾಗಿ ಸುರಿದರೆ, ಮತ್ತೆ 50ರಿಂದ 60 ಟಿಎಂಸಿ ಅಡಿ ನೀರು ಸಂಗ್ರಹವಾಗಿ ಎರಡನೇ ಬೆಳೆಗೂ ನೀರು ಲಭಿಸುವ ನಿರೀಕ್ಷೆ ಇದೆ ಎನ್ನಲಾಗಿದೆ.

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–560001.
ದೂರವಾಣಿ: 080–22867172/22866302 ಫ್ಯಾಕ್ಸ್: 080–22863576 /22861665
ಇ–ಮೇಲ್: sedmatech@gmail.com Website: www.municipaladmn.gov.in

No. 1350363DMA/TECH/INDC(TDR)/01/2024 Date: 23.08.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಇಂದಿರಾ ಕ್ಯಾಂಟೀನ್ ಯೋಜನೆಯಡಿ ಅಡುಗೆ ಉಪಕರಣ ಹಾಗೂ ಪೀಠೋಪಕರಣಗಳನ್ನು ಖರೀದಿಸಲು ನಾಲ್ಕು ಕಂದಾಯ ವಿಭಾಗವಾರು ಈ ಕೆಳಕಂಡಂತೆ ಟೆಂಡರ್ ಕರೆಯಲು ಉದ್ದೇಶಿಸಲಾಗಿದೆ.

ಕ್ರ ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	Supply, Installation and Commissioning of Kitchen & Canteen Equipments to Indira Canteens in Urban Local Bodies Bangalore Urban, Bangalore Rural, Chikkaballapura, Kolar, Ramanagara, Tumkur, Chitradurga, Davanagere & Shivamogga Districts in Karnataka State **(Package 1)**	1708.88
2.	Supply, Installation and Commissioning of Kitchen & Canteen Equipments to Indira Canteens in Urban Local Bodies Mysore, Chamarajanagr, Kodagu, Chikkamangalore, Dakshina kannada, Udupi, Mandya & Hassan Districts in Karnataka State **(Package 2)**	1499.56
3.	Supply, Installation and Commissioning of Kitchen & Canteen Equipments to Indira Canteens in Urban Local Bodies Dharwad, Gadag, Haveri, Belagavi, Uttara kannada, Bagalkote & Vijayapura Districts in Karnataka State **(Package 3)**	3476.55
4.	Supply, Installation and Commissioning of Kitchen & Canteen Equipments to Indira Canteens in Urban Local Bodies Ballari, Koppal, Raichur, Vijayanagar, Kalaburgi, Bidar & Yadgiri Districts in Karnataka State **(Package 4)**	1772.74

ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ ಪ್ರಚುರಪಡಿಸಲಾಗಿದ್ದು, ಇ–ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಆಸಕ್ತ ಬಿಡ್‌ದಾರರು / ಏಜೆನ್ಸಿದಾರರು ಭಾಗವಹಿಸಲು ಕೋರಲಾಗಿದೆ. ಯಾವುದೇ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರವೇ ಪಡೆಯುವುದು.

ಸಹಿ/–
ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು

DIPR/CP/1645/Zen/2024-25

ಕಂದಾಯ ಇಲಾಖೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು–560001
E-Mail: splocaima21@gmail.com ದೂರವಾಣಿ ಸಂಖ್ಯೆ : 080–29565353, 29604556

No. SPLOCA/ADM/30/2024-25 Date: 22.08.2024

ಪ್ರಕಟಣೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ಗಳವರ ಕಛೇರಿಗೆ ಮಂಜೂರಾಗಿ ನೇಮಕವಾಗದೇ ಖಾಲಿ ಇರುವ ಈ ಕೆಳಕಂಡ ವಿವಿಧ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆಸಕ್ತ ವೈಯಕ್ತಿಕ ವ್ಯಕ್ತಿಗಳಿಂದ **Resume** ಅನ್ನು ಆಹ್ವಾನಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ. **Last date of submission of Resume: 30.08.2024.**

ಹುದ್ದೆಗಳ ವಿವರ:

Sl. No	Post/ Designation	Qualification	No. of Post	Contract wage per Month
1	Legal Typist	Basic: LLB, Registered at Bar Council of Karnataka, typing speed 40 WPM both English & Kannada. Ability to communicate in both Kannada & English	1	18,700/- with OT charges and Sitting fees as per Government norms (on outsource basis)

Sl. No	Post/ Designation	Qualification: Basic	Qualification: Preference	Relevant Experience: Basic	Relevant Experience: Preference	No. of Post	Contract wage per Month
1	IT personnel-2 Forensic Data Scientist	BE CSE/IS with certificate in Cyber Forensics and Cyber Law(CCCFL)	BE CSE/IS with PG Diploma in CCCFL	Minimum 1 Year as Data Scientist or Cyber Forensic Expert.	1 year in CA firm or forensic audit firm.	1	50,000/- Depending on qualification and experience.

The Position to be filled is a post created in the office of Special officer & Competent Authority, Financial Frauds Revenue Department Government of Karnataka vide Government Order No. RD45GRC2020(PIII) dated:25-08-2022 and is renewable year on year. It is a post on contract renewable on satisfactory performance with periodic enhancement of salary scales, **not permanent government service.**

ಸಹಿ/–
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳ ಕಛೇರಿ
ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು, ಬೆಂಗಳೂರು.

DIPR/CP/1623/Zenkar/2024-25

ಪುರಸಭೆ ಕಾರ್ಯಾಲಯ ಅಥಣಿ

ಡಾ॥ ಬಿ.ಆರ್ ಅಂಬೇಡ್ಕರ್ ವೃತ್ತದ ಹತ್ತಿರ, ಅಥಣಿ–591304
ಜಿ:ಬೆಳಗಾವಿ. ದೂರವಾಣಿ:08289–251137 ವೆಬಸೈಟ್:www.athanitown.mrc.gov.in

ಕ್ರಮ ಸಂಖ್ಯೆ:ಪುಸಅ:ಕಾಮಗಾರಿ:ಟೆಂಡರ:ಪುಅ:2024–25 ದಿನಾಂಕ:21 –08–2024

॥ ಟೆಂಡರ ಪ್ರಕಟಣೆ ॥ (ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)

ಅಥಣಿ ಪುರಸಭೆಗೆ ಸನ್ 2021–22, 2022–23, 2023–24 ಹಾಗೂ 2024–25 ನೇ ಸಾಲಿನ 15ನೇ ಹಣಕಾಸು ಮತ್ತು ಎಸ್.ಬಿ.ಎಮ್ 1.0 ಅನುದಾನದಡಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ/ ಪಂಚಾಯತರಾಜ/ ಕರ್ನಾಟಕ ಸರ್ಕಾರದ ಇಂಧನ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಸಿವ್ಹಿಲ್ ಗುತ್ತಿಗೆದಾರರು ಕೆಡಬ್ಲ್ಯೂ–1,2,3 ಪ್ರಕಾರ ಟೆಂಡರನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ ಬಿಡ್ಡ್ ಸಲ್ಲಿಸಬಹುದು. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಅ ನಂ	ಕಾಮಗಾರಿ ಇಂಡೆಂಟ್ ನಂ	ಅಂದಾಜು ಮೊತ್ತ (ರೂ.ಲಕ್ಷ ಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ (ರೂ.ಲಕ್ಷ ಗಳಲ್ಲಿ)	ಇ.ಎಂ.ಡಿ/ ಎಸ್‌ಡಿ ಮೊತ್ತ (ರೂ. ಗಳಲ್ಲಿ	ಮೀಸಲಾತಿ ಎಸ್.ಸಿ/ ಎಸ್‌ಟಿ/ ಇತರೆ ಗುತ್ತಿಗೆ ದಾರರು
	ಸನ್ 2024–25ನೇ ಸಾಲಿನ 15ನೇ ಹಣಕಾಸು ಅನುದಾನ				
1	DMA/2024-25/OW/WORK_INDENT26882	28.30	23.96	29950	ಎಸ್.ಸಿ
2	DMA/2024-25/WS/WORK_INDENT27398	10.00	8.47	21175	ಇತರೆ
	ಸನ್ 2023–24ನೇ ಸಾಲಿನ 15ನೇ ಹಣಕಾಸು ಅನುದಾನ				
3	DMA/2024-25/WS/WORK_INDENT26386	3.10	2.60	6500	ಇತರೆ
4	DMA/2024-25/WS/WORK_INDENT26387	5.00	4.19	10475	ಇತರೆ
5	DMA/2024-25/WS/WORK_INDENT26389	6.00	5.04	12600	ಇತರೆ
6	DMA/2024-25/WS/WORK_INDENT26391	4.90	4.12	5150	ಎಸ್.ಟಿ
7	DMA/2024-25/WS/WORK_INDENT26392	2.00	1.66	4150	ಇತರೆ
8	DMA/2024-25/WS/WORK_INDENT26393	5.00	4.19	10475	ಇತರೆ
9	DMA/2024-25/WS/WORK_INDENT26394	2.00	1.68	4200	ಇತರೆ
10	DMA/2024-25/WS/WORK_INDENT26395	4.90	4.10	5125	ಎಸ್.ಸಿ
	ಸನ್ 2022–23ನೇ ಸಾಲಿನ 15ನೇ ಹಣಕಾಸು ಅನುದಾನ				
11	DMA/2024-25/WS/WORK_INDENT26396	10.00	8.40	21000	ಇತರೆ
	ಸನ್ 2018–19ನೇ ಸಾಲಿನಲ್ಲಿ ಹಂಚಿಕೆಯಾದ ಘನತ್ಯಾಜ್ಯ ವಸ್ತು ನಿರ್ವಹಣೆಯ ಅನುದಾನ				
12	DMA/2024-25/WS/WORK_INDENT27408	87.78	74.37	148740	ಇತರೆ

ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ ದಿನಾಂಕ:05–09–2024 ಸಾಯಂಕಾಲ 5.00 ಘಂಟೆಯ ವರೆಗೆ.ಟೆಂಡರಗಳನ್ನು ತೆರೆಯುವ ದಿನಾಂಕ: 06–09–2024 ಸಾಯಂಕಾಲ 5.30 ಘಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ Website:www.athanitown.mrc.gov.in & https://kppp.karnataka.gov.in ವೆಬ್‌ಸೈಟನಲ್ಲಿ ನೋಡಬಹುದು

ಸಹಿ/–ಮುಖ್ಯಾಧಿಕಾರಿ ಪುರಸಭೆ ಅಥಣಿ
ಸಹಿ/–ಆಡಳಿತಾಧಿಕಾರಿಗಳು ಪುರಸಭೆ ಅಥಣಿ ಹಾಗೂ ಉಪವಿಭಾಗಾಧಿಕಾರಿಗಳು ಚಿಕ್ಕೋಡಿ

DIPR/BGM/RO-NO-680/KSMCA/2024-25

ಬಿಸಿಯೂಟ ಸೇವಿಸಿ 70ಕ್ಕೂ ಅಧಿಕ ಮಕ್ಕಳು ಅಸ್ವಸ್ಥ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಕುಷ್ಟಗಿ ತಾಲ್ಲೂಕಿನ ಬಿಜಕಲ್ ಗ್ರಾಮದ ಶಾಲೆಯಲ್ಲಿ ಶುಕ್ರವಾರ ಬಿಸಿಯೂಟ ಸೇವಿಸಿ ಸುಮಾರು 70ಕ್ಕೂ ಅಧಿಕ ಮಕ್ಕಳು ಅಸ್ವಸ್ಥಗೊಂಡಿದ್ದಾರೆ.

ಈ ಮಕ್ಕಳು ಗ್ರಾಮದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಓದುತ್ತಿದ್ದು, ಮಧ್ಯಾಹ್ನದ ನಂತರ ಮಕ್ಕಳಲ್ಲಿ ಏಕಾಏಕಿ ವಾಂತಿ ಕಾಣಿಸಿಕೊಂಡಿದೆ. ಸಮೀಪದ ದೋಟಿಹಾಳ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕುಷ್ಟಗಿಯ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ.

‘ಊಟದಲ್ಲಿನ ದೋಷದಿಂದ ಸಮಸ್ಯೆಯಾಗಿದ್ದು, ಮಕ್ಕಳ ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆ ಅಗತ್ಯ ತುರ್ತು ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ಕುಷ್ಟಗಿ ತಹಶೀಲ್ದಾರ್ ಅಶೋಕ ಶಿಗ್ಗಾವಿ ತಿಳಿಸಿದರು.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ.

ಕ್ರಸಂ: ಬಿಜಿಎಂ:ಡಿಯುಡಿಸಿ:5ಸಿಆರ್–25:2021–22 ದಿನಾಂಕ: 21.08.2024

ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗೆ KW–3 ಮತ್ತು 4 ಡಾಕುಮೆಂಟ್ ಉಪಯೋಗಿಸಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

ಕ್ರ ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ(GST ಹೊರತುಪಡಿಸಿ)	ಇ.ಎಂ.ಡಿ ಮೊತ್ತ	ಕರೆ ನಂ.
1	ಚಿಕ್ಕೋಡಿ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2024-25/RD/WORK_INDENT27309)	306.36	4.60	1ನೇ
2	ಚಿಕ್ಕೋಡಿ ಪುರಸಭೆ ವ್ಯಾಪ್ತಿಯ ವಾರ್ಡ್ ಸಂಖ್ಯೆ 08ರಲ್ಲಿ ಖಣಿ ಹತ್ತಿರ ಕಂಪೌಂಡ ಗೋಡೆ ನಿರ್ಮಿಸುವುದು. (Tender No. DMA/2024-25/BD/WORK_INDENT27314)	84.40	1.69	1ನೇ
3	ಕಲ್ಲೋಳಿ ಪ.ಪಂ. ವ್ಯಾಪ್ತಿಯ ವಾರ್ಡ್ ಸಂಖ್ಯೆ 10ರ ಫಿಲ್ಟರ್ ಹೌಸ್ ಅಭಿವೃದ್ಧಿಪಡಿಸುವುದು. (Tender No. DMA/2023-24/WS/WORK_INDENT15395/Call-3)	16.60	0.35	3ನೇ
4	ಕಲ್ಲೋಳಿ ಪ.ಪಂ. ವ್ಯಾಪ್ತಿಯ ವಿದ್ಯುತ್ ಕಂಬ ಮತ್ತು ಟಿ.ಸಿ ಅಳವಡಿಸುವುದು. (Tender No. DMA/2023-24/EL/WORK_INDENT15392/Call-3)	7.50	0.16	3ನೇ

ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಡೌನ್ ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇಎಂ.ಡಿ ಹಾಗೂ ಟೆಂಡರ್ ಪ್ರೊಸೆಸಿಂಗ್ ಫೀಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಕ್ರ.ಸಂ. 01	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	: 21.09.2024 ರಂದು 17.00 ಘಂಟೆವರೆಗೆ
	ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	: 23.09.2024 ರಂದು 10.30 ಘಂಟೆ ನಂತರ
ಕ್ರ.ಸಂ. 02 ರಿಂದ 04	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	: 06.09.2024 ರಂದು 17.00 ಘಂಟೆವರೆಗೆ
	ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	: 09.09.2024 ರಂದು 10.30 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ.

DIPO/RO NO-662/2024-25

ಕರ್ನಾಟಕ ಸರ್ಕಾರ
ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಬೀಳಗಿ

ಜಿಲ್ಲಾ:ಬಾಗಲಕೋಟೆ ಇ–ಮೇಲ್:cmobilagi@gmail.com

ಸಂಖ್ಯೆ:ತಾಸಾಆ/ಬೀಳಗಿ/ಲೆಪವಿ/ 02/2024–25 ದಿನಾಂಕ: 20 /08/2024

ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮೂಲಕ)

ವಿಷಯ: ಬೀಳಗಿ ತಾಲೂಕಾ ಆಸ್ಪತ್ರೆಯ 2024–25ನೇ ಸಾಲಿಗೆ ಹೊರ ಗುತ್ತಿಗೆ ಗ್ರುಪ್–ಡಿ ಸಿಬ್ಬಂದಿ ಹಾಗೂ ಹೊರಗುತ್ತಗೆ ನಾನ್ ಕ್ಲಿನಿಕಲ್ ಸೇವಾ ಸಿಬ್ಬಂದಿ ಕಾರ್ಯ ನಿರ್ವಹಣೆಗೆ ಇ– ಟೆಂಡರ್ ಕರೆಯುವ ಬಗ್ಗೆ.
ಉಲ್ಲೇಖ: ಮಾನ್ಯ ಜಿಲ್ಲಾಧಿಕಾರಿಗಳು ಬಾಗಲಕೋಟೆ ರವರ ಟಿಪ್ಪಣಿ ಅನುಮೋದನೆ ದಿನಾಂಕ:10/07/2024

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿದಂತೆ 2024–25ನೇ ಸಾಲಿನಲ್ಲಿ ಪ್ರಾರಂಭಿಸಿ ಮಾರ್ಚ–2025 ಅವಧಿಯ ವರೆಗೆ ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಬೀಳಗಿ ಇಲ್ಲಿಗೆ ವಿವಿಧ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಕೆಲಸಕ್ಕಾಗಿ ಅರ್ಹ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ ಅವ್ಹಾನಿಸಲು ಈ ಕೆಳಗಿನಂತೆ ರಾಜ್ಯ ಕನ್ನಡ ದಿನಪತ್ರಿಕೆ ಅಥವಾ ಸ್ಥಳಿಯ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಿಸಲು ವಿನಂತಿಸಲಾಗಿದೆ,

ಅ ನಂ	ಕೆಲಸದ ವಿವರ	ಈ ಎಂ ಡಿ ಮೊತ್ತ	ಷರಾ
1	2024–25ನೇ ಸಾಲಿನಲ್ಲಿ ಪ್ರಾರಂಭಿಸಿ ಒಂದು ವರ್ಷದ ಅವಧಿಯ ವರೆಗೆ ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಬೀಳಗಿ ಇಲ್ಲಿಗೆ ವಿವಿಧ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಕೆಲಸ	ರೂ. 80,000/–	ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಬೀಳಗಿ ಸಂಸ್ಥೆಯಲ್ಲಿ ಒದಗಿಸಬೇಕಾದ ಮಾನವ ಸಂಪನ್ಮೂಲ ಸೇವೆಯ ಪ್ರಮಾಣ 1)ನಾನ್ ಕ್ಲಿನಿಕಲ್ ಹುದ್ದೆಗಳು–07 ಸಂಖ್ಯೆ 2)ಗ್ರುಪ್ ಡಿ ಹುದ್ದೆಗಳು–11 ಸಂಖ್ಯೆ ಒಟ್ಟು : 18 ಸಂಖ್ಯೆ
2	ಟೆಂಡರ ಫಾರ್ಮಗಳನ್ನು ಭರ್ತಿ ಮಾಡುವ ದಿನಾಂಕ	ದಿ: 20/08/2024 ರಿಂದ	
3	ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	ದಿ: 05/09/2024 ಸಂಜೆ 04.30 ರ ವರೆಗೆ	
4	ಟೆಂಡರಗಳನ್ನು ತೆರೆಯುವ ದಿನಾಂಕ (ತಾಂತ್ರಿಕ)	ದಿ: 09/09/2024ಬೆಳಿಗ್ಗೆ 11.00 ಘಂಟೆಗೆ	
5	ಟೆಂಡರಗಳನ್ನು ತೆರೆಯುವ ದಿನಾಂಕ (ಹಣಕಾಸು)	ತಾಂತ್ರಿಕ ಲಕೋಟೆ ಅನುಮೋದನೆಗೊಂಡ ನಂತರ ತೆರೆಯಲಾಗುವುದು	

ಹೆಚ್ಚಿನ ವಿವರಗಳನ್ನು ಈ ಕಾರ್ಯಾಲಯದಲ್ಲಿ ಕೆಲಸದ ದಿನಗಳಂದು ಪಡೆಯಬಹುದು. ಹಾಗೂ https://kppp.karnatak,gov.in ಇಲ್ಲಿ ನೋಡಬಹುದು

ಸಹಿ/–ಮುಖ್ಯ ವೈದ್ಯಾಧಿಕಾರಿಗಳು,
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಬೀಳಗಿ ಬಾಗಲಕೋಟೆ ಜಿಲ್ಲೆ.

DIPR/BGM/RO-NO-196/KSMCA/2024-25

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with ‘A++’ Grade

Accredited by NAAC with A++
ಜ್ಞಾನಭಾರತಿ, ಬೆಂಗಳೂರು – 560 056.

ಸಂಖ್ಯೆ: ಎಸಿಎ–4/ಪಿ.ಜಿ/ಪ್ರವೇಶ/2024–25 ದಿನಾಂಕ: 23.08.2024

ಪ್ರವೇಶಾತಿ ಅಧಿಸೂಚನೆ

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ವಿಭಾಗ, ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ಕಾಲೇಜು (ಯು.ಸಿ.ಪಿ.ಇ.), ಸ್ನಾತಕೋತ್ತರ ಕೇಂದ್ರ, ರಾಮನಗರ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ, ಈ ಕೆಳಕಂಡ ಸ್ನಾತಕೋತ್ತರ/ಬಿ.ಪಿ.ಎಡ್ ಕೋರ್ಸುಗಳ ಪ್ರವೇಶಕ್ಕೆ 2024–25 ನೇ ಶೈಕ್ಷಣಿಕ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

(1) ಕಲಾ ನಿಕಾಯ: ಎಂ.ಎ. – ಅರ್ಥಶಾಸ್ತ್ರ, ಆಂಗ್ಲ, ಹಿಂದಿ, ಇತಿಹಾಸ, ಪತ್ರಿಕೋದ್ಯಮ ಮತ್ತು ಸಂವಹನ, ಕನ್ನಡ, ಕನ್ನಡ (ತೌಲನಿಕ), ತತ್ವಶಾಸ್ತ್ರ, ರಾಜ್ಯಶಾಸ್ತ್ರ, ಗ್ರಾಮೀಣಾಭಿವೃದ್ಧಿ ಅಧ್ಯಯನ, ಸಂಸ್ಕೃತ, ಸಮಾಜಶಾಸ್ತ್ರ, ತೆಲುಗು, ಉರ್ದು, ಮಹಿಳಾ ಅಧ್ಯಯನ, ಪ್ರದರ್ಶನ ಕಲೆ (ನಾಟಕ), ನೃತ್ಯ (ಭರತನಾಟ್ಯ), ಸಂಗೀತ (Carnatic-vocal/Instrumental), ಸಮಾಜಕಾರ್ಯ ಮತ್ತು ದೃಶ್ಯಕಲೆ (ಶಿಲ್ಪಕಲೆ, ಚಿತ್ರಕಲೆ, ಗ್ರಾಫಿಕ್ ಆರ್ಟ್ಸ್, ಅಪ್ಲೈಡ್ ಆರ್ಟ್ಸ್ ಮತ್ತು ಆರ್ಟ್ಸ್ ಹಿಸ್ಟರಿ); **ಸ್ವ ಹಣಕಾಸು ಕೋರ್ಸುಗಳು (ವಿಶ್ವವಿದ್ಯಾಲಯದ ವಿಭಾಗಗಳಲ್ಲಿ):** ಎಂ.ಎ.– ಮಾಧ್ಯಮ ಅಧ್ಯಯನ ಹಾಗೂ ಸಾರ್ವಜನಿಕ ಸಂಪರ್ಕ ಮತ್ತು ಜಾಹೀರಾತು.

(2) ವಿಜ್ಞಾನ ನಿಕಾಯ: ಎಂ.ಎಸ್ಸಿ.– ಅನ್ವಯಿಕ ತಳಿಶಾಸ್ತ್ರ, ಅನ್ವಯಿಕ ಭೂಗರ್ಭಶಾಸ್ತ್ರ, ಜೀವರಸಾಯನಶಾಸ್ತ್ರ, ಜೀವತಂತ್ರಜ್ಞಾನ, ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ವಿದ್ಯುನ್ಮಾನ ಮಾಧ್ಯಮ, ವಿದ್ಯುನ್ಮಾನ ವಿಜ್ಞಾನ, ಪರಿಸರ ವಿಜ್ಞಾನ, ಫುಡ್ ಟೆಕ್ನಾಲಜಿ, ಫ್ಯಾಷನ್ ಅಂಡ್ ಅಪೆರಲ್ ಡಿಸೈನ್, ಭೂಗೋಳಶಾಸ್ತ್ರ, ಹ್ಯೂಮನ್ ಕಾನ್ಷಿಯಸ್‌ನೆಸ್ ಅಂಡ್ ಯೋಗಿಕ್ ಸೈನ್ಸ್, ಜೀವ ವಿಜ್ಞಾನ, ಗಣಿತ ಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಭೌತಶಾಸ್ತ್ರ, ಮನ:ಶಾಸ್ತ್ರ, ಸಂಖ್ಯಾಶಾಸ್ತ್ರ, ಪ್ರಾಣಿಶಾಸ್ತ್ರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಕಂಪ್ಯೂಟರ್ ಸೈನ್ಸ್, ವಿಧಿ ವಿಜ್ಞಾನ, ಆಡಿಯಾಲಜಿ ಮತ್ತು ಸ್ಪೀಚ್–ಲ್ಯಾಂಗ್ವೇಜ್ ಪ್ಯಾಥಾಲಜಿ; **ಸ್ವ ಹಣಕಾಸು ಕೋರ್ಸುಗಳು** (ವಿಶ್ವವಿದ್ಯಾಲಯದ ವಿಭಾಗಗಳಲ್ಲಿ): **ಎಂ.ಎಸ್ಸಿ.–**ಫಿಲ್ಮ್ ಮೇಕಿಂಗ್, ವಿಧಿ ವಿಜ್ಞಾನ, ಗ್ರಾಫಿಕ್ಸ್ ಮತ್ತು ಅನಿಮೇಷನ್, ಘನತ್ಯಾಜ್ಯ ನಿರ್ವಹಣೆ, ಭೌಗೋಳಿಕ ಮಾಹಿತಿ ವಿಜ್ಞಾನ, ಅಣುಜೀವ ವಿಜ್ಞಾನ, ಮನ:ಶಾಸ್ತ್ರ ಸಮಾಲೋಚನೆ ಮತ್ತು ಫುಡ್ ಟೆಕ್ನಾಲಜಿ.

(3) ವಾಣಿಜ್ಯ ನಿಕಾಯ: ಎಂ.ಕಾಂ. ಮತ್ತು ಎಂ.ಕಾಂ (ಎಫ್.ಎ.); **ಸ್ವ ಹಣಕಾಸು ಕೋರ್ಸುಗಳು** (ವಿಶ್ವವಿದ್ಯಾಲಯದ ವಿಭಾಗಗಳಲ್ಲಿ): **ಎಂ.ಕಾಂ** (ಎಫ್.ಎ.), **ಎಂ.ಕಾಂ** (ಐ.ಬಿ.) ಮತ್ತು **ಎಂ.ಟಿ.ಟಿ.ಎಂ.**

(4) ಶಿಕ್ಷಣ ನಿಕಾಯ: ಎಂ.ಎಡ್, ಬಿ.ಪಿ.ಎಡ್ ಮತ್ತು ಎಂ.ಪಿ.ಎಡ್.

ಅರ್ಜಿಯನ್ನು UUCMS ಆನ್‌ಲೈನ್ ಪೋರ್ಟಲ್ ಮೂಲಕ ಸಲ್ಲಿಸಲು ಮಾರ್ಗಸೂಚಿಗಳು:

- ➢ ಸ್ನಾತಕೋತ್ತರ ಪದವಿ/ಬಿ.ಪಿ.ಎಡ್ ಕೋರ್ಸುಗಳಿಗೆ ಅರ್ಜಿಗಳನ್ನು ಸಲ್ಲಿಸಬಯಸುವ ಅಭ್ಯರ್ಥಿಗಳು UUCMS ಆನ್‌ಲೈನ್ ಪೋರ್ಟಲ್ **https://uucms.karnataka.gov.in/Login/Index** ಮೂಲಕವೇ ಅರ್ಜಿಗಳನ್ನು ಸಲ್ಲಿಸುವುದು. (ಪಿ.ಜಿ ಪ್ರವೇಶಾತಿ ಅಭ್ಯರ್ಥಿಗಳ user manual 2022 ನೋಡುವುದು).
- ➢ ಒಂದಕ್ಕಿಂತ ಹೆಚ್ಚಿನ ಕೋರ್ಸುಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಇಚ್ಛಿಸಿದ ಕೋರ್ಸುಗಳನ್ನು ಆಯ್ದುಕೊಂಡು ಪ್ರತ್ಯೇಕ ಅರ್ಜಿಗಳನ್ನು online ಮೂಲಕ ಸಲ್ಲಿಸುವುದು.
- ➢ ಅರ್ಜಿ ಶುಲ್ಕ **ರೂ.300/–** (ಕರ್ನಾಟಕ ನಿವಾಸಿಯಾದ ಪ.ಜಾತಿ/ಪ ಪಂಗಡ/ ಪ್ರವರ್ಗ–1 ಮತ್ತು ತೃತೀಯ ಲಿಂಗಿಗಳಿಗೆ **ರೂ.150/–** ಮಾತ್ರ) ಗಳನ್ನು online ನಲ್ಲಿ ಸೂಚಿಸುವ ಲಿಂಕ್‌ನ್ನು ಬಳಸಿ ಪಾವತಿಸುವುದು.
- ➢ ಅರ್ಹತೆ, ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಪಟ್ಟಿ, ಕೋರ್ಸಿನ ಶುಲ್ಕ, ಸೀಟ್ ಮ್ಯಾಟ್ರಿಕ್ಸ್, ಇತ್ಯಾದಿ ವಿವರಗಳ ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯದ ಅಂತರಜಾಲ **https://bangaloreuniversity.karnataka.gov.in** ನಲ್ಲಿ ನೋಡಬಹುದು.
- ➢ 2024–25ನೇ ಸಾಲಿಗೆ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸಲು **02.09.2024** ಕೊನೆಯ ದಿನಾಂಕವಾಗಿರುತ್ತದೆ ಹಾಗೂ ರೂ.200/–ಗಳ ದಂಡ ಶುಲ್ಕದೊಂದಿಗೆ **ದಿನಾಂಕ 04.09.2024** ರವರೆಗೂ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
- ➢ UUCMS ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಗಳನ್ನು ಮಾತ್ರ ಸೀಟುಗಳ ಆಯ್ಕೆಗಾಗಿ ಪರಿಗಣಿಸಲಾಗುವುದು.
- ➢ **ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆಗಳು: (1) 080-69261300 (UUCMS Help line), (2) 080-22961555 (Bangalroe University UUCMS office).**

ಸಹಿ/–
ಕುಲಸಚಿವರು

DIPR/CP/RO1621/AAPL/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಸಾಮಾಜಿಕ ಜೀವನ ಇಲ್ಲದ ವ್ಯಕ್ತಿತ್ವ ನಗಣ್ಯ.
-ಗೌರೀಶ ಕಾಯ್ಕಿಣಿ

ಹವಾಮಾನ ವೈಪರೀತ್ಯ ಸಹಿಷ್ಣು ತಳಿಗಳ ಅಭಿವೃದ್ಧಿಯು ಆಹಾರ ಭದ್ರತೆಗೆ ಅನಿವಾರ್ಯ

ಪ್ರಧಾನಿ ನರೇಂದ್ರ ಮೋದಿ ಅವರು ಹವಾಮಾನ ವೈಪರೀತ್ಯ ಸಹಿಷ್ಣು, ಹೆಚ್ಚು ಇಳುವರಿ ಮತ್ತು ಅಧಿಕ ಪೋಷಕಾಂಶಯುಕ್ತ 109 ತಳಿಗಳನ್ನು ಬಿಡುಗಡೆ ಮಾಡಿದ್ದಾರೆ. ಬೇಸಾಯದ ಮೇಲೆ ಹವಾಮಾನ ಬದಲಾವಣೆಯ ಪರಿಣಾಮವನ್ನು ತಡೆಯುವ ದಿಸೆಯಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ. ಹವಾಮಾನ ಬದಲಾವಣೆಗೆ ಬೇಸಾಯವೂ ಒಂದು ಕಾರಣವಾಗಿದ್ದರೂ ಅದೇ ಹವಾಮಾನ ಬದಲಾವಣೆಯಿಂದ ಬೇಸಾಯದ ಮೇಲೆಯೂ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಬೇಸಾಯ ಪದ್ಧತಿಗಳಲ್ಲೂ ಹವಾಮಾನಕ್ಕೆ ಅನುಗುಣವಾಗಿಯೇ ರೂಪುಗೊಂಡಿವೆ. ಆಯಾ ಪ್ರದೇಶದ ಬೆಳೆಯ ಸ್ವರೂಪ ಮತ್ತು ಇಳುವರಿ ಅಲ್ಲಿನ ಹವಾಮಾನದ ಮೇಲೆ ಅವಲಂಬಿತವಾಗಿದೆ. ಹವಾಮಾನದಲ್ಲಿ ಆಗುವ ಬದಲಾವಣೆಯು ಬೇಸಾಯ ಪ್ರದೇಶದ ವಿಸ್ತಾರವು ಕುಗ್ಗಲು ಕಾರಣವಾಗಬಹುದು. ಹಾಗೆಯೇ ಉತ್ಪಾದನೆ ಕಡಿಮೆ ಆಗಬಹುದು ಮತ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳದೇ ಇದ್ದರೆ ಕೆಲವು ಬೆಳೆಗಳನ್ನು ಬೆಳೆದು ಲಾಭ ಮಾಡಿಕೊಳ್ಳುವುದು ಸಾಧ್ಯವಾಗದೆಯೇ ಹೋಗಬಹುದು. ಹವಾಮಾನ ವೈಪರೀತ್ಯ ಸಹಿಷ್ಣು ಬೀಜಗಳ ಅಭಿವೃದ್ಧಿಯು ಕೃಷಿಯ ಮೇಲೆ ಹವಾಮಾನ ಬದಲಾವಣೆಯ ಪ್ರತಿಕೂಲ ಪರಿಣಾಮಗಳನ್ನು ತಡೆಯುವ ಮೊದಲ ಹಂತದ ಪ್ರಯತ್ನವಾಗಿದೆ. ಈಗ ಬಳಕೆಯಲ್ಲಿ ಇರುವ ಬಹುಪಾಲು ಬೀಜಗಳು ರೈತರ ತಲೆತಲಾಂತರಗಳಿಂದ ಪರೀಕ್ಷೆ ಮತ್ತು ಪ್ರಯೋಗಗಳ ಮೂಲಕ ಅಭಿವೃದ್ಧಿಪಡಿಸಿದಂತಹವು. ಆದರೆ, ಈಗ ಮತ್ತೊಂದು ಬಾರಿ ಈ ರೀತಿಯ ಪ್ರಯೋಗ ಸಾಧ್ಯವಿಲ್ಲ. ಅದಕ್ಕೆ ಬೇಕಾದ ಸಮಯ ನಮ್ಮಲ್ಲಿ ಇಲ್ಲ. ಏಕೆಂದರೆ, ಹವಾಮಾನ ಬದಲಾವಣೆಯ ಪರಿಣಾಮಗಳು ಈಗಾಗಲೇ ಆರಂಭವಾಗಿವೆ.

ಬೆಳೆಯನ್ನು ವೈವಿಧ್ಯಗೊಳಿಸಬೇಕಾದ ದಿಸೆಯಲ್ಲಿಯೂ ನಾವು ಯೋಚಿಸಬೇಕಾಗಿದೆ

ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ಒಟ್ಟಾಗಿ 61 ತಳಿಗಳನ್ನು ಅಭಿವೃದ್ಧಿಪಡಿಸಿವೆ. ಅವುಗಳಲ್ಲಿ 27 ತೋಟಗಾರಿಕಾ ತಳಿಗಳೂ ಸೇರಿವೆ. ಧಾನ್ಯಗಳು, ಸಿರಿಧಾನ್ಯಗಳು, ಕಾಳುಗಳು, ಎಣ್ಣೆ ಬೀಜಗಳು, ಹಣ್ಣುಗಳು, ತರಕಾರಿಗಳು ಮತ್ತು ವಾಣಿಜ್ಯ ಬೆಳೆಗಳ ತಳಿಗಳು ಈ ಗುಂಪಿನಲ್ಲಿ ಇವೆ. ಕರಾವಳಿ ಉಪ್ಪು ನೀರಿನ ಪ್ರದೇಶಕ್ಕೆ ಹೊಂದುವ ಭತ್ತದ ಒಂದು ತಳಿಯನ್ನೂ ಅಭಿವೃದ್ಧಿಪಡಿಸಲಾಗಿದೆ. ಮುಂಗಾರು ಋತುವಿನಲ್ಲಿ ಭತ್ತ ಬೆಳೆಯುವ ಶೇ 25ರಷ್ಟು ಪ್ರದೇಶಕ್ಕೆ ಹವಾಮಾನ ವೈಪರೀತ್ಯ ಸಹಿಷ್ಣು ತಳಿಯನ್ನು ಒದಗಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಹವಾಮಾನ ವೈಪರೀತ್ಯ ಸಹಿಷ್ಣು ಗೋಧಿ ತಳಿಯ ಬಳಕೆ ಹೆಚ್ಚು ಹೆಚ್ಚು ಆಗುತ್ತಿದೆ. ಆದರೆ, ಭತ್ತದ ತಳಿಯ ಬಳಕೆ ಇನ್ನಷ್ಟೇ ಆರಂಭವಾಗಬೇಕಿದೆ. ಹವಾಮಾನ ವೈಪರೀತ್ಯ ಸಹಿಷ್ಣು ತಳಿಯ ಬಳಕೆಯಿಂದಾಗಿಯೇ ಗೋಧಿ ಇಳುವರಿ 2023-24ರಲ್ಲಿ ಏರಿಕೆಯಾಗಿದೆ. ಹವಾಮಾನ ಬದಲಾವಣೆಯಿಂದಾಗಿ ದೇಶದಲ್ಲಿ ಭತ್ತದ ಇಳುವರಿಯು 2030ರ ಹೊತ್ತಿಗೆ ಇಂಗಾಲದ ಹೊರಸೂಸುವಿಕೆಯು ಮಧ್ಯಮ ಪ್ರಮಾಣದಲ್ಲಿಯೇ ಇದ್ದರೆ ಶೇ 3ರಿಂದ ಶೇ 5ರಷ್ಟು ಇಳಿಕೆ ಆಗಬಹುದು; ಹೊರಸೂಸುವಿಕೆ ಪ್ರಮಾಣವು ಇನ್ನೂ ಹೆಚ್ಚಾದರೆ ಶೇ 31.3ರವರೆಗೆ ಇಳುವರಿ ಕೊರತೆ ಆಗಬಹುದು ಎಂದು ಅಧ್ಯಯನಗಳಿಂದ ತಿಳಿದುಬಂದಿದೆ.

ಬೆಳೆಯನ್ನು ವೈವಿಧ್ಯಗೊಳಿಸಬೇಕಾದ ದಿಸೆಯಲ್ಲಿಯೂ ನಾವು ಯೋಚಿಸಬೇಕಾಗಿದೆ. ಅತಿ ಹೆಚ್ಚು ನೀರು ಬೇಕಾಗಿರುವ ಭತ್ತದಂತಹ ಬೆಳೆಗಳ ಬದಲು ಕಡಿಮೆ ನೀರು ಸಾಕಾಗುವ ಸಿರಿಧಾನ್ಯದಂತಹ ಬೆಳೆಗಳನ್ನು ಬೆಳೆಯಲು ಉತ್ತೇಜನ ನೀಡಬೇಕಾಗಿದೆ. ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಕನಿಷ್ಠಗೊಳಿಸಲು ಬೆಳೆ ವೈವಿಧ್ಯಗೊಳಿಸುವಿಕೆ ಒಂದು ಮಹತ್ವದ ಕ್ರಮ ಎಂದು ಪರಿಗಣಿಸಲಾಗಿದೆ. ನೀರು ಉಳಿಸುವಿಕೆ, ಆರೋಗ್ಯ, ಆಹಾರ ಮತ್ತು ಪೋಷಕಾಂಶ ಭದ್ರತೆ ಕಾರಣಕ್ಕೂ ಇದು ಅಗತ್ಯವಾಗಿದೆ. ಸಾವಯವ ಕೃಷಿಗೂ ಉತ್ತೇಜನ ನೀಡಲಾಗಿದೆ. ಆದರೆ, ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವ ಕೃಷಿ ಪದ್ಧತಿಗೆ ಸಂಬಂಧಿಸಿದ ಸಂಶೋಧನೆ ಮತ್ತು ಪ್ರಯೋಗಗಳ ಅಭಿವೃದ್ಧಿಯನ್ನು ಬೇರೆ ದೇಶಗಳಿಗೆ ಹೋಲಿಸಿದರೆ ಭಾರತವು ಹಿಂದೆ ಬಿದ್ದಿದೆ. ನಮ್ಮ ದೇಶದ ಭೌಗೋಳಿಕ ವೈವಿಧ್ಯ, ಬೆಳೆಯ ವಿಧಗಳು ಮತ್ತು ಹವಾಮಾನದಲ್ಲಿನ ವ್ಯತ್ಯಾಸದ ಕಾರಣಕ್ಕಾಗಿ ಹವಾಮಾನ ಬದಲಾವಣೆ ಮತ್ತು ಬೇಸಾಯಕ್ಕೆ ಸಂಬಂಧಿಸಿ ಹೆಚ್ಚು ಹೆಚ್ಚು ಸಂಶೋಧನೆಗಳನ್ನು ನಡೆಸುವುದು ಅನಿವಾರ್ಯವೇ ಆಗಿದೆ. ಹವಾಮಾನ ಬದಲಾವಣೆಯು ಬೇಸಾಯದ ಮೇಲೆ ಉಂಟು ಮಾಡುವ ಪರಿಣಾಮವು ಇತರ ದೇಶಗಳಿಗೆ ಹೋಲಿಸಿದರೆ ಭಾರತಕ್ಕೆ ಹೆಚ್ಚು. ಏಕೆಂದರೆ, ಭಾರತದ ಗಣನೀಯ ಪ್ರಮಾಣದ ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಜೊತೆಗೆ, ಇಲ್ಲಿನ ಭಾರಿ ಜನಸಂಖ್ಯೆಗೆ ಆಹಾರ ಒದಗಿಸುವುದು ಕೂಡ ದೊಡ್ಡ ಸವಾಲು.

ಸರ್ಕಾರದ ನೆರಳಿನಲ್ಲಿರುವ 'ಸ್ವಾಯತ್ತ' ಸಂಸ್ಥೆಗಳಿಂದ ನಿಷ್ಪಕ್ಷಪಾತ ತನಿಖೆ ಅಸಂಭವ

ನೈತಿಕತೆ ಕೊರತೆಯಲ್ಲಿ ರಾಜಕಾರಣ

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಕರ್ನಾಟಕದ ರಾಜಕೀಯ ರಂಗದ ಮೇಲೆ ಕೆಲವು ವಾರಗಳಿಂದ 'ಮುಡಾ' ಹೆಸರಿನ ವಿನೂತನ ಪ್ರಹಸನವೊಂದು ಅತ್ಯಂತ ಅದ್ದೂರಿಯಾಗಿ ಪ್ರದರ್ಶನಗೊಳ್ಳುತ್ತಿದೆ. 'ಮರೆಯದೇ ನೋಡಿ, ಮರೆತು ಮರುಗದಿರಿ', 'ಒಮ್ಮೆ ನೋಡಿದರೆ ಮತ್ತೊಮ್ಮೆ ಮಗದೊಮ್ಮೆ ನೋಡಬೇಕೆನ್ನಿಸುವ ನಾಟಕ' ಎಂದು ಯಾರೂ ಹ್ಯಾಂಡ್‌ಬಿಲ್ ಹಂಚದಿದ್ದರೂ ಪ್ರೇಕ್ಷಕರು ಮುಗಿಬೀಳುವಂತಾಗಿರುವುದು ಈ ಪ್ರದರ್ಶನದ ವಿಶೇಷ ಆಕರ್ಷಣೆ. ರಂಗಪ್ರೇಮಿಗಳ ಈ ಪರಿ ಸೆಳೆತಕ್ಕೆ ಪಾತ್ರಧಾರಿಗಳ ಆರ್ಭಟ, ಡೈಲಾಗ್ ಡೆಲಿವರಿಯ ಶೈಲಿ, ಭಾಷಾ ಸೌಂದರ್ಯ, ವೈಯಾಕರಣಿಗಳನ್ನು ಬೆರಗುಗೊಳಿಸುವಂತಹ ಪದ ಪ್ರಯೋಗಗಳು ಕಾರಣವಾಗಿವೆ ಎಂಬುದು ರಂಗತಜ್ಞರ ವಿವರಣೆ.

ಮೈಸೂರಿನ ಯಶಸ್ವಿ ಪ್ರಯೋಗದಿಂದ ಆನಂದತುಂದಿಲರಾದ ಶ್ರೀ ಶ್ರೀ ಪಟ್ಟಭದ್ರೇಶ್ವರ ಕೃಪಾಪೋಷಿತ ನಾಟಕ ಮಂಡಳಿಯ ಪ್ರಮುಖರು ಇದೀಗ ರಂಗದ ಮೇಲೆ ಬಂದು ಪ್ರಹಸನದ ಎರಡನೇ ಭಾಗವನ್ನು ಘೋಷಿಸಿ, 'ಹಿಂದಿನಂತೆಯೇ ಮುಂದಿನ ಪ್ರಯೋಗವನ್ನೂ ಪ್ರೋತ್ಸಾಹಿಸಲು' ಕಲಾಭಿಮಾನಿಗಳಲ್ಲಿ ಬಿನ್ನವಿಸಿಕೊಂಡಿದ್ದಾರೆ. ಪಾತ್ರ ವಹಿಸಲು ಪರವೂರುಗಳಿಂದ ಘಟಾನುಘಟಿ ನಟರು ಆಗಮಿಸುವ ಸುಳಿವನ್ನೂ ನೀಡಿ ಪ್ರೇಕ್ಷಕರ ಕುತೂಹಲ ಹೆಚ್ಚಿಸಿದ್ದಾರೆ. ನಾಟಕವನ್ನು ರಂಗದ ಮೇಲೆಯೇ ನೋಡಿ ದುಃಖಿಸುವ, ತಲೆತಗ್ಗಿಸುವ ಅಮೋಘ ಅವಕಾಶವು ಪ್ರೇಕ್ಷಕಪ್ರಭುಗಳಿಗೆ ಇರುವುದರಿಂದ, ಇಲ್ಲಿ ಓದುಗರಿಗಾಗಿ ನಾಟಕದ ವಸ್ತು-ಹಿನ್ನೆಲೆಯನ್ನು ಮಾತ್ರ ಒಂದಿಷ್ಟು ಒರೆಗೆ ಹಚ್ಚಬಹುದು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು (ಮುಡಾ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಡದಿ ಪಾರ್ವತಿ ಅವರಿಗೆ ಹಂಚಿಕೆ ಮಾಡಿದ ಹದಿನಾಲ್ಕು ಬದಲಿ ನಿವೇಶನಗಳ ಪ್ರಕರಣವು ಬಹು ಆಯಾಮಗಳನ್ನು, ಪ್ರಭಾವವನ್ನು, ಪರಿಣಾಮವನ್ನು ಹೊಂದಿದ ವಿವಾದ ಎಂಬುದು ಎಲ್ಲರಿಗೂ ಮನವರಿಕೆಯಾಗಿದೆ. ಅಂತೆಯೇ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ತಮ್ಮೆಲ್ಲಾ ಅನುಭವ, ಬುದ್ಧಿವಂತಿಕೆ, ಹೋರಾಟ ಮತ್ತು ಮಾತುಗಾರಿಕೆಯನ್ನು ಈ ವಿಷಯದ ಸುತ್ತ ವಿನಿಯೋಗಿಸಲು ಮುಂದಾಗಿವೆ. ಎರಡೂ ರಾಷ್ಟ್ರೀಯ ಪಕ್ಷಗಳ ದೆಹಲಿ ನಾಯಕರಿಗೆ ಕೂಡ ಈ ವಿವಾದದ ಪ್ರಾಮುಖ್ಯ ಅರಿವಾಗಿರುವುದರಿಂದ, ಸ್ಥಳೀಯ ನಾಯಕತ್ವಗಳಿಗೆ ಬಹಳಷ್ಟು ಆಕ್ರಮಣಕಾರಿ ನಿರ್ದೇಶನಗಳನ್ನು ನೀಡುತ್ತಿವೆ. ಹಾಗಾಗಿಯೇ ಸ್ಥಳೀಯ ಹೊಂದಾಣಿಕೆ ರಾಜಕಾರಣ, ಅನುಕೂಲಸಿಂಧು ನಡವಳಿಕೆ ಶಿಥಿಲಗೊಂಡು, ಬಿಜೆಪಿ-ಜೆಡಿಎಸ್ 'ಮೈಸೂರು ಚಲೋ' ಪಾದಯಾತ್ರೆ ಮತ್ತು ಕಾಂಗ್ರೆಸ್ ಪಕ್ಷದ ಜನಾಂದೋಲನ ಸಭೆಗಳು ನಿರೀಕ್ಷೆ ಮೀರಿ ಸಂಘರ್ಷದ ವಾತಾವರಣ ಸೃಷ್ಟಿಸಿವೆ. ನಿಧಾನಗತಿಯಲ್ಲೋ ನನೆಗುದಿಯಲ್ಲೋ ಇದ್ದ ಬಿಜೆಪಿ ಮತ್ತು ಜೆಡಿಎಸ್ ನಾಯಕರ ವಿರುದ್ಧದ ಪ್ರಕರಣಗಳ ತನಿಖೆಗೆ ಈಗ ವೇಗ ದೊರಕಲೂ ಸಾಧ್ಯವಾಗಿದೆ.

ರಾಜ್ಯ ರಾಜಕಾರಣದ ಮಟ್ಟಿಗೆ ಹೊಸದಲ್ಲದ ಹೊಂದಾಣಿಕೆ ರಾಜಕಾರಣದ ಒಳಸುಳಿಗಳು ಹೊರದೇಳಲು ಸಹ ಮುಡಾ ಸಂಘರ್ಷ ಕಾರಣವಾಗಿದೆ. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹಿಂದಿನ ವಿಧಾನಸಭೆ ಚುನಾವಣೆಯಲ್ಲಿ ಶಿಕಾರಿಪುರದಿಂದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಗೆದ್ದ ರಹಸ್ಯವನ್ನು ಬಹಿರಂಗಪಡಿಸಿದ್ದಾರೆ. ಆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸದೇ ಕ್ಷೇತ್ರದಲ್ಲಿ ಅಷ್ಟೇನೂ ಜನಪ್ರಿಯರಲ್ಲದ ವ್ಯಕ್ತಿಗೆ ಟಿಕೆಟ್ ನೀಡಿತ್ತು. 'ಇದನ್ನು ವಿಜಯೇಂದ್ರ ಸದಾ ಗಮನದಲ್ಲಿ ಇಟ್ಟುಕೊಳ್ಳಬೇಕು' ಎಂಬ ಹಿತವಚನವನ್ನೂ ಶಿವಕುಮಾರ್ ನೀಡಿದ್ದಾರೆ. ಶಿಕಾರಿಪುರ ಮತ್ತು ವರುಣ ವಿಧಾನಸಭಾ ಕ್ಷೇತ್ರಗಳಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಯಡಿಯೂರಪ್ಪನವರ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿದ್ದರು ಎಂಬ ಬಸನಗೌಡ ಪಾಟೀಲ ಯತ್ನಾಳ ಮತ್ತು ಕೆ.ಎಸ್.ಈಶ್ವರಪ್ಪ ಅವರ ನಿರಂತರ ಆರೋಪಕ್ಕೆ ಈ ಮಾತುಗಳು ಪುಷ್ಟಿ ನೀಡಿವೆ.

ಆರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಮುಡಾ ನಿವೇಶನ ಹಂಚಿಕೆಯ ಆರೋಪ ಕೇಳಿಬಂದಾಗ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮೈಸೂರಿಗೆ ದೌಡಾಯಿಸಿ ಹಲವು ಹಾನಿನಿವಾರಕ ಕ್ರಮಗಳಿಗೆ ಮುಂದಾಗಿದ್ದರು. ಮುಡಾ ಆಯುಕ್ತರ ಜೊತೆಗೆ ಮೂವರು ಅಧಿಕಾರಿಗಳ ವರ್ಗಾವಣೆ ಮಾಡಲಾಯಿತು. ಇಬ್ಬರು ಐಎಎಸ್ ಅಧಿಕಾರಿಗಳ ನೇತೃತ್ವದಲ್ಲಿ ತನಿಖೆ ನಡೆಸಿ ನಾಲ್ಕು ವಾರಗಳಲ್ಲಿ ವರದಿ ನೀಡುವಂತೆ ಆದೇಶಿಸಲಾಗಿತ್ತು. ವಿಧಾನಸಭೆ ಅಧಿವೇಶನ ಆರಂಭವಾಗುವ ಹಿಂದಿನ ದಿನವೇ ಮುಡಾ ಹಗರಣದ ತನಿಖೆಗಾಗಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅವರ ನೇತೃತ್ವದಲ್ಲಿ ಏಕಸದಸ್ಯ ತನಿಖಾ ಆಯೋಗವನ್ನು ರಚಿಸಲಾಯಿತು. ನಂತರ ವಿಧಾನಸೌಧದಲ್ಲಿ ಗದ್ದಲ, ವಿರೋಧ ಪಕ್ಷಗಳ ಪಾದಯಾತ್ರೆ, ಆಡಳಿತ ಪಕ್ಷದ ಜನಾಂದೋಲನ, ರಾಜ್ಯಪಾಲರ ಷೋಕಾಸ್ ನೋಟಿಸ್, ಮಂತ್ರಿ ಪರಿಷತ್ತಿನ ಉತ್ತರ... ಘಟನಾವಳಿಗಳ ಈ ಸರಣಿ ಇದೀಗ ಮತ್ತೊಂದು ಮಜಲಿಗೆ ಏರಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಅನುಮತಿ ನೀಡುವ ಮೂಲಕ ತೀವ್ರ ಸ್ವರೂಪದ ಸಂಘರ್ಷಕ್ಕೆ ಚಾಲನೆ ನೀಡಿದ್ದಾರೆ. ಈ ತಿಕ್ಕಾಟಕ್ಕೆ ಸಾಮಾಜಿಕ, ರಾಜಕೀಯ, ಕಾನೂನು ಮತ್ತು ನೈತಿಕ ಸ್ತರಗಳಿರುವುದು ಗಮನಾರ್ಹ.

ಈ ಬೆಳವಣಿಗೆಗಳು, 'ಎರಡನೇ ಬಾರಿಗೆ ಮುಖ್ಯಮಂತ್ರಿ ಆಗಿರುವ ಅಹಿಂದ ನೇತಾರ ಸಿದ್ದರಾಮಯ್ಯ ಅವರ ವಿರುದ್ಧದ ಪಿತೂರಿ' ಎಂಬ ಖಚಿತ ನಿಲುವನ್ನು ಕಾಂಗ್ರೆಸ್ ಪಕ್ಷ ತಾಳಿದೆ. ರಾಜ್ಯಪಾಲರ ಹುದ್ದೆಯ ದುರ್ಬಳಕೆ ಮತ್ತು ಚುನಾಯಿತ ಸರ್ಕಾರವನ್ನು ಕೆಡಹುವ ಹುನ್ನಾರದ ವಿರುದ್ಧ ರಾಜಕೀಯ ಮತ್ತು ಕಾನೂನು ಹೋರಾಟಕ್ಕೆ ಇಳಿದಿದೆ.

ಎಚ್.ಡಿ.ಕುಮಾರಸ್ವಾಮಿ, ಶಶಿಕಲಾ ಜೊಲ್ಲೆ, ಮುರುಗೇಶ ನಿರಾಣಿ ಮತ್ತು ಜನಾರ್ದನ ರೆಡ್ಡಿ ಅವರ ವಿರುದ್ಧದ ತನಿಖೆಗೆ ಮಂಜೂರಾತಿ ಕೋರಿದ ಅರ್ಜಿಗಳು ರಾಜ್ಯಪಾಲರ ಮೇಜಿನ ಮೇಲೆ ತಿಂಗಳಾನುಗಟ್ಟಲೆ ಬಾಕಿ ಉಳಿದಿರುವಾಗ ಸಿದ್ದರಾಮಯ್ಯನವರ ವಿರುದ್ಧದ ಮನವಿಯನ್ನು ತರಾತುರಿಯಲ್ಲಿ ವಿಲೇವಾರಿ ಮಾಡಿದ್ದೇಕೆ ಎಂಬುದು ಎಲ್ಲರಿಗೂ ಉತ್ತರ ಗೊತ್ತಿರುವ ಪ್ರಶ್ನೆ! ಆರೋಪ ಹೊತ್ತು ಅಧಿಕಾರದಲ್ಲೇಕೆ ಇರಬೇಕು, ರಾಜೀನಾಮೆ ನೀಡಿ ತನಿಖೆ ಎದುರಿಸಲಿ ಎಂಬ ವಾದ ಮಂಡಿಸುವ ಬಿಜೆಪಿ, 2011ರಲ್ಲಿ ಇಂತಹುದೇ ಸನ್ನಿವೇಶದಲ್ಲಿ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಿದರ್ಶನವನ್ನು ಆದರ್ಶವೆಂಬಂತೆ ಮುಂದಿಡುತ್ತಿದೆ.

ಎರಡೂ ಪಾಳಯದ ನಾಯಕಮಣಿಗಳು ರಾಜಕೀಯ ಮತ್ತು ಕಾನೂನು ವಿಷಯದಲ್ಲಿ ವಿಶೇಷ ಪರಿಣತಿ ಸಾಧಿಸಿದವರು ಎಂಬುದು ನಿರ್ವಿವಾದ. ರಾಜಕೀಯ ಪರಿಭಾಷೆಯಲ್ಲಿ ಆರೋಪ, ಪ್ರತ್ಯಾರೋಪ ಮಾಡುವ ಅವರೆಲ್ಲರ ಸಾಮರ್ಥ್ಯ ಪ್ರಶ್ನಾತೀತ. ಇವರಲ್ಲಿ ಬಹಳಷ್ಟು ಜನ ಕಾನೂನು ತಜ್ಞರೂ ಹೌದು. ಆದರೆ ಎರಡೂ ಬದಿಯಲ್ಲಿ ಕಾಣೆಯಾಗಿರುವುದು ಸಾರ್ವಜನಿಕ ಬದುಕಿನ ಜೀವದ್ರವ್ಯ ಆಗಬೇಕಿದ್ದ ನೈತಿಕತೆ. ಮತ ನೀಡಿ ಗೆಲ್ಲಿಸುವ ಜನರಲ್ಲಿಯೇ ಇಲ್ಲದಿರುವ ನೈತಿಕತೆಯನ್ನು ಜನಪ್ರತಿನಿಧಿಗಳಲ್ಲಿ ನಿರೀಕ್ಷಿಸುವುದು ಎಷ್ಟು ಸರಿ ಎಂಬುದೂ ಪರಿಶೀಲನೆಗೆ ಅರ್ಹವೇ!

ಇಷ್ಟೊಂದು ಸದ್ದು ಮಾಡಿದ ಗಂಭೀರ ಆರೋಪದ ಬಗ್ಗೆ ತನಿಖೆ ನಡೆಯಬೇಕೆಂಬುದನ್ನು ಯಾವ ನ್ಯಾಯನಿಷ್ಠುರಿಯೂ ನಿರಾಕರಿಸಲು ಸಾಧ್ಯವಾಗದು. ಇನ್ನಿತರರ ಮೇಲಿರುವ ಆರೋಪಗಳ ತನಿಖೆಗೆ ಸಂಬಂಧಿಸಿದಂತೆ ರಾಜ್ಯಪಾಲರು ತಕ್ಷಣ ನಿರ್ಧಾರ ಪ್ರಕಟಿಸುವುದೂ ಅತ್ಯಗತ್ಯ. ಆದರೆ ಯಾವ ರೀತಿಯಲ್ಲಿ, ಯಾರಿಂದ ತನಿಖೆ ನಡೆದರೆ ಸತ್ಯಸಂಗತಿ ಹೊರಬರುತ್ತದೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಯಾವ ರೀತಿಯಲ್ಲಿ ತನಿಖೆ ಸೂಕ್ತ ಎಂಬುದನ್ನು ಆರೋಪಕ್ಕೆ ಈಡಾದವರ ನೇತೃತ್ವದ ಸರ್ಕಾರ ನಿರ್ಧರಿಸುವುದರಲ್ಲಿ ಹಿತಾಸಕ್ತಿ ಸಂಘರ್ಷ ಏರ್ಪಡುವುದರಿಂದ ಸಮಂಜಸ ಎನ್ನಿಸುವುದಿಲ್ಲ. ಹಾಗೆಯೇ ಆರೋಪ ಹೊರಿಸಿದವರ ಅಪೇಕ್ಷೆಯಂತೆ ತನಿಖಾ ವಿಧಾನ ನಿರ್ಧಾರವಾಗುವುದೂ ಸೂಕ್ತವಾಗಲಾರದು.

ಅಧಿಕಾರದಲ್ಲಿ ಇರುವವರು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುವುದು ಬರೀ ಆರೋಪವಾಗಿಯೇನೂ ಉಳಿದಿಲ್ಲ; ಅದು ಸಾಬೀತಾಗಿರುವ ಸತ್ಯ. ಆದ್ದರಿಂದ ರಾಜ್ಯ ಅಥವಾ ಒಕ್ಕೂಟ ಸರ್ಕಾರದ ನೆರಳಿನಲ್ಲಿ ಕಾರ್ಯ ನಿರ್ವಹಿಸುವ ಯಾವ 'ಸ್ವಾಯತ್ತ' ತನಿಖಾ ಸಂಸ್ಥೆಯಿಂದಲೂ ನಿಷ್ಪಕ್ಷಪಾತ ತನಿಖೆ ನಡೆಯುವ ಸಂಭವ, ನಂಬಿಕೆ ಇಲ್ಲವಾಗಿದೆ. ಅಂತಿಮವಾಗಿ ಉನ್ನತ ನ್ಯಾಯಾಲಯದ ಕಣ್ಗಾವಲಿನಲ್ಲಿ ಆರೋಪಗಳ ನಿಷ್ಕರ್ಷೆ ಆಗುವುದೇ ಸದ್ಯದ ಸ್ಥಿತಿಯಲ್ಲಿ ಏಕೈಕ ಮಾರ್ಗ ಅನ್ನಿಸುತ್ತದೆ. ಇದಕ್ಕೆ ಪೂರಕವಾಗಿ ನಾಗರಿಕ ಸಮಾಜದ ಜಾಗೃತ ಮನಸ್ಸುಗಳು ನಿಗಾ ವಹಿಸಿದರೆ ಆಶಾದಾಯಕ ಫಲಿತಾಂಶವನ್ನು ನಿರೀಕ್ಷಿಸಬಹುದು.

ಚುರುಮುರಿ

ಸ್ವಯಂ ತಿದ್ದುಪಡಿ!

• ಗುರು ಪಿ.ಎಸ್.

'ಜಗಳವೇ ನಿಮ್ಮನೆ ದೇವರು ಅನಿಸುತ್ತೆ' ಬೆಳಿಗ್ಗೆಯಿಂದಲೇ ಬಯ್ಯುತ್ತಿದ್ದ ಹೆಂಡತಿಗೆ ಅಸಮಾಧಾನದಿಂದಲೇ ಹೇಳಿದೆ.

'ಹೌದೌದು, ನೀವು ಮಾಡೋ ಕಿತಾಪತಿಗಳನ್ನ ಪ್ರಶ್ನಿಸಿದ್ರೆ ನಾನು ಜಗಳಗಂಟ ಆಗಿಬಿಡ್ತೀನಲ್ಲ'.

'ನಾನ್ಯಾವಾಗ ಹಾಗಂದೆ? ನಿನಗೆ ನೀನೇ, ನಿನ್ನ ಬಗ್ಗೆ ಸತ್ಯವನ್ನ ಹೇಳಿಕೊಳ್ತೀಯ' ನಸುನಕ್ಕೆ.

'ಬಾಯ್ಮುಚ್ರಿ ಸಾಕು, ನನ್ನ ತಂಗಿಗೆ ಫೋನ್ ಮಾಡಿ, ನೀನು ಬೆಂಗಳೂರಿಗೆ ಬಾ, ಇಲ್ಲೇ ಇದ್ದು ಓದುವಂತೆ ಅಂತ ಕರೆದಿದೀರಂತೆ'.

'ಅದರಲ್ಲಿ ತಪ್ಪೇನಿದೆ? ನಾದಿನಿ ಮನೆಗೆ ಬರೋದು ಒಂಥರಾ ಲ್ಯಾಟರಲ್ ಎಂಟ್ರಿ ಇದ್ದಂಗೆ. ಅಲ್ಲಿ ದೊಡ್ಡವರು, ಇಲ್ಲಿ ಚಿಕ್ಕವರು ಅಷ್ಟೇ ವ್ಯತ್ಯಾಸ. ಇದು ಹೇಗಂದ್ರೆ, ಒಳಗೆ ಬರೋರಿಗೂ ಸುಲಭ, ಕರೆಸಿಕೊಂಡೋರಿಗೂ ಖುಷಿ'.

'ಹಾಗಿದ್ದರೆ ನನ್ನ ತಮ್ಮನಿಗೆ ಯಾಕೆ ಬರಬೇಡ ಅಂತ ಹೇಳಿದಿರಿ?! ಅವನೂ ಇಲ್ಲೇ ಇದ್ದು ಓದ್ಕೊತಿದ್ನಲ್ವ?'

'ಅವನನ್ನ ಇಲ್ಲಿಗೆ ಕರೆಸಿಕೊಂಡ್ರೆ ನನ್ನ ವಿರುದ್ಧದ ಪ್ರಾಸಿಕ್ಯೂಷನ್‌ಗೆ ನಾನೇ ಅನುಮತಿ ಕೊಟ್ಟುಕೊಂಡಂಗೆ'.

'ಏನು, ಎಲ್ಲದಕ್ಕೂ ಒಂದೊಂದು ಲಿಂಕ್ ಇಟ್ಕೊಂಡು ಮಾತಾಡ್ತಿದೀರಿ. ನನಗೂ ಎಲ್ಲ ಅರ್ಥ ಆಗುತ್ತೆ, ನಾನೂ ಪೇಪರ್ ಓದ್ತಿನಿ. ಟಾಂಗ್ ಕೊಡೋಕೆ ನನಗೂ ಬರುತ್ತೆ. ಅದಿರಲಿ, ಹಲವರ ಭೂಮಿ ಕೆಲವರ ಹತ್ತಿರ ಸೇರ್ತಿರೋ ಹಾಗೆ, ತಗೊಂಡಿರೋ ನಾಲ್ಕೂ ಸೈಟ್‌ಗಳನ್ನ ನಿಮ್ಮ ಹೆಸರಿಗೇ ಮಾಡ್ಕೊಂಡಿದೀರಲ್ಲ, ಏನ್ ಸಮಾಚಾರ?'

'ಎಲ್ಲವೂ ನನ್ನ ಹೆಸರಲ್ಲೇ ಇದ್ದರೆ ಸಾಲ ತಗೊಳೋದು ಸುಲಭ ಆಗುತ್ತಮ್ಮ. ಎಲ್ಲದರಲ್ಲೂ ತಪ್ಪು ಹುಡುಕಬೇಡ ನೀನು. ಅಷ್ಟಕ್ಕೂ, ನಿಮ್ಮ ಹೆಸರಿಗೇ ಮಾಡಿಕೊಳ್ಳಿ ಅಂತ ಮೊದಲು ಹೇಳಿದವಳು ನೀನೇ ತಾನೆ?'

'ಹೌದು, ಆಗ ಹೇಳಿ ತಪ್ಪು ಮಾಡಿದೆ'.

'ಅಂದ್ರೆ?'

'ಆಗ ಮಾಡಿದ ತಪ್ಪನ್ನು ಈಗ ನಾನೇ ಸರಿ ಮಾಡ್ತೀನಿ ಅಂತ ಅರ್ಥ'.

'ಹೇಗೆ?'

'ಡಾಕ್ಯುಮೆಂಟ್‌ನಲ್ಲಿ ನಿಮ್ಮ ಹೆಸರು ಇದ್ದಲ್ಲೆಲ್ಲ ವೈಟ್ನರ್ ಹಚ್ಚಿ ನನ್ನ ಹೆಸರು ಬರ್ಕೊತೀನಿ!'

ದಿನದ ಟ್ವೀಟ್

ಸುಲಲಿತ ಕಾರ್ಯನಿರ್ವಹಣೆಗೆ ಅನುವು

ಸೂರತ್‌ನಲ್ಲಿ ಸಂಚಾರ ಪೊಲೀಸರಿಗೆ ಹವಾನಿಯಂತ್ರಿತ ಹೆಲ್ಮೆಟ್‌ಗಳನ್ನು ಒದಗಿಸಿರುವುದು, ನಮ್ಮ ಕಾನೂನು ಜಾರಿ ಅಧಿಕಾರಿಗಳ ಯೋಗಕ್ಷೇಮ ಕಾಯುವಲ್ಲಿ ಮಹತ್ವದ ಹೆಜ್ಜೆಯಾಗಿದೆ. ಕಡು ಬೇಸಿಗೆಯ ದಿನಗಳನ್ನು ಎದುರಿಸಲು ಇಂತಹ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುವುದು ಉತ್ಸಾಹ ತುಂಬುವಂತಹದು, ಪೊಲೀಸರು ಆರಾಮವಾಗಿ ಕರ್ತವ್ಯ ನಿರ್ವಹಿಸಲು ನೆರವಾಗುತ್ತದೆ...

ರಾಮೇಶ್ವರ್ ಸಂಖಲ, ಸಾಫ್ಟ್‌ವೇರ್ ಎಂಜಿನಿಯರ್

ಕಿಡಿನುಡಿ

ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡುವ ವೈದ್ಯನ ಸೇವೆಯ ಬಗ್ಗೆ ಬಹಳಷ್ಟು ಜನ ಖುಷಿಪಡುತ್ತಾರೆ ಮತ್ತು ಆತನನ್ನು ಹೊಗಳುತ್ತಾರೆ. ಅಂತಹ ವೈದ್ಯನ ಸಲುವಾಗಿ ಇವರಲ್ಲಿ ಎಷ್ಟು ಮಂದಿ ತಮ್ಮ ಕೆಲಸವನ್ನು ಉಚಿತವಾಗಿ ಮಾಡಬಲ್ಲರು? ಒಂದು ವೇಳೆ ಇವರೇನಾದರೂ ಸರ್ಕಾರಿ ನೌಕರರಾಗಿದ್ದರೆ, ಕನಿಷ್ಠಪಕ್ಷ ತಾವು ಪಡೆಯುವ ಲಂಚದಲ್ಲಾದರೂ ಒಂದಷ್ಟು ಡಿಸ್ಕೌಂಟ್ ಕೊಡಬಲ್ಲರೇ?

ಕಾರ್ತಿಕ್ ಬಾಲಚಂದ್ರನ್, ಎಂಡೊಕ್ರೈನಾಲಜಿಸ್ಟ್

25 ವರ್ಷಗಳ ಹಿಂದೆ — ಮಂಗಳವಾರ, 24-8-1999

• **ರಾಮಮಂದಿರ ಪ್ರಸ್ತಾಪ ಇಲ್ಲ: ಪ್ರಧಾನಿ ಸ್ಪಷ್ಟನೆ**

ಅಹಮದಾಬಾದ್, ಆ. 23 (ಪಿಟಿಐ)– ಬಿಜೆಪಿಯು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ ಕಾರ್ಯಸೂಚಿ ಆಧರಿಸಿ ಚುನಾವಣೆ ಎದುರಿಸುತ್ತಿರುವುದರಿಂದ ರಾಮಮಂದಿರ, 370ನೇ ವಿಧಿ ರದ್ದು ಮತ್ತು ಏಕರೂಪ ನಾಗರಿಕ ಸಂಹಿತೆಯಂತಹ ವಿವಾದಾತ್ಮಕ ವಿಷಯಗಳನ್ನು ಪ್ರಸ್ತಾಪಿಸುವುದಿಲ್ಲ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

'ಮಂದಿರ ನಿರ್ಮಾಣ, ಏಕರೂಪ ನಾಗರಿಕ ಸಂಹಿತೆ ಮತ್ತು 370ನೇ ವಿಧಿ ರದ್ದು ಒಳಗೊಂಡ ಕಾರ್ಯಸೂಚಿಯನ್ನು ಬಿಜೆಪಿಯು ಈಗಲೂ ಹೊಂದಿದೆ' ಎಂಬ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗೋವಿಂದಾಚಾರ್ಯ ಅವರ ಹೇಳಿಕೆಗೆ ಅವರು ಆಶ್ಚರ್ಯ ವ್ಯಕ್ತಪಡಿಸಿದರು.

• **ಚಾಲಕ ತಪ್ಪಿಸಿದ ರೈಲು ದುರಂತ**

ಬೆಂಗಳೂರು, ಆ. 23– ಚಾಲಕನ ಸಮಯ ಪ್ರಜ್ಞೆಯಿಂದಾಗಿ ಭಾರಿ ರೈಲು ದುರಂತವೊಂದು ತಪ್ಪಿರುವ ಘಟನೆ ಇಂದು ಸಂಜೆ ನಗರದಲ್ಲಿ ನಡೆದಿದೆ.

ಸಂಜೆ 6.15ರಲ್ಲಿ ಸುಮಾರು ಒಂದು ಸಾವಿರ ಪ್ರಯಾಣಿಕರೊಂದಿಗೆ ಮೈಸೂರಿಗೆ ಹೊರಟಿದ್ದ ಚಾಮುಂಡಿ ಎಕ್ಸ್‌ಪ್ರೆಸ್ ರೈಲು ನಿಲ್ದಾಣ ಬಿಡುತ್ತಿದ್ದಂತೆಯೇ ಚಾಲಕನ ನಿಯಂತ್ರಣ ತಪ್ಪಿತು. ಆದರೂ ಎದೆಗುಂದದ ಚಾಲಕ ಬ್ರೇಕ್ ಹಾಕಲು ಯತ್ನಿಸಿದ. ಆದರೆ ತಾಂತ್ರಿಕ ತೊಂದರೆಯಿಂದಾಗಿ ಬ್ರೇಕ್ ಸರಿಯಾಗಿ ಕೆಲಸ ಮಾಡಲಿಲ್ಲ. ಸ್ವಲ್ಪ ಸಮಯದ ಕಸರತ್ತಿನ ನಂತರ ನಾಯಂಡಹಳ್ಳಿ ಹಾಗೂ ಕೆಂಗೇರಿ ನಡುವೆ ಆರ್.ವಿ. ಕಾಲೇಜು ಬಳಿ 6.30ರಲ್ಲಿ ರೈಲು ನಿಲ್ಲಿಸುವಲ್ಲಿ ಯಶಸ್ವಿಯಾದ.

50 ವರ್ಷಗಳ ಹಿಂದೆ — ಶನಿವಾರ, 24-8-1974

• **ಒಂದೇ ಎಕರೆ ಇದ್ದರೂ ಅರ್ಧ ಕ್ವಿಂಟಲ್ ಲೆವಿ; ರಾಗಿ ಎತ್ತುವಳಿ ರದ್ದು**

ಬೆಂಗಳೂರು, ಆ. 23– 1974–75ನೇ ಸಾಲಿನ ಕರ್ನಾಟಕ ಧಾನ್ಯ ಎತ್ತುವಳಿ ಕಾರ್ಯಕ್ರಮವು ನೀರಾವರಿ ಕಾಲುವೆ, ಬಾವಿ ಹಾಗೂ ಮಳೆ ನೀರು ಕೃಷಿಯ ಒಂದು ಎಕರೆಗಿಂತ ಕಡಿಮೆ ಜಮೀನಿನ ರೈತರಿಗೂ ವ್ಯಾಪಿಸಲಿದ್ದು, ಅವರು ತಲಾ ಅರ್ಧ ಕ್ವಿಂಟಲ್‌ನಂತೆ ಲೆವಿ ಕೊಡಬೇಕಾಗುತ್ತದೆ.

ಈ ಸಾಲಿಗೆ ನಿಗದಿಪಡಿಸಲಾಗಿರುವ 2.75 ಲಕ್ಷ ಟನ್ ಭತ್ತ ಹಾಗೂ 1 ಲಕ್ಷ ಟನ್ ಜೋಳದ ಧಾನ್ಯ ಸಂಗ್ರಹ ಗುರಿಯನ್ನು ತಲುಪಲು ಸಹಾಯಕವಾಗುವಂತೆ ಅಧಿಕ ಎಕರೆಗಳ ಜಮೀನಿನ ಮೇಲೆ ಪುರೋಗತಿಯಲ್ಲಿ ತುಸು ಹೆಚ್ಚೆಚ್ಚು ಲೆವಿಯನ್ನು ವಿಧಿಸಲಾಗಿದೆ.

ಶಾಸಕರ ಸಲಹೆ ಹಾಗೂ ಆಗ್ರಹಗಳ ಮೇರೆಗೆ 1974–75ರ ಸಾಲಿನಲ್ಲಿ ರಾಗಿಯ ಲೆವಿಯನ್ನು ಸರ್ಕಾರವು ಕೈಬಿಟ್ಟಿದೆ ಎಂದು ಸಚಿವರು ಹೇಳಿದರು.

• **ಭಾರತಕ್ಕೆ ಭವ್ಯ ಭವಿಷ್ಯ: ಫಕ್ರುದ್ದೀನ್ ವಿಶ್ವಾಸ**

ನವದೆಹಲಿ, ಆ. 23– ಭಾರತಕ್ಕೆ 'ಭವ್ಯ ಭವಿಷ್ಯ' ಇದೆಯೆಂದು ಫಕ್ರುದ್ದೀನ್ ಅಲಿ ಅಹಮದ್ ಅವರು ಇಂದು ಹೇಳಿದ್ದಾರೆ.

ರಾಷ್ಟ್ರಪತಿಯಾಗಿ ನಾಳೆ ಅಧಿಕಾರ ಸ್ವೀಕರಿಸಲಿರುವ ಅಹಮದ್ ಅವರು ಇಂದು ದೆಹಲಿ ಟೆಲಿವಿಜನ್ ಸಂದರ್ಶನವೊಂದರಲ್ಲಿ ಮಾತನಾಡಿ, ರಾಷ್ಟ್ರದಲ್ಲಿ ನುರಿತ ತಂತ್ರಜ್ಞರು ಮತ್ತು ವಿಜ್ಞಾನಿಗಳು ಹಾಗೂ ಅಪಾರ ನೈಸರ್ಗಿಕ ಸಂಪನ್ಮೂಲಗಳು ಇದ್ದು 'ನಾವು ಶಿಸ್ತು, ನಿಷ್ಠೆ ಮತ್ತು ಒಗ್ಗಟ್ಟಿನಿಂದ ದುಡಿದರೆ ರಾಷ್ಟ್ರ ಮುನ್ನಡೆಯುವುದಕ್ಕೆ ಯಾವುದೇ ಅಡ್ಡಿಯೂ ಬರುವಂತಿಲ್ಲ' ಎಂದು ನುಡಿದರು.

ಸಂಗತ

ಕನ್ನಡ ಕಲಿಕೆ: ಮರುಗಿದರೇನು ಫಲ?

ಮುಂದಿನ ಬದುಕಿಗೆ ಅನಿವಾರ್ಯವಾದ ಕನ್ನಡ ಭಾಷಾ ಕೌಶಲಗಳು ನಮ್ಮ ಮಕ್ಕಳಿಗೆ ದಕ್ಕದೇ ಇರುವುದರ ಕುರಿತು ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ

• ಎಂ.ಅಬ್ದುಲ್ ರೆಹಮಾನ್ ಪಾಷ

'ಕನ್ನಡಿಗರಿಗೇ ಕನ್ನಡ ಕಲಿಸಬೇಕಾದ ಸ್ಥಿತಿ', 'ಕನ್ನಡಿಗರಿಗೇ ಕನ್ನಡ ಭಾಷೆಯ ಬಗ್ಗೆ ನಿರಾಸಕ್ತ ಮನೋಭಾವ'- ಇವು, ಕನ್ನಡ ಅಭಿವೃದ್ಧಿ ಪ್ರಾಧಿಕಾರವು 'ಕನ್ನಡೇತರರಿಗೆ ಕನ್ನಡ ಕಲಿಸುವವರಿಗಾಗಿ' ಇತ್ತೀಚೆಗೆ ನಡೆಸಿದ ಕಾರ್ಯಶಿಬಿರದ ಉದ್ಘಾಟನೆಯಲ್ಲಿ ವಿದ್ವಾಂಸರಿಂದ ವ್ಯಕ್ತವಾದ ಅಭಿಪ್ರಾಯಗಳು. ಇಂತಹ ಮಾತುಗಳನ್ನು ದಶಕಗಳಿಂದ ಕೇಳುತ್ತಲೇ ಬಂದಿದ್ದೇವೆ, ಆದರೆ ಇವಕ್ಕೆ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ ಎಂಬುದೇ ಒಂದು ವಿಡಂಬನೆ.

ನಮ್ಮಂಥ ಸಾಮಾನ್ಯ ನಾಗರಿಕರು ಅಸಹಾಯಕತೆ, ಹತಾಶೆಯಿಂದ ಹೀಗೆ ಹೇಳಿದರೆ ಅದು ಅರ್ಥವಾದೀತು. ಆದರೆ, ಪ್ರಾಧಿಕಾರದ ಅಡಿಯಲ್ಲೇ ನಡೆದ ಶಿಬಿರದಲ್ಲಿ ಇದನ್ನು ಹೇಳಿದ್ದಾದರೆ ಪರಿಸ್ಥಿತಿ ಗಂಭೀರವಾಗಿದೆ ಎಂದೇ ಅರ್ಥ. ಮನೆಯಲ್ಲಿ ಮೊದಲ ಐದು ವರ್ಷಗಳಲ್ಲಿ ಕನ್ನಡವನ್ನು ಮನೆ ಮಾತಾಗಿ ಆಲಿಸುವ, ಮಾತಾಡುವ ಕೌಶಲಗಳನ್ನು ಕಲಿತೇ ಬರುವ ಮಕ್ಕಳನ್ನು ಉದಾಹರಣೆಯನ್ನಾಗಿ ತೆಗೆದುಕೊಳ್ಳಿ. ಈ ಎರಡು ಕೌಶಲಗಳನ್ನು ಬುನಾದಿಯಾಗಿ ಇಟ್ಟುಕೊಂಡರೆ, ಭಾಷೆಯ ಮುಂದಿನ ಎರಡು ಕೌಶಲಗಳಾದ ಓದು, ಬರಹವನ್ನು ಕಲಿಸುವುದು ಸುಲಭ ಎಂದು ಭಾಷಾ ವಿಜ್ಞಾನಿಗಳು ವಿಶ್ವಾಸದಿಂದ ಹೇಳುತ್ತಾರೆ.

ಕನ್ನಡ ಬರಹ ಎಲ್ಲೆಲ್ಲೂ ರಾರಾಜಿಸುವಂಥ ಕರ್ನಾಟಕದ ಪರಿಸರದಲ್ಲಿಯೂ, ಅತ್ಯಂತ ತಾರ್ಕಿಕವಾದ ವರ್ಣ, ಕಾಗುಣಿತ, ಒತ್ತಕ್ಷರ ವ್ಯವಸ್ಥೆಯನ್ನು ಹೊಂದಿರುವ ಕನ್ನಡ ಓದು, ಬರಹವನ್ನು ಕಲಿಸಲು ಆಗುವುದಿಲ್ಲ ಎನ್ನುವುದಾದರೆ, ನಮ್ಮ ಶಿಕ್ಷಣ ವ್ಯವಸ್ಥೆಯ ಸಾಮರ್ಥ್ಯದ ಕುರಿತು ಏನು ಹೇಳಬೇಕು? ಕನ್ನಡ ಮನೆ ಮಾತಿನ ಮಕ್ಕಳಿಗೇ ಹೀಗಾದರೆ, ಅನ್ಯ ಭಾಷಾ ಮನೆ ಮಾತಿನ ಕುಟುಂಬಗಳಿಂದ ಶಾಲೆಗೆ ಬರುವ ಮಕ್ಕಳ ಗತಿಯೇನು?

ಇನ್ನು ಆರಂಭದ ಒಂದು ಮತ್ತು ಎರಡನೇ ತರಗತಿಗಳಲ್ಲಿ ವರ್ಣ, ಕಾಗುಣಿತ, ಒತ್ತಕ್ಷರಗಳನ್ನು ಒಳಗೊಂಡ ಓದು ಮತ್ತು ಬರಹಗಳ ಮೇಲೆ ಮಕ್ಕಳು ಅಗತ್ಯ ಹಿಡಿತ ಸಾಧಿಸದಿದ್ದರೂ ಅವರನ್ನು ಮುಂದಕ್ಕೆ ಕಳಿಸಲಾಗುತ್ತದೆ. ಇಂಥ ದುರ್ಬಲ ಭಾಷಾ ಕೌಶಲಗಳನ್ನೇ 'ಮಾಧ್ಯಮ'ವನ್ನಾಗಿ ಬಳಸಿಕೊಂಡು ಸಮಾಜವಿಜ್ಞಾನ, ವಿಜ್ಞಾನ, ಗಣಿತದಂಥ ವಿಷಯಗಳನ್ನು ಕಲಿಸುತ್ತೇವೆ ಎನ್ನುವುದು ಪವಾಡವೇ ಸರಿ. ಮುಂದುವರಿದ ಕನ್ನಡ ಭಾಷಾ ವಿಷಯದ ಪಠ್ಯದಲ್ಲಿ ಈ ವಿಷಯಗಳನ್ನು ಕಲಿಯುವುದಕ್ಕೆ ಪೂರಕವಾದ ಭಾಷಾ ಕೌಶಲಗಳನ್ನು ರೂಢಿಸುವ ಉದ್ದೇಶ, ಯೋಜನೆ ಇರುವುದಿಲ್ಲ. ಅದರ ಬದಲಿಗೆ ಕನ್ನಡ ಪಠ್ಯದಲ್ಲಿ ಕನ್ನಡ ವ್ಯಾಕರಣ, ಛಂದಸ್ಸು, ಹಲವು ಘಟ್ಟಗಳ ಸಾಹಿತ್ಯ, ಕಾವ್ಯದಂತಹವನ್ನು ಕಲಿಸಲಾಗುತ್ತಿದೆ. ಅವುಗಳಿಂದ ಮುಂದಿನ ಬದುಕಿಗಾಗಿ ಅನಿವಾರ್ಯವಾದ ಕನ್ನಡ ಭಾಷಾ ಕೌಶಲಗಳು ನಮ್ಮ ಮಕ್ಕಳಿಗೆ ದಕ್ಕುವುದೇ ಇಲ್ಲ. ಈ ಕುರಿತು ಗಂಭೀರವಾಗಿ ಚಿಂತನೆ ಮಾಡದೆ, ಇದನ್ನು ಹೀಗೇ ಮುಂದುವರಿಯುವುದಕ್ಕೆ ಬಿಟ್ಟು, 'ಕನ್ನಡಿಗರಿಗೇ ಕನ್ನಡವನ್ನು ಕಲಿಸಬೇಕಾದ ಸ್ಥಿತಿ ಇದೆ' ಎಂದು ದಶಕಗಟ್ಟಲೆ ಮರುಗುತ್ತಲೇ ಇದ್ದರೆ ಏನು ಪ್ರಯೋಜನ?

ಇನ್ನು, ಕನ್ನಡದ ಬಗೆಗಿನ ನಿರಾಸಕ್ತಿಯ ಪ್ರಶ್ನೆ. ನಾವು, ನಮ್ಮ ಮಕ್ಕಳು ಓದುವ ಹೊತ್ತಿಗೆ ಅತ್ಯುತ್ತಮ ಖಾಸಗಿ ಶಾಲೆಗಳಲ್ಲಿಯೂ ಕನ್ನಡ ಮಾಧ್ಯಮದ ಶಿಕ್ಷಣವಿತ್ತು. ಆದರೆ, ಇಂದು ಖಾಸಗಿ ಶಾಲಾ ವಲಯವು ಸರ್ಕಾರಿ ಶಾಲಾ ವಲಯಕ್ಕೆ ಪೂರಕವಾಗಿ ನಿಂತಿಲ್ಲ. ಅದು ಸರ್ಕಾರಿ ವಲಯಕ್ಕೆ ಸ್ಪರ್ಧಿಯಾಗಿದೆ. ಒಮ್ಮೆ ಈ ಸ್ಥಿತಿ ಅಂಗೀಕೃತವಾದ ನಂತರ ಇಂಗ್ಲಿಷ್ ಭಾಷೆಯೇ ನಮ್ಮ ಉದ್ಧಾರಕ ಎನ್ನುವಂತೆ ಭ್ರಮೆ ಹುಟ್ಟಿಸುವುದು ಆ ವಲಯದ 'ವ್ಯಾಪಾರಿ ಧರ್ಮ'. ಈ ವ್ಯಾಮೋಹದ ಬಲೆಗೆ ಪೋಷಕರು ಸುಲಭವಾಗಿ ಬೀಳುತ್ತಿದ್ದಾರೆ. ಸರ್ಕಾರ ಏನೂ ಮಾಡಲಾರದ ನಿಸ್ಸಹಾಯಕ ಸ್ಥಿತಿಯನ್ನು ತಲುಪಿದೆ. ಈ ವ್ಯಾಮೋಹಕ್ಕೆ ಕ್ರಮೇಣ ಸರ್ಕಾರವೂ ಬಲಿಯಾಗಿದೆ.

2018ರ ಈಚೆಗೆ ಸರ್ಕಾರವೇ ಇಂಗ್ಲಿಷ್ ಮಾಧ್ಯಮದ ಪಬ್ಲಿಕ್ ಶಾಲೆಗಳನ್ನು ಆರಂಭಿಸಿದೆ. ವರ್ಷವರ್ಷ ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದೇ ಪ್ರಗತಿಪರ ಹೆಜ್ಜೆ ಎಂದು ಭಾವಿಸಿದೆ. ಈ ಶಾಲೆಗಳಿಗೆ ಹೆಚ್ಚಿನ ಮೂಲ ಸೌಕರ್ಯ, ನುರಿತ ಶಿಕ್ಷಕರನ್ನು ಒದಗಿಸಲಾಗುತ್ತದೆ. ಇದೆಲ್ಲದರ ಪ್ರಭಾವದಲ್ಲಿ, ಈಗಾಗಲೇ ಬಡವಾಗಿರುವ ಕನ್ನಡ ಮಾಧ್ಯಮದ ಶಾಲೆಗಳ ಮಟ್ಟಿಗೆ, 'ಸೋರುತಿಹುದು ಶಾಲೆ ಮಾಳಿಗೆ, ಅಜ್ಞಾನದಿಂದ...' ಎನ್ನುವ ಸ್ಥಿತಿ ಒದಗಿದೆ. ಇಂಥ ಸ್ಥಿತಿಯಲ್ಲಿ 'ಕನ್ನಡದ ಬಗ್ಗೆ ನಿರಾಸಕ್ತ ಮನೋಭಾವ' ಎಂದು ವಿಕಾಸಸೌಧದಲ್ಲಿ ನಿಂತು ಹೇಳಿದರೆ ಏನು ಪ್ರಯೋಜನ?

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡೇತರರಿಗೆ ಕನ್ನಡ ಕಲಿಸುತ್ತಿದೆ, ಸಂತೋಷ. ಆದರೆ ಅದರ ಹೊಣೆಗಾರಿಕೆಯಲ್ಲಿ ಇದು ಅತ್ಯಂತ ಕಡಿಮೆ ಆದ್ಯತೆಯ ಕೆಲಸ. ಇದನ್ನು ನಮ್ಮಂಥವರೂ ಮಾಡಬಹುದು. ಆದರೆ, ವಿಧಾನಸೌಧದಲ್ಲಿಯೇ ಕಚೇರಿಯನ್ನು ಹೊಂದಿರುವ, ಕ್ಯಾಬಿನೆಟ್ ದರ್ಜೆಯ ಸಚಿವ ಸ್ಥಾನ ಹೊಂದಿರುವ ಅಧ್ಯಕ್ಷರು ಮತ್ತು ನಾಡಿನ ವಿದ್ವಜ್ಜನರನ್ನು ಸದಸ್ಯರು, ಸಹವರ್ತಿಗಳನ್ನಾಗಿ ಹೊಂದಿರುವ ಪ್ರಾಧಿಕಾರವು ಕನ್ನಡ ಭಾಷೆಯ ಮಟ್ಟಿಗೆ ಸಂಬಂಧಪಟ್ಟ ಇಲಾಖೆಗಳಿಗೆ, ಸರ್ಕಾರಕ್ಕೆ ಸಲಹೆ, ಸೂಚನೆ, ಶಿಫಾರಸು, ನಿರ್ದೇಶನವನ್ನು ನೀಡುವ ಅತ್ಯುನ್ನತ ಅಧಿಕಾರವನ್ನು ಹೊಂದಿದೆ.

ಶಿಕ್ಷಣ, ಆಡಳಿತ, ನ್ಯಾಯಾಂಗ, ವಾಣಿಜ್ಯದಂತಹ ಕ್ಷೇತ್ರಗಳಲ್ಲಿ ಇಂದಿಗೂ ಇರುವ ಕನ್ನಡದ ಪ್ರಾಧಾನ್ಯ, ಅನಿವಾರ್ಯದ ಕುರಿತು ಸಮೀಕ್ಷೆ, ದತ್ತಾಂಶ, ಸಿದ್ಧಾಂತ, ವಸ್ತುನಿಷ್ಠ ಯೋಜನೆಗಳ ಸಹಿತ ಸರ್ಕಾರವು ಸರಿಯಾದ ದಾರಿಯಲ್ಲಿ ನಡೆಯುವಂತೆ ಮಾಡಬೇಕಾದ ಜವಾಬ್ದಾರಿ ಪ್ರಾಧಿಕಾರಕ್ಕಿದೆ. ಹಾಗೆಯೇ, ಏನೋ ಒಂದಷ್ಟು ಕಾರ್ಯಕ್ರಮಗಳನ್ನು ಮಾಡುತ್ತಾ ಕಾಲ ಕಳೆಯುವ ಮಟ್ಟಕ್ಕೆ ಪ್ರಾಧಿಕಾರವನ್ನು ತರದ ಹಾಗೆ, ಅದರ ಘನತೆ, ಅಗತ್ಯಗಳನ್ನು ಪೋಷಿಸಿಕೊಂಡು ಹೋಗುವ ಬದ್ಧತೆ ಸರ್ಕಾರಕ್ಕಿರಲಿ ಎಂದು ಹಾರೈಸೋಣ.

ವಾಚಕರ ವಾಣಿ

ಸಂಪುಟ ಸಭೆ: ಮನಬಂದಂತೆ ತೀರ್ಮಾನ

ಕ್ಯಾಬಿನೆಟ್ ಅನುಮೋದನೆ ಎಂದರೆ, ಪಂಚಾಯಿತಿ ಸದಸ್ಯರು ಸಭೆ ಸೇರಿ, ತಮಗೆ ಏನು ಬೇಕೋ ಹಾಗೆ ಬರೆದುಕೊಳ್ಳುವ ವ್ಯವಸ್ಥೆಗಿಂತ ಭಿನ್ನವಾದುದೇನೂ ಅಲ್ಲ. ರಾಜಕಾರಣಿಗಳೆಲ್ಲಾ ಒಂದೇ ಎಂಬುದು ಸಾರ್ವಜನಿಕರಿಗೆ ಮೊದಲು ಅರ್ಥವಾಗಬೇಕು. ವಿರೋಧ ಪಕ್ಷದವರಾಗಿದ್ದಾಗ ಇದ್ದ ಎಲ್ಲ ಜನಪರ ಕಾಳಜಿಗಳೂ ಅಧಿಕಾರಕ್ಕೆ ಬಂದೊಡನೆ ಬದಲಾಗಿ ಜನವಿರೋಧಿ ಆಗುವುದು ವಿಚಿತ್ರವಾಗಿ ಕಾಣುತ್ತದೆ. ಒಂದು ವಾರದಿಂದ ರಾಜ್ಯದ ರಾಜಕೀಯ ದೂಳೆರಚಾಟವನ್ನು ನೋಡುತ್ತಿದ್ದೇವೆ. ಈ ದೂಳೆರಚಾಟ ಏಕೆಂದರೆ, ಅದು ಸಾರ್ವಜನಿಕರ ಕಣ್ಣಿಗೆ ಕಾಣದಿರಲಿ ಎಂಬುದೇ ಆಗಿದೆ.

ಜಿಂದಾಲ್ ಕಂಪನಿಗೆ 3,677 ಎಕರೆ ಭೂಮಿಯನ್ನು ಅತಿ ಕಡಿಮೆ ಬೆಲೆಗೆ ಕೊಡಲು ತೀರ್ಮಾನಿಸಿದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ಮತ್ತೊಂದು ನಿರ್ಧಾರ ಆಶ್ಚರ್ಯಕರವಾಗಿಯೂ ಹಾಸ್ಯಾಸ್ಪದವಾಗಿಯೂ ಇದೆ. ಅದೆಂದರೆ, ಕಲಬುರಗಿ ಸರ್ಕಾರಿ ಮಹಾವಿದ್ಯಾಲಯಕ್ಕೆ ಸೇರಿದ 3.7 ಎಕರೆ ಜಮೀನನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ಕಲಬುರಗಿ ಶಾಖೆಗೆ ನೀಡುವ ವಿಷಯ. ಶೈಕ್ಷಣಿಕ ಹಿತದೃಷ್ಟಿಯ ಕಾರಣ ನೀಡಿ, ಎರಡು ಸಾಲಿನ ತೀರ್ಮಾನದೊಂದಿಗೆ ಸರ್ಕಾರಿ ಜಾಗವನ್ನು ಒಂದು ಜಾತಿಯ ಸಂಘಟನೆಗೆ ಸರ್ಕಾರ ನೀಡಿಬಿಟ್ಟಿದೆ. 'ಶೈಕ್ಷಣಿಕ ಹಿತದೃಷ್ಟಿ' ಎಂದರೆ ಏನು? ಹಾಗಾದರೆ ಆ ಸರ್ಕಾರಿ ಕಾಲೇಜಿಗೆ ಶೈಕ್ಷಣಿಕ ಹಿತದೃಷ್ಟಿ ಇರಲಿಲ್ಲವೇ? ಪ್ರತಿ ಸಂಪುಟ ಸಭೆಯಲ್ಲಿ ಹೀಗೆ ತಮಗೆ ಬೇಕಾದಂತಹ ತೀರ್ಮಾನಗಳನ್ನು ಕೈಗೊಂಡು ಸರ್ಕಾರವನ್ನು ದಿವಾಳಿ ಎಬ್ಬಿಸುವ ಕೆಲಸವನ್ನು ಎಲ್ಲ ಪಕ್ಷಗಳ ನೇತೃತ್ವದ ಸರ್ಕಾರಗಳೂ ಮಾಡುತ್ತಾ ಬಂದಿವೆ. ಇಲ್ಲಿ ಯಾವುದೇ ಪಕ್ಷವೂ ಭಿನ್ನವಲ್ಲ. ಜನರ ಕಣ್ಣಿಗೆ ಮಣ್ಣೆರಚುವ ಕೆಲಸ ಇದು.

ಸಂತೋಷ ಕೌಲಗಿ, ಮೇಲುಕೋಟೆ

ದುಪ್ಪಟ್ಟು ಬೆಲೆ ಕೊಡಲು ಸಿದ್ಧ...!

ಸರ್ಕಾರ ತನಗೆ ಮಂಜೂರು ಮಾಡಿರುವ ಭೂಮಿಗೆ ಜಿಂದಾಲ್ ನೀಡುವ ಬೆಲೆಯ ದುಪ್ಪಟ್ಟು ಬೆಲೆ ನೀಡಿ ಐದು ಎಕರೆ ಖರೀದಿಸಲು ನಾನು ತಯಾರಿದ್ದೇನೆ. ಹೀಗೆ ಖರೀದಿಸುವ ಮನಸ್ಸಿರುವವರು ಸರ್ಕಾರಕ್ಕೆ ಮನವಿ ಸಲ್ಲಿಸೋಣ. ಮೊದಲೇ ಸಂಕಷ್ಟದಲ್ಲಿರುವ ಸರ್ಕಾರ ಈಗ ಇಷ್ಟು ಅಗ್ಗದ ಬೆಲೆಗೆ ಮಾರಿ ನಷ್ಟ ಯಾಕೆ ಮಾಡಿಕೊಳ್ಳುವುದು?

ನಾಗರಿಕರಾಗಿ ನಾವು ಜಮೀನು ಕೊಳ್ಳುವ ಆಫರ್ ಮೂಲಕ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಬೆಂಬಲ ಕೊಡೋಣ! ಜೈ ಭುವನೇಶ್ವರಿ!

ಕೆ.ಪಿ.ಸುರೇಶ, ಮೈಸೂರು

ಆಸ್ತಿ ವಿವಾದದ ಕರಾಳಮುಖ

ಆಸ್ತಿ ಜಗಳದಲ್ಲಿ ಅಕ್ಕ ತಂಗಿಯರೇ ಸೋದರನನ್ನು ಕೊಂದಿರುವ ಸುದ್ದಿ (ಪ್ರ.ವಾ., ಆ. 23) ಓದಿ ದಿಗಿಲಾಯಿತು. ಆಸ್ತಿಗಾಗಿ ತಂದೆಯನ್ನೇ ಕೊಂದು ಜೈಲು ಸೇರಿ, ಜಾಮೀನಿನ ಮೇಲೆ ಹೊರಬಂದಿದ್ದ ಸಹೋದರನನ್ನು ಅಕ್ಕ ತಂಗಿಯರು ಕಣ್ಣಿಗೆ ಖಾರದ ಪುಡಿ ಎರಚಿ, ಮಾರಕಾಸ್ತ್ರಗಳಿಂದ ಕೊಂದ ವಿಚಾರ ಇಂದಿನ ಸಮಾಜದಲ್ಲಿ ನಡೆಯುತ್ತಿರುವ ಆಸ್ತಿ ವಿವಾದಗಳ ಕರಾಳ ಮುಖವನ್ನು ಹೊರಗೆಡವುತ್ತದೆ. ವಿಶೇಷವಾಗಿ ದಾಯಾದಿಗಳು, ನೆರೆಹೊರೆಯವರ ನಡುವೆ ಜಾಗಕ್ಕೆ ಸಂಬಂಧಿಸಿದ ವಿವಾದ ಇದ್ದೇ ಇರುತ್ತದೆ. ಅಷ್ಟೇ ಏಕೆ? ಅಕ್ಕಪಕ್ಕದ ಮನೆ, ನಿವೇಶನಗಳಲ್ಲಿ ಒಂದೊಂದು ಇಂಚಿಗಾಗಿ ಅಪರಾಧಗಳೇ ನಡೆದು ಹೋಗುತ್ತವೆ. ಹೊರಗೆ ದೊಡ್ಡ ದೊಡ್ಡ ಮಾತುಗಳನ್ನಾಡುವ ನಾವು ಪಕ್ಕದವರ ಜೊತೆ ಒಂದು ಚಿಕ್ಕ ವಿಷಯಕ್ಕೂ ಹೃದಯ ವೈಶಾಲ್ಯ ತೋರುವುದಿಲ್ಲವಲ್ಲ!

ತಾಯಿ, ತಂದೆಯ ಆಸ್ತಿ, ಹಣದ ವಿಚಾರವಾಗಿ ಇಂದು ನ್ಯಾಯಾಲಯಗಳಲ್ಲಿ ವ್ಯಾಜ್ಯಗಳ ರಾಶಿಯೇ ಇದೆ. ಬಹುತೇಕ ಜಮೀನುಗಳಲ್ಲಿ ದಾರಿಯ ವಿಷಯವಾಗಿ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳು ಪರಿಹಾರವಾಗದೇ ಉಳಿದುಕೊಂಡಿವೆ. ಆದರೆ ಆಸ್ತಿ ವಿವಾದವು ಕೊಲೆ, ಸುಲಿಗೆಯ ಹಂತ ತಲುಪಿದಾಗ, ನಾಗರಿಕ ಸಮಾಜ ಎತ್ತ ಸಾಗುತ್ತಿದೆ ಎನಿಸಿ ಬೇಸರವಾಗುತ್ತದೆ. ಹಿಂದೆ ಚಿಕ್ಕ ಪುಟ್ಟ ವಿವಾದಗಳು ಊರ ಪಂಚಾಯಿತಿ ಕಟ್ಟೆಯಲ್ಲೇ ತೀರ್ಮಾನವಾಗುತ್ತಿದ್ದವು. ಊರಿನ ಹಿರಿಯರು, ನೆರೆಹೊರೆಯವರ ಮಾತಿಗೆ ಮನ್ನಣೆ ಕೊಡದ ಅಹಂಕಾರಿಗಳಿಂದ ಮತ್ತಷ್ಟು ಪ್ರಪಾತದೆಡೆಗೆ ಹೋಗುತ್ತಿದ್ದೇವೆ.

ತಿರುಪತಿ ನಾಯಕ್, ಕಲಬುರಗಿ

ನಮ್ಮ ಕ್ಲಿನಿಕ್: ಆಯುರ್ವೇದ ವೈದ್ಯರಿರಲಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ 'ನಮ್ಮ ಕ್ಲಿನಿಕ್'ಗಳು ವೈದ್ಯರ ಕೊರತೆ ಎದುರಿಸುತ್ತಿರುವುದು ವಿಪರ್ಯಾಸ. ಈ ಕೊರತೆಯನ್ನು ಅದು ಆಯುರ್ವೇದ ವೈದ್ಯರಿಂದ ನೀಗಿಸಿಕೊಳ್ಳಬಹುದು. ಜ್ವರದಂತಹ ಸಾಮಾನ್ಯ ಆರೋಗ್ಯ ಸಮಸ್ಯೆಗಳಿಗೆ ಇಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಇಂತಹ ಸಾಮಾನ್ಯ ಚಿಕಿತ್ಸೆಯನ್ನು ಎಂಬಿಬಿಎಸ್ ವೈದ್ಯರಷ್ಟೇ ಅಲ್ಲದೆ ಆಯುರ್ವೇದ ವೈದ್ಯರು ಸಹ ನೀಡಬಲ್ಲರು. ಇದೇ ಬಿಬಿಎಂಪಿಯು ಕೋವಿಡ್‌ನಂತಹ ನಿರ್ಣಾಯಕ ಅವಧಿಯಲ್ಲಿ ತನ್ನ ವ್ಯಾಪ್ತಿಯಲ್ಲಿ ಕೋವಿಡ್ ವಾರಿಯರ್‌ಗಳನ್ನಾಗಿ ಆಯುರ್ವೇದ ವೈದ್ಯರನ್ನು ನೇಮಕ ಮಾಡಿಕೊಂಡಿತ್ತು. ಆಗ ಅವರು ತಮಗೆ ವಹಿಸಿದ್ದ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದ್ದರು.

ತಿಂಗಳಿಗೆ ₹ 47,250ರಷ್ಟು ಕಡಿಮೆ ವೇತನ, ಒಂದು ವರ್ಷದ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವುದರಿಂದ ಎಂಬಿಬಿಎಸ್ ವೈದ್ಯರು ಬರುತ್ತಿಲ್ಲ ಎಂದು ಹೇಳುವ ಬಿಬಿಎಂಪಿಯ ಆರೋಗ್ಯ ವಿಭಾಗ, ಅದೇ ವೇತನಕ್ಕೆ ಅತ್ಯುತ್ಸಾಹದಿಂದ ಅಷ್ಟೇ ಗುಣಮಟ್ಟದ ಸೇವೆ ನೀಡಲು ಸಿದ್ಧರಿರುವ ಆಯುರ್ವೇದ ವೈದ್ಯರನ್ನು ನೇಮಕ ಮಾಡಿಕೊಳ್ಳಬೇಕು. ಈ ಮೂಲಕ ಅವರಿಗೆ ಸಾಮಾಜಿಕ ಭದ್ರತೆ ಒದಗಿಸುವುದರ ಜೊತೆಗೆ ನಮ್ಮ ಕ್ಲಿನಿಕ್‌ಗಳಲ್ಲಿ ವೈದ್ಯರ ಕೊರತೆ ಕಾರಣಕ್ಕೆ ಜನಸಾಮಾನ್ಯರು ಚಿಕಿತ್ಸೆ ಸೌಲಭ್ಯದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು.

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶರಾವತಿ ನೀರನ್ನು ಬೆಂಗಳೂರಿಗೆ ತರುವ ಯೋಜನೆ

ಐರಾವತದ ಹೊಟ್ಟೆಗೆ ಆರೆಜೀವಿತ ಶರಾವತಿ!



ಈ ಯೋಜನೆ ಜಾರಿಗೆ ಬಂದಿದ್ದೇ ಆದರೆ ಅತ್ತ ಶರಾವತಿ ಕೊಳ್ಳಕ್ಕೂ ಅದರಾಚಿನ ಸಮುದ್ರಕ್ಕೂ ಅನ್ಯಾಯ, ಗುಡ್ಡಬೆಟ್ಟಗಳ ಪರಿಸರಕ್ಕೂ ಅನ್ಯಾಯ, ಇತ್ತ ಬೆಂಗಳೂರಿಗೂ ಅನ್ಯಾಯ ಆಗುವುದು ಗ್ಯಾರಂಟಿ. ಈಗಾಗಲೇ ಸೋತು ಸತ್ವಹೀನಳಾದ ಶರಾವತಿಯಿಂದ ನೀರನ್ನು ಎತ್ತಿ ಬೇರೆಡೆ ರವಾನಿಸಿದರೆ, ಸಮುದ್ರ ಇನ್ನಷ್ಟು ಒಳಕ್ಕೆ ನುಗ್ಗುವುದು ಗ್ಯಾರಂಟಿ

• ನಾಗೇಶ ಹೆಗಡೆ

ಕಾವೇರಿಯನ್ನು 'ಜೀವನದಿ' ಎನ್ನುವುದಾದರೆ ಶರಾವತಿಯನ್ನು ಈ ರಾಜ್ಯದ 'ನಿರ್ಜೀವ ನದಿ' ಎನ್ನಬಹುದು.

ಒಂದು ಕಾಲದಲ್ಲಿ ಸಮೃದ್ಧ ಜೀವಖಜಾನೆಯಾಗಿದ್ದ ಸುಂದರ ಶರಾವತಿ ಕೊಳ್ಳವನ್ನು ನಾವು ಕಳೆದ 60 ವರ್ಷಗಳಿಂದ ಚಿಂದಿಚಿಂದಿ ಮಾಡುತ್ತಲೇ ಬಂದಿದ್ದೇವೆ. ಅದು ಈಗ 'ನದಿ'ಯಾಗಿ ಉಳಿದಿಲ್ಲ. ಅಂಕುಡೊಂಕಿನ ತುಂಡುಗಳಾಗಿ, ಅಲ್ಲಲ್ಲಿ ನಿಂತ ನೀರಿನ ಬೃಹತ್ ಹೊಂಡಗಳಾಗಿ, ಬೇಸಿಗೆಯಲ್ಲಿ ನಗ್ನ ಐಲ್ಯಾಂಡ್‌ಗಳ ಮಾಲೆ ಹೊತ್ತು ನಿಲ್ಲುತ್ತದೆ. ಸಾವಿರಾರು ವರ್ಷಗಳಿಂದ ಅದು ತನ್ನ ಒಡಲಲ್ಲಿ ಜಲಚರಗಳನ್ನು ಪೋಷಿಸುತ್ತಲೇ ಸಮುದ್ರದಂಚಿನ ಅಳಿವೆಗೂ ಅದರಾಚಿನ ಸಮುದ್ರಕ್ಕೂ ಪೋಷಕಾಂಶಗಳನ್ನು ಪೂರೈಸುತ್ತ ಬಂದಿತ್ತು. ಈಗ ವರ್ಷದ ಬಹುಪಾಲು ಅವಧಿಯಲ್ಲಿ ಅದು 'ಫಿಲ್ಟರ್ಡ್' ನೀರನ್ನು ಅದೂ, ದಿನಕ್ಕೆ ಕೆಲವು ಗಂಟೆಗಳ ಕಾಲ ಸಮುದ್ರದತ್ತ ಮೆಲ್ಲಗೆ ತಳ್ಳಲು ಸೆಣಸುತ್ತಿದೆ. ಸಾಗರ ಜಲಚರಗಳಿಗೆ ಬೇಕಾದ ಪೋಷಕಾಂಶಗಳೆಲ್ಲ ಅಣೆಕಟ್ಟುಗಳ ಹಿಂಭಾಗದಲ್ಲಿ ಹೂಳಿನ ಖಜಾನೆಯಾಗಿದೆ.

ಅತ್ತ ಅಳಿವೆ ಸೊರಗುತ್ತಿದೆ. ಸಮುದ್ರದಿಂದ ನುಗ್ಗಿ ಬರುವ ಉಪ್ಪುನೀರನ್ನು ಮತ್ತು ಮರಳನ್ನು ಶರಧಿಗೆ ಹಿಂದಕ್ಕೆ ತಳ್ಳಲಾರದೆ ಶರಾವತಿ ಸೋಲುತ್ತಿದೆ. ಸಮುದ್ರವನ್ನೇ ತನ್ನ ಮೈಮೇಲೆ ಎಳೆದುಕೊಳ್ಳುತ್ತಿದೆ.

'ಹಿಂದೆಲ್ಲ ಆ ಅಳಿವೆಯ ಸಿಹಿಯುಪ್ಪು ನೀರಿನತ್ತ ಸಹಸ್ರಾರು ಬಗೆಯ ಜೀವಜಂತುಗಳು ಸಮುದ್ರದಿಂದ ಬಂದು ಮರಿ ಮಾಡಿ ಹಿಂದಿರುಗುತ್ತಿದ್ದವು. ಸುಮಾರು 40 ಬಗೆಯ ಕಪ್ಪೆಚಿಪ್ಪುಗಳು, ಸಿಗಡಿ ಮೀನುಗಳು ಅಳಿವೆಯಲ್ಲಿ ಸಿಗುತ್ತಿದ್ದವು. ದಡವಾಸಿಗಳಿಗೆ ಅದು ಜೀವನದಿಯಾಗಿತ್ತು. ಪಕ್ಕದ ಅಘನಾಶಿನಿ ಅಳಿವೆಯಲ್ಲಿ ಈಗಲೂ ಅಷ್ಟೇ ವೆರೈಟಿ ಚಿಪ್ಪುಗಳಿವೆ. ಏಕೆಂದರೆ ಅದು ಈಗಲೂ ಮುಕ್ತಧಾರೆ. ಆದರೆ ಶರಾವತಿ ಅಳಿವೆಯಲ್ಲಿ ಕೇವಲ ಒಂದು ಜಾತಿಯ ಕಪ್ಪೆಚಿಪ್ಪು ಮಾತ್ರ ಉಳಿದಿದೆ' ಎನ್ನುತ್ತಾರೆ ಸಾಗರ ಜೀವವಿಜ್ಞಾನಿ ಡಾ.ಸುಭಾಷ್ ಚಂದ್ರ.

ಶರಾವತಿಯ ನೀರು ಗೇರುಸೊಪ್ಪ ಜಲಾಶಯದಿಂದ ಜಿಗಿದ ನಂತರ 35 ಕಿ.ಮೀ. ದೂರ ಹರಿದು ಸಮುದ್ರ ಸೇರುತ್ತದೆ. ಆ ತೀರಗಳ ಉದ್ದಕ್ಕೂ ಕೃಷಿಗೆ, ಕುಡಿಯಲಿಕ್ಕೆ ನೀರುಣ್ಣಿಸುತ್ತ ಇದು ಮೆಲ್ಲಗೆ ಸಾಗುತ್ತಿತ್ತು. ಮಧ್ಯೆ ಅಲ್ಲಲ್ಲಿ ಸಣ್ಣಪುಟ್ಟ ಅಡ್ಡಗಟ್ಟೆ ಕಟ್ಟಿ, ನೀರನ್ನು ಪಂಪ್ ಮಾಡಿ ಅನೇಕ ಗ್ರಾಮ ಪಂಚಾಯ್ತಿಗಳಿಗೂ ಹೊನ್ನಾವರಕ್ಕೂ ಕುಡಿಯುವ ನೀರನ್ನು ಪೂರೈಸುವ ಯೋಜನೆಗಳು ಜಾರಿಯಲ್ಲಿವೆ. ಆದರೆ ಸಮುದ್ರದಿಂದ ಉಪ್ಪುನೀರು ಶರಾವತಿಯನ್ನು ಹಿಂದಕ್ಕೆ ತಳ್ಳುತ್ತ 15-20 ಕಿ.ಮೀ. ಗುಂಡಬಾಳದವರೆಗೂ ಒಳಕ್ಕೆ ನುಗ್ಗುತ್ತಿದೆ. ಕ್ರಮೇಣ ಅದು ಇನ್ನೂ ಒಳಕ್ಕೆ ನುಗ್ಗಿ ಅಳ್ಳಂಕಿ, ಸಂಶಿವರೆಗೂ ನುಗ್ಗಬಹುದು. ರೈತರ ಬದುಕು ದುಸ್ತರವಾದೀತು. ಏಕೆಂದರೆ, 1. ಸಮುದ್ರದ ಮಟ್ಟ ಮೆಲ್ಲಗೆ ಏರುತ್ತಿದೆ, 2. ಶರಾವತಿಯ ನೂಕುಬಲ ಕಡಿಮೆಯಾಗುತ್ತಿದೆ.

ಬೆಂಗಳೂರಿಗೆ ಅದೇ ಶರಾವತಿಯ ನೀರನ್ನು ಸಾಗಿಸಿ ತರುವ ಯೋಜನೆಯನ್ನು ನೋಡೋಣ. ಇಲ್ಲಿ 2014ರಲ್ಲೇ ಲಿಂಗನಮಕ್ಕಿಯಿಂದ 30 ಟಿಎಂಸಿ ಅಡಿ ನೀರನ್ನು ತರುವ ಯೋಜನೆಯನ್ನು ಜಲಮಂಡಳಿಯ ಅಂದಿನ ಅಧ್ಯಕ್ಷ ಬಿ.ಎನ್.ತ್ಯಾಗರಾಜ್ ನೇತೃತ್ವದ ಸಮಿತಿ ರೂಪಿಸಿತ್ತು. ಯಡಿಯೂರಪ್ಪ ಸರ್ಕಾರ ಆ ಯೋಜನೆಯನ್ನು ಘೋಷಿಸಿದಾಗ ಶಿವಮೊಗ್ಗ, ಉತ್ತರ ಕನ್ನಡ ಎರಡೂ ಜಿಲ್ಲೆಗಳಲ್ಲಿ ಪ್ರತಿಭಟನೆಯ ಕೂಗೆದ್ದಿತ್ತು. ಕಡತ ಬೆದರಿ ಮುದುಡಿ ಕೂತಿತ್ತು. ಮತ್ತೆ 2018ರಲ್ಲಿ ಜೆಡಿಎಸ್, ಕಾಂಗ್ರೆಸ್ ಮೈತ್ರಿ ಸರ್ಕಾರದ ಉಪಮುಖ್ಯಮಂತ್ರಿ ಜಿ.ಪರಮೇಶ್ವರ ಅದೇ ಪ್ರಸ್ತಾವವನ್ನು ಮುಂದಿಟ್ಟರು. ಅಷ್ಟರಲ್ಲಿ ಸರ್ಕಾರವೇ ಬಿದ್ದಿದ್ದರಿಂದ ಕಡತ ಮತ್ತೆ ಕಪಾಟು ಸೇರಿತ್ತು. ಈಗ ಕಡತಕ್ಕೆ ಮತ್ತೆ ಜೀವ ಬಂದಿದೆ. ಈ ಬಾರಿ ಇನ್ನೊಂದು ಮಾರ್ಗದಲ್ಲಿ, ಅಂದರೆ ಎತ್ತಿನಹೊಳೆಗೆ ಲಿಂಗನಮಕ್ಕಿಯ ನೀರನ್ನು ಸುರುವಿ ಅಲ್ಲಿಂದ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹರಿಸುತ್ತಾರಂತೆ. ಸಮುದ್ರಮಟ್ಟದಿಂದ ಲಿಂಗನಮಕ್ಕಿ 520 ಮೀಟರ್ ಎತ್ತರದಲ್ಲಿದೆ; ಬೆಂಗಳೂರು 920 ಮೀಟರ್ ಎತ್ತರದಲ್ಲಿದೆ.

'ಅಷ್ಟು ದೊಡ್ಡ ಪ್ರಮಾಣದ ನೀರನ್ನು 400 ಮೀಟರ್ ಎತ್ತರಕ್ಕೆ ಏರಿಸಲು ಅಪಾರ ಪ್ರಮಾಣದ ವಿದ್ಯುತ್ ಶಕ್ತಿ ಬೇಕಾಗುತ್ತದೆ' ಎನ್ನುತ್ತಾರೆ, ವಿದ್ಯುತ್ ಮಂಡಳಿಯಲ್ಲೇ ಕೆಲಸ ಮಾಡಿ ನಿವೃತ್ತರಾದ ಸಾಹಿತಿ ಗಜಾನನ ಶರ್ಮಾ. ತ್ಯಾಗರಾಜ ಸಮಿತಿ ತನ್ನ ವರದಿಯನ್ನು ಬಹಿರಂಗ ಮಾಡಿಲ್ಲವಾದರೂ ನೀರನ್ನು ಕನಿಷ್ಠ ಅಷ್ಟೆತ್ತರಕ್ಕೆ ಪಂಪ್ ಮಾಡಲೇಬೇಕು. ಅಲ್ಲಿಂದ 350 ಕಿ.ಮೀ. ದೂರದವರೆಗೆ ಗುಡ್ಡ, ಬೆಟ್ಟ, ಬೇಣದಲ್ಲಿ ಗಿಡಮರ ಕಡಿಯುತ್ತ, ಡೈನಮೈಟ್ ಸಿಡಿಸಿ ಅಗೆಯುತ್ತ, ಜಲಾಶಯ ನಿರ್ಮಿಸುತ್ತ ಆನೆಗಾತ್ರದ ಪೈಪ್‌ಲೈನನ್ನು ಬೆಂಗಳೂರಿಗೆ ಸಾಗಿಸಿ ತರಬೇಕು. ಯೋಜನೆಯ ಪ್ರಕಾರ ಮೊದಲ ಹಂತದಲ್ಲಿ ಹತ್ತೇ ಟಿಎಂಸಿ ಅಡಿ ನೀರನ್ನು ತಂದು ಕ್ರಮೇಣ ಹೆಚ್ಚಿಸುತ್ತ 30 ಟಿಎಂಸಿ ಅಡಿಗೆ ಏರಿಸಬೇಕು.

ಈ ಯೋಜನೆ ಜಾರಿಗೆ ಬಂದಿದ್ದೇ ಆದರೆ ಅತ್ತ ಶರಾವತಿ ಕೊಳ್ಳಕ್ಕೂ ಅದರಾಚಿನ ಸಮುದ್ರಕ್ಕೂ ಅನ್ಯಾಯ, ಗುಡ್ಡಬೆಟ್ಟಗಳ ಪರಿಸರಕ್ಕೂ ಅನ್ಯಾಯ, ಇತ್ತ ಬೆಂಗಳೂರಿಗೂ ಅನ್ಯಾಯ ಆಗುವುದು ಗ್ಯಾರಂಟಿ. ಈಗಾಗಲೇ ಸೋತು ಸತ್ವಹೀನಳಾದ ಶರಾವತಿಯಿಂದ ನೀರನ್ನು ಎತ್ತಿ ಬೇರೆಡೆ ರವಾನಿಸಿದರೆ, ಸಮುದ್ರ ಇನ್ನಷ್ಟು ಒಳಕ್ಕೆ ನುಗ್ಗುವುದು ಗ್ಯಾರಂಟಿ.

'ನಾವೇನು, ಕುಡಿಯುವ ನೀರಿಗಾಗಿ ಬೆಂಗಳೂರಿಗೆ ಬರಬೇಕಾ' ಎಂದು ಕೇಳುತ್ತಾರೆ ಹೊನ್ನಾವರದ ಪತ್ರಕರ್ತ ಕೃಷ್ಣಮೂರ್ತಿ ಹೆಬ್ಬಾರ್.

ಬೆಂಗಳೂರೆಂಬ ಬಕಾಸುರನಿಗೆ ನೀರಿನ ಬಾಯಾರಿಕೆ ಹೆಚ್ಚುತ್ತಲೇ ಇದೆ ನಿಜ. ಆದರೆ, 'ಇಲ್ಲಿ ಬೀಳುವ ಸರಾಸರಿ 900 ಮಿ.ಮೀ. ಮಳೆನೀರನ್ನು ಕೆರೆಗಳಲ್ಲಿ ತುಂಬಿಸಿದರೆ 15 ಟಿಎಂಸಿ ಅಡಿ ನೀರು ಇಲ್ಲೇ ಸಿಗುತ್ತದೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞ ಪ್ರೊ.ಟಿ.ವಿ. ರಾಮಚಂದ್ರ ಹೇಳುತ್ತಲೇ ಬಂದಿದ್ದಾರೆ. ಈ ಜಿಲ್ಲೆಯ ಅಜಮಾಸು 400 ಕೆರೆಗಳ ಹೂಳೆತ್ತಿಸಿ ಮಳೆನೀರನ್ನು ತುಂಬಿಸಿದರೆ, ಇದು ಚೀನಾದ ವೂಹಾನ್ ನಗರದ ಮಾದರಿಯಲ್ಲಿ ಇನ್ನೊಂದು ಸ್ಪಾಂಜ್ ಸಿಟಿ ಆಗಲು ಸಾಧ್ಯವಿದೆ. ಬೆಂಗಳೂರು ದಿನವೂ ಕೊಳೆ ಮಾಡಿ ಚೆಲ್ಲುತ್ತಿರುವ ನೀರನ್ನು ಸಿಂಗಪುರ ಮಾದರಿಯಲ್ಲಿ ಸಂಸ್ಕರಣೆ ಮಾಡಿದರೆ 'ಮತ್ತೆ 16 ಟಿಎಂಸಿ ಅಡಿ ನೀರು ಸಿಗುತ್ತದೆ' ಎಂದು ಪ್ರೊ. ಟಿವಿಆರ್ ಹೇಳುತ್ತಾರೆ. 'ಅದಕ್ಕೆ ₹2,200 ಕೋಟಿ ಸಾಕು' ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯ ಹಿಂದಿನ ಕಾರ್ಯದರ್ಶಿ ಶ್ರೀನಿವಾಸುಲು 2022ರಲ್ಲಿ ಹೇಳಿದ್ದರು. ಸಮುದ್ರಮಟ್ಟದಿಂದ ಇಷ್ಟೆತ್ತರದಲ್ಲಿ 31 ಟಿಎಂಸಿ ನೀರಿನ ನಿಧಿಯೇ ಇದ್ದಾಗ ಮೇಕೆದಾಟು, ಲಿಂಗನಮಕ್ಕಿಯ ನೀರಿಗಾಗಿ ಯೋಜನೆ ಹಾಕುವುದು ಯಾರ ಹಿತಾಸಕ್ತಿಗೊ?

ಇಡೀ ಜಗತ್ತೇ ಬಿಸಿಪ್ರಳಯದ ಬಾಗಿಲಲ್ಲಿದೆ. ಹಿಂದೆಯೂ ಲಿಂಗನಮಕ್ಕಿಯಲ್ಲಿ ನೀರು ತುಂಬಿದ್ದೇ ಅಪರೂಪ. ಮುಂದಿನ 10 ವರ್ಷಗಳಲ್ಲಿ ಅಲ್ಲಿ ಬರಗಾಲ ಬಂದರೆ, ಸಮುದ್ರದ ನೀರನ್ನೇ ಅಲ್ಲಿಗೆ ಎತ್ತಿ ಸುರಿಯುವ 'ಪಂಪ್ಡ್ ಸ್ಟೋರೇಜ್' ಯೋಜನೆ ಬೇಕಾದೀತು.

ಜೋಗ ಜಲಪಾತದಲ್ಲಿ ಧುಮುಕುವ ನೀರನ್ನು ನೋಡಿ, ಎಂಜಿನಿಯರ್ ವಿಶ್ವೇಶ್ವರಯ್ಯನವರು 'ಶಕ್ತಿಯ ಎಂಥಾ ಅಪವ್ಯಯ' ಎಂದು ಉದ್ಗರಿಸಿದ್ದರಂತೆ. ಈಗ ಅವರಿದ್ದಿದ್ದರೆ ಶರಾವತಿಯ ನೀರನ್ನು ಬೆಂಗಳೂರಿಗೆ ತರುವ ಯೋಜನೆಯನ್ನು ನೋಡಿ 'ಎಂಜಿನಿಯರಿಂಗ್ ಬುದ್ಧಿಶಕ್ತಿಯ ಎಂಥಾ ಅಪವ್ಯಯ' ಎನ್ನುತ್ತಿದ್ದರೇನೊ.

ಲೇಖಕ: ಪತ್ರಕರ್ತ, ವಿಜ್ಞಾನ ಲೇಖಕ

ಪ್ರಜಾವಾಣಿ ಚರ್ಚೆ

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ: ಪರ್ಯಾಯ ಇಲ್ಲವೇ?

ಸೂಕ್ಷ್ಮ ಪರಿಸರಕ್ಕೆ ಹಾನಿ, ಜನಜೀವನಕ್ಕೂ ಕೊಳ್ಳಿ

ಯೋಜನೆಯಿಂದ ಅರಣ್ಯ ಪ್ರದೇಶ ನಾಶ ಆಗುವುದಲ್ಲದೇ, ವನ್ಯಜೀವಿಗಳ ಪಥ ಛಿದ್ರವಾಗಲಿದೆ. ಕಾಡು ನಾಶವು ನದಿ ಪಾತ್ರದ ಮೇಲೆ, ಸ್ಥಳೀಯವಾದ ಮಳೆ ವಾತಾವರಣದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಶರಾವತಿ ನದಿಯಲ್ಲಿ ನೀರಿನ ಹರಿವು ಕಡಿಮೆಯಾಗಲಿದ್ದು, ಇಡೀ ಹೊನ್ನಾವರದ ಸಾಮಾಜಿಕ ಭದ್ರತೆಗೆ ಧಕ್ಕೆಯಾಗುತ್ತದೆ. ಸಾವಿರಾರು ಕುಟುಂಬಗಳು ಬದುಕಿನ ನೆಲೆ ಕಳೆದುಕೊಳ್ಳಲಿವೆ

• ಅಖಿಲೇಶ್ ಚಿಪ್ಪಳಿ

ಒಂದೆಡೆ, ಕಣ್ಣಿಗೆ ಕಾಣುವಷ್ಟು ದೂರದವರೆಗೂ ಉಪ್ಪು ನೀರಿನಿಂದ ಆವೃತವಾದ ಸಮುದ್ರ, ಮತ್ತೊಂದೆಡೆ ಮುಗಿಲೆತ್ತರಕ್ಕೆ ಚಾಚಿ ನಿಂತ ಗುಡ್ಡಬೆಟ್ಟಗಳು. ಎರಡರ ನಡುವೆ ಲಭ್ಯವಿರುವ ಚಿಕ್ಕ ಚಿಕ್ಕ ಪ್ರದೇಶದಲ್ಲಿ ದೊಡ್ಡ ಜನಸಮೂಹ ಬದುಕು ಕಟ್ಟಿಕೊಂಡಿದೆ. ಪಶ್ಚಿಮಘಟ್ಟದ ಕಾಲಬುಡದಲ್ಲಿರುವ ಹೊನ್ನಾವರ ತಾಲ್ಲೂಕಿನ ಬಹುತೇಕ ಜನರು ಇಂತಹ ಪ್ರದೇಶದಲ್ಲಿರುವ ಚಿಕ್ಕ ಹಿಡುವಳಿಯಲ್ಲಿ ತೋಟಗಾರಿಕೆಯನ್ನು ಅವಲಂಬಿಸಿ ಜೀವನ ಸಾಗಿಸುತ್ತಾರೆ. ಅವರ ಕೃಷಿ ಕಾರ್ಯಕ್ಕೆ ಮೂಲಾಧಾರ ಶರಾವತಿ ನದಿಯ ನೀರು.

ಬಯಲುನಾಡಿನ ಸಮತಟ್ಟಾದ ಪ್ರದೇಶದಲ್ಲಿ ಕೃಷಿ, ತೋಟಗಾರಿಕೆ ಮಾಡುವುದಕ್ಕೆ ಹೋಲಿಸಿದರೆ, ಗುಡ್ಡಗಾಡಿನ ಕಿರುಪ್ರದೇಶದಲ್ಲಿ ಕೃಷಿ-ತೋಟಗಾರಿಕೆ ಮಾಡಲು ವಿಶೇಷ ಪಾರಂಪರಿಕ ಜ್ಞಾನ, ಬುದ್ಧಿವಂತಿಕೆ ಮತ್ತು ಶ್ರಮ ಬೇಕು. ಇವೆರಡಿದ್ದರೆ ಸಾಲದು; ಮಳೆಗಾಲದ ಅವಧಿ ಬಿಟ್ಟು, ಬಾಕಿ ಇಡೀ ವರ್ಷ ನಿಯಮಿತವಾಗಿ ಸಿಹಿ ನೀರು ಬೇಕು. ಇದಕ್ಕೆ ಇಲ್ಲಿನ ಜನ ನಂಬಿರುವುದು ಶರಾವತಿ ನದಿಯನ್ನು. ಹೊನ್ನಾವರ ನಗರ ಪ್ರದೇಶ, ಕರ್ಕಿ, ಮಂಕಿ ಹಾಗೂ ಮುರುಡೇಶ್ವರಕ್ಕೆ ಶರಾವತಿ ನದಿ ಕುಡಿಯುವ ನೀರಿನ ಮೂಲ. ಇಡೀ ತಾಲ್ಲೂಕು ಶರಾವತಿ ನದಿಯ ಆರೋಗ್ಯ ಹಾಗೂ ಅದರ ಹರಿವಿನ ಮೇಲೆ ಅವಲಂಬಿತವಾಗಿದೆ. ಕರ್ನಾಟಕ ವಿದ್ಯುತ್ ನಿಗಮವು ಶರಾವತಿ ಕಣಿವೆಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ, ಅಲ್ಲಿನ ಸೂಕ್ಷ್ಮ ಭೌಗೋಳಿಕ ಪರಿಸರಕ್ಕೆ ಮತ್ತು ಇಡೀ ತಾಲ್ಲೂಕು ಹಾಗೂ ಜನರ ಬದುಕಿಗೆ ಕೊಳ್ಳಿ ಇಡುವುದು ಖಚಿತ.

ನದಿಯೊಂದು ಸಮುದ್ರ ಸೇರುವ ಪ್ರದೇಶಕ್ಕೆ 'ಅಳಿವೆ' ಎನ್ನುತ್ತಾರೆ. ಇಂತಹ ಅಳಿವೆ ಪ್ರದೇಶಗಳನ್ನು ಸಮುದ್ರದ 'ನರ್ಸರಿ' ಎಂದು ಕರೆಯಲಾಗುತ್ತದೆ. ಕಡಿಮೆ ಅಥವಾ ಹದವಾದ ಲವಣಾಂಶವಿರುವ ಇಲ್ಲಿ ಅನೇಕ ಕಿರುಜಲಜೀವಿಗಳಿರುತ್ತವೆ. ಇವುಗಳು ಅನೇಕ ಪ್ರಭೇದದ ಮೀನುಗಳ ಮರಿಗಳಿಗೆ ಆಹಾರವಾಗುತ್ತವೆ. ಆದ್ದರಿಂದಲೇ ಮೀನುಗಳು ಈ ಪ್ರದೇಶದಲ್ಲಿ ಬಂದು ಮೊಟ್ಟೆಯಿಡುತ್ತವೆ. ಕಡಿಮೆ ಲವಣಾಂಶದ ಈ ಪ್ರದೇಶ ಮತ್ಸ್ಯ ಸಂತತಿಗಳ ನರ್ಸರಿಯಾಗಿದ್ದು, ನದಿಯ ಸಿಹಿನೀರು ಅಳಿವೆಯ ಉಳಿವಿಗೆ ಅತಿ ಅವಶ್ಯ. ಶರಾವತಿ ತಪ್ಪಲಿನಿಂದ ಸೋಸಿಕೊಂಡು ಬಂದ ಮರಳು ಅಳಿವೆಯ ಹಿಂಭಾಗದ ಪ್ರದೇಶದಲ್ಲಿ ಶೇಖರಣೆಯಾಗುತ್ತದೆ. ಈ ಮರಳು ಉತ್ಕೃಷ್ಟವಾಗಿದ್ದು, ಕಟ್ಟಡ ನಿರ್ಮಾಣದಲ್ಲಿ ಬಳಕೆಯಾಗುತ್ತದೆ. ಕಟ್ಟಡ ಕಾರ್ಮಿಕರ ಬದುಕು ಈ ಮರಳಿನ ಮೇಲೆ ಅವಲಂಬಿಸಿದೆ.

1977ರಲ್ಲಿ ಶರಾವತಿ ಅಭಯಾರಣ್ಯವನ್ನು ಘೋಷಿಸಿ ಅಧಿಸೂಚನೆ ಹೊರಡಿಸಲಾಯಿತು. ಆಗ ಅದರ ವ್ಯಾಪ್ತಿ 430 ಚದರ ಕಿ.ಮೀ ಆಗಿತ್ತು. ಜೋಗ ಜಲಪಾತ ನಂತರದ ಶರಾವತಿ ಕಣಿವೆ ಯಾವುದೇ ಸಂರಕ್ಷಣೆಗೆ ಒಳಪಟ್ಟಿರಲಿಲ್ಲ. 2019ರಲ್ಲಿ ಅಭಯಾರಣ್ಯದ ವ್ಯಾಪ್ತಿಯನ್ನು 930 ಚದರ ಕಿ.ಮೀಗೆ ವಿಸ್ತರಿಸಿ, ಶರಾವತಿ ಸಿಂಗಳೀಕ ಅಭಯಾರಣ್ಯವೆಂದು ಮರುನಾಮಕರಣ ಮಾಡಲಾಯಿತು. ಅತ್ಯಂತ ವಿಶಿಷ್ಟ, ಪಾರಿಸರಿಕವಾಗಿ ಸೂಕ್ಷ್ಮವಾದ ಹಾಗೂ ಅನನ್ಯವಾದ ಈ ಕಣಿವೆ ಪ್ರದೇಶವು ಅತಿಹೆಚ್ಚು ಜೀವಿವೈವಿಧ್ಯ ಹೊಂದಿದೆ. ಸಿಂಗಳೀಕ, ದೊಡ್ಡಮಂಗಟ್ಟೆ ಪಕ್ಷಿ ಸೇರಿದಂತೆ, ಹುಲಿ, ಆನೆ, ಚಿರತೆ, ಕಾಟಿ, ಕರಡಿ, ಕಾಡುಹಂದಿ, ಮುಳ್ಳುಹಂದಿ, ಚಿಪ್ಪುಹಂದಿ, ನರಿ, ಸೀಳುನಾಯಿ, ಕಾನುಕುರಿ ಇತ್ಯಾದಿ ಅಪರೂಪದ ಪ್ರಾಣಿಗಳ ತವರಾಗಿದೆ.



ಈಗ, ಇದೇ ಸಂರಕ್ಷಿತ ಪ್ರದೇಶದಲ್ಲಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಗೆ ಕರ್ನಾಟಕ ವಿದ್ಯುತ್ ನಿಗಮ ಮುಂದಾಗಿದೆ. ಹೆಚ್ಚು ಬೇಡಿಕೆ ಇರುವ ಹೊತ್ತಿನಲ್ಲಿ ಗುಣಮಟ್ಟದ ವಿದ್ಯುಚ್ಛಕ್ತಿ ಪೂರೈಸುವುದು ಈ ಯೋಜನೆ ಉದ್ದೇಶ. ಇದಕ್ಕಾಗಿ, ಶರಾವತಿ ಸಿಂಗಳೀಕ ಅಭಯಾರಣ್ಯ ಕೇಂದ್ರ ಭಾಗದಲ್ಲಿ 1000 ಎಕರೆ ಪ್ರದೇಶವನ್ನು ಬಳಸಲು ನಿಗಮ ಹೊರಟಿದೆ. ಗುಡ್ಡವನ್ನು ಕೊರೆದು ಆಳದಲ್ಲಿ ಘಟಕ ನಿರ್ಮಿಸಲಾಗುವುದರಿಂದ ಅಲ್ಲಿನ ಪರಿಸರಕ್ಕೆ ಅತಿಹೆಚ್ಚು ಹಾನಿಯಾಗಲಿದೆ. ಯೋಜನೆಗೆ ಬೇಕಾಗುವ ಸಾಮಗ್ರಿ, ಯಂತ್ರಗಳು, ಪೈಪುಗಳನ್ನು ಸಾಗಿಸಲು ರಸ್ತೆ ನಿರ್ಮಾಣ ಮಾಡುವುದು, ಕಾರ್ಮಿಕರಿಗೆ ತಾತ್ಕಾಲಿಕ ಮನೆಗಳನ್ನು ನಿರ್ಮಿಸುವುದು ಇತ್ಯಾದಿಗಳಿಂದಾಗಿ ಇನ್ನಷ್ಟು ಅರಣ್ಯ ಪ್ರದೇಶ ನಾಶವಾಗುವುದಲ್ಲದೇ, ವನ್ಯಜೀವಿಗಳ ಪಥ ಛಿದ್ರವಾಗಲಿದೆ. ಕಾಡು ನಾಶವು ನದಿ ಪಾತ್ರದ ಮೇಲೆ ಹಾಗೂ ಸ್ಥಳೀಯವಾದ ಮಳೆ ವಾತಾವರಣದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಯೋಜನೆ ಜಾರಿಯಾದಲ್ಲಿ ಶರಾವತಿ ನದಿಯಲ್ಲಿ ನೀರಿನ ಹರಿವು ಕಡಿಮೆಯಾಗಲಿದ್ದು, ಇಡೀ ಹೊನ್ನಾವರದ ಸಾಮಾಜಿಕ ಭದ್ರತೆಗೆ ಧಕ್ಕೆಯಾಗುತ್ತದೆ. ಸಾವಿರಾರು ಕುಟುಂಬಗಳು ಬದುಕಿನ ನೆಲೆಯನ್ನು ಕಳೆದುಕೊಳ್ಳಲಿದ್ದು, ಜಲಚರಗಳ ಕೊರತೆಯಿಂದಾಗಿ ಬೆಸ್ತರ ಬದುಕು ಹೈರಾಣಗಲಿದೆ. ಹಣಕಾಸು ವಹಿವಾಟು ನಡೆಸುವ ಸರ್ಕಾರಿ ಕೃಷಿ ಉತ್ಪನ್ನ ಮಾರುಕಟ್ಟೆಯ ವ್ಯವಹಾರಗಳು ಹೊನ್ನಾವರದಲ್ಲಿ ತಾಲ್ಲೂಕಿನ ಬೆಳೆಯಲಾಗುವ ಅಡಿಕೆ, ತೆಂಗು ಮತ್ತು ಕಾಳುಮೆಣಸನ್ನೇ ನಂಬಿಕೊಂಡಿವೆ. ನೀರಿನ ಕೊರತೆಯಿಂದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ಕೃಷಿಕರ ಬದುಕು ಮೂರಾಬಟ್ಟೆಯಾಗಲಿದೆ.

ಪರ್ಯಾಯ ಸಾಧ್ಯತೆಗಳಿವೆ: ವಿದ್ಯುತ್ತಿಗೆ ಅತಿಹೆಚ್ಚು ಬೇಡಿಕೆ ಇರುವ ಬೆಳಗಿನ ಹಾಗೂ ಸಂಜೆಯ ಎರಡು ತಾಸುಗಳ ಹೊತ್ತಿನಲ್ಲಿ ವಿದ್ಯುತ್ ಪೂರೈಸಲು ಕೈಗೆತ್ತಿಕೊಳ್ಳಲಾಗುತ್ತಿರುವ ಈ ಯೋಜನೆಗೆ, ಪರ್ಯಾಯ ಹಾಗೂ ಸುಲಭದ ಪರಿಹಾರವಿಲ್ಲವೇ? ಖಂಡಿತವಾಗಿಯೂ ಇವೆ. ಜಾರಿಗೊಳಿಸಲು ಇಚ್ಛಾಶಕ್ತಿ ಬೇಕಷ್ಟೆ.

ಮೈಸೂರಿನ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಬೀದಿ ದೀಪಗಳ ಬಗ್ಗೆ ಅಧ್ಯಯನ ನಡೆಸಿದ್ದು, ಮೈಸೂರಿನ ಬೀದಿ ದೀಪಗಳು ಅಗತ್ಯಕ್ಕಿಂತ ಹೆಚ್ಚು ಬೆಳಕನ್ನು ಬೀರುತ್ತವೆ ಎಂಬುದನ್ನು ಕಂಡುಕೊಂಡಿದ್ದಾರೆ. ಬ್ಯೂರೊ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ ಮಿತಿಗಿಂತ 2.5 ಪಟ್ಟು ಹೆಚ್ಚು ಬೆಳಕನ್ನು ಬೀದಿ ದೀಪಗಳು ಬೆಳಗುತ್ತವೆ. ಎಲ್ಲ ನಗರಗಳಲ್ಲೂ ಈ ಮಾದರಿಯೇ ಇದ್ದರೆ, ಮಿತಿಗಿಂತ ಹೆಚ್ಚು ಬೆಳಕನ್ನು ನೀಡುವ ಹಾಗೂ ಹೆಚ್ಚು ವಿದ್ಯುತ್ತನ್ನು ಬಳಸಿಕೊಳ್ಳುವ ಈ ಮಾದರಿಯನ್ನು ಸುಧಾರಿಸಬಹುದು. ಆಗ ವಿದ್ಯುತ್ ಬೇಡಿಕೆ ಕಡಿಮೆಯಾಗಲಿದೆ. ವಿದ್ಯುತ್ ಸಾಗಣೆಕೆ ಮತ್ತು ಸರಬರಾಜು ಪ್ರಕ್ರಿಯೆಯಲ್ಲಿ ಸೋರಿಕೆ ಪ್ರಮಾಣ ಹಾಲಿ ಶೇ 18 ಇದ್ದು, ಈ ಪ್ರಮಾಣವನ್ನು ಶೇ 8 ರಿಂದ ಶೇ 5ಕ್ಕೆ ಇಳಿಸುವುದಕ್ಕೆ ಸಾಧ್ಯವಿದೆ. ಈ ಕ್ರಮವೂ ಹೆಚ್ಚಿನ ವಿದ್ಯುತ್ ಬೇಡಿಕೆಯನ್ನು ಪೂರೈಸುವಲ್ಲಿ ತನ್ನ ಕೊಡುಗೆಯನ್ನು ನೀಡಲಿದೆ.

ಉದ್ಯಾನಗಳು ಹಾಗೂ ಬಸ್ ನಿಲ್ದಾಣ, ರೈಲು ನಿಲ್ದಾಣ, ವಾಣಿಜ್ಯ ಮಳಿಗೆಗಳು, ಕಾರ್ಖಾನೆಗಳು, ಶೈಕ್ಷಣಿಕ ಸಂಸ್ಥೆಗಳು, ಸರ್ಕಾರಿ ಕಚೇರಿಗಳು, ವಿಮಾನ ನಿಲ್ದಾಣ, ಕ್ರೀಡಾಂಗಣ, ವಾಚನಾಲಯ ಮುಂತಾದ ಕಡೆಗಳಲ್ಲಿ ಸೋಲಾರ್ ಅಳವಡಿಸಿ, ಕೊರತೆಯಾಗುವ ವಿದ್ಯುತ್ತನ್ನು ಪಡೆಯಬಹುದಾಗಿದೆ. ಆಧುನಿಕ ತಂತ್ರಜ್ಞಾನದ ಅಡಿ ವಿದ್ಯುತ್ ಉಳಿತಾಯ ಮಾಡುವ ವ್ಯವಸ್ಥೆಯೂ ಈಗ ಇದೆ. ದೊಡ್ಡ ಮಾಲ್‌ಗಳಲ್ಲಿನ ಹವಾನಿಯಂತ್ರಣ ವ್ಯವಸ್ಥೆಯು ಕಡಿಮೆ ವಿದ್ಯುತ್ ಬೇಡಿಕೆ ಇರುವ ಹೊತ್ತಿನಲ್ಲಿ ಸ್ವಯಂಚಾಲಿತವಾಗುತ್ತವೆ ಹಾಗೂ ಹೆಚ್ಚು ವಿದ್ಯುತ್ ಬೇಡಿಕೆ ಇರುವ ಹೊತ್ತಿನಲ್ಲಿ ಸ್ವಯಂಚಾಲಿತವಾಗಿಯೇ ನಿಲ್ಲುತ್ತವೆ. ಈ ತಂತ್ರಜ್ಞಾನವನ್ನು ಮನೆಗಳಲ್ಲೂ ಅಳವಡಿಸಿಕೊಳ್ಳುವ ಸಾಧ್ಯತೆಗಳನ್ನು ಪರಿಶೀಲನೆ ಮಾಡಬಹುದು.

ಬ್ಯಾಟರಿ ಎನರ್ಜಿ ಸೇವಿಂಗ್ ಸಿಸ್ಟಮ್ (BESS) ಎಂಬ ಮಾದರಿಯನ್ನು ಹೊರದೇಶಗಳಲ್ಲಿ ವ್ಯಾಪಕವಾಗಿ ಬಳಸಿಕೊಳ್ಳಲಾಗುತ್ತಿದೆ. ಕಡಿಮೆ ವಿದ್ಯುತ್ ಬೇಡಿಕೆ ಇರುವ ಸಮಯದಲ್ಲಿ ಉತ್ಪಾದನೆಯಾಗುವ ಹೆಚ್ಚುವರಿ ವಿದ್ಯುತ್ತನ್ನು ನೇರವಾಗಿ ಬ್ಯಾಟರಿಗಳಲ್ಲಿ ಸಂಗ್ರಹಿಸುವುದು ಹಾಗೂ ಹೆಚ್ಚು ಬೇಡಿಕೆ ಇರುವ ಹೊತ್ತಿನಲ್ಲಿ ಸಂಗ್ರಹಿಸಿಟ್ಟ ವಿದ್ಯುತ್ತನ್ನು ಬಳಸಿಕೊಳ್ಳುವುದು. ಈ ಮಾದರಿಗೆ ಹೊಸ ಅರಣ್ಯ ಪ್ರದೇಶವನ್ನು ನಾಶ ಮಾಡುವ ಅಗತ್ಯವಿಲ್ಲ. ಇದನ್ನು, ಎಲ್ಲಿ ಹೆಚ್ಚು ವಿದ್ಯುತ್ ಬೇಡಿಕೆ ಇರುತ್ತದೆಯೋ ಅಲ್ಲಿಯೇ ಅಳವಡಿಸಿಕೊಳ್ಳಬಹುದು. ಉದಾಹರಣೆಗೆ ಬೆಂಗಳೂರಿಗೆ ಹೆಚ್ಚು ವಿದ್ಯುತ್ ಬೇಡಿಕೆಯಿದ್ದು, ಈ ತಂತ್ರಜ್ಞಾನವನ್ನೂ ಅಲ್ಲಿಯೇ ಅಳವಡಿಸಿಕೊಳ್ಳಲು ಅವಕಾಶಗಳಿವೆ. ನಾಗರಿಕ ಸಮಾಜಕ್ಕೆ ಹೊರೆಯಾಗದ ಹಾಗೂ ಅರಣ್ಯ, ಜೀವಿವೈವಿಧ್ಯ ನೆಲೆಗಳನ್ನು ನಾಶ ಮಾಡದೇ ಇರುವ ಇಂತಹ ಪರ್ಯಾಯ ಮಾರ್ಗಗಳನ್ನು ಅಳವಡಿಸಿಕೊಳ್ಳಲು ಕರ್ನಾಟಕ ವಿದ್ಯುತ್ ನಿಗಮ ಚಿಂತಿಸಬೇಕಿದೆ.

ಲೇಖಕ: ಪರಿಸರ ತಜ್ಞ

ನಾವು ನೋಡಿದ ಸಿನಿಮಾ

'ಪೌಡರ್'ನಲ್ಲಿ ತಿಳಿ ಹಾಸ್ಯದ ಘಮ

ಪೌಡರ್(ಕನ್ನಡ)

- ನಿರ್ಮಾಣ: ಕೆಆರ್‌ಜಿ ಸ್ಟುಡಿಯೊಸ್ ಮತ್ತು ಟಿವಿಎಫ್ ಮೋಷನ್ ಪಿಕ್ಚರ್ಸ್
- ನಿರ್ದೇಶನ: ಜನಾರ್ದನ್ ಚಿಕ್ಕಣ್ಣ
- ತಾರಾಗಣ: ದಿಗಂತ್, ಧನ್ಯಾ ರಾಮ್‌ಕುಮಾರ್, ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ, ಶರ್ಮಿಳಾ ಮಾಂಡ್ರೆ, ನಾಗಭೂಷಣ್, ರವಿಶಂಕರ್ ಗೌಡ ಮತ್ತಿತರರು

ದಿಗಂತ್

ಬಾಲಿವುಡ್‌ನಲ್ಲಿ 'ದೆಲ್ಲಿ ಬೆಲ್ಲಿ' ಎಂಬ ಸಿನಿಮಾವೊಂದು ಬಹಳ ವರ್ಷಗಳ ಹಿಂದೆ ಬಂದಿತ್ತು. ಗ್ಯಾಂಗ್‌ಸ್ಟರ್ ಒಬ್ಬನಿಗೆ ಸೇರಿದ ಡೈಮಂಡ್ಸ್ ಅಪ್ಪಿತಪ್ಪಿ ಮೂವರು ಯುವಕರ ಕೈಸೇರುತ್ತದೆ. ಅವರು ಅದನ್ನು ಮಾರಾಟ ಮಾಡಿ ಲಕ್ಷಾಂತರ ರೂಪಾಯಿ ಹಣಗಳಿಸುತ್ತಾರೆ. ಆದರೆ ಗ್ಯಾಂಗ್‌ಸ್ಟರ್ ಡೈಮಂಡ್ಸ್‌ಗಾಗಿ ಅವರ ಹಿಂದೆ ಬೀಳುತ್ತಾನೆ. 'ಪೌಡರ್'ನ ಕಥೆಯೂ ಇದೇ ಎಳೆಯಲ್ಲಿದೆ. ವ್ಯತ್ಯಾಸವಿಷ್ಟೇ 'ಡೈಮಂಡ್ಸ್' ಬದಲು ಇಲ್ಲಿ 'ಪೌಡರ್' ಅರ್ಥಾತ್ ಮಾದಕವಸ್ತು ಇದೆ. 'ಫಿರ್ ಹೇರಾ ಫೇರಿ'ಯಲ್ಲೂ ಇದೇ ಮಾದರಿಯ ಕಥೆಯಿದೆ. ಚಿತ್ರಕಥೆಯಲ್ಲಿ ಹೊಸ ಪ್ರಯೋಗಗಳಷ್ಟೇ 'ಪೌಡರ್' ಸಿನಿಮಾದ ವಿಶೇಷತೆ.

ಸೂರ್ಯ(ದಿಗಂತ್) ಮೈಸೂರಿನ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡುವಾತ. ಆತನ ರೂಮ್‌ಮೇಟ್ ಕರಣ್(ಅನಿರುದ್ಧ). ಸೂರ್ಯನ ಪ್ರೇಯಸಿ ನಿತ್ಯಾ (ಧನ್ಯಾ ರಾಮ್‌ಕುಮಾರ್) ನರ್ಸ್. ಅತ್ತ ಚೀನಾದಲ್ಲಿರುವ ಬ್ರೂಸ್‌ಲಿ ಎಂಬಾತ ಮಾದಕವಸ್ತುಗಳ ಮಾರಾಟ ಜಾಲದ ಮುಖ್ಯಸ್ಥ. ಆತ ಪೌಡರ್ ರೂಪದಲ್ಲಿರುವ ವಿಶೇಷ ಮಾದಕವಸ್ತು-ವೊಂದನ್ನು ತಯಾರಿಸುತ್ತಾನೆ. ಆತ ಈ ವಿಶೇಷ ಮಾದಕ-ವಸ್ತುವನ್ನು ತಯಾರಿಸಿರುವುದರ ಹಿಂದೊಂದು ಕಥೆಯೂ ಇದೆ. ಅದನ್ನು ಭಾರತಕ್ಕೆ 'ಘಮ ಘಮ' ಎಂಬ ಬ್ರ್ಯಾಂಡ್‌ನ ಟಾಲ್ಕಮ್ ಪೌಡರ್ ಡಬ್ಬಿಯಲ್ಲಿ ಹಾಕಿ ಕಳ್ಳದಾರಿಯ ಮೂಲಕ ರವಾನಿಸುತ್ತಾನೆ. 'ಜೀವ್ಸ್' ಎಂಬಾತನ ಮೂಲಕ ಇದರ ವಿತರಣೆಯ ಜವಾಬ್ದಾರಿ ಅಣ್ಣಾಚಿಗೆ(ರಂಗಾಯಣ ರಘು) ಸಿಗುತ್ತದೆ. ಆದರೆ ಆ ಡಬ್ಬಿಗಳು ಅಪ್ಪಿತಪ್ಪಿ ಸೂರ್ಯ ಕೆಲಸ ಮಾಡುವ ಸೂಪರ್ ಮಾರ್ಕೆಟ್ ಸೇರುತ್ತವೆ. ಅಲ್ಲಿಂದ ಹಲವು ವ್ಯಕ್ತಿಗಳಿಗೆ ಇದು ಮಾರಾಟವಾಗುತ್ತದೆ. ಇದು ಟಾಲ್ಕಮ್ ಪೌಡರ್ ಅಲ್ಲ, ಬೇರೆ 'ಪೌಡರ್' ಎಂಬ ವಿಷಯ ಸೂರ್ಯ, ನಿತ್ಯಾ ಹಾಗೂ ಕರಣ್‌ಗೆ ತಿಳಿದ ನಂತರ ಕಥೆ ಮುಂದೆ ಸಾಗುತ್ತದೆ.

ನಿರ್ದೇಶಕರು ಮೊದಲ ಬಾರಿಗೆ ಹಾಸ್ಯ ಪ್ರಧಾನ ಸಿನಿಮಾ ಕೈಗೆತ್ತಿಕೊಂಡಿದ್ದಾರೆ. ಇಂತಹ ಸಿನಿಮಾಗಳ ಜೀವಾಳವೇ ಬರವಣಿಗೆ. ಈ ಸಿನಿಮಾದಲ್ಲಿ ಪಂಚ್ ಡೈಲಾಗ್‌ಗಳ ಕೊರತೆಯಿದೆ. ನಟರ ಆಂಗಿಕ ಅಭಿನಯಗಳಷ್ಟೇ ನಗು ತರಿಸುತ್ತವೆ. ಸಂಭಾಷಣೆಗಳಲ್ಲಿ ಹಾಸ್ಯ ತಿಳಿಯಾಗಿದೆ. ಕಥೆಯನ್ನು ಮೊದಲ ದೃಶ್ಯದಿಂದಲೇ ಊಹಿಸಿಕೊಂಡು ಹೋಗಬಹುದು. ಮೊದಲಾರ್ಧವನ್ನು ಪಾತ್ರಗಳ ಪರಿಚಯ ಹಾಗೂ ಅವುಗಳ ಸ್ಥಾಪನೆಗೆ ನಿರ್ದೇಶಕರು ಬಳಸಿಕೊಂಡಿದ್ದಾರೆ. ದ್ವಿತೀಯಾರ್ಧದ ನಂತರ ಚಿತ್ರಕಥೆ ಬಿಗಿಯಾಗುತ್ತದೆ. ಸಿನಿಮಾದ ವಿಎಫ್‌ಎಕ್ಸ್‌ಗೆ ಹೆಚ್ಚಿನ ಅಂಕ ಸಿಗಬೇಕು. ಕ್ಲೈಮ್ಯಾಕ್ಸ್‌ನಲ್ಲಿನ 10-15 ನಿಮಿಷದ ದೃಶ್ಯಗಳು ಕನ್ನಡ ಸಿನಿಮಾದಲ್ಲಿ ಹೊಸ ಪ್ರಯೋಗ. ಬರಹಗಾರ ಹಾಗೂ ನಿರ್ದೇಶಕರ ಈ ಕಲ್ಪನೆ ಹೊಸ ಲೋಕವನ್ನೇ ಇಲ್ಲಿ ಸೃಷ್ಟಿಸಿದೆ. ಕಥೆಗೊಂದು ಅರ್ಥವೂ ಇಲ್ಲಿ ಅಡಕವಾಗಿದೆ. ಈ ಭಾಗ ನೋಡಿಸಿಕೊಂಡು ಹೋಗುತ್ತದೆ. ಚಿತ್ರದ ಸಂಕಲನ ಹಾಗೂ ಅದ್ವೈತ್ ಗುರುಮೂರ್ತಿ ಛಾಯಾಚಿತ್ರಗ್ರಹಣವೂ ಚಿತ್ರದ ಪ್ರಮುಖ ಅಂಶಗಳಲ್ಲಿ ಒಂದು.

ಎಲ್ಲರೂ ತಮ್ಮ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಶರ್ಮಿಳಾ ತಮ್ಮ ಆ್ಯಕ್ಷನ್ ಸಾಮರ್ಥ್ಯವನ್ನು ತೋರಿಸಿದ್ದಾರೆ. 'ಅಣ್ಣಾಚಿ' ಪಾತ್ರದಲ್ಲಿ ರಂಗಾಯಣ ರಘು ಹಾಗೂ 'ಸುಲೈಮಾನ್' ಪಾತ್ರದಲ್ಲಿ ಗೋಪಾಲಕೃಷ್ಣ ದೇಶಪಾಂಡೆ ನಗಿಸುತ್ತಾರೆ. ಜಗ್ಗೇಶ್ ಅವರ ಧ್ವನಿ ಸಿನಿಮಾಗೆ ವೇದಿಕೆ ಹಾಕಿಕೊಟ್ಟಿದೆ. ಸಿನಿಮಾ ಯಾವ ಸಂದೇಶವನ್ನೂ ನೀಡುವ ಗೋಜಿಗೆ ಹೋಗುವುದಿಲ್ಲ. 'ಪೌಡರ್-2' ಸಿನಿಮಾ ಬರಲಿದೆ ಎನ್ನುವುದನ್ನು ನೇರವಾಗಿಯೇ ಹೇಳಲಾಗಿದೆ.

ಅಭಿಲಾಷ್ ಪಿ.ಎಸ್.

ಪದಬಂಧ 5782

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಹೇಳಿದುದನ್ನೇ ಮತ್ತೆ ಹೇಳುವುದು (4)
4.ಕ್ರೈಸ್ತರು ಧರಿಸುವ ಒಂದು ಧಾರ್ಮಿಕ ಲಾಂಛನ (3)
6.ಮುಂದೆ ಬರಲಿರುವ ಕಾಲ (3)
8.ರುಚಿಯುಳ್ಳ ರಸಸ್ವಾದನ ಶಕ್ತಿ! (4)
11.ತಂಬಾಕು ಕೊಯ್ಯಲು ಬಳಸುವ ಕಿರುಗತ್ತಿ (2)
12.ಈತ ಬಲು ಜಿಪುಣ (2)
13.ಏರುತಗ್ಗಿಲ್ಲದಿರುವುದು (3)
14.ಹೆಜ್ಜೆ ಹಾಕುವಾಗ ಕಿಣಿಕಿಣಿ ಶಬ್ದ ಮಾಡುವ ಕಿರುಗಂಟೆ (2)
15.ಪರಾಜಯದಲ್ಲೇ ಗೆಲುವು ಅಡಗಿದೆಯಲ್ಲಾ! (2)
16.ಕೊಂಡಿಗಳುಳ್ಳ ಲೋಹದ ಹಗ್ಗ ಉಲ್ಟಾ ಆಗಿಬಿಟ್ಟಿದೆ (4)
18.ದಯೆಗೊಂದು ಪರ್ಯಾಯ ಪದ (3)
20.ಈತ ಕಬ್ಬಿಣದ ಕೆಲಸಗಾರ (3)
21.ಮನಸ್ಸಿನ ತೇರು! (4)

ಮೇಲಿಂದ ಕೆಳಕ್ಕೆ

2.ಸೂಕ್ಷ್ಮವಾದುದನ್ನು ಹೀಗೆ ಹೇಳಿ (3)
3.ಭಕ್ತನು ಮುಕ್ತಿಗಾಗಿ ತೋರಿದ ಶ್ರದ್ಧೆಯಿಲ್ಲಿ ತಿರುವುಮುರುವಾಗಿದೆ (2)
4.ಗುರುವಿಗೆ ತಕ್ಕ ವಿದ್ಯಾರ್ಥಿ! (2)
5.ಸೂರ್ಯ ದೀಪ ಮುಂತಾದವುಗಳ ಪ್ರಕಾಶ (3)
7.ಆಲೋಚನೆಯ ರೀತಿಯಿದು (6)
9.ಬೇರೆಯ ಅಭಿಪ್ರಾಯ (5)
10.ಕಾಫಿನಾಡು ಎಂದೇ ಹೆಸರಾಗಿರುವ ಜಿಲ್ಲೆ (6)
11.ಬಾಡಿಗೆ ಕೊಡುವವನು (5)
15.ಜನರ ಹತ್ತಿರವಿರುವ ತಂದೆ (3)
17.ಕೊನೆಗೆ ಬೆಲೆಯಿಟ್ಟರೆ ಮಡಿಕೆ ಕಂಡೀತು (3)
18.ಕಠೋರವಾಗಿರುವ ಕೈ! (2)
19.ಮರದ ಪೀಠವಿಲ್ಲಿ ಉಲ್ಟಾ ಆಗಿದೆಯಲ್ಲಾ! (2)

5781ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ನವಸಾಗರ 3.ಕಳಸ
5.ವಿರಸ 7.ಕಾಳಗ
8.ತಪ್ಪುಕಲ್ಪನೆ 11.ಹಗುರ
12.ಣಕಲಂ 14.ಲುಬ್ಧಕ
15.ದೇಹಪ್ರಕೃತಿ

ಮೇಲಿಂದ ಕೆಳಕ್ಕೆ:

1.ನರಹತ್ಯೆ 2.ಗಹ್ವರ
4.ಸಭಾಂಗಣ 6.ಸಮೀಕರಣ
7.ಕಾಮನೆ 8.ತಸ್ಕರ
9.ತಹಸೀಲು 10.ಪರಿಣತಿ
13.ಕಲಹ

ಸುಡೊಕು 6167

		9			3		8	
	4			8				9
8			2	6		7		4
	8			2		1		5
		2	8		5		6	
5				3			2	
9		7	5					6
						9		
4	3		6		1		7	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6166 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಆಗಸ್ಟ್ 24, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಪಂಚಮಿ ಗಂ. 7-52 ನಂತರ ಷಷ್ಠಿ ಗಂ. 29-31 ನಕ್ಷತ್ರ: ಅಶ್ವಿನಿ ಗಂ. 18-06 ಯೋಗ: ಗಂಡ ಗಂ. 6-08, ಸಿಂಹ ಮಾಸದ 08 ನೇ ದಿನ, ಮಳೆನಕ್ಷತ್ರ: ಮಘಾ 3.
ರಾಹುಕಾಲ: ಬೆಳಿಗ್ಗೆ 09-00 – 10-30
ಸೂರ್ಯೋದಯ: 06-22 ಸೂರ್ಯಾಸ್ತ : 06-43
ಮುಸ್ಲಿಂ ದಿನಾಂಕ: 19 ಸಫರ್
ದಿನ ವಿಶೇಷ: ಶ್ರಾವಣ ಶನಿವಾರ, ಅದೃಷ್ಟ ಸಂಖ್ಯೆ : 5, 9

ಮೇಷ: ದೈವಾನುಕೂಲದಿಂದ ನಡೆಯಬೇಕಾದ ಶುಭ ಕಾರ್ಯಗಳನ್ನು ಹಿರಿಯರೊಂದಿಗೆ ಕುಳಿತು ನಿಶ್ಚಯ ಮಾಡಬಹುದು. ನಿಮ್ಮ ಶಕ್ತಿಗೂ ಮೀರಿ ನೀವು ಮಾಡಿದ ಕೆಲಸಗಳಿಂದಾಗಿ ದೈಹಿಕ ಆಯಾಸ ಉಂಟಾಗಬಹುದು.

ವೃಷಭ: ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ ಬರಲಿದೆ ಹಾಗೂ ಅದ್ದರಿಂದ ಹಗುರಾಗುವಿರಿ. ಮಗಳ ವಿಚಾರದಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ.

ಮಿಥುನ: ಪೂರ್ವ ನಿಯೋಜಿತವಾದ ಕೆಲಸ ಕಾರ್ಯಗಳು ಉತ್ತಮ ರೀತಿಯಲ್ಲಿ ನಡೆಯುತ್ತದೆ. ಆರೋಗ್ಯದಲ್ಲಿ ಉದಾಸೀನತೆ ತೋರದಿರಿ. ಇನ್ನೊಬ್ಬರನ್ನು ಅಥವಾ ಮೂಕ ಪ್ರಾಣಿಯನ್ನು ದಂಡಿಸುವುದು ಸರಿಯಲ್ಲ.

ಕರ್ಕಾಟಕ: ಲೇವಾದೇವಿ ವ್ಯವಹಾರ ಮಾಡುವವರಿಗೆ ಜವಾಬ್ದಾರಿಯ ಹೊರೆ, ಮಾನಸಿಕ ಒತ್ತಡ ಹೆಚ್ಚಲಿದೆ. ಕಾರ್ಖಾನೆಯಲ್ಲಿ ಹೊಸ ವಿದ್ಯುತ್ ಉಪಕರಣಗಳನ್ನು ಅಳವಡಿಸುವಲ್ಲಿ ಅಧಿಕ ಬಂಡವಾಳವನ್ನು ಹೂಡುವಿರಿ.

ಸಿಂಹ: ಸ್ನೇಹಿತರ ಹಾಗೂ ಬಂಧುಗಳ ಸಹಕಾರದಿಂದ ವ್ಯಾಪಾರ ವಹಿವಾಟುಗಳ ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ. ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸುವ ಬಗ್ಗೆ ತಂದೆಯವರಲ್ಲಿ ಮಾತನಾಡಿ.

ಕನ್ಯಾ: ಅದೃಷ್ಟವು ಚೆನ್ನಾಗಿರುವ ಕಾರಣ ಬಂದ ಅವಕಾಶಗಳನ್ನು ಬಳಸಿಕೊಂಡಲ್ಲಿ ವ್ಯಾಪಾರ ವ್ಯವಹಾರದಲ್ಲಿ ಅಧಿಕ ಲಾಭ ಕಾಣಬಹುದು. ನಿಮ್ಮ ಉದ್ಯೋಗದಲ್ಲಿನ ಬದಲಾವಣೆಯು ಉತ್ಸಾಹವನ್ನು ಹೆಚ್ಚಿಸುವುದು.

ತುಲಾ: ಹಿರಿಯ ಅಧಿಕಾರಿಗಳೊಬ್ಬರ ಭೇಟಿಯಿಂದ ಎಲ್ಲಾ ಕಾರ್ಯಗಳು ಸರಾಗವಾಗಿ ನಡೆಯುವುದು. ನೆರೆ-ಹೊರೆಯವರ ವಿಶ್ವಾಸ ಹೆಚ್ಚಿ ವ್ಯವಹಾರದಲ್ಲಿ ಲಾಭ ಅಧಿಕವಾಗುವುದು. ಕಾಗದದ ಉದ್ಯಮದವರಿಗೆ ಲಾಭ ಇರುವುದು.

ವೃಶ್ಚಿಕ: ನೂತನ ಮನೆ ನಿರ್ಮಾಣ, ನಿವೇಶನ ಖರೀದಿಯ ಆಲೋಚನೆಗಳಿಗೆ ಪೂರಕ ವಾತಾವರಣ ಸ್ನೇಹಿತರಿಂದ ಸಿಗಲಿದೆ. ವೀರಾಂಜನೇಯನಿಗೆ ಜೇನುತುಪ್ಪ ಅಭಿಷೇಕದಿಂದ ವ್ಯಾಧಿಗಳು ದೂರವಾಗುತ್ತದೆ.

ಧನು: ಹಣದ ಆಸೆಯಿಂದ ಹೊರಬರುವ ಪ್ರಯತ್ನವು ನೆಮ್ಮದಿಯ ಜೀವನಕ್ಕೆ ಕಾರಣವಾಗುತ್ತದೆ. ಮಗನ ಸಹಾಯದಿಂದ ಸಂಬಂಧಿಕರೊಬ್ಬರ ಕೆಲಸ ಸುಗಮವಾಗಿ ಕೈಗೂಡುವುದರಿಂದ ಹೆಚ್ಚಿನ ಸಂತಸವಿರುವುದು.

ಮಕರ: ಬಂಧುಗಳ ಮನೆಯಲ್ಲಿನ ಕೆಲವು ವಿಚಿತ್ರವಾದ ಆಚರಣೆಗಳು ಗೊಂದಲ ಉಂಟುಮಾಡಬಹುದು. ಅವಿವಾಹಿತರಿಗೆ ನಿರೀಕ್ಷೆಗೆ ಪೂರಕವಾದ ಪ್ರಚೋದನೆ ಲಭಿಸಲಿದೆ. ತಾಯಿಯ ಆರೋಗ್ಯದ ಬಗ್ಗೆ ಗಮನವಿರಲಿ.

ಕುಂಭ: ವಿವೇಚನೆಯಿಂದ ಆಲೋಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಉತ್ತಮ. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಗಮನವಹಿಸುವುದರಿಂದ ಯಶಸ್ಸು. ಸಂಸಾರದ ಜೊತೆಯಲ್ಲಿ ಕಾಲಕಳೆಯುವ ಸಮಯವಾಗಿದೆ.

ಮೀನ: ಕಾರ್ಯಶೈಲಿಯು ಆಫೀಸಿನಲ್ಲಿ ಮೆಚ್ಚುವ ಮಾತಾಗುವುದು. ಮನೆಯಲ್ಲಿ ಶುಭ ಕಾರ್ಯಗಳ ತಯಾರಿ ಉತ್ತಮ ರೀತಿಯಲ್ಲಿ ನಡೆಯುವುದು. ಉದ್ಯೋಗಸ್ಥರಿಗೆ ಬಡ್ತಿ ದೊರೆತು ಉತ್ತಮ ಫಲ ದೊರೆಯಲಿದೆ.

ಎಚ್.ಕೆ.ಪಾಟೀಲ, ಈಶ್ವರ ಖಂಡ್ರೆ, ಎಚ್.ಸಿ.ಮಹದೇವಪ್ಪ ಸೇರಿ ಕೆಲವರ ಆಕ್ಷೇಪ ● ಪ್ರಭಾವಿ ಸಚಿವರ ಒತ್ತಡ?

ವಿರೋಧ ಲೆಕ್ಕಿಸದೇ ಜಿಂದಾಲ್‌ಗೆ ಭೂಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಂದಾಲ್ ಉಕ್ಕು ಕಂಪನಿಗೆ 3,677 ಎಕರೆ ಜಮೀನು ಮಾರಾಟ ಮಾಡುವುದಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆಲವರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಪ್ರಭಾವಿ ಸಚಿವರು ಒತ್ತಡ ಹೇರಿದ್ದರಿಂದ, ಮಾರಾಟಕ್ಕೆ ಸಮ್ಮತಿ ಸೂಚಿಸುವ ನಿರ್ಣಯ ಕೈಗೊಳ್ಳಲಾಯಿತು ಎಂದು ಹೇಳಲಾಗಿದೆ.

‘ಈ ಹಿಂದೆ ಜಿಂದಾಲ್‌ಗೆ ಭೂಮಿ ಮಾರಾಟ ಮಾಡುವ ತೀರ್ಮಾನಗಳ ವಿರುದ್ಧ ಹೋರಾಟ ಮಾಡಿದ್ದೆವು. ಈಗ ಪುನರ್‌ಪರಿಶೀಲನೆಗೆ ಒಳಪಡಿಸದೇ, ಕಾನೂನು ಇಲಾಖೆಯ ಅಭಿಪ್ರಾಯವನ್ನೂ ಪಡೆಯದೇ ಯಥಾವತ್ ಒಪ್ಪಿಗೆ ನೀಡುವುದು ಸರಿಯಲ್ಲ’ ಎಂಬ ಎಚ್.ಕೆ.ಪಾಟೀಲ ಅವರ ಆಕ್ಷೇಪಕ್ಕೆ ಅರಣ್ಯ ಸಚಿವ ಈಶ್ವರ ಖಂಡ್ರೆ, ಸಮಾಜಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಸೇರಿ ಹಲವರು ಧ್ವನಿಗೂಡಿಸಿದರು. ಈ ಬಗ್ಗೆ ಪರ ಮತ್ತು ವಿರೋಧವಾಗಿ ಸುದೀರ್ಘ ಚರ್ಚೆ ನಡೆಯಿತು ಎಂದು ಮೂಲಗಳು ಹೇಳಿವೆ.

ಆದರೆ, ಜಿಂದಾಲ್ ಕಂಪನಿಗೆ ಶುದ್ಧಕ್ರಯ ಪತ್ರ ಮಾಡಿಕೊಡಲೇ ಬೇಕು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಒತ್ತಡ ಹೇರಿದರು. ಇದಕ್ಕೆ ಮಣಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಂದಾಲ್ ಕಂಪನಿಗೆ ಶುದ್ಧಕ್ರಯ ಪತ್ರ ಮಾಡಿಕೊಡಲು ಒಪ್ಪಿಗೆ ನೀಡಿದರು ಎಂದು ಮೂಲಗಳು ಹೇಳಿವೆ.

ಸಂಡೂರು ತಾಲ್ಲೂಕಿನ ತೋರಣಗಲ್ಲು ಮತ್ತು ಕುರೇಕುಪ್ಪ

ಗ್ರಾಮಗಳಲ್ಲಿ 2,000.58 ಎಕರೆ ಭೂಮಿಯನ್ನು ಪ್ರತಿ ಎಕರೆಗೆ ₹1,22,200 ರಂತೆ ಮತ್ತು ಮುಸೇನಾಯಕನಹಳ್ಳಿ ಮತ್ತು ಯರಬನಹಳ್ಳಿ ಗ್ರಾಮಗಳಲ್ಲಿನ 1,666.75 ಎಕರೆ ಭೂಮಿಯನ್ನು ಪ್ರತಿ ಎಕರೆಗೆ ₹1,50,635 ಬೆಲೆ ನಿಗದಿ ಮಾಡಿರುವುದು ಸರಿ ಇಲ್ಲ. ತುಂಬಾ ಹಿಂದೆ ನಿಗದಿ ಮಾಡಿದ್ದ ದರ. ಮರುಪರಿಶೀಲನೆಗೆ ಒಳಪಡಿಸದೇ ಒಪ್ಪಿಗೆ ಕೊಡುವುದು ಸರಿಯಲ್ಲ. ಇದರಿಂದ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ ಎಂಬುದಾಗಿಯೂ ಸಚಿವರು ಮುಖ್ಯಮಂತ್ರಿಯವರ ಗಮನಕ್ಕೆ ತಂದರು.

ಹಿಂದೆಯೂ ವಿರೋಧಿಸಿದ್ದ ಎಚ್.ಕೆ.ಪಾಟೀಲ: ಹಿಂದೆ ಇದೇ ಪ್ರಸ್ತಾವನೆಯನ್ನು ಸಂಪುಟದ ಮುಂದೆ ತಂದಾಗ ಎಚ್.ಕೆ.ಪಾಟೀಲ ಅವರು ವಿರೋಧ ವ್ಯಕ್ತಪಡಿಸಿದ್ದರು.

2019ರಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದ ಅವಧಿಯಲ್ಲಿ ಈ ಪ್ರಸ್ತಾವ ಮತ್ತೆ ಸಚಿವ ಸಂಪುಟದ ಮುಂದೆ ಬಂದಿತ್ತು. ಆಗ ಶಾಸಕರಾಗಿದ್ದ ಎಚ್.ಕೆ. ಪಾಟೀಲ, ‘ಪ್ರಸ್ತಾವನೆಯಲ್ಲಿ ಪಾರದರ್ಶಕತೆ ಇಲ್ಲ. ಮೈಸೂರು ಮಿನರಲ್ಸ್ ಕಂಪನಿಗೆ ₹1,200 ಕೋಟಿಗೂ ಹೆಚ್ಚು ಬಾಕಿ ಪಾವತಿ ಮಾಡಿಲ್ಲ. ಕಾನೂನು ಇಲಾಖೆಯ ಅಭಿಪ್ರಾಯ ಪಡೆದುಕೊಳ್ಳಬೇಕು’ ಎಂದು ಸಲಹೆ ನೀಡಿದ್ದರು. ಅಲ್ಲದೇ, ಅಂದಿನ ಕೈಗಾರಿಕಾ ಸಚಿವ ಕೆ.ಜೆ.ಜಾರ್ಜ್ ಅವರಿಗೆ ಪತ್ರ ಬರೆದು ‘ಸಾರ್ವಜನಿಕ ಹಿತಕ್ಕೆ ಮಾರಕವಾದ ಮತ್ತು ಅತಿ ಕಡಿಮೆ ಬೆಲೆಗೆ ಮಾರಾಟ ಮಾಡುವ ನಿರ್ಧಾರವನ್ನು ಹಿಂದಕ್ಕೆ ಪಡೆಯಬೇಕು’ ಎಂದು ಒತ್ತಾಯಿಸಿದ್ದರು.

‘ಈಗಲೂ ಯಥಾಸ್ಥಿತಿ ಮುಂದುವರಿದಿದೆ. ಕೇವಲ ಅಡ್ವೊಕೇಟ್ ಜನರಲ್ ಅಭಿಪ್ರಾಯವನ್ನು ಮುಂದಿಟ್ಟುಕೊಂಡು ಒಪ್ಪಿಗೆ ನೀಡುವುದು ಸರಿಯಲ್ಲ’ ಎಂದು ಗುರುವಾರ ನಡೆದ ಸಂಪುಟ ಸಭೆಯಲ್ಲಿ ಎಚ್.ಕೆ.ಪಾಟೀಲ ಅಭಿಪ್ರಾಯ ವ್ಯಕ್ತಪಡಿಸಿದರು ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ತಪ್ಪು ಸಂದೇಶ ತಪ್ಪಿಸಲು ಭೂಮಿ: ಎಂ.ಬಿ.ಪಾಟೀಲ್

ಬೆಂಗಳೂರು: ಕೋರ್ಟ್ ನಿರ್ದೇಶನ, ಸಂಪುಟ ಸಭೆಯ ನಿರ್ಣಯದಂತೆ ಕಾನೂನಿಗೆ ಅನುಸಾರವಾಗಿ ಜಿಂದಾಲ್ ಉಕ್ಕು ಕಂಪನಿಗೆ 3,677 ಎಕರೆ ಗುತ್ತಿಗೆ ನೀಡಲಾಗಿದೆ. ಹಾಗೆ ಮಾಡದಿದ್ದಲ್ಲಿ, ಬಂಡವಾಳ ಹೂಡಿಕೆದಾರರಿಗೆ ತಪ್ಪು ಸಂದೇಶ ರವಾನೆಯಾಗುತ್ತಿತ್ತು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, ಹಿಂದೆ ಇದ್ದ ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ನೀಡಲಾಗಿದೆ. ಕಂಪನಿ ಸರ್ಕಾರದ ಷರತ್ತುಗಳನ್ನು ಪಾಲಿಸಿದೆ. ರಾಜ್ಯದ ಕೈಗಾರಿಕೆಗಳಿಗೆ ಅನುಸರಿಸುವ ನಿಯಮಗಳನ್ನೇ ಜಿಂದಾಲ್‌ಗೂಗೂ ಅನ್ವಯಿಸಲಾಗಿದೆ. ವಾಸ್ತವವಾಗಿ ಒಂಬತ್ತು ವರ್ಷಗಳು ವಿಳಂಬವಾಗಿದೆ’ ಎಂದರು.

ರಾಜ್ಯದಲ್ಲಿ ಜಿಂದಾಲ್ ಕಂಪನಿ ₹90 ಸಾವಿರ ಕೋಟಿ ಹೂಡಿಕೆ ಮಾಡಿದೆ, 50 ಸಾವಿರ ಉದ್ಯೋಗ ಕೊಟ್ಟಿದೆ. ಸರ್ಕಾರ ನೀಡಿದ ಜಮೀನಿನಲ್ಲಿ ಶೇ 51ರಷ್ಟನ್ನು 10 ವರ್ಷಗಳಲ್ಲಿ ಬಳಸಿಕೊಂಡಿದೆ. ಹಾಗಾಗಿ, ಕೈಗಾರಿಕಾ ನೀತಿಯಂತೆ ಗುತ್ತಿಗೆ ಮಾರಾಟ ಮಾಡಲಾಗಿದೆ ಎಂದು ಹೇಳಿದರು.

‘ಕೈಗಾರಿಕಾ ಕ್ಷೇತ್ರದಲ್ಲಿ ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ ಮತ್ತು ತೆಲಂಗಾಣಗಳ ಜೊತೆಗೆ ಪೈಪೋಟಿ ಎದುರಿಸುತ್ತಿದ್ದೇವೆ. ಕೆಲ ರಾಜ್ಯಗಳು ಉಚಿತವಾಗಿ ಭೂಮಿ ಕೊಡುತ್ತಿವೆ. ಹಿಂದೆ ಜಿಂದಾಲ್ ಕಂಪನಿಗೆ ಭೂಮಿ ನೀಡಲು ವಿರೋಧಿಸಿರಲಿಲ್ಲ, ಜನಾರ್ದನ ರೆಡ್ಡಿ ವಿರುದ್ಧವಷ್ಟೇ ಧ್ವನಿ ಎತ್ತಲಾಗಿತ್ತು’ ಎಂದರು.

ಕಾನೂನಿಗೆ ಅನುಗುಣವಾಗಿ ಕ್ರಮ: ಡಿ.ಕೆ. ಶಿವಕುಮಾರ್

ಕೈಗಾರಿಕಾ ಕಾನೂನಿಗೆ ಅನುಗುಣವಾಗಿ ಜಿಂದಾಲ್ ಕಂಪನಿಗೆ ಜಮೀನು ನೀಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮರ್ಥಿಸಿಕೊಂಡರು.

‘ಜಿಂದಾಲ್‌ಗೆ ಕಾಂಗ್ರೆಸ್ ಸರ್ಕಾರ ಹೊಸದಾಗಿ ಭೂಮಿ ನೀಡಿಲ್ಲ. ಹಿಂದಿನ ಸರ್ಕಾರದ ಅವಧಿಯಲ್ಲಿ ನೀಡಿದ್ದ ಭೂಮಿಯ ನಿರ್ವಹಣೆಯಲ್ಲಿ ಕಾನೂನು ಪಾಲನೆ ಮಾಡಿದ್ದಾರೆ. ಹಾಗಾಗಿ, ಗುತ್ತಿಗೆ ಮಾರಾಟ ಮಾಡಲಾಗಿದೆ. ಬಿಜೆಪಿ ಮಾಡಿದ್ದ ಲೋಪಗಳನ್ನು ಸರಿಪಡಿಸಿದ್ದೇವೆ’ ಎಂದರು.

ರಾಜ್ಯದಲ್ಲಿ ಸಾಕಷ್ಟು ಉದ್ಯೋಗ ಸೃಷ್ಟಿಯಾಗಬೇಕು. ರಾಜ್ಯಕ್ಕೆಇನ್ನಷ್ಟು ಕೈಗಾರಿಕೆಗಳು ಬರಬೇಕು ಎನ್ನುವುದು ರಾಜ್ಯ ಸರ್ಕಾರದ ಆಶಯ. ಅದಕ್ಕೆ ಪೂರಕ ವಾತಾವರಣ ನಿರ್ಮಿಸಲಾಗುತ್ತಿದೆ ಎಂದು ಹೇಳಿದರು.

‘ಜಿಂದಾಲ್ ಬದಲಿಗೆ ರೈತರಿಗೆ ಕೊಡಿ’

‘ಸಾವಿರಾರು ಎಕರೆಯನ್ನು ಜಿಂದಾಲ್‌ಗೆ ಮಾರಾಟ ಮಾಡುವ ಬದಲಿಗೆ, ರೈತರಿಗೇ ಮಾರಾಟ ಮಾಡಿ’ ಎಂದು ಕರ್ನಾಟಕ ರಾಜ್ಯ ರೈತ ಸಂಘ ಒತ್ತಾಯಿಸಿದೆ.

‘ಸರ್ಕಾರವು ಖನಿಜಭರಿತ ಬೆಲೆಬಾಳುವ ಭೂಮಿಯನ್ನು ಅತ್ಯಂತ ಕಡಿಮೆ ಬೆಲೆಗೆ ಜಿಂದಾಲ್‌ಗೆ ಮಾರಾಟ ಮಾಡಲು ಹೊರಟಿದೆ. ಈ ಹಿಂದೆ ಇದನ್ನು ವಿರೋಧಿಸಿದ್ದವರೇ ಈಗ ಮಾರಾಟಕ್ಕೆ ಮುಂದಾಗಿದ್ದಾರೆ. ಎಕರೆಗೆ ₹1.22 ಲಕ್ಷ ಮತ್ತು ₹1.50 ಲಕ್ಷ ನಿಗದಿ ಮಾಡಿದ್ದಾರೆ. ರೈತರಿಗೇ ಮಾರಾಟ ಮಾಡಿದರೆ, ಇದಕ್ಕಿಂತ ಹತ್ತುಪಟ್ಟು ಹೆಚ್ಚು ಬೆಲೆ ಕೊಟ್ಟು ಖರೀದಿಸಲು ತಯಾರಿದ್ದಾರೆ’ ಎಂದು ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಹೇಳಿದ್ದಾರೆ.

2005–2007ರಲ್ಲಿ ಲೀಸ್ ಕಂ ಸೇಲ್ ಒಪ್ಪಂದದಂತೆ ಬಳ್ಳಾರಿಯ ತೋರಣಗಲ್, ಮುಸೇನಾಯಕನಹಳ್ಳಿ ಮತ್ತು ಯರಬನಹಳ್ಳಿಯಲ್ಲಿ ಜಿಂದಾಲ್ ಕಂಪನಿಗೆ ಮಂಜೂರು ಮಾಡಿದ್ದ 3,667 ಎಕರೆಯನ್ನು ಶುದ್ಧ ಕ್ರಯ ಪತ್ರ ಮಾಡಿಕೊಡಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿರುವುದನ್ನು ಅವರು ಖಂಡಿಸಿದ್ದಾರೆ.

ಸುದ್ದಿ 2 ನಿಮಿಷ

‘ಮುಡಾಗೆ ಸಿ.ಎಂ ಪತ್ನಿ ಒತ್ತಾಯ’

ಬೆಂಗಳೂರು: ‘ಸಿದ್ದರಾಮಯ್ಯ ಅವರು ಮುಡಾ ನಿವೇಶನ ಹಂಚಿಕೆಯಲ್ಲಿ ತಮ್ಮ ಮತ್ತು ತಮ್ಮ ಕುಟುಂಬದವರ ಪಾತ್ರ ಇಲ್ಲ ಎಂದು ಹೇಳುತ್ತಾರೆ. ಆದರೆ ಅವರ ಪತ್ನಿ ಮುಡಾ ಅಧಿಕಾರಿಗಳ ಮೇಲೆ ಒತ್ತಡ ಹೇರಿದ್ದರು ಎಂಬುದನ್ನು ದಾಖಲೆಗಳು ಹೇಳುತ್ತವೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ಮುಡಾ ಸಭೆಯ ನಡಾವಳಿಗೆ ಸಂಬಂಧಿಸಿದ ದಾಖಲೆ ಪತ್ರವೊಂದರ ಚಿತ್ರವನ್ನು ಕುಮಾರಸ್ವಾಮಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಕೆಸರೆ ಗ್ರಾಮದ ಸರ್ವೆ ಸಂಖ್ಯೆ 463ರ 3 ಎಕರೆ 16 ಗುಂಟೆ ಜಮೀನನ್ನು ಭೂಸ್ವಾಧೀನದಿಂದ ಸರ್ಕಾರವು ಕೈಬಿಟ್ಟಿತ್ತು. ಆದರೆ ಇತರೆ ಜಮೀನುಗಳನ್ನು ಅಭಿವೃದ್ಧಿಪಡಿಸುವಾಗ, ಈ ಜಮೀನನ್ನೂ ಅಭಿವೃದ್ಧಿಪಡಿಸಲಾಗಿದೆ. ಅದರಲ್ಲಿ ನಿವೇಶನ, ರಸ್ತೆ, ಉದ್ಯಾನ ಅಭಿವೃದ್ಧಿಪಡಿಸಿ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿರುತ್ತದೆ’ ಎಂದು ಮುಡಾದ ದಾಖಲೆಯಲ್ಲಿ ವಿವರಿಸಲಾಗಿದೆ.

‘ತಮಗೆ ಸೇರಿದ ಜಮೀನಿನಲ್ಲಿ ಈಗಾಗಲೇ ಬಡಾವಣೆ ರಚಿಸಿ, ನಿವೇಶನ ಹಂಚಿರುವುದರಿಂದ ಅದರ ಬದಲಿಗೆ ಸಮಾನಾಂತರ ಬಡಾವಣೆಯಲ್ಲಿ ಅಷ್ಟೇ ವಿಸ್ತೀರ್ಣದ ನಿವೇಶನ ನೀಡುವಂತೆ ಕೋರಿ ಪಾರ್ವತಿ ಅವರು 2014ರ ಮಾರ್ಚ್ 23ರಂದು ಮನವಿ ಸಲ್ಲಿಸಿದ್ದರು. ಅವರಿಗೆ ಮಾರುಕಟ್ಟೆ ದರದಲ್ಲಿ ಜಮೀನಿನ ಪರಿಹಾರ ಅಥವಾ 40:60ರ ಅನುಪಾತದಲ್ಲಿ ನಿವೇಶನ ನೀಡುವುದಾಗಿ ಪ್ರಾಧಿಕಾರ ತಿಳಿಸಿತ್ತು. ಆದರೆ ಅದಕ್ಕೆ ಒಪ್ಪದ ಅವರು, ಬದಲಿ ಜಮೀನು ನೀಡುವಂತೆ ಒತ್ತಾಯಿಸಿದ್ದರು’ ಎನ್ನುತ್ತದೆ ದಾಖಲೆ ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಿದ ಕುಮಾರಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರಿಸಲಿ ಎಂದರು.

‘ಕುಮಾರಸ್ವಾಮಿ ಬೇನಾಮಿ ಆಸ್ತಿ: ಶೀಘ್ರ ವಿವರ ಬಹಿರಂಗ’

ಹಾಸನ: ‘ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಅವರ ಸ್ನೇಹಿತರು ಎಷ್ಟು ಬೇನಾಮಿ ಆಸ್ತಿ ಮಾಡಿದ್ದಾರೆ? ಯಾವ ಶಾಸಕರು ಏನೇನು ಮಾಡಿದ್ದಾರೆ ಎಂದು ಎರಡು ದಿನಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಹೇಳುತ್ತೇನೆ’ ಎಂದು ಶಾಸಕ, ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಶುಕ್ರವಾರ ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಬಿ.ಎಸ್.ಯಡಿಯೂರಪ್ಪ, ವಿಜಯೇಂದ್ರ ಅವರ ಕುಟುಂಬದಲ್ಲಿ ಎಷ್ಟು ಬೇನಾಮಿ ಆಸ್ತಿಗಳಿವೆ? ಎಷ್ಟು ನಿವೇಶನ ಪಡೆದಿದ್ದಾರೆ ಎಂಬ ಮಾಹಿತಿಯನ್ನು ಕಲೆ ಹಾಕುತ್ತಿದ್ದೇವೆ’ ಎಂದರು.

‘ಮುಡಾ ಹಗರಣದಲ್ಲಿ, ಸತ್ತವರ ಹೆಸರಿನಲ್ಲಿ ಡಿನೋಟಿಫಿಕೇಷನ್ ಮಾಡಿದ್ದಾರೆ’ ಎಂಬ ಎಚ್‌ಡಿಕೆ ಹೇಳಿಕೆಗೆ, ‘ಯಾರ ಹೆಸರಿನಲ್ಲಿ ಡಿನೋಟಿಫಿಕೇಷನ್ ಆಗಿದೆ. ಯಾರು ಬೇನಾಮಿ ಆಸ್ತಿ ಮಾಡಿದ್ದಾರೆ ಎಂಬ ಬಗ್ಗೆ ನನ್ನ ಕಾರಿನಲ್ಲಿ ದಾಖಲೆಗಳಿವೆ. ಸುಮ್ಮನೆ ವೈಯಕ್ತಿಕ ದ್ವೇಷ ಮಾಡಬಾರದು ಎಂದು ಸುಮ್ಮನಿದ್ದೇವೆ’ ಎಂದರು.

‘ಬಿಜೆಪಿ- ಜೆಡಿಎಸ್‌ನವರ ದುರುದ್ದೇಶ ಕುರಿತು ರಾಷ್ಟ್ರಪತಿಗೆ ಮನದಟ್ಟು ಮಾಡೋಣ ಎಂದು ಹೈಕಮಾಂಡ್‌ಗೆ ತಿಳಿಸಿದ್ದೇವೆ. ಆದಷ್ಟು ಬೇಗ ರಾಷ್ಟ್ರಪತಿ ಅವರನ್ನು ಎಲ್ಲ ಶಾಸಕರು ಭೇಟಿ ಮಾಡುತ್ತೇವೆ’ ಎಂದರು.

‘ಕೆಪಿಸಿಸಿ ಅಧ್ಯಕ್ಷ ಸ್ಥಾನ ಬಿಟ್ಟುಕೊಡುವುದಾಗಿ ಡಿ.ಕೆ.ಶಿವಕುಮಾರ್ ಅವರು ಹೈಕಮಾಂಡ್‌ಗೆ ತಿಳಿಸಿದ್ದಾರೆ. ಅವರ ಸ್ಥಾನಕ್ಕೆ ಯಾರನ್ನು ನೇಮಿಸಬೇಕು? ಎಂದು ಹೈಕಮಾಂಡ್ ತೀರ್ಮಾನಿಸಲಿದೆ’ ಎಂದರು.

‘ಜಮೀನು ಮಾರಾಟ; ಸಚಿವ ಸಂಪುಟ ಶಾಮೀಲು’

ಪ್ರಜಾವಾಣಿ ವಾರ್ತೆ

ಹರಿಹರ: ಜಿಂದಾಲ್ ಉಕ್ಕು ಕಂಪನಿಗೆ ಕಡಿಮೆ ದರದಲ್ಲಿ 3,677 ಎಕರೆ ಜಮೀನು ಮಾರಿರುವ ಪ್ರಕರಣದಲ್ಲಿ ಅಧಿಕಾರಿಗಳ ಜತೆಗೆ ರಾಜ್ಯ ಸಚಿವ ಸಂಪುಟವೇ ಶಾಮೀಲಾಗಿದೆ ಎಂದು ಹಾವೇರಿ– ಗದಗ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಶುಕ್ರವಾರ ತುಂಗಭದ್ರಾ ನದಿಗೆ ಬಾಗಿನ ಅರ್ಪಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿ.ಎಸ್.ಯಡಿಯೂರಪ್ಪ ನೇತೃತ್ವದ ಆಡಳಿತದ ಅವಧಿಯಲ್ಲಿ ಈ ಪ್ರಸ್ತಾವನೆಗೆ ತಡೆ ನೀಡಲಾಗಿತ್ತು. ಕಾಂಗ್ರೆಸ್ ನೇತೃತ್ವದ ಸರ್ಕಾರ ತರಾತುರಿಯಲ್ಲಿ ಹಸಿರು ನಿಶಾನೆ ತೋರಿದೆ ಎಂದು ದೂರಿದರು.

‘ಅದಿರಿನ ನಿಕ್ಷೇಪ ಇರುವ ಬೆಲೆಬಾಳುವ ಜಮೀನನ್ನು ಅತ್ಯಂತ ಕಡಿಮೆ ದರದಲ್ಲಿ ‘ಲೀಸ್ ಕಂ ಸೇಲ್’ ಆಧಾರದಲ್ಲಿ ನೀಡುವಲ್ಲಿ ಷಡ್ಯಂತ್ರ ನಡೆದಿದೆ. ಅಧಿಕಾರಕ್ಕೆ ಬಂದ ಬಳಿಕ ಪ್ರಸ್ತಾವನೆಗೆ ಕಾಂಗ್ರೆಸ್ ಸುಲಭವಾಗಿ ಅನುಮೋದನೆ ನೀಡಿದ್ದು ಹೇಗೆ?’



ಬಸವರಾಜ ಬೊಮ್ಮಾಯಿ

ಎಂದು ಪ್ರಶ್ನಿಸಿದರು.

ಸರ್ಕಾರಕ್ಕೆ ಆಗುತ್ತಿರುವ ದೊಡ್ಡ ನಷ್ಟವನ್ನು ತಡೆಯಲು ಈಗಿನ ಮಾರುಕಟ್ಟೆ ದರಕ್ಕೆ ಜಮೀನು ಮಾರಾಟ ಆಗಬೇಕು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು ಅದಾನಿ, ಅಂಬಾನಿ ಹೆಸರು ಹೇಳಿ ಟೀಕಿಸುವ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಏನು ಮಾಡುತ್ತಿದೆ? ಎಂದು ಅವರು ಪ್ರಶ್ನಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಆರೋಪಿತ ರಾಜಕಾರಣಿಗಳನ್ನು ಕೈಬಿಡುವ ಉದ್ದೇಶದಿಂದ ಎಸ್‌ಐಟಿಯಿಂದ ತರಾತುರಿಯಲ್ಲಿ ರಾಜ್ಯ ಸರ್ಕಾರ ವಿಚಾರಣೆ ಆರಂಭಿಸಿತ್ತು. ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿಯ ಮರಣಪತ್ರ ಆಧರಿಸಿ ಕೇಂದ್ರ ಸರ್ಕಾರ ತನಿಖೆಗೆ ಮುಂದಾಗಲಿದೆ ಎಂದು ಅವರು ಹೇಳಿದರು.

ಭೂ ಹಂಚಿಕೆ: ಸಂಘಟನೆಗಳ ವಿರೋಧ

ಭೂ ಲೆಕ್ಕಪರಿಶೋಧನೆ ಕೈಗೊಳ್ಳಲು ವಿವಿಧ ಸಂಘಟನೆಗಳ ಮುಖಂಡರ ಆಗ್ರಹ

● ಹರಿಶಂಕರ್ ಆರ್.

ಬಳ್ಳಾರಿ: ಜಿಂದಾಲ್ ಉಕ್ಕು ಕಂಪನಿಗೆ ಸಂಡೂರು ತಾಲ್ಲೂಕಿನ ತೋರಣಗಲ್ಲು ಹೋಬಳಿಯಲ್ಲಿ 3,677 ಎಕರೆ ಜಮೀನನ್ನು ಮಾರುವ ಸರ್ಕಾರದ ನಿರ್ಧಾರಕ್ಕೆ ಒಂದೆಡೆ ವಿರೋಧ ವ್ಯಕ್ತವಾದರೆ, ಇನ್ನೊಂದೆಡೆ ‘ಆ ಕಂಪನಿಗೆ ಅಷ್ಟೊಂದು ಭೂಮಿ ಏಕೆ ಬೇಕು’ ಎಂಬ ಪ್ರಶ್ನೆಗಳು ಉದ್ಭವಿಸಿವೆ.

‘ಕೈಗಾರಿಕೆ ಉದ್ದೇಶಕ್ಕೆ 1971–72ರಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಐಎಡಿಬಿ) ಜಮೀನು ನೀಡಿದ್ದ ರೈತರಿಗೆ ಸೂಕ್ತ ಪರಿಹಾರ ಸಿಕ್ಕಿಲ್ಲ. ಉದ್ಯೋಗಾವಕಾಶವೂ ಲಭಿಸಲಿಲ್ಲ. ಕಡಿಮೆ ಬೆಲೆಗೆ ಜಮೀನು ಮಾರಿ, ಸರ್ಕಾರವು ಬೊಕ್ಕಸಕ್ಕೆ ₹ 10,950 ಕೋಟಿ ನಷ್ಟ ಮಾಡಿಕೊಳ್ಳುತ್ತಿದೆ’ ಎಂದು ಸಿಪಿಎಂ ಟೀಕಿಸಿದೆ.

‘ಕುರೇಕುಪ್ಪ, ತೋರಣಗಲ್ಲು, ಯರಬನಹಳ್ಳಿ, ಮುಸೇನಾಯಕನಹಳ್ಳಿಯ ಈ ಜಮೀನನ್ನು ಕೆಐಎಡಿಬಿಯು 5 ದಶಕಗಳ ಹಿಂದೆಯೇ ಎಕರೆಗೆ ₹ 900ರಂತೆ ಸ್ವಾಧೀನಕ್ಕೆ ಪಡೆದಿತ್ತು. ಈಗ ಅದೇ ಜಮೀನನ್ನು ಸರ್ಕಾರ ಎಕರೆಗೆ ₹ 1.25 ಲಕ್ಷದಿಂದ ₹ 1.50 ಲಕ್ಷಕ್ಕೆ

ಮಾರುತ್ತಿದೆ. ಈ ಪ್ರದೇಶದಲ್ಲಿ 1 ಎಕರೆ ಜಮೀನಿನ ಬೆಲೆ ₹50 ಲಕ್ಷದಿಂದ ₹1.25 ಕೋಟಿ ಇದೆ. ಅಭಿವೃದ್ಧಿ ಹೊಂದಿದ ಜಮೀನಿನ ಬೆಲೆ ಕನಿಷ್ಠ ₹3 ಕೋಟಿ ಇದೆ. ತುಂಗಭದ್ರಾ ಬಲದಂಡೆಯ ಎತ್ತರಿಸಿದ ಕಾಲುವೆಯ ಅಚ್ಚುಕಟ್ಟು ಪ್ರದೇಶವಾದ ಕುರೇಕುಪ್ಪ ಉತ್ಕೃಷ್ಟ ಕೃಷಿ ಭೂಮಿಯಾಗಿದೆ’ ಎಂದು ಸ್ಥಳೀಯರು ಹೇಳುತ್ತಾರೆ.

ಇಷ್ಟು ಪ್ರಮಾಣದ ಭೂಮಿ ಏಕೆ ಬೇಕು? : ‘ಜಿಂದಾಲ್ ಕಂಪನಿ ಜೊತೆ 3,677 ಎಕರೆ ಜಮೀನಿನ ವ್ಯವಹಾರವನ್ನು ಗುತ್ತಿಗೆ ಆಧಾರದಲ್ಲೇ ಮುಂದುವರಿಸಬೇಕು. ಭಾರಿ ಪ್ರಮಾಣದ ಜಮೀನು ಆ ಕಂಪನಿಗೆ ಏಕೆ ಬೇಕು ಎಂಬುದು ಸ್ಪಷ್ಟವಾಗಬೇಕು. ಇದರ ಬಗ್ಗೆ ಭೂ ಲೆಕ್ಕಪರಿಶೋಧನೆ (ಲ್ಯಾಂಡ್ ಆಡಿಟ್) ಆಗಬೇಕು’ ಎಂದು ಜನಸಂಗ್ರಾಮ ಪರಿಷತ್ ಆಗ್ರಹಿಸಿದೆ.

ಬಳ್ಳಾರಿಯ ಗಣಿ ಬಾಧಿತ ಪ್ರದೇಶಗಳ ಅಭಿವೃದ್ಧಿಗೆ ಮೀಸಲಾದ ಸಾವಿರಾರು ಕೋಟಿ ಹಣ ಸರ್ಕಾರದ ಬಳಿ ಇದೆ. ಅದನ್ನು ಗಣಿ ಬಾಧಿತ ಜನರಿಗೆ ಕೊಟ್ಟರೆ, ಅವರು ಜಮೀನು ಖರೀದಿಸುವರು

ಮಲ್ಲಿಕಾರ್ಜುನ ರೆಡ್ಡಿ, ವಕೀಲ, ಜನಸಂಗ್ರಾಮ ಪರಿಷತ್ ಜಿಲ್ಲಾ ಅಧ್ಯಕ್ಷ, ಬಳ್ಳಾರಿ

ಜಿಂದಾಲ್ ಕಂಪನಿಗೆ ಜಮೀನು ನೀಡದಂತೆ ನಮ್ಮ ಹೋರಾಟಕ್ಕೆ ಅಂದು ಎಚ್.ಕೆ ಪಾಟೀಲರೇ ನೆರವಾಗಿದ್ದರು. ಇಂದು ಜಮೀನು ಮಾರುವ ಘೋಷಿಸಿದ್ದಾರೆ ಎಂದರೆ ಏನರ್ಥ

ಮಾಧವ ರೆಡ್ಡಿ, ಮುಖಂಡ, ಕರ್ನಾಟಕ ರಾಜ್ಯ ರೈತ ಸಂಘ

ಭೂ ಲೆಕ್ಕಪರಿಶೋಧನೆಗೆ ಆಗ್ರಹಿಸಿ 2019ರಲ್ಲಿ ತೋರಣಗಲ್‌ನ ವಡ್ಡು ಗ್ರಾಮದಿಂದ ಬಳ್ಳಾರಿಗೆ ಸಂಘಟನೆ ಪಾದಯಾತ್ರೆ ಕೈಗೊಂಡಿತ್ತು. ಸಮಾಜ ಪರಿವರ್ತನಾ ಸಮುದಾಯದ ಎಸ್.ಆರ್ ಹಿರೇಮಠಅವರುನೇತೃತ್ವವಹಿಸಿದ್ದರು.

‘10 ಸಾವಿರ ಎಕರೆ ಕೃಷಿ ಭೂಮಿಯನ್ನು ಜಿಂದಾಲ್ ಕಂಪನಿಗೆ ಆರಂಭದಲ್ಲಿ ನೀಡಲಾಯಿತು. ಆಗಾಗ್ಗೆ

ಸಂಡೂರು, ತೋರಣಗಲ್ಲು, ವಡ್ಡು, ಗಾದಿಗನೂರು, ಹೊಸಪೇಟೆಯವರೆಗೆ ಜಿಂದಾಲ್ ಕಂಪನಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಖಾಸಗಿಯಾಗಿ ಜಮೀನು ಖರೀದಿಸುತ್ತಲೇ ಇದೆ

ಜಂಬಯ್ಯ, ಸಾಮಾಜಿಕ ಕಾರ್ಯಕರ್ತ, ಯರಬನಹಳ್ಳಿ (ಸುಲ್ತಾನಪುರ)

ಕಂಪನಿಗೆ ಜಮೀನು ನೀಡಲಾಗುತ್ತಿದೆ. ಇದರ ಉತ್ಪಾದನಾ ಸಾಮರ್ಥ್ಯಕ್ಕೂ, ಉದ್ಯೋಗ ಸೃಷ್ಟಿಗೂ, ಸರ್ಕಾರದಿಂದ ಪಡೆದ ಭೂಮಿ ಪ್ರಮಾಣಕ್ಕೂ ತಾಳೆಯೇ ಆಗುತ್ತಿಲ್ಲ. ಈ ಕಂಪನಿ ಮೇಲೆ ಸರ್ಕಾರಿ ಭೂಮಿ ಅತಿಕ್ರಮಣದ ಆರೋಪವೂ ಇದೆ’ ಎಂದು ಪತ್ರಕರ್ತ ಚಂದ್ರಕಾಂತ ವಡ್ಡು ‘ಪ್ರಜಾವಾಣಿ’ಗೆ ತಿಳಿಸಿದರು.

1994ರಲ್ಲಿ ತೋರಣಗಲ್ ಭಾಗದಲ್ಲಿ ಉಕ್ಕಿನ ಕಾರ್ಖಾನೆ ಆರಂಭಿಸಿದ್ದ ಜಿಂದಾಲ್ ವಾರ್ಷಿಕ 12 ದಶಲಕ್ಷ ಟನ್ ಉತ್ಪಾದನಾ ಸಾಮರ್ಥ್ಯ ಹೊಂದಿರುವುದಾಗಿ ಹೇಳಿಕೊಂಡಿದೆ. ಸದ್ಯ, ಉಕ್ಕು ಅಲ್ಲದೇ ವಿದ್ಯುತ್ ಉತ್ಪಾದನೆ, ಸಿಮೆಂಟ್, ಪೇಂಟ್, ಡಾಂಬರು ತಯಾರಿಕೆಯಲ್ಲಿ ಕಂಪನಿ ತೊಡಗಿದೆ.

ಲೋಕಾಯುಕ್ತ: 14 ಗ್ರಾ.ಪಂ. ಕಚೇರಿಗಳಲ್ಲಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ತಾಲ್ಲೂಕಿನ 13, ಸಂಡೂರು ತಾಲ್ಲೂಕಿನ 1 ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಶುಕ್ರವಾರ ಏಕಕಾಲದಲ್ಲಿ ಕಾರ್ಯಾಚರಣೆ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ದಾಖಲೆಪತ್ರಗಳನ್ನು ಸಂಗ್ರಹಿಸಿದರು.

‘15ನೇ ಹಣಕಾಸು ಆಯೋಗದ ಅನುದಾನದ ಬಳಕೆ ಕುರಿತು ದಾಖಲೆಗಳನ್ನು ಪರಿಶೀಲಿಸಿ, ವಶಕ್ಕೆ ಪಡೆದು ರವಾನಿಸಲು ಕೇಂದ್ರ ಕಚೇರಿಯಿಂದ ವಾರೆಂಟ್ ಬಂದಿತ್ತು. ಅದರಂತೆ ಕ್ರಮವಹಿಸಿದ್ದೇವೆ’ ಎಂದು ಬಳ್ಳಾರಿ ಲೋಕಾಯುಕ್ತ ಎಸ್‌ಪಿ ಸಿದ್ದರಾಜು ‘ಪ್ರಜಾವಾಣಿ’ಗೆ ತಿಳಿಸಿದರು.

ಕುರುಬರ ಸಂಘಕ್ಕೆ ಸರ್ಕಾರಿ ಕಾಲೇಜಿನ 3.7 ಎಕರೆ ಜಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಸರ್ಕಾರಿ ಮಹಾವಿದ್ಯಾಲಯದ 3 ಎಕರೆ 7 ಗುಂಟೆ ಜಮೀನನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ಕಲಬುರಗಿ ಶಾಖೆಗೆ ಮಂಜೂರು ಮಾಡಲು ಸರ್ಕಾರ ತೀರ್ಮಾನಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಗಿದೆ.

‘ವಿದ್ಯಾರ್ಥಿಗಳ ಭವಿಷ್ಯದ ಶೈಕ್ಷಣಿಕ ಹಿತದೃಷ್ಟಿಯಿಂದ ಸರ್ಕಾರಿ ಮಹಾವಿದ್ಯಾಲಯ(ಸ್ವಾಯತ್ತ), ಕಲಬುರಗಿಯ ಈ ಕಾಲೇಜಿಗೆ ಸೇರಿದ ಜಮೀನು ನೀಡಲು ಪ್ರಸ್ತಾವನೆ ಸಲ್ಲಿಕೆಯಾಗಿತ್ತು. ಪ್ರಸ್ತಾವನೆಯನ್ನು ಅಂಗೀಕರಿಸಲಾಗಿದೆ’ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದ್ದಾರೆ.

● ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರವು ಹೊಸಪೇಟೆ ಇಂಗಳಗಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿನ ಒಟ್ಟು 24 ಎಕರೆ 24 ಗುಂಟೆ ಜಮೀನಿನಲ್ಲಿ 50:50 ಅನುಪಾತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ವಸತಿ ಯೋಜನೆಯ ₹11.76 ಕೋಟಿ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

● ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗೆ ನಬಾರ್ಡ್ ಮೂಲಕ ಪುನರ್ಧನ ಪಡೆಯಲು ₹1,600 ಕೋಟಿಗಳಿಗೆ ಖಾತರಿ ವಿಸ್ತರಿಸಲು ಒಪ್ಪಿಗೆ ನೀಡಿದೆ.

ರಾಜಮ್ಮ ಚೌಡರೆಡ್ಡಿಗೆ ಕಡ್ಡಾಯ ನಿವೃತ್ತಿ: ₹7 ಲಕ್ಷ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದ ಕೆಎಎಸ್ ಅಧಿಕಾರಿ ರಾಜಮ್ಮ ಚೌಡರೆಡ್ಡಿ ಅವರನ್ನು ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಇವರ ಮೇಲಿನ ಆರೋಪ ಸಾಬೀತಾಗಿರುವ ಕಾರಣ ಲೋಕಾಯುಕ್ತರ ಶಿಫಾರಸಿನಂತೆ ಕಡ್ಡಾಯ ನಿವೃತ್ತಿಗೊಳಿಸಲು ತೀರ್ಮಾನಿಸಲಾಗಿದೆ ಎಂದರು.

ಲಂಚ ಸ್ವೀಕಾರ ಪ್ರಕರಣದಲ್ಲಿ ಲೋಕಾಯುಕ್ತ ಬಲೆಗೆ ಸಿಕ್ಕಿ ಬಿದ್ದಿದ್ದ ಸಹಾಯಕ ಔಷಧ ನಿಯಂತ್ರಕ ಗೋಪಾಲ ಎಚ್.ಭಂಡಾರೆ ಅವರನ್ನು ಸೇವೆಯಿಂದ ವಜಾಗೊಳಿಸಲು ಮತ್ತು ಔಷಧ ಪರಿವೀಕ್ಷಕ ಮಂಜುನಾಥ ಎಸ್.ಎಸ್ ಅವರನ್ನು ಸರ್ಕಾರಿ ಸೇವೆಯಿಂದ ಕಡ್ಡಾಯವಾಗಿ ನಿವೃತ್ತಿಗೊಳಿಸಲು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಪಾಟೀಲ ಹೇಳಿದರು

ಕರ್ಮಯೋಗಿ ಪ್ರಶಸ್ತಿ ಪ್ರದಾನ...

ಕಲಬುರಗಿಯಲ್ಲಿ ಶುಕ್ರವಾರ ನಡೆದ ಎಸ್.ಎಸ್.ಪಾಟೀಲ ಅವರ ದ್ವಿತೀಯ ಪುಣ್ಯಸ್ಮರಣೆ ಅಂಗವಾಗಿ ಹಿರಿಯ ಕ್ಯಾನ್ಸರ್ ತಜ್ಞೆ ಡಾ.ವಿಜಯಲಕ್ಷ್ಮಿ ದೇಶಮಾನೆ, ಸಾಹಿತಿ ಅಲ್ಲಮಪ್ರಭು ಬೆಟ್ಟದೂರ, ಭಾಲ್ಕಿಯ ಬಸವಲಿಂಗ ಪಟ್ಟದ್ದೇವರು, ಉದ್ಯಮಿ ಎನ್.ಕೆ.ಮಾಲೂ, ಹಿರಿಯ ಕಲಾವಿದ ವಿ.ಜಿ.ಅಂದಾನಿ ಅವರಿಗೆ ‘ಕರ್ಮಯೋಗಿ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ತಲಾ ₹51 ಸಾವಿರ ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಉದ್ಯಮಿ ಸಿದ್ಧಲಿಂಗ ಎಸ್.ಪಾಟೀಲ, ಶೋಭಾ ಬೆಂಬಳಗಿ, ಪಾಟೀಲ್ ಗ್ರೂಪ್ ಆಫ್ ಇಂಡಸ್ಟ್ರೀಸ್ ಅಧ್ಯಕ್ಷ ಲಿಂಗರಾಜ ಪಾಟೀಲ, ಎಸ್.ಆರ್. ಪಾಟೀಲ ಫೌಂಡೇಷನ್ ಅಧ್ಯಕ್ಷ ಮನು ಬಳಿಗಾರ, ಶರಣ ಬಸವೇಶ್ವರ ಸಂಸ್ಥಾನದ ಪೀಠಾಧಿಪತಿ ದೊಡ್ಡಪ್ಪ ಅಪ್ಪ, ಸಂಸದ ರಾಧಾಕೃಷ್ಣ ದೊಡ್ಡಮನಿ, ಶಾಸಕ ಅಲ್ಲಮಪ್ರಭು ಪಾಟೀಲ, ಅಲ್ಲಮಪ್ರಭು ದೇಶಮುಖ, ಉದ್ಯಮಿ ರೇವಣಸಿದ್ಧಪ್ಪ ಪಾಟೀಲ ಇದ್ದರು – ಪ್ರಜಾವಾಣಿ ಚಿತ್ರ

ಮಾರ್ಕೆಟಿಂಗ್: ‘ಪ್ರಜಾವಾಣಿ’ ಬಳಗಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಕ್ಸ್‌ಚೇಂಜ್ ಫಾರ್ ಮೀಡಿಯಾ (ಇಫೋರ್‌ಎಂ) ಸಂಸ್ಥೆಯು ನೀಡುವ ಇಂಡಿಯನ್ ಮಾರ್ಕೆಂಟಿಗ್ ಅವಾರ್ಡ್ಸ್– 2024 (ಐಎಂಎ–ಸೌಥ್)ನ ಎರಡು ವಿಭಾಗಗಳಲ್ಲಿ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಪ್ರಶಸ್ತಿಗೆ ಭಾಜನವಾಗಿವೆ.

ನಗರದ ಎಂ.ಜಿ.ರಸ್ತೆಯ ತಾಜ್ ಹೋಟೆಲ್‌ನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬ್ರಾಂಡ್ ಎಕ್ಸ್‌ಟೆನ್‌ಷನ್ ಮೀಡಿಯಾ ವಿಭಾಗದಲ್ಲಿ ‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ನ ‘ಭೂಮಿಕಾ ಕ್ಲಬ್’ಗೆ ಬೆಳ್ಳಿ ವಿಭಾಗದಲ್ಲಿ ಪ್ರಶಸ್ತಿ ಸಂದರೆ, ‘ಡೆಕ್ಕನ್ ಹೆರಾಲ್ಡ್’ನ ‘ಡಿಎಚ್–ಬೆಂಗಳೂರು–2040 ಸಮ್ಮಿಟ್’ಗೆ ಬಂಗಾರ ವಿಭಾಗದಲ್ಲಿ ಪ್ರಶಸ್ತಿ ಸಂದಿದೆ. ಈ ಪ್ರಶಸ್ತಿಗಳಿಗಾಗಿ 400ಕ್ಕೂ ಹೆಚ್ಚು ನಾಮನಿರ್ದೇಶನಗಳಿದ್ದವು.

ಮಾರ್ಕೆಟಿಂಗ್ ವಿಭಾಗದಲ್ಲಿ ವಿನೂತನ, ವಿಭಿನ್ನ ರೀತಿಯಲ್ಲಿ ಕೆಲಸ ಮಾಡಿದವರಿಗೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ.

‘ಎಕ್ಸ್‌ಚೇಂಜ್ ಫಾರ್ ಮೀಡಿಯಾ’ ಸಂಸ್ಥೆಯು ನೀಡುವ ಇಂಡಿಯನ್ ಮಾರ್ಕೆಟಿಂಗ್ ಅವಾರ್ಡ್ಸ್–2024 (ಐಎಂಎ–ಸೌಥ್)ನ ಎರಡು ವಿಭಾಗಗಳಲ್ಲಿ ಪ್ರಶಸ್ತಿ ಸ್ವೀಕರಿಸಿದ ‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ಬಳಗದ ಸಿಬ್ಬಂದಿ

ರಾಜ್ಯಪಾಲರ ವಿರುದ್ಧ ಹೇಳಿಕೆ ನೀಡಿಲ್ಲ: ಐವನ್

ಪ್ರಜಾವಾಣಿ ವಾರ್ತೆ

ಮಂಗಳೂರು: ‘ರಾಜ್ಯಪಾಲರ ವಿರುದ್ಧದ ಪ್ರತಿಭಟನೆಸಂದರ್ಭದಲ್ಲಿನಾನುನೀಡಿದ್ದ ಹೇಳಿಕೆಯನ್ನು ತಪ್ಪಾಗಿ ಪ್ರಚಾರ ಮಾಡಲಾಗಿದೆ’ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಹೇಳಿದರು.

ಶುಕ್ರವಾರ ಇಲ್ಲಿ ನಡೆದ ಕಾಂಗ್ರೆಸ್ ಪ್ರತಿಭಟನೆ ವೇಳೆ ಅವರು, ‘ಶ್ರೀಲಂಕಾ, ಉಗಾಂಡ ಹಾಗೂ ಬಾಂಗ್ಲಾದೇಶದಲ್ಲಿ ಏಕಚಕ್ರಾಧಿಪತ್ಯದ ವಿರುದ್ಧ ಜನರು ದಂಗೆ ಎದ್ದಿದ್ದರು ಎಂದು ಹೇಳಿದ್ದೆ. ಅದೇ ಮಾದರಿ ನಮ್ಮಲ್ಲೂ ಪ್ರತಿಭಟನೆ ಮಾಡಲಾಗುವುದು ಎಂದು ಹೇಳಿಲ್ಲ. ಬಿಜೆಪಿಗೆ ಬಾಂಗ್ಲಾದೇಶ ಎಂದರೆ ಮುಸ್ಲಿಂ ರಾಷ್ಟ್ರ; ಆದ್ದರಿಂದ ಆ ದೇಶದ ಹೆಸರು ಪ್ರಸ್ತಾಪ ಆಗಿದ್ದಕ್ಕೆ ಅವರು ಕೋಪಗೊಂಡಿದ್ದಾರೆ’ ಎಂದರು.

ಸಿ.ಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ಕ್ರಮ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ಈಚೆಗೆ ಇಲ್ಲಿ ಪ್ರತಿಭಟಿಸಿದ್ದರು. ಆಗ ಐವನ್ ಡಿಸೋಜ, 'ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳದಿದ್ದರೆ ಬಾಂಗ್ಲಾದಲ್ಲಾದ ಸ್ಥಿತಿ ರಾಜ್ಯಪಾಲರಿಗೂ ಆಗಲಿದೆ' ಎಂದಿದ್ದರು. ಬಿಜೆಪಿ ಇದನ್ನು ವಿರೋಧಿಸುತ್ತಿದೆ.

ಐವನ್ ಡಿಸೋಜ ಮನೆಗೆ ಬುಧವಾರ ರಾತ್ರಿ ಕೆಲವರು ಕಲ್ಲು ತೂರಿದ್ದರು. ಇದನ್ನು ಖಂಡಿಸಿ ಕಾಂಗ್ರೆಸ್ ಶುಕ್ರವಾರ ಐವನ್ ಮನೆಯಿಂದಬಿಜೆಪಿ ಕಚೇರಿವರೆಗೆ ಪ್ರತಿಭಟನೆ ಹಮ್ಮಿಕೊಂಡಿತ್ತು.

ಶೃಂಗಾರ್‌ಬಾಗ್, ಬುಳ್ಳನಾಯಕನಹಳ್ಳಿ ಮೀಸಲು ಅರಣ್ಯ

ಸೂಳೆಕೆರೆ ಬಳಿ 54 ಎಕರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಸಂತೇಬೆನ್ನೂರು (ದಾವಣಗೆರೆ): ಸಮೀಪದ ಸೂಳೆಕೆರೆ (ಶಾಂತಿಸಾಗರ) ಬಳಿಯ ಶೃಂಗಾರ್‌ಬಾಗ್ ಮೀಸಲು ಅರಣ್ಯದಲ್ಲಿ 54 ಎಕರೆ ಭೂಮಿ ಒತ್ತುವರಿಯನ್ನು ಅರಣ್ಯ ಅಧಿಕಾರಿಗಳು ಶುಕ್ರವಾರ ತೆರವುಗೊಳಿಸಿದರು.

ಶೃಂಗಾರ್‌ಬಾಗ್ ಹಾಗೂ ಬುಳ್ಳನಾಯಕನಹಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿ 54 ಎಕರೆ ಒತ್ತುವರಿ ಆಗಿತ್ತು. 17 ಜನರಿಗೆ ನೋಟಿಸ್ ನೀಡಿದ್ದು, ಒತ್ತುವರಿದಾರರು ಎಸಿಎಫ್ ನ್ಯಾಯಾಲಯಕ್ಕೆ ಹಾಜರಾಗಿದ್ದರು.

ಒತ್ತುವರಿಗೆ ಸಂಬಂಧಿಸಿ ದಾಖಲೆಗಳನ್ನು ಹಾಜರುಪಡಿಸಲಿಲ್ಲ. ಈ ಬಗ್ಗೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ, ತೆರವಿಗೆ ಆದೇಶ ನೀಡಿತ್ತು ಎಂದು ವಲಯ ಅರಣ್ಯ ಸಂರಕ್ಷಣಾಧಿಕಾರಿ ವಿ.ಜಗದೀಶ್ ಮಾಹಿತಿ ನೀಡಿದರು.

ಶುಕ್ರವಾರ 52 ಎಕರೆ ಒತ್ತುವರಿ ತೆರವಾಗಿದೆ. 2 ಎಕರೆಯಲ್ಲಿ 4 ಕಚ್ಚಾ ಮನೆಗಳಿವೆ. ನಿವಾಸಿಗಳಿಗೆ ತೆರವಿಗೆ ಸಮಯ ನೀಡಲಾಗಿದೆ ಎಂದು ತಿಳಿಸಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರತ್ನಪ್ರಭಾ, 15 ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ದಾವಣಗೆರೆ ಜಿಲ್ಲೆಯ ಶೃಂಗಾರ್‌ಬಾಗ್ ಹಾಗೂ ಬುಳ್ಳನಾಯಕನಹಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಶುಕ್ರವಾರ ಒತ್ತುವರಿ ತೆರವುಗೊಳಿಸಿದರು

ಸಿ.ಎಂ ಬೆನ್ನಿಗೆ ಹೈಕಮಾಂಡ್

ಒಂದನೇ ಪುಟದಿಂದ...

ಬಳಿಕ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಜತೆಗೆ ಖರ್ಗೆ, ರಾಹುಲ್, ಸುರ್ಜೇವಾಲಾ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಸಮಾಲೋಚಿಸಿದರು. ನಂತರ ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆಗೆ ಕೇಂದ್ರ ಚುನಾವಣಾ ಸಮಿತಿ ಸಭೆ ನಡೆಯಿತು. ಆ ಬಳಿಕ, ಕರ್ನಾಟಕದ ಹಿರಿಯ ಸಚಿವರನ್ನು ಕರೆಸಿಕೊಂಡ ಹೈಕಮಾಂಡ್‌ನ ನಾಯಕರು ರಾಜ್ಯದ ಈಗಿನ ಬೆಳವಣಿಗೆಗಳ ಬಗ್ಗೆ ಮಾಹಿತಿ ಪಡೆದರು.

ಸುರ್ಜೇವಾಲಾ ಮಾತನಾಡಿ, ‘ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಕೈಗೊಂಬೆ ರಾಜ್ಯಪಾಲರನ್ನು ಇಟ್ಟುಕೊಂಡು ರಾಜ್ಯದಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಐದು ಗ್ಯಾರಂಟಿಗಳ ಮೇಲೆ ಬಿಜೆಪಿ ದಾಳಿ ನಡೆಸುತ್ತಿದೆ. ಇದು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಮೇಲಿನ ದಾಳಿ ಅಲ್ಲ, ಇದು ರಾಜ್ಯದ ಜನರ ಮೇಲಿನ ದಾಳಿ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ರಾಜ್ಯಪಾಲರನ್ನು ಬಳಸಿಕೊಂಡು ಪ್ರಧಾನಿ ಹಾಗೂ ಗೃಹ ಸಚಿವರು ಕರ್ನಾಟಕ ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿದ್ದಾರೆ. ರಾಜ್ಯಪಾಲರು ರಾಜಕಾರಣ ಮಾಡುತ್ತಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ನಾಯಕರ ಮೇಲಿನ ಪ್ರಕರಣಗಳ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿಲ್ಲ ಏಕೆ’ ಎಂದು ಪ್ರಶ್ನಿಸಿದರು.

‘ಹೈಕಮಾಂಡ್ ರಾಜ್ಯ ಸರ್ಕಾರದ ಜೊತೆಗಿದೆ’

‘ನಾವು ನಿಮ್ಮ ಜೊತೆಗಿದ್ದೇವೆ ಧೈರ್ಯದಿಂದ ಹೋರಾಟ ಮಾಡಿ, ಬಡವರ ಪರವಾಗಿ ಕಾರ್ಯಕ್ರಮ ರೂಪಿಸಿ ಎಂದು ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಹಾಗೂ ಹೈಕಮಾಂಡ್ ನಾಯಕರು ನಮಗೆ ಅಭಯ ಕೊಟ್ಟಿದ್ದಾರೆ’ ಎಂದು ಶಿವಕುಮಾರ್ ಹೇಳಿದರು.

‘ಸಿದ್ದರಾಮಯ್ಯ ಹಾಗೂ ಕರ್ನಾಟಕ ಸರ್ಕಾರದ ಪರವಾಗಿ ಹೈಕಮಾಂಡ್ ಹಾಗೂ ರಾಜ್ಯ ನಾಯಕತ್ವ ನಿಂತಿದೆ. ಕರ್ನಾಟಕದಲ್ಲಿ ಸರ್ಕಾರ ಅಸ್ಥಿರಗೊಳಿಸಲು ಕಿರುಕುಳ ನೀಡುತ್ತಿರುವ ಬಗ್ಗೆ ನಮ್ಮ ನಾಯಕರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಅವರೂ ರಾಜ್ಯದ ಪರಿಸ್ಥಿತಿಯನ್ನು ಅವಲೋಕನ ಮಾಡಿದ್ದಾರೆ’ ಎಂದರು.

ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಅನುಮತಿ ನೀಡಿರುವುದು ಅಸಾಂವಿಧಾನಿಕ. ಇದು ರಾಜ್ಯಪಾಲರಿಗೇ ಮನದಟ್ಟು ಆಗಿ ಆದೇಶವನ್ನು ವಾಪಸ್ ಪಡೆಯುವ ಕಾಲ ಬರಲಿದೆ ಎಂದು ತಿಳಿಸಿದರು.

ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳುವಂತೆ ರಾಷ್ಟ್ರಪತಿಯವರಿಗೆ ಮನವಿ ಸಲ್ಲಿಸುವುದು, ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನದ ವಿರುದ್ಧ ಇಂಡಿಯಾ ಮೈತ್ರಿಕೂಟದಿಂದ ಹೋರಾಟ ನಡೆಸುವ ತಂತ್ರಗಾರಿಕೆಯನ್ನು ಮುಕ್ತವಾಗಿ ಇರಿಸಿಕೊಂಡಿದ್ದೇವೆ ಎಂದು ಸುರ್ಜೇವಾಲಾ ತಿಳಿಸಿದರು. ಇದನ್ನು ಸಂದರ್ಭ ಬಂದಾಗ ತಿಳಿಸುತ್ತೇವೆ ಎಂದರು.

‘ಹೈಕಮಾಂಡ್‌ನ ನಾಯಕರಾದ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರಿಗೆ ಧನ್ಯವಾದ. ನಾವು ನ್ಯಾಯಾಲಯ ಹಾಗೂ ಕಾನೂನನ್ನು ನಂಬಿದ್ದೇವೆ. ರಾಜ್ಯಪಾಲರ ನಿರ್ಣಯವೇ ಸಂವಿಧಾನಬಾಹಿರ’ ಎಂದು ಸಿದ್ದರಾಮಯ್ಯ ಹೇಳಿದರು.

ಅಸ್ಸಾಂನಲ್ಲಿ ಬೀದಿಗಿಳಿದು ಪ್ರತಿಭಟಿಸಿದ ಸಾರ್ವಜನಿಕರು • ಪೊಲೀಸರಿಂದ ಬಿಗಿ ಬಂದೋಬಸ್ತ್

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ

ಗುವಾಹಟಿ (ಪಿಟಿಐ): ಅಸ್ಸಾಂನ ನಗಾಂವ್ ಜಿಲ್ಲೆಯಲ್ಲಿ 14 ವರ್ಷದ ಬಾಲಕಿ ಮೇಲೆ ಮೂವರು ಸಾಮೂಹಿಕ ಅತ್ಯಾಚಾರ ಎಸಗಿದ್ದು, ದುಷ್ಕೃತ್ಯವನ್ನು ಖಂಡಿಸಿ ಸ್ಥಳೀಯರು ತೀವ್ರ ಪ್ರತಿಭಟನೆ ನಡೆಸಿದರು.

ಧೀಂಗ್ ಪ್ರದೇಶಕ್ಕೆ ಮನೆಪಾಠಕ್ಕೆ ತೆರಳಿದ್ದ ಬಾಲಕಿ ಗುರುವಾರ ರಾತ್ರಿ 8 ಗಂಟೆ ಸುಮಾರಿಗೆ ಸೈಕಲ್‌ನಲ್ಲಿ ಮನೆಗೆ ವಾಪಸಾಗುತ್ತಿದ್ದ ಸಂದರ್ಭದಲ್ಲಿ ಮೂವರು ಕೃತ್ಯ ಎಸಗಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಬೈಕ್‌ನಲ್ಲಿ ಬಂದ ಮೂವರು ಬಾಲಕಿಯ ಸೈಕಲ್ ಅಡ್ಡಗಟ್ಟಿ, ನಂತರ ಅತ್ಯಾಚಾರ ನಡೆಸಿದ್ದಾರೆ. ಗಾಯಗೊಂಡ, ಅರೆ ಪ್ರಜ್ಞಾವಸ್ಥೆಯಲ್ಲಿದ್ದ ಬಾಲಕಿಯನ್ನು ಕೆರೆಯ ಬಳಿ ಎಸೆದು ಹೋಗಿದ್ದರು. ಸ್ಥಳೀಯರು ಬಾಲಕಿಯನ್ನು ರಕ್ಷಿಸಿ, ಪೊಲೀಸರಿಗೆ ಮಾಹಿತಿ ನೀಡಿದರು ಎಂದು ಹೇಳಿದರು.

10ನೇ ತರಗತಿ ವಿದ್ಯಾರ್ಥಿನಿಯನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಲು ಮೊದಲಿಗೆ ಧೀಂಗ್ ಆರೋಗ್ಯ ಕೇಂದ್ರಕ್ಕೆ, ನಂತರ ನಗಾಂವ್‌ನ ಆಸ್ಪತ್ರೆಗೆ ದಾಖಲಿಸಲಾಯಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಮತ್ತೊಬ್ಬನಿಗಾಗಿ ಶೋಧ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ತೀವ್ರ ಪ್ರತಿಭಟನೆ: ವಿಷಯ ತಿಳಿಯುತ್ತಿದ್ದಂತೆಯೇ ದುಷ್ಕರ್ಮಿಗಳನ್ನು ಬಂಧಿಸುವಂತೆ ಆಗ್ರಹಿಸಿ ಜನರು ಬೀದಿಗಿಳಿದು ಶುಕ್ರವಾರ ತೀವ್ರ ಪ್ರತಿಭಟನೆ ನಡೆಸಿದರು. ಅಂಗಡಿಗಳ ಮಾಲೀಕರು ತಮ್ಮ ಮಳಿಗೆಗಳಿಗೆ ಬೀಗ ಹಾಕಿದ್ದರು. ಸಾಮಾಜಿಕ ಮತ್ತು ರಾಜಕೀಯ ಸಂಘಟನೆಗಳು ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಮತ್ತು ಹೆಣ್ಣುಮಕ್ಕಳಿಗೆ ರಕ್ಷಣೆ ನೀಡುವಂತೆ ಒತ್ತಾಯಿಸಿದವು.

ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿಯಿದ್ದು, ಪೊಲೀಸರು ನಿಗಾ ವಹಿಸಿದ್ದಾರೆ.

ಕಠಿಣ ಕ್ರಮದ ಭರವಸೆ: ಘಟನೆ ಬೆನ್ನಲ್ಲೇ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮ ಅವರು, ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಾಲಕಿ ಮೇಲೆ ಹೀನ ಕೃತ್ಯ ಎಸಗಿದ ಅಪರಾಧಿಗಳನ್ನು ಸುಮ್ಮನೆ ಬಿಡುವುದಿಲ್ಲ. ಧೀಂಗ್ ಪ್ರದೇಶಕ್ಕೆ ತೆರಳಿ ಕ್ರಮ ಕೈಗೊಳ್ಳುವಂತೆ ಪೊಲೀಸ್ ಮಹಾ ನಿರ್ದೇಶಕರು ಮತ್ತು ಜಲಸಂಪನ್ಮೂಲ ಸಚಿವರಿಗೆ ನಿರ್ದೇಶನ ನೀಡಿದ್ದೇನೆ' ಎಂದು ಹೇಳಿದರು.

ಇದೇ ವೇಳೆ, ಆರೋಪಿಗಳು ಮುಸ್ಲಿಂ ಸಮುದಾಯದವರು ಎನ್ನಲಾದ ಕಾರಣ ಬಂಗಾಳಿ ಮಾತನಾಡುವ ಮುಸ್ಲಿಂ ಸಮುದಾಯವನ್ನು ಗುರಿಮಾಡಲು ಮತ್ತೊಮ್ಮೆ ಯತ್ನಿಸಿದರು.

ಇದಕ್ಕೆ ಕಾಂಗ್ರೆಸ್ ಸೇರಿದಂತೆ ಇತರ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದು, 'ಅಪರಾಧಿಗಳನ್ನು ಧರ್ಮದ ಆಧಾರದಲ್ಲಿ ಗುರುತಿಸಬಾರದು, ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು' ಎಂದಿವೆ.

ಅಸ್ಸಾಂನ ನಗಾಂವ್ ಜಿಲ್ಲೆಯಲ್ಲಿ 14 ವರ್ಷದ ಬಾಲಕಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರವನ್ನು ಖಂಡಿಸಿ ಸಾರ್ವಜನಿಕರು ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

> **ಲೋಕಸಭೆ ಚುನಾವಣೆ ನಂತರ ಸಮುದಾಯವೊಂದರ ಕೆಲ ವರ್ಗದವರು ಇಂಥ ಕೃತ್ಯಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಇಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ,**
> **ಹಿಮಂತ್ ಬಿಸ್ವಾ ಶರ್ಮ,** ಅಸ್ಸಾಂ ಸಿ.ಎಂ

ನಾಲ್ಕು ವರ್ಷದ ಮಗು ಮೇಲೆ ಅತ್ಯಾಚಾರ

ಜೈಪುರ (ಪಿಟಿಐ): ರಾಜಸ್ಥಾನದ ಗಂಗಾನಗರ ಜಿಲ್ಲೆಯಲ್ಲಿ ನಾಲ್ಕು ವರ್ಷದ ಹೆಣ್ಣು ಮಗುವಿನ ಮೇಲೆ ಸಂಬಂಧಿಯಿಂದಲೇ ಅತ್ಯಾಚಾರ ನಡೆದಿದೆ ಎಂದು ಆರೋಪಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದರು.

ಮಗುವಿನ ತಾಯಿ ಬುಧವಾರ ಸಂಜೆ ಕೆಲಸದ ಪ್ರಯುಕ್ತ ಹೊರಗೆ ಹೋಗಿದ್ದಾಗ ಕೃತ್ಯ ಎಸಗಲಾಗಿದೆ. ತಾಯಿ ರಾತ್ರಿ 9 ಗಂಟೆ ಸುಮಾರಿಗೆ ಮನೆಗೆ ಹಿಂದಿರುಗಿದಾಗ ಮಗು ಗಾಯಗೊಂಡು ಅಳುತ್ತಿತ್ತು. ಮಗುವನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದರು.

'ಆರೋಪಿಯು ಸಂಬಂಧಿ ಎಂದು ಮಗುವಿನ ತಾಯಿ ಹೇಳಿದ್ದಾರೆ. 35 ವರ್ಷದ ಆರೋಪಿಯನ್ನು ಗುರುವಾರ ರಾತ್ರಿ ಬಂಧಿಸಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ' ಎಂದು ಹೇಳಿದರು.

ಶಾಲೆಯ ಬಸ್ ಚಾಲಕನ ಬಂಧನ

ಚಂಡೀಗಢ (ಪಿಟಿಐ): 12ನೇ ತರಗತಿಯ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಶಾಲೆಯೊಂದರ ಬಸ್ ಚಾಲಕನನ್ನು ಬಂಧಿಸಲಾಗಿದೆ ಎಂದು ಪಂಜಾಬ್‌ನ ಜೀರಕ್‌ಪುರ ಪೊಲೀಸರು ಶುಕ್ರವಾರ ತಿಳಿಸಿದರು.

'ಮಹಮ್ಮದ್ ರಜಾಕ್ ಬಂಧಿತ ಆರೋಪಿ. ಸಂತ್ರಸ್ತೆ ಜೊತೆ ಸ್ನೇಹ ಗಳಿಸಲು ರಜಾಕ್ ಪ್ರಯತ್ನಿಸಿದ್ದ. ಬಾಲಕಿ ಸ್ನೇಹಕ್ಕೆ ನಿರಾಕರಿಸಿದಾಗ ಆಕೆಯ ತಿರುಚಿದ ಫೋಟೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದಾಗಿ ಬೆದರಿಕೆ ಒಡ್ಡಿದ್ದ. ನಂತರ ಪೋಷಕರು ಇರದ ಸಮಯದಲ್ಲಿ ಬಾಲಕಿಯ ಮನೆಗೆ ತೆರಳಿ ಮೇನಿಂದ ಜುಲೈವರೆಗೆ ಮೂರು ಬಾರಿ ಅತ್ಯಾಚಾರ ಎಸಗಿದ್ದ' ಎಂದು ಹೇಳಿದರು.

'ಕೆಲವು ದಿನಗಳಿಂದ ಮಂಕಾಗಿದ್ದ ಬಾಲಕಿಯನ್ನು ಪೋಷಕರು ವಿಚಾರಿಸಿದಾಗ ವಿಷಯ ಬಹಿರಂಗಗೊಂಡಿದೆ. ಪೋಷಕರ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬುಧವಾರ ಬಂಧಿಸಲಾಗಿದೆ' ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಜಸ್ಪಿಂದರ್ ಸಿಂಗ್ ತಿಳಿಸಿದರು.

ಸಂಬಂಧಿಯಿಂದಲೇ ಲೈಂಗಿಕ ದೌರ್ಜನ್ಯ

ಅಕೋಲಾ (ಪಿಟಿಐ): ಮಹಾರಾಷ್ಟ್ರ ಅಕೋಲಾ ಜಿಲ್ಲೆಯಲ್ಲಿ 10 ವರ್ಷ ವಯಸ್ಸಿನ ಬಾಲಕಿ ಮೇಲೆ ಸಂಬಂಧಿಯೇ ಹಲವು ಬಾರಿ ಅತ್ಯಾಚಾರ ಎಸಗಿದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ದೂರಿನ ಆಧಾರದ ಮೇಲೆ 24 ವರ್ಷದ ಆರೋಪಿಯನ್ನು ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಬಾಲಕಿಯು ಸಂಬಂಧಿಕರ ಮನೆಯಲ್ಲಿದ್ದು ಓದುತ್ತಿದ್ದಳು. ಸಂತ್ರಸ್ತೆ ಒಬ್ಬಳೇ ಇದ್ದ ಸಂದರ್ಭದಲ್ಲಿ ಆರೋಪಿಯು ಹಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ' ಎಂದು ಉಪ ವಿಭಾಗೀಯ ಪೊಲೀಸ್ ಅಧಿಕಾರಿ ಸತೀಶ್ ಕುಲಕರ್ಣಿ ತಿಳಿಸಿದರು.

'ಆರೋಪಿಯು ಕಳೆದ ವರ್ಷ ಆಗಸ್ಟ್‌ನಿಂದ ಲೈಂಗಿಕ ದೌರ್ಜನ್ಯ ನಡೆಸಿದ್ದು, ಸಂತ್ರಸ್ತೆಯ ಕುಟುಂಬಸ್ಥರು ಗುರುವಾರ ರಾತ್ರಿ ದೂರು ದಾಖಲಿಸಿದ್ದರು. ಆರೋಪಿ ವಿರುದ್ಧ ಐಪಿಸಿ ಸೆಕ್ಷನ್ 376 (ಅತ್ಯಾಚಾರ) ಮತ್ತು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದರು.

ಎನ್‌ಸಿಸಿ ನಕಲಿ ಶಿಬಿರ ಪ್ರಕರಣ ಪ್ರಮುಖ ಆರೋಪಿ ಆತ್ಮಹತ್ಯೆ

ಕೃಷ್ಣಗಿರಿ (ಪಿಟಿಐ): ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯಲ್ಲಿ ನಕಲಿ 'ಎನ್‌ಸಿಸಿ' ಶಿಬಿರ ನಡೆಸಿ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಪ್ರಕರಣದ ಪ್ರಮುಖ ಆರೋಪಿ ಶಿವರಾಮನ್, ಆಸ್ಪತ್ರೆಯಲ್ಲಿ ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮದ್ಯ ಕುಡಿದು ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ವೇಳೆ ಶಿವರಾಮನ್ ತಂದೆ ಅಶೋಕ್ ಕುಮಾರ್ ಅವರು ಗುರುವಾರ ರಾತ್ರಿ ರಸ್ತೆ ಅಪಘಾತದಲ್ಲಿ ಮೃತಪಟ್ಟರು. ಬಳಿಕ ಶುಕ್ರವಾರ ಇಲಿ ಪಾಷಾಣ ಸೇವಿಸಿ ಶಿವರಾಮನ್ ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಮಾಜಿ ಸಿಬ್ಬಂದಿಯೊಬ್ಬರ ನೆರವು ಪಡೆದು ಎನ್‌ಸಿಸಿ ಸಂಯೋಜಕ ಎಂದು ಬಿಂಬಿಸಿಕೊಂಡಿದ್ದ ಶಿವರಾಮನ್, ಕೃಷ್ಣಗಿರಿಯ ಖಾಸಗಿ ಶಾಲೆಯಲ್ಲಿ ನಾಲ್ಕು ದಿನಗಳವರೆಗೆ 'ನಕಲಿ ಎನ್‌ಸಿಸಿ ಶಿಬಿರ' ನಡೆಸಿ, 13 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಲ್ಲದೆ, ಇತರ 12 ಬಾಲಕಿಯರನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡಿದ್ದಾನೆ ಎಂದು ಆರೋಪಿಸಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವರಾಮನ್, ಶಾಲೆಯ ಪ್ರತಿನಿಧಿ ಸ್ಯಾಮ್ಸನ್ ವೆಸ್ಲಿ, ಪ್ರಾಚಾರ್ಯ ಸತೀಶ್ ಕುಮಾರ್, ಇಬ್ಬರು ಶಿಕ್ಷಕರು, ಸಿಆರ್‌ಪಿಎಫ್ ಮಾಜಿ ಸಿಬ್ಬಂದಿ ವಿ. ಸುಬ್ರಮಣಿ ಸೇರಿದಂತೆ 11 ಮಂದಿಯನ್ನು ಪೊಲೀಸರು ಬಂಧಿಸಿದ್ದರು.

ಪೊಲೀಸರ ಬಂಧನಕ್ಕೊಳಗಾಗುವುದನ್ನು ತಪ್ಪಿಸಿಕೊಳ್ಳಲು ಶಿವರಾಮನ್ ಯತ್ನಿಸಿದ್ದ ವೇಳೆ ಆತನ ಕಾಲಿಗೆ ತೀವ್ರ ಪೆಟ್ಟಾಗಿತ್ತು. ಚಿಕಿತ್ಸೆಗಾಗಿ ಅವನನ್ನು ಸೇಲಂನ ಸರ್ಕಾರಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತಮಿಳು ರಾಷ್ಟ್ರೀಯವಾದಿ ಸಂಘಟನೆ 'ನಾಮ್ ತಮಿಳರ್ ಕಚ್ಚಿ'ಯ (ಎನ್‌ಟಿಕೆ) ಪದಾಧಿಕಾರಿಯಾಗಿದ್ದ ಶಿವರಾಮನ್ ಆಯೋಜಿಸಿದ್ದ ನಕಲಿ ಎನ್‌ಸಿಸಿ ಶಿಬಿರದಲ್ಲಿ 17 ಬಾಲಕಿಯರು ಸೇರಿದಂತೆ ಒಟ್ಟು 41 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಈತ ಎನ್‌ಸಿಸಿಯ ಭಾಗವಾಗಿದ್ದಾನೋ ಇಲ್ಲವೋ ಎಂಬುದನ್ನು ಪರಿಶೀಲಿಸದೆ ಶಾಲೆಯವರು ಶಿಬಿರ ನಡೆಸಲು ಅನುಮತಿ ನೀಡಿದ್ದರು ಎಂದು ತಿಳಿದುಬಂದಿದೆ.

ಶಿಬಿರದ ಕೊನೆಯ ದಿನ ಶಿವರಾಮನ್, ಎಂಟನೇ ತರಗತಿ ವಿದ್ಯಾರ್ಥಿನಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಕೃಷ್ಣಗಿರಿ ಜಿಲ್ಲೆಯ ಬರ್ಗೂರ್‌ನಲ್ಲಿ ಆಗಸ್ಟ್ 5ರಿಂದ ಆಗಸ್ಟ್ 9ರ ನಡುವೆ ಈ ಘಟನೆ ನಡೆದಿದೆ.

ಅಪರಾಧಿ ರಕ್ಷಿಸುವ ಪ್ರಯತ್ನ?

ನಕಲಿ ಎನ್‌ಸಿಸಿ ಶಿಬಿರ ಪ್ರಕರಣದ ಪ್ರಮುಖ ಆರೋಪಿ ಶಿವರಾಮನ್ ತಂದೆ ಅತ್ತ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಇತ್ತ ಆತನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪ್ರಕರಣದ ನಿಜವಾದ ಆರೋಪಿಯನ್ನು ರಕ್ಷಿಸುವ ಪ್ರಯತ್ನಗಳಾಗುತ್ತಿವೆಯೇ ಎಂದು ವಿಪಕ್ಷಗಳಾದ ಎಐಎಡಿಎಂಕೆ ಹಾಗೂ ಬಿಜೆಪಿ ಶಂಕೆ ವ್ಯಕ್ತಪಡಿಸಿವೆ.

ಎಸ್‌ಐಟಿ ತನಿಖೆ ಪ್ರಾರಂಭವಾಗುವ ಮುನ್ನವೇ ಶಿವರಾಮನ್ ಮತ್ತು ಅವರ ತಂದೆ ಮೃತಪಟ್ಟಿದ್ದಾರೆ ಇವರ ಸಾವಿನ ಸಮಯವು ಅನುಮಾನವನ್ನು ಹುಟ್ಟುಹಾಕುತ್ತಿದೆ ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಪಳನಿಸ್ವಾಮಿ ಹೇಳಿದ್ದಾರೆ.

ವಿಶೇಷ ತಂಡ ರಚಿಸಿ: ಯುಡಿಎಫ್

ಮಲಯಾಳ ಚಿತ್ರೋದ್ಯಮದಲ್ಲಿ ದೌರ್ಜನ್ಯ– ಹೇಮಾ ಸಮಿತಿ

ತಿರುವನಂತಪುರ (ಪಿಟಿಐ): ನ್ಯಾಯಮೂರ್ತಿ ಕೆ.ಹೇಮಾ ಸಮಿತಿಯ ವರದಿಯಲ್ಲಿ ಪ್ರಸ್ತಾಪವಾಗಿರುವ ಲೈಂಗಿಕ ದೌರ್ಜನ್ಯದ ವಿರುದ್ಧ ಸಮಗ್ರ ತನಿಖೆ ನಡೆಸಲು ವಿಶೇಷ ತನಿಖಾ ತಂಡ ರಚಿಸುವಂತೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಶುಕ್ರವಾರ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಒತ್ತಾಯಿಸಿದೆ.

ಆದರೆ ಸಮಿತಿಯ ವರದಿ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲು ಸಾಧ್ಯವಿಲ್ಲ ಎಂದು ಸಿಪಿಎಂ ಹೇಳಿದೆ.

ಲೈಂಗಿಕ ಕಿರುಕುಳ, ಶೋಷಣೆ, ದೌರ್ಜನ್ಯ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಸಂತ್ರಸ್ತರು ನೀಡಿದ ಹೇಳಿಕೆಗಳು ಹಾಗೂ ಪುರಾವೆಗಳ ಆಧಾರದ ಮೇಲೆ ತನಿಖೆ ನಡೆಸಲು ಮಹಿಳಾ ಐಪಿಎಸ್ ಅಧಿಕಾರಿ ನೇತೃತ್ವದಲ್ಲಿ ವಿಶೇಷ ತಂಡವನ್ನು ರಚಿಸಬೇಕು ಎಂದು ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಅವರು ಮುಖ್ಯಮಂತ್ರಿ ವಿಜಯನ್ ಮತ್ತು ಸಂಸ್ಕೃತಿ ಸಚಿವರಾದ ಸಜಿ ಚೆರಿಯನ್ ಅವರಿಗೆ ಪತ್ರ ಬರೆದಿದ್ದಾರೆ.

'ಸಮಿತಿಯ ವರದಿ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲು ಸಾಧ್ಯವಿಲ್ಲ ಎಂದು ನ್ಯಾಯಾಲಯಗಳು ತೀರ್ಪು ನೀಡಿವೆ' ಎಂದು ಸಿಪಿಎಂನ ಹಿರಿಯ ನಾಯಕ ಎ.ಕೆ. ಬಾಲನ್ ಹೇಳಿದ್ದಾರೆ.

'ಇದು ಉಮ್ಮನ್ ಚಾಂಡಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು. ಆದ್ದರಿಂದ ಸಮಿತಿಯ ವರದಿ ಆಧಾರದ ಮೇಲೆ ರಾಜ್ಯ ಸರ್ಕಾರವು ಎಫ್‌ಐಆರ್ ದಾಖಲಿಸಲು ಸಾಧ್ಯವಿಲ್ಲ' ಎಂದಿದ್ದಾರೆ.

'ವರದಿ ಕುರಿತಂತೆ ಈಗಾಗಲೇ ಮುಖ್ಯಮಂತ್ರಿ ಹಾಗೂ ನಾನು ಪ್ರತಿಕ್ರಿಯೆ ನೀಡಿದ್ದೇವೆ. ಅದಕ್ಕಿಂತ ಹೆಚ್ಚಿನದ್ದನ್ನು ಹೇಳಲಾಗಲ್ಲ. ಈ ವಿಷಯ ಕೇರಳ ಹೈಕೋರ್ಟ್‌ನಲ್ಲಿದೆ. ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಳ್ಳಲಾಗುವುದು' ಎಂದು ಸಂಸ್ಕೃತಿ ಸಚಿವ ಸಜಿ ಚೆರಿಯನ್ ತಿಳಿಸಿದ್ದಾರೆ.

'ಈ ಹಿಂದೆ ಆಯೋಗಕ್ಕೆ ಸಲ್ಲಿಕೆಯಾಗಿದ್ದ ದೂರುಗಳು ಹಾಗೂ ಮಾಧ್ಯಮಗಳಲ್ಲಿ ಪ್ರಕಟಗೊಂಡಿರುವ ಸಮಿತಿಯ ವರದಿಗಳ ಆಧಾರದ ಮೇಲೆ ಮಲಯಾಳ ಚಿತ್ರೋದ್ಯಮದಲ್ಲಿ ಮಾನವ ಹಕ್ಕುಗಳ ವ್ಯಾಪಕ ಉಲ್ಲಂಘನೆಯಾಗಿದೆ ಎಂಬುದು ಕಂಡುಬರುತ್ತಿದೆ. ಇದನ್ನು ಪರಿಶೀಲಿಸಬೇಕಿದೆ' ಎಂದು ಕೇರಳ ಮಾನವ ಹಕ್ಕುಗಳ ಆಯೋಗ (ಕೆಎಚ್‌ಆರ್‌ಸಿ) ಹೇಳಿದೆ.

ವರದಿ ಕುರಿತಂತೆ ಸರ್ಕಾರ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳ ಬಗ್ಗೆ ಎರಡು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ಕೆಎಚ್‌ಆರ್‌ಸಿಯ ನ್ಯಾಯಾಂಗ ಸದಸ್ಯ ಕೆ. ಬೈಜುನಾಥ್ ಅವರು ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮುಖ್ಯಸ್ಥರಿಗೆ ಸೂಚಿಸಿದ್ದಾರೆ.

ಹೇಮಾ ಸಮಿತಿಯ ವರದಿಯಲ್ಲಿ ಉಲ್ಲೇಖವಾಗಿರುವ ಮಾನವ ಹಕ್ಕುಗಳ ಉಲ್ಲಂಘನೆಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕಣ್ಣೂರು ಮೂಲದ ವಕೀಲರು ನೀಡಿದ ದೂರಿನ ಮೇರೆಗೆ ಆಯೋಗ ನಿರ್ದೇಶನ ನೀಡಿದೆ. ಗಂಭೀರ ಅಪರಾಧಗಳನ್ನು ಎಸಗಲಾಗಿದೆ ಎಂದು ವರದಿ ದಾಖಲಿಸಿದೆ ಎಂದು ಸತೀಶನ್ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

ತನಿಖೆಗೆ 'ಅಮ್ಮಾ' ಆಗ್ರಹ

ತಿರುವನಂತಪುರ: ನ್ಯಾಯಮೂರ್ತಿ ಹೇಮಾ ಸಮಿತಿಯ ವರದಿಯಲ್ಲಿ ಪ್ರಸ್ತಾಪಿಸಿರುವ ನಟಿಯರ ಮೇಲಿನ ಲೈಂಗಿಕ ದೌರ್ಜನ್ಯದ ಆರೋಪಗಳ ಪ್ರಕರಣಗಳ ತನಿಖೆ ನಡೆಸಬೇಕು ಎಂದು ಮಲಯಾಳ ಚಲನಚಿತ್ರ ಕಲಾವಿದರ ಸಂಘ (ಅಮ್ಮಾ) ಒತ್ತಾಯಿಸಿದೆ.

ಪೂರ್ಣ ವರದಿಯನ್ನು ಸಲ್ಲಿಸುವಂತೆ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಸಂತ್ರಸ್ತರ ಗುರುತನ್ನು ಬಹಿರಂಗಪಡಿಸದೇ ವರದಿಯು ಹೊರಬರಬೇಕು ಎಂದು ಅದು ಅಭಿಪ್ರಾಯಪಟ್ಟಿದೆ.

ಒಂದು ವೇಳೆ ಹೇಮಾ ಸಮಿತಿಯ ವರದಿಯ ಆಧಾರದ ಮೇಲೆ 'ಅಮ್ಮಾ'ದ ಯಾವುದೇ ಸದಸ್ಯರ ವಿರುದ್ಧ ಪ್ರಕರಣ ದಾಖಲಿಸಲು ಹೈಕೋರ್ಟ್ ಆದೇಶ ನೀಡಿದರೆ ಖಂಡಿತವಾಗಿಯೂ ಅಂತಹ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು 'ಅಮ್ಮಾ'ದ ಉಪಾಧ್ಯಕ್ಷ ಜಗದೀಶ್ ಹೇಳಿದ್ದಾರೆ.

ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ, ಕೊಲೆ ಪ್ರಕರಣ • ನ್ಯಾಯಾಲಯ ಅನುಮತಿ

ಪ್ರಮುಖ ಆರೋಪಿಗೆ ಸುಳ್ಳು ಪತ್ತೆ ಪರೀಕ್ಷೆ

ನವದೆಹಲಿ/ ಕೋಲ್ಕತ್ತ (ಪಿಟಿಐ): ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ ಕೊಲೆಗೈದ ಪ್ರಕರಣದ ಪ್ರಮುಖ ಆರೋಪಿ ಸಂಜಯ್ ರಾಯ್‌ನನ್ನು ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಲು ಕೋಲ್ಕತ್ತದ ವಿಶೇಷ ನ್ಯಾಯಾಲಯ ಶುಕ್ರವಾರ ಅನುಮತಿ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್.ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಹಾಗೂ ಇತರ ನಾಲ್ವರು ವೈದ್ಯರ ಸುಳ್ಳು ಪತ್ತೆ ಪರೀಕ್ಷೆ ನಡೆಸಲು ನ್ಯಾಯಾಲಯ ಈಗಾಗಲೇ ಅನುಮತಿ ನೀಡಿದೆ.

ವೈದ್ಯ ವಿದ್ಯಾರ್ಥಿನಿಯ ಮೃತದೇಹದ ಬಳಿ ದೊರೆತಿದ್ದ ಬ್ಲೂಟೂತ್ ಸಾಧನ ಮತ್ತು ಸಿ.ಸಿ.ಟಿ.ವಿ ದೃಶ್ಯಾವಳಿಗಳನ್ನು ಆಧರಿಸಿ ಪೊಲೀಸರು ಪ್ರಮುಖ ಆರೋಪಿಯನ್ನು ಬಂಧಿಸಿದ್ದರು. ಸಂಜಯ್ ರಾಯ್, ಸೆಮಿನಾರ್ ಹಾಲ್‌ಗೆ ಪ್ರವೇಶಿಸಿದ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ದೆಹಲಿಯ ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲದ (ಸಿಎಫ್‌ಎಸ್‌ಎಲ್) ತಜ್ಞರ ತಂಡವು ಸುಳ್ಳು ಪತ್ತೆ ಪರೀಕ್ಷೆ ನಡೆಸಲಿದೆ.

ಹಣಕಾಸಿನ ಅವ್ಯವಹಾರ ತನಿಖೆ ಸಿಬಿಐಗೆ ವರ್ಗಾವಣೆ: ಆರ್.ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅವ್ಯವಹಾರಗಳ ಕುರಿತ ತನಿಖೆಯನ್ನು ಎಸ್‌ಐಟಿಯಿಂದ ಸಿಬಿಐಗೆ ವರ್ಗಾಯಿಸುವಂತೆ ಕಲ್ಕತ್ತ ಹೈಕೋರ್ಟ್ ಶುಕ್ರವಾರ ಆದೇಶಿಸಿದೆ.

ಕಾಲೇಜಿನ ಮಾಜಿ ಉಪ ಅಧೀಕ್ಷಕ ಅಖ್ತರ್ ಅಲಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಈ ಆದೇಶ ಹೊರಡಿಸಿದೆ. ತನಿಖೆಯ ಪ್ರಗತಿಗೆ ಸಂಬಂಧಿಸಿದ ವರದಿಯನ್ನು ಮೂರು ವಾರಗಳ ಒಳಗಾಗಿ ಸಲ್ಲಿಸುವಂತೆ ನ್ಯಾಯಮೂರ್ತಿ ರಾಜರ್ಷಿ ಭಾರದ್ವಾಜ್ ಅವರು ಸಿಬಿಐಗೆ ನಿರ್ದೇಶಿಸಿದ್ದಾರೆ.

ನಿರಾಸೆ ಉಂಟಾಗಿದೆ: ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಸುರಕ್ಷೆಗೆ ತೆಗೆದುಕೊಂಡಿರುವ ಕ್ರಮಗಳನ್ನು ನೋಡುವಾಗ ನಿರಾಸೆಯ ಭಾವನೆ ಮೂಡುತ್ತದೆ ಎಂದು ಆರ್.ಜಿ ಕರ್ ಆಸ್ಪತ್ರೆಯ ಸ್ಥಾಪಕ ಡಾ.ರಾಧಾ ಗೋವಿಂದ ಕರ್ ಅವರ ವಂಶಸ್ಥರಾದ ಪಾರ್ಥ ಕರ್ ಹೇಳಿದ್ದಾರೆ.

ಆರ್.ಜಿ ಕರ್ ಅವರ 172ನೇ ಜನ್ಮದಿನದ ಅಂಗವಾಗಿ ಮಾತನಾಡಿದ ಅವರು, 'ಸ್ವಾತಂತ್ರ್ಯ ಲಭಿಸಿ ಸುಮಾರು ಎಂಟು ದಶಕಗಳು ಕಳೆದರೂ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ರೋಗಿಗಳು ಸೌಲಭ್ಯಗಳ ಕೊರತೆ ಎದುರಿಸುತ್ತಿರುವುದು ನೋವಿನ ಸಂಗತಿ' ಎಂದಿದ್ದಾರೆ.

ವೈದ್ಯ ವಿದ್ಯಾರ್ಥಿನಿ ಕೊಲೆ ಖಂಡಿಸಿ ನವದೆಹಲಿಯಲ್ಲಿ ವಕೀಲರು ಶುಕ್ರವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ದಿನದ ಬೆಳವಣಿಗೆ

- ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ, ಕೊಲೆ ಘಟನೆ ಖಂಡಿಸಿ ಪಶ್ಚಿಮ ಬಂಗಾಳದಲ್ಲಿ ಕಿರಿಯ ವೈದ್ಯರು ನಡೆಸುತ್ತಿರುವ ಮುಷ್ಕರ 15ನೇ ದಿನಕ್ಕೆ ಕಾಲಿಟ್ಟಿದೆ. ರಾಜ್ಯದಾದ್ಯಂತ ಶುಕ್ರವಾರವೂ ವೈದ್ಯಕೀಯ ಸೇವೆಗಳು ಏರುಪೇರಾದವು.
- ಸುಪ್ರೀಂ ಕೋರ್ಟ್‌ನ ಮನವಿಯಂತೆ ಫೆಡರೇಷನ್ ಆಫ್ ರೆಸಿಡೆಂಟ್ ಡಾಕ್ಟರ್ಸ್ ಅಸೋಸಿಯೇಷನ್ (ಫೋರ್ಡಾ), ಮುಷ್ಕರವನ್ನು ವಾಪಸ್ ಪಡೆದುಕೊಂಡಿದೆ. ನವದೆಹಲಿಯಲ್ಲಿ ಎಲ್ಲ ಸದಸ್ಯರು ಪ್ರತಿಭಟನೆ ಕೈಬಿಟ್ಟು ಶುಕ್ರವಾರ ಕೆಲಸಕ್ಕೆ ಹಾಜರಾಗಿದ್ದಾರೆ ಎಂದು ಅಸೋಸಿಯೇಷನ್ ತಿಳಿಸಿದೆ.

'ಬಾಗಿಲಿನ ಚಿಲಕ ಮುರಿದಿತ್ತು'

'ವೈದ್ಯ ವಿದ್ಯಾರ್ಥಿನಿಯ ಮೃತದೇಹ ಪತ್ತೆಯಾದ ಸೆಮಿನಾರ್ ಹಾಲ್‌ನ ಬಾಗಿಲಿನ ಚಿಲಕ ಮುರಿದಿರುವುದು ಕಂಡುಬಂದಿದ್ದು, ಯಾವುದೇ ಅಡೆತಡೆಯಿಲ್ಲದೆ ಅಪರಾಧ ಕೃತ್ಯ ಹೇಗೆ ನಡೆಯಿತು ಎಂಬುದರ ಕುರಿತು ತನಿಖೆಯನ್ನು ಕೇಂದ್ರೀಕರಿಸಿದ್ದೇವೆ' ಎಂದು ಸಿಬಿಐನ ಅಧಿಕಾರಿಯೊಬ್ಬರು ತಿಳಿಸಿದರು.

ವೈದ್ಯ ವಿದ್ಯಾರ್ಥಿನಿಯ ಮೇಲೆ ದೌರ್ಜನ್ಯ ನಡೆದಾಗ ಸೆಮಿನಾರ್ ಹಾಲ್‌ನಿಂದ ಯಾರಿಗೂ ಯಾವುದೇ ಶಬ್ದ ಏಕೆ ಕೇಳಿಸಲಿಲ್ಲ ಎಂಬ ಬಗ್ಗೆ ತನಿಖಾಧಿಕಾರಿಗಳು ಅಚ್ಚರಿ ವ್ಯಕ್ತಪಡಿಸಿದರು.

'ಬಾಗಿಲಿನ ಚಿಲಕ ಕೆಲ ದಿನಗಳ ಹಿಂದೆಯೇ ಮುರಿದಿತ್ತು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಸಂತ್ರಸ್ತೆಯು ನಿದ್ದೆ ಮಾಡಲು ಆಗಸ್ಟ್ 9ರ ಬೆಳಗಿನ ಜಾವ 2 ರಿಂದ 3ರ ನಡುವೆ ಸೆಮಿನಾರ್ ಹಾಲ್ ಪ್ರವೇಶಿಸಿದ್ದಾರೆ. ಚಿಲಕ ಮುರಿದಿದ್ದ ಕಾರಣ ಅವರಿಗೆ ಬಾಗಿಲು ಭದ್ರಪಡಿಸಲು ಆಗಿರಲಿಲ್ಲ' ಎಂದು ಹೇಳಿದರು.

'ಅಪರಾಧ ನಡೆದಾಗ ಆರೋಪಿಯ ರಕ್ಷಣೆಗೆ ಯಾರಾದರೂ ಸೆಮಿನಾರ್ ಹಾಲ್‌ನ ಹೊರಗಡೆ ಕಾವಲು ನಿಂತಿದ್ದರೇ ಎಂಬ ಬಗ್ಗೆಯೂ ತನಿಖೆ ನಡೆಸುತ್ತಿದ್ದೇವೆ' ಎಂದು ತಿಳಿಸಿದರು.

'ವಜುಖಾನಾ ಸಮೀಕ್ಷೆಗೆ ಅನುಮತಿ ನೀಡಿಲ್ಲ'

ಪ್ರಯಾಗ್‌ರಾಜ್ (ಪಿಟಿಐ): 'ಸುಪ್ರೀಂ ಕೋರ್ಟ್ ಆದೇಶದಂತೆ ವಾರಾಣಸಿಯ ಗ್ಯಾನವಾಪಿ ಮಸೀದಿ ಸಂಕೀರ್ಣದಲ್ಲಿರುವ 'ವಜುಖಾನಾ' ಸಂರಕ್ಷಿತ ಪ್ರದೇಶವಾಗಿದ್ದು, ಭಾರತೀಯ ಪುರಾತತ್ವ ಇಲಾಖೆಯ (ಎಎಸ್‌ಐ) ಸಮೀಕ್ಷೆಗೆ ಅವಕಾಶ ನೀಡುವುದಿಲ್ಲ' ಎಂದು ಮಸೀದಿ ಆಡಳಿತ ಮಂಡಳಿಯು ಅಲಹಾಬಾದ್ ಹೈಕೋರ್ಟ್‌ಗೆ ತಿಳಿಸಿದೆ.

ವಜುಖಾನಾದಲ್ಲಿ(ನಮಾಜ್‌ಗೂ ಮುನ್ನ ಶುದ್ಧೀಕರಣಕ್ಕೆ ಬಳಸುವ ಕೊಳ) ಸಮೀಕ್ಷೆ ನಡೆಸಲು ಅನುಮತಿ ನೀಡುವಂತೆ ಕೋರಿ ಎಎಸ್‌ಐ, ಅಲಹಾಬಾದ್ ಹೈಕೋರ್ಟ್ ಅನುಮತಿ ಕೋರಿದ್ದ ಬೆನ್ನಲ್ಲೇ ಗ್ಯಾನವಾಪಿ ಮಸೀದಿಯ ಆಡಳಿತ ನಿರ್ವಹಣೆಯ ಹೊಣೆ ಹೊತ್ತಿರುವ ಅಂಜುಮನ್ ಇಂತೆಜಾಮಿಯಾ ಸಮಿತಿ ಪ್ರತಿಯಾಗಿ ಪ್ರಮಾಣಪತ್ರ ಸಲ್ಲಿಸಿದೆ.

'ವಜುಖಾನಾ' ಹಾಗೂ 'ಶಿವಲಿಂಗ' ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈಗಾಗಲೇ ತಡೆಯಾಜ್ಞೆ ನೀಡಿದೆ. ಅದನ್ನು ಸಂರಕ್ಷಿಸಿ, ಭದ್ರತೆ ಒದಗಿಸುವ ಜವಾಬ್ದಾರಿಯನ್ನು ವಾರಾಣಸಿಯ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ವಹಿಸಲಾಗಿದೆ. ಇದರ ಹೊರತಾಗಿ ಯಾವುದೇ ಕ್ರಮಕ್ಕೂ ಅನುಮತಿ ನೀಡಿಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ 2022ರ ಆದೇಶದ ಕುರಿತು ಯಾವುದೇ ಸ್ಪಷ್ಟೀಕರಣ ಬೇಕಿದ್ದರೆ, ಅರ್ಜಿದಾರರು ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಬಹುದು' ಎಂದು ಪ್ರತಿ ಪ್ರಮಾಣಪತ್ರದಲ್ಲಿ ತಿಳಿಸಿದೆ.

'ಗ್ಯಾನವಾಪಿಯಲ್ಲಿ ಶಿವಲಿಂಗ ಹೊರತುಪಡಿಸಿ ವಜುಖಾನಾದಲ್ಲಿ ಎಎಸ್‌ಐ ಸಮೀಕ್ಷೆಗೆ ಅನುಮತಿ ನೀಡುವಂತೆ ಕೋರಿ 2023ರ ಅಕ್ಟೋಬರ್ 21ರಂದು ಹಿಂದೂ ಸಮುದಾಯದವರು ಸಲ್ಲಿಸಿದ್ದ ಅರ್ಜಿಯನ್ನು ಜಿಲ್ಲಾ ನ್ಯಾಯಾಲಯ ತಿರಸ್ಕರಿಸಿತ್ತು. ಈ ವಿಚಾರವು ಈಗಾಗಲೇ ಸುಪ್ರೀಂ ಕೋರ್ಟ್‌ನಲ್ಲಿದ್ದು, ಮಧ್ಯಂತರ ಆದೇಶಕ್ಕೆ ಒಳಪಡುತ್ತದೆ ಎಂದು ಜಿಲ್ಲಾ ನ್ಯಾಯಾಲಯವು ಕೂಡ ಸ್ಪಷ್ಟಪಡಿಸಿತ್ತು' ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.

ಪ್ರಮಾಣಪತ್ರದಲ್ಲಿನ ವಿಷಯವನ್ನು ಪರಿಗಣಿಸಿದ ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್‌ವಾಲ್ ಅವರು, ಪ್ರತಿ ಪ್ರಮಾಣಪತ್ರ ಸಲ್ಲಿಸಲು ಅರ್ಜಿದಾರರ ಪರ ವಕೀಲರಿಗೆ ಎರಡು ವಾರಗಳ ಕಾಲಾವಕಾಶ ನೀಡಿದರು. ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 9ಕ್ಕೆ ಮುಂದೂಡಿದರು.

ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ ಪ್ರೊ. ಸಾಯಿಬಾಬಾ ಅಸಮಾಧಾನ

9 ತಿಂಗಳು ಆಸ್ಪತ್ರೆಗೆ ಕರೆದೊಯ್ಯಲಿಲ್ಲ

ಹೈದರಾಬಾದ್ (ಪಿಟಿಐ): 'ದೇಹದ ಎಡಭಾಗವು ಸಂಪೂರ್ಣವಾಗಿ ನಿಷ್ಕ್ರಿಯಗೊಂಡಿದ್ದರೂ, ಒಂಬತ್ತು ತಿಂಗಳ ನನ್ನನ್ನು ಆಸ್ಪತ್ರೆಗೆ ಕರೆದೊಯ್ದಿರಲಿಲ್ಲ. ನಾಗಪುರ ಜೈಲಿನಲ್ಲಿದ್ದ ವೇಳೆ ನೋವು ನಿವಾರಕ ಮಾತ್ರೆಗಳನ್ನಷ್ಟೇ ನೀಡುತ್ತಿದ್ದರು...

–ಮಾವೋವಾದಿಗಳ ಜತೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ಜೈಲುಪಾಲಾಗಿ ನಂತರ ಪ್ರಕರಣದಿಂದ ಖುಲಾಸೆಗೊಂಡ ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ ಜಿ.ಎನ್. ಸಾಯಿಬಾಬಾ ಸ್ಪಷ್ಟ ನುಡಿಗಳು. ಜೈಲಿನಲ್ಲಿ ಕಳೆದ ದಿನಗಳನ್ನು ಇಲ್ಲಿನ ತಮ್ಮ ನಿವಾಸದಲ್ಲಿ ಪತ್ರಕರ್ತರ ಜತೆ ಹಂಚಿಕೊಂಡಿದ್ದಾರೆ.

ಬಂಧನ– ಬೆದರಿಕೆ: 'ದೆಹಲಿಯಲ್ಲಿದ್ದ ನನ್ನನ್ನು 'ಅಪಹರಿಸಿದ' ಬಳಿಕ ಮಹಾರಾಷ್ಟ್ರ ಪೊಲೀಸರು ಬಂಧಿಸಿದ್ದರು. ಇದಕ್ಕೂ ಮುನ್ನ ಅಲ್ಲಿನ ಪೊಲೀಸರು ಹಾಗೂ ತನಿಖಾಧಿಕಾರಿಗಳು ಮನೆಗೆ ತೆರಳಿ ನನ್ನ ಕುಟುಂಬದ ಸದಸ್ಯರಿಗೆ ಬೆದರಿಕೆ ಒಡ್ಡಿದ್ದರು' ಎಂದ ಪ್ರೊ. ಸಾಯಿಬಾಬಾ, ಅಧಿಕಾರಿಗಳ ಹೆಸರನ್ನು ಬಹಿರಂಗಪಡಿಸಲು ನಿರಾಕರಿಸಿದರು.

'ಪೋಲಿಯೊದಿಂದ ನನಗೆ ನಡೆಯಲು ಸಾಧ್ಯವಿಲ್ಲ. ಗಾಲಿ ಕುರ್ಚಿಯಲ್ಲಿದ್ದ ನನ್ನನ್ನು ಎಳೆದೊಯ್ದಿದ್ದರಿಂದ ನನ್ನ ಎಡಗೈಗೆ ತೀವ್ರವಾಗಿ ಗಾಯ ಉಂಟಾಗಿ, ನರವ್ಯೂಹದ ಮೇಲೂ ತೀವ್ರ ಪರಿಣಾಮ ಬೀರಿತು. ದೇಹದ ಎಡಭಾಗ ಸಂಪೂರ್ಣವಾಗಿ ನಿಷ್ಕ್ರಿಯಗೊಂಡರೂ ಆಸ್ಪತ್ರೆಗೆ ಕರೆದೊಯ್ಯಲಿಲ್ಲ. ಯಾವ ವೈದ್ಯರೂ ಭೇಟಿಯಾಗಲಿಲ್ಲ' ಎಂದು 'ಆ ದಿನಗಳ'ನ್ನು ನೆನಪಿಸಿಕೊಂಡರು.

'ಜೈಲಿನೊಳಗೆ ಯಾವುದೇ ದೈಹಿಕ ಕಿರುಕುಳ ನೀಡಲಿಲ್ಲ, ಅಂತಹ ಪರಿಸ್ಥಿತಿ ನಿರ್ಮಾಣ ಮಾಡಿದ್ದರು' ಎಂದರು.

> **ಮುರಿದುಹೋದ ಗಾಲಿಕುರ್ಚಿಯಲ್ಲೇ ಬಂಧನದ ಬಳಿಕ ನಾಗಪುರದ ಜೈಲಿಗೆ ಕಳುಹಿಸಿದರು. ಜೈಲಿನಲ್ಲೂ ನನ್ನ ಆರೋಗ್ಯದ ಬಗ್ಗೆ ಕಾಳಜಿ ವಹಿಸಲಿಲ್ಲ**
> **ಜಿ.ಎನ್. ಸಾಯಿಬಾಬಾ,** ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ

'ನನ್ನನ್ನು ವಶಕ್ಕೆ ನೀಡುವಂತೆ ಪೊಲೀಸರು ನ್ಯಾಯಾಲಯಕ್ಕೆ ಮನವಿ ಮಾಡಲಿಲ್ಲ. ನಾನು ಸ್ವಯಂಪ್ರೇರಿತನಾಗಿ ಅವರ ವಶದಲ್ಲಿರಲು ಸಿದ್ಧನಿದ್ದೆ. ಈ ಬಗ್ಗೆ ತನಿಖಾಧಿಕಾರಿಗಳನ್ನೂ ಪ್ರಶ್ನಿಸಿದ್ದೆ. ನೀವು ಯಾವುದೇ ಅಪರಾಧ ಮಾಡದ ಕಾರಣ, ಅದರ ಅಗತ್ಯವಿಲ್ಲ ಎಂದು ತಿಳಿಸಿದ್ದರು' ಎಂದು ವಿವರಿಸಿದರು.

2014ರ ಮೇ ತಿಂಗಳಲ್ಲಿ ಪ್ರೊ. ಸಾಯಿಬಾಬಾ ಅವರನ್ನು ಮಹಾರಾಷ್ಟ್ರ ಪೊಲೀಸರು ದೆಹಲಿಯಲ್ಲಿ ಬಂಧಿಸಿ, ಮಹಾರಾಷ್ಟ್ರದ ಗಡ್‌ಚಿರೋಲಿಯ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿದ್ದರು. ನಂತರ ನಾಗಪುರ ಜೈಲಿನ ಮೊಟ್ಟೆ ಆಕಾರದ ಸೆಲ್‌ನಲ್ಲಿಟ್ಟಿದ್ದರು.

ಪ್ರೊ. ಸಾಯಿಬಾಬಾ ವಿರುದ್ಧ ಸಮಂಜಸವಾದ ಸಾಕ್ಷಿ ಒದಗಿಸಲು ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದ ಬಾಂಬೆ ಹೈಕೋರ್ಟ್, ಈ ವರ್ಷದ ಮಾರ್ಚ್ ತಿಂಗಳಲ್ಲಿ ಅವರನ್ನು ಪ್ರಕರಣದಿಂದ ಖುಲಾಸೆಗೊಳಿಸಿ, ಜೀವಾವಧಿ ಶಿಕ್ಷೆಯನ್ನು ರದ್ದುಗೊಳಿಸಿತ್ತು.

ಬಾಹ್ಯಾಕಾಶದಲ್ಲಿ ಅವಶೇಷ: ಕಳವಳ

'ರಾಷ್ಟ್ರೀಯ ಬಾಹ್ಯಾಕಾಶ ದಿನ'ದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮುರ್ಮು

ನವದೆಹಲಿ (ಪಿಟಿಐ): ಭೂಕಕ್ಷೆಯಲ್ಲಿ ನಿಷ್ಕ್ರಿಯಗೊಂಡ ಉಪಗ್ರಹಗಳ ಅವಶೇಷಗಳ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು, 2030ರ ವೇಳೆಗೆ ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೊ) ತನ್ನ ಬಾಹ್ಯಾಕಾಶ ಯೋಜನೆಗಳನ್ನು 'ಅವಶೇಷಮುಕ್ತ' ಆಗಿಸುವ ಗುರಿ ಹೊಂದಿರುವುದಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು.

ಚಂದ್ರಯಾನ–3 ಯೋಜನೆ ಯಶಸ್ವಿಯಾದ ಮೊದಲ ವರ್ಷಾಚರಣೆ ಅಂಗವಾಗಿ ನವದೆಹಲಿಯ ಭಾರತ್ ಮಂಟಪ್‌ನಲ್ಲಿ ಹಮ್ಮಿಕೊಂಡಿದ್ದ ಚೊಚ್ಚಲ 'ರಾಷ್ಟ್ರೀಯ ಬಾಹ್ಯಾಕಾಶ ದಿನ'ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬಾಹ್ಯಾಕಾಶದಲ್ಲಿರುವ ಅವಶೇಷಗಳು ಯೋಜನೆಗಳಿಗೆ ಹಿನ್ನಡೆ ಉಂಟು ಮಾಡಿವೆ. 2030ರ ಒಳಗಾಗಿ ಭಾರತವು ಎಲ್ಲ ಬಾಹ್ಯಾಕಾಶ ಯೋಜನೆಗಳನ್ನು 'ಅವಶೇಷಮುಕ್ತ'ಗೊಳಿಸಲು ಮುಂದಡಿ ಇಟ್ಟಿದೆ' ಎಂದು ಅವರು ಸಂತಸ ವ್ಯಕ್ತಪಡಿಸಿದರು.

ಕಡಿಮೆ ಸಂಪನ್ಮೂಲದಲ್ಲಿ ವಿಶ್ವದಲ್ಲಿಯೇ ಅತ್ಯುತ್ತಮ ಬಾಹ್ಯಾಕಾಶ ಯೋಜನೆಗಳನ್ನು ಸಾಕಾರಗೊಳಿಸಿದ ಇಸ್ರೊ ವಿಜ್ಞಾನಿಗಳನ್ನು ಅಭಿನಂದಿಸಿದ ಅವರು, 'ಇದರಿಂದ ದೇಶದ ಸಾಮಾಜಿಕ, ಆರ್ಥಿಕ ಬೆಳವಣಿಗೆಗೂ ಅಮೂಲ್ಯ ಕೊಡುಗೆಗಳನ್ನು ನೀಡಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಳೆದ ವರ್ಷ ಆಗಸ್ಟ್ 23ರಂದು ಚಂದ್ರಯಾನ–3ರ ಭಾಗವಾಗಿ ಕಳುಹಿಸಿದ್ದ 'ವಿಕ್ರಮ ಲ್ಯಾಂಡರ್' ಚಂದ್ರನ ಅಂಗಳಕ್ಕೆ ಇಳಿದಿತ್ತು. ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿದ ಮೊದಲ ದೇಶವೆಂಬ ಹೆಗ್ಗಳಿಕೆಗೂ ಭಾರತ ಪಾತ್ರವಾಗಿತ್ತು.

ಕಾರ್ಯಕ್ರಮದಲ್ಲಿ 'ಭಾರತೀಯ ಅಂತರಿಕ್ಷ ಹ್ಯಾಕಥಾನ್' ಹಾಗೂ 'ರೊಬೊಟಿಕ್ಸ್ ಚಾಲೆಂಜ್'ನಲ್ಲಿ ವಿಜೇತರಾದವರಿಗೆ ಪ್ರಶಸ್ತಿ ವಿತರಿಸಿದರು. ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್, ಎಂಜಿನಿಯರ್‌ಗಳು, ಇಸ್ರೊ ವಿಜ್ಞಾನಿಗಳು, ಬಾಹ್ಯಾಕಾಶ ಕೈಗಾರಿಕೆಗಳ ವಿವಿಧ ಪ್ರತಿನಿಧಿಗಳು ಹಾಜರಿದ್ದರು.

ನವದೆಹಲಿಯಲ್ಲಿ ಶುಕ್ರವಾರ ನಡೆದ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ವಿಜ್ಞಾನ ಹಾಗೂ ತಂತ್ರಜ್ಞಾನ ರಾಜ್ಯ ಸಚಿವ ಜಿತೇಂದ್ರ ಸಿಂಗ್, ಇಸ್ರೋ ಮುಖ್ಯಸ್ಥ ಎಸ್. ಸೋಮನಾಥ್ ಅವರು ಉಪಗ್ರಹಗಳ ಮಾದರಿಗಳನ್ನು ವೀಕ್ಷಿಸಿದರು ಪಿಟಿಐ ಚಿತ್ರ

ಕೇಜ್ರಿವಾಲ್: ವಿಚಾರಣೆ ಸೆ.5ಕ್ಕೆ ಮುಂದೂಡಿಕೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಸಿಬಿಐನಿಂದ ಬಂಧನಕ್ಕೊಳಗಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಮ್ಮ ಬಂಧನ ಪ್ರಶ್ನಿಸಿ ಮತ್ತು ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 5ಕ್ಕೆ ಮುಂದೂಡಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಉಜ್ಜಲ್ ಭುಯಾಂ ಅವರಿದ್ದ ಪೀಠವು, ಈ ಪ್ರಕರಣದಲ್ಲಿ ಪ್ರತಿ ಪ್ರಮಾಣಪತ್ರ ಸಲ್ಲಿಸಲು ಸಿಬಿಐಗೆ ಅವಕಾಶ ಕಲ್ಪಿಸಿದೆ. ಅಲ್ಲದೆ, ಕೇಜ್ರಿವಾಲ್ ಅವರಿಗೂ ಮರು ಅರ್ಜಿ ಸಲ್ಲಿಸಲು ಎರಡು ದಿನಗಳ ಕಾಲಾವಕಾಶ ನೀಡಿದೆ.

ಕೇಜ್ರಿವಾಲ್ ಪರ ಹಾಜರಾಗಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, 'ಒಂದು ಅರ್ಜಿಗೆ ಮಾತ್ರ ಸಿಬಿಐ ಪ್ರತಿಯಾಗಿ ಪ್ರಮಾಣಪತ್ರ ಸಲ್ಲಿಸಿದೆ; ಅದೂ ಗುರುವಾರ ರಾತ್ರಿ 8 ಗಂಟೆಗೆ' ಎಂದು ಪೀಠಕ್ಕೆ ತಿಳಿಸಿದರು.

ಕೇಜ್ರಿವಾಲ್

ಇದಕ್ಕೆ ಪ್ರತಿಕ್ರಿಯಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ ರಾಜು, ಒಂದು ವಾರದಲ್ಲಿ ಇನ್ನೊಂದು ಅರ್ಜಿಗೆ ಪ್ರತಿ ಪ್ರಮಾಣಪತ್ರ ಸಲ್ಲಿಸುವುದಾಗಿ ತಿಳಿಸಿದರು. ಪೀಠವು ವಿಚಾರಣೆಯನ್ನು ಸೆಪ್ಟೆಂಬರ್ 5ಕ್ಕೆ ಮುಂದೂಡಿತು.

ಸಿಬಿಐ ಸಮರ್ಥನೆ: ಕೇಜ್ರಿವಾಲ್ ಅವರನ್ನು ಬಂಧಿಸಿರುವ ತನ್ನ ಕ್ರಮವನ್ನು ಸುಪ್ರೀಂ ಕೋರ್ಟ್‌ನಲ್ಲಿ ಸಿಬಿಐ ಸಮರ್ಥಿಸಿಕೊಂಡಿದೆ. ದೆಹಲಿಯ ಹೊಸ ಅಬಕಾರಿ ನೀತಿಯ ರಚನೆಯಲ್ಲಿನ ಪ್ರಮುಖ ನಿರ್ಧಾರಗಳನ್ನು ಕೇಜ್ರಿವಾಲ್ ಸೂಚನೆ ಮೇರೆಗೆ ಆಗಿನ ಅಬಕಾರಿ ಸಚಿವ ಮನೀಶ್ ಸಿಸೋಡಿಯಾ ತೆಗೆದುಕೊಂಡಿದ್ದಾರೆ ಎಂದು ಅದು ಉಲ್ಲೇಖಿಸಿದೆ.

ಕೇಜ್ರಿವಾಲ್ ಅವರಿಗೆ ಮಧ್ಯಂತರ ಅಥವಾ ಸಾಮಾನ್ಯ ಜಾಮೀನು ನೀಡುವುದಕ್ಕೆ ಸಿಬಿಐ ವಿರೋಧ ದಾಖಲಿಸಿದೆ. ಮುಖ್ಯಮಂತ್ರಿಯೂ ಆಗಿರುವ ಅವರಿಗೆ ಜಾಮೀನು ದೊರೆತರೆ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಅದು ಹೇಳಿದೆ.

ಕ್ಷೇತ್ರಕ್ಕೆ ₹7 ಕೋಟಿ ಮಂಜೂರು

ನವದೆಹಲಿ (ಪಿಟಿಐ): ನ್ಯಾಯಾಂಗ ಬಂಧನದಲ್ಲಿ ಇರುವ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಮ್ಮ ನವದೆಹಲಿ ವಿಧಾನಸಭಾ ಕ್ಷೇತ್ರದ ಯೋಜನೆಗಳಿಗೆ ₹7 ಕೋಟಿ ಮಂಜೂರು ಮಾಡಿದ್ದಾರೆ.

'ಜೈಲಿನಲ್ಲಿ ಇದ್ದರೂ ದೆಹಲಿ ನಾಗರಿಕರ ಬಗೆಗೆ ಅವರಿಗೆ ಕಾಳಜಿ ಇದೆ ಎನ್ನುವುದನ್ನು ಅವರ ಈ ನಡೆ ಸ್ಪಷ್ಟಪಡಿಸುತ್ತದೆ' ಎಂದು ಮುಖ್ಯಮಂತ್ರಿ ಕಚೇರಿಯ ಪ್ರಕಟಣೆಯು ತಿಳಿಸಿದೆ.

ಷೇರುಪೇಟೆ ವಹಿವಾಟು 33

ಹಿಂದಿನ ಅಂತ್ಯ 81,053 | ಇಂದಿನ ಅಂತ್ಯ 81,086

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,811
ಇಂದಿನ ಅಂತ್ಯ	24,823
▲	12
ದಿನದ ಗರಿಷ್ಠ	24,858

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9500-11767
ಕೆ.ಆರ್.ಪೇಟೆ	₹9751-9751
ಮಧುಗಿರಿ	₹8500-9500
ತಿಪಟೂರು	₹11700-12200
ತುರುವೇಕೆರೆ	₹12000-12000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು: 100ಕ್ಕೆ ₹480; 12 ಕ್ಕೆ ₹66
ಮೈಸೂರು: 100ಕ್ಕೆ ₹482

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹310-511
ದ್ವಿತಳಿ (ಬಿ.ವಿ) ₹285-639

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹231
ಆರ್‌ಎಸ್‌ಎಸ್-5 ₹225
ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹209

ಮುಂಬೈ ಧಾರಣೆ (ಶೇಂಗಾ)
23-08-2024

ಜಾವಾ 70/80(ಹೊಸ)	11600-11700
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10200-10300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1545 (1545)
ಒಂದು ವಾರದ ಡೆಲಿವರಿ	1540 (1540)
ಪಾಮ್ ವಾರದ ಡೆಲಿವರಿ	938 (932)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (915)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಚಿನ್ನ 10ಗ್ರಾಂ ₹**71,050** (71,000)
ಬೆಳ್ಳಿ ಕೆ.ಜಿ ₹**84,500** (84,600)
ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹16750
ಎಸಿ	₹10125
ಆರ್‌ಪಿ	₹20150
ಆರ್‌ಸಿ	₹10270

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀ ಕೆ.ಬಿ.ಮುದ್ದುಕೃಷ್ಣರೆಡ್ಡಿರವರು
ಜನನ: 06.04.1950, ಮರಣ: 15.08.2024
ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು ದಿನಾಂಕ: 25.08.2024 ಭಾನುವಾರ ಬೆಳಿಗ್ಗೆ 9–00 ಗಂಟೆಗೆ ಕೊತ್ತೂರು ಗ್ರಾಮದ ಮೃತರ ಸ್ವಗೃಹದಲ್ಲಿ ನಡೆಸಲು ಗುರು–ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಪತ್ನಿ ಶಕುಂತಲಮ್ಮ, ಮಕ್ಕಳು, ಅಣ್ಣತಮ್ಮಂದಿರು ಹಾಗೂ ಕುಟುಂಬ ವರ್ಗದವರು
ಮೊ: 9945037112, 9243437285

ಚೀನಾದೊಂದಿಗೆ ಭಾರತದ ವ್ಯಾಪಾರ ಕೊರತೆ ₹3.49 ಲಕ್ಷ ಕೋಟಿ: ಜಿಟಿಆರ್‌ಐ

ಅಮೆರಿಕ ಅಗ್ರ ವ್ಯಾಪಾರ ಪಾಲುದಾರ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಜನವರಿ–ಜೂನ್ ಅವಧಿಯಲ್ಲಿ ಅಮೆರಿಕವು ಭಾರತದ ಅಗ್ರ ವ್ಯಾಪಾರ ಪಾಲುದಾರ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಶುಕ್ರವಾರ ಹೇಳಿದೆ.

ಇದೇ ಅವಧಿಯಲ್ಲಿ ಚೀನಾದೊಂದಿಗೆ ದೇಶದ ವ್ಯಾಪಾರ ಕೊರತೆ ದಾಖಲೆಯ ₹3.49 ಲಕ್ಷ ಕೋಟಿಯಷ್ಟಾಗಿದೆ.

ದೇಶದ ಸರಕುಗಳ ರಫ್ತು ಶೇ 5ರಷ್ಟು ಏರಿಕೆಯಾಗಿದ್ದು, ₹19.34 ಲಕ್ಷ ಕೋಟಿಗೆ ಮುಟ್ಟಿದೆ ಎಂದು ಹೇಳಿದೆ.

ವ್ಯಾಪಾರ ಕೊರತೆಯ ರಾಷ್ಟ್ರಗಳ ಪಟ್ಟಿಯಲ್ಲಿ ಚೀನಾ ಮುಂಚೂಣಿಯಲ್ಲಿದೆ. ಚೀನಾಕ್ಕೆ ದೇಶದ ರಫ್ತು ಪ್ರಮಾಣ ₹71,318 ಕೋಟಿಯಷ್ಟಿದ್ದರೆ, ಆಮದು ಪ್ರಮಾಣ ₹4.20 ಲಕ್ಷ ಕೋಟಿ ಇದೆ.

ಈ ವರ್ಷದ ಮೊದಲಾರ್ಧದ ದತ್ತಾಂಶವನ್ನು ಜಿಟಿಆರ್‌ಐ ವಿಶ್ಲೇಷಣೆ ಮಾಡಿದೆ. ಭಾರತವು 239 ದೇಶಗಳಿಗೆ ಸರಕುಗಳನ್ನು ರಫ್ತು ಮಾಡುತ್ತಿದ್ದು, ಈ ಪೈಕಿ 126 ದೇಶಗಳಿಗೆ ರಫ್ತು ಪ್ರಮಾಣ ಸಕಾರಾತ್ಮಕವಾಗಿ ಬೆಳವಣಿಗೆ ದಾಖಲಿಸಿದೆ. ಈ ರಾಷ್ಟ್ರಗಳು ಭಾರತದ ಒಟ್ಟು ರಫ್ತಿನಲ್ಲಿ ಶೇ 75ರಷ್ಟು ಪಾಲು ಹೊಂದಿವೆ.

ಮುಖ್ಯಾಂಶಗಳು
- ಅಮೆರಿಕದೊಂದಿಗೆ ಭಾರತದ ಒಟ್ಟು ವ್ಯಾಪಾರ ಮೌಲ್ಯವು ₹5.24 ಲಕ್ಷ ಕೋಟಿ
- ಚೀನಾದೊಂದಿಗೆ ಭಾರತದ ಒಟ್ಟು ವ್ಯಾಪಾರ ಮೌಲ್ಯವು ₹4.91 ಲಕ್ಷ ಕೋಟಿ
- ಜನವರಿ–ಜೂನ್ ದತ್ತಾಂಶವನ್ನು ವಿಶ್ಲೇಷಣೆ ಮಾಡಿದ ಜಿಟಿಆರ್‌ಐ

ಅಮೆರಿಕ, ಯುಎಇ, ನೆದರ್ಲೆಂಡ್ಸ್, ಸಿಂಗಪುರ ಮತ್ತು ಚೀನಾ ಪ್ರಮುಖ ರಫ್ತು ರಾಷ್ಟ್ರಗಳಾಗಿವೆ. ಆದರೆ, ಇಟಲಿ, ಬೆಲ್ಜಿಯಂ, ನೇಪಾಳ, ಹಾಂಗ್‌ಕಾಂಗ್ ಸೇರಿದಂತೆ 98 ದೇಶಗಳಿಗೆ ರಫ್ತು ಪ್ರಮಾಣ ಇಳಿಕೆಯಾಗಿದೆ. ಈ ದೇಶಗಳಿಗೆ ಮಾಡುವ ರಫ್ತು ಪ್ರಮಾಣ ಶೇ 24ರಷ್ಟಿದೆ.

2023ರ ಜನವರಿ–ಜೂನ್ ಅವಧಿಯಲ್ಲಿ ಅಮೆರಿಕಕ್ಕೆ ರಫ್ತು ಮೌಲ್ಯ ₹3.16 ಲಕ್ಷ ಕೋಟಿಯಷ್ಟಿತ್ತು. ಇದು ಪ್ರಸಕ್ತ ವರ್ಷದ ಇದೇ ಅವಧಿಯಲ್ಲಿ ₹3.49 ಲಕ್ಷ ಕೋಟಿಯಾಗಿದ್ದು, ಶೇ 10ರಷ್ಟು ಏರಿಕೆಯಾಗಿದೆ. ಅರಬ್ ಸಂಯುಕ್ತ ಸಂಸ್ಥಾನಕ್ಕೆ (ಯುಎಇ) ರಫ್ತು ₹1.65 ಲಕ್ಷ ಕೋಟಿ ಆಗಿದ್ದು, ಶೇ 24ರಷ್ಟು ಬೆಳವಣಿಗೆ ದಾಖಲಿಸಿದೆ.

ಚೀನಾವು ಅತಿದೊಡ್ಡ ಆಮದು ರಾಷ್ಟ್ರವಾಗಿದ್ದು, ₹4.20 ಲಕ್ಷ ಕೋಟಿಯಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹3.87 ಲಕ್ಷ ಕೋಟಿಯಷ್ಟಿತ್ತು.

'2023–24ರ ಹಣಕಾಸು ವರ್ಷದಲ್ಲಿ ಅಮೆರಿಕಕ್ಕಿಂತ ಚೀನಾ, ಭಾರತದ ಅಗ್ರ ವ್ಯಾಪಾರ ಪಾಲುದಾರ ರಾಷ್ಟ್ರವಾಗಿತ್ತು. ಆದರೆ, 2024ರ ಜನವರಿ–ಜೂನ್ ಅವಧಿಯಲ್ಲಿ ಅಮೆರಿಕವು ಭಾರತದ ದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದ್ದು, ಒಟ್ಟು ವ್ಯಾಪಾರ ಮೌಲ್ಯವು ₹5.24 ಲಕ್ಷ ಕೋಟಿಯಾಗಿದ್ದು, ಶೇ 5ರಷ್ಟು ಏರಿಕೆ ಆಗಿದೆ' ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ಚೀನಾವು ಎರಡನೇ ಅತಿದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿದ್ದು, ಒಟ್ಟು ವ್ಯಾಪಾರ ಮೌಲ್ಯವು ₹4.91 ಲಕ್ಷ ಕೋಟಿ ಆಗಿದ್ದು, ಹಿಂದಿನ ಇದೇ ಅವಧಿಯಲ್ಲಿ ₹4.56 ಲಕ್ಷ ಕೋಟಿಯಾಗಿತ್ತು.

ಕಬ್ಬಿಣದ ಅದಿರು, ಔಷಧಗಳು, ಬಾಸ್ಮತಿ ಅಕ್ಕಿ, ರಾಸಾಯನಿಕಗಳು ಮತ್ತು ಸ್ಮಾರ್ಟ್‌ಫೋನ್‌ಗಳು ರಫ್ತಿನಿದಾಗಿ ಭಾರತದ ರಫ್ತು ಮೌಲ್ಯ ಹೆಚ್ಚಳವಾಗಿದೆ.

ಸೇವಾ ವಲಯದ ರಫ್ತು ಶೇ 6.9ರಷ್ಟು ಪ್ರಗತಿಯಾಗಿದ್ದು, ₹14.95 ಲಕ್ಷ ಕೋಟಿಯಾಗಿದೆ. ಆಮದು ₹7.97 ಲಕ್ಷ ಕೋಟಿಯಾಗಿದ್ದು, ಶೇ 5ರಷ್ಟು ಏರಿಕೆಯಾಗಿದೆ. ಸರಕುಗಳ ರಫ್ತು ಮೌಲ್ಯ ₹28.97 ಲಕ್ಷ ಕೋಟಿಗೆ ಮುಟ್ಟಿದೆ.

ಸರಕು ಮತ್ತು ಸೇವೆಗಳೆರಡನ್ನೂ ಒಳಗೊಂಡಂತೆ ಭಾರತದ ವಿದೇಶಿ ವ್ಯಾಪಾರ ಮೌಲ್ಯವು (ರಫ್ತು ಮತ್ತು ಆಮದು) ₹71.23 ಲಕ್ಷ ಕೋಟಿಯಾಗಿದೆ. ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 5.8ರಷ್ಟು ಏರಿಕೆ ಆಗಿದೆ ಎಂದು ಹೇಳಿದೆ.

ರಫ್ತು ಪ್ರಮಾಣದಲ್ಲಿ ಕೈಗಾರಿಕಾ ವಲಯದ ಪಾಲು ಶೇ 61ರಷ್ಟಿದ್ದು, ₹11.81 ಲಕ್ಷ ಕೋಟಿಯಾಗಿದೆ. ಕೃಷಿ, ಮಾಂಸ ಮತ್ತು ಸಂಸ್ಕರಿಸಿದ ಆಹಾರ ಸಾಗಣೆ ₹2.18 ಲಕ್ಷ ಕೋಟಿಯಾಗಿದ್ದು, ಶೇ 2ರಷ್ಟು ಇಳಿಕೆಯಾಗಿದೆ.

ಬಾಸ್ಮತಿ ಅಕ್ಕಿ ರಫ್ತು ಶೇ 24ರಷ್ಟು ಏರಿಕೆಯಾಗಿದ್ದು, ಅದರ ಮೌಲ್ಯ ₹28,694 ಕೋಟಿಯಾಗಿದೆ. ₹20,304 ಕೋಟಿ ಮೌಲ್ಯದ ಮಸಾಲೆ ಪದಾರ್ಥಗಳು ರಫ್ತಾಗಿದ್ದು, ಶೇ 13ರಷ್ಟು ಪ್ರಗತಿ ದಾಖಲಿಸಿದೆ. ಸಕ್ಕರೆ ರಫ್ತು ಪ್ರಮಾಣ ಶೇ 40ರಷ್ಟು ಕುಸಿದಿದ್ದು, ₹12,417 ಕೋಟಿಯಾಗಿದೆ. ಟೆಲಿಕಾಂ, ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್, ಸ್ಮಾರ್ಟ್‌ಫೋನ್‌ಗಳ ರಫ್ತು ₹83,903 ಕೋಟಿಯಾಗಿದೆ.

ಪೆಟ್ರೋಲಿಯಂ ಉತ್ಪನ್ನಗಳ ರಫ್ತು ಸ್ಥಿರವಾಗಿದ್ದು, ₹3.59 ಲಕ್ಷ ಕೋಟಿಯಾಗಿದೆ. ಗಾರ್ಮೆಂಟ್ಸ್ ರಫ್ತು ಪ್ರಮಾಣ ₹69,217 ಕೋಟಿಯಾಗಿದ್ದು, ಶೇ 2ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಕೈಗಾರಿಕಾ ವಲಯದ ಆಮದು ಪ್ರಮಾಣ ಶೇ 48ರಷ್ಟು ಏರಿಕೆಯಾಗಿದ್ದು, ₹13.97 ಲಕ್ಷ ಕೋಟಿಗೆ ತಲುಪಿದೆ. ಕಚ್ಚಾ ತಾಳೆ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆಯ ಆಮದು ಕ್ರಮವಾಗಿ ₹23,996 ಕೋಟಿ ಮತ್ತು ₹16,445 ಕೋಟಿಯಷ್ಟಾಗಿದೆ.

ಅದಿರು, ಖನಿಜಗಳು ಮತ್ತು ಪೆಟ್ರೋಲಿಯಂ ಉತ್ಪನ್ನಗಳ ರಫ್ತು ₹10.49 ಲಕ್ಷ ಕೋಟಿಯಾಗಿದ್ದು, ಶೇ 36ರಷ್ಟು ಪ್ರಗತಿ ಕಂಡಿದೆ. ವಜ್ರಗಳು, ಚಿನ್ನ ಮತ್ತು ಸಂಬಂಧಿಸಿದ ಉತ್ಪನ್ನಗಳ ರಫ್ತು ಶೇ 10ರಷ್ಟು ಏರಿಕೆ ಆಗಿದ್ದು, ₹3.10 ಲಕ್ಷ ಕೋಟಿಯಾಗಿದೆ.

ಸಾಲದ ಬೆಳವಣಿಗೆ ಸವಾಲಲ್ಲ: ಎಸ್‌ಬಿಐ

ಮುಂಬೈ (ಪಿಟಿಐ): ಠೇವಣಿ ಮತ್ತು ಸಾಲದ ಬೆಳವಣಿಗೆಯ ನಡುವಿನ ವ್ಯತ್ಯಾಸಗಳಿಂದ ದೇಶದ ಅತಿ ದೊಡ್ಡ ಸಾಲದಾತರಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಎಸ್‌ಬಿಐ ಅಧ್ಯಕ್ಷ ದಿನೇಶ್ ಖಾರ ಶುಕ್ರವಾರ ತಿಳಿಸಿದ್ದಾರೆ.

ಸಾಲದ ಬೆಳವಣಿಗೆಯನ್ನು ಬೆಂಬಲಿಸಲು ಅಗತ್ಯವಿರುವ ಸಂಪನ್ಮೂಲಗಳಿಗಾಗಿ ಸರ್ಕಾರಿ ಭದ್ರತೆಗಳಲ್ಲಿನ ಹೆಚ್ಚುವರಿ ಹೂಡಿಕೆಯಲ್ಲಿನ ಸ್ವಲ್ಪ ಭಾಗವನ್ನು ಬ್ಯಾಂಕ್ ಮರಳಿ ಪಡೆಯುತ್ತಿದೆ ಎಂದು ಸುದ್ದಿಗಾರರಿಗೆ ಹೇಳಿದ್ದಾರೆ.

'ಸುಮಾರು ಎರಡು ವರ್ಷಗಳಿಂದ ಠೇವಣಿ ಬೆಳವಣಿಗೆಯು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ಪಾವತಿಗಳನ್ನು ಮುಂದೂಡುತ್ತಿದೆ. ಎಸ್‌ಬಿಐನ ವ್ಯವಹಾರದಲ್ಲೂ ಇದೇ ರೀತಿಯ ಬೆಳವಣಿಗೆ ಕಂಡು ಬಂದಿದೆ' ಎಂದಿದ್ದಾರೆ.

ಅನಿಲ್ ಅಂಬಾನಿಗೆ 5 ವರ್ಷ ನಿರ್ಬಂಧ

ಒಂದನೇ ಪುಟದಿಂದ...

ಸೆಬಿ ಕ್ರಮದ ಬಗ್ಗೆ ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಗ್ರೂಪ್ ಕಂಪನಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಆರ್‌ಎಚ್‌ಎಫ್‌ಎಲ್‌ನ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ ಅಮಿತ್ ಬಾಪ್ನಾ ಅವರಿಗೆ ₹27 ಕೋಟಿ, ರವೀಂದ್ರ ಸುಧಾಲ್ಕರ್ ಅವರಿಗೆ ₹26 ಕೋಟಿ ಮತ್ತು ಪಿಂಕೇಶ್ ಆರ್. ಶಾ ಅವರಿಗೆ ₹21 ಕೋಟಿ ದಂಡ ವಿಧಿಸಲಾಗಿದೆ.

ಮುಖ್ಯಾಂಶಗಳು
- ಆರ್‌ಎಚ್‌ಎಫ್‌ಎಲ್‌ನಿಂದ ಹಣ ಅಕ್ರಮ ವರ್ಗಾವಣೆ ಆರೋಪ
- ಅನಿಲ್ ಅಂಬಾನಿಗೆ ₹25 ಕೋಟಿ ದಂಡ
- ಇತರೆ 24 ಕಂಪನಿಗಳ ವಿರುದ್ಧವೂ ಕ್ರಮ

ರಿಲಯನ್ಸ್ ಯುನಿಕಾರ್ನ್ ಎಂಟರ್‌ಪ್ರೈಸಸ್, ರಿಲಯನ್ಸ್ ಎಕ್ಸ್‌ಚೇಂಜ್ ನೆಕ್ಸ್ಟ್ ಲಿಮಿಟೆಡ್, ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್ ಲಿಮಿಟೆಡ್, ರಿಲಯನ್ಸ್ ಕ್ಲೀನ್‌ಜೆನ್ ಲಿಮಿಟೆಡ್, ರಿಲಯನ್ಸ್ ಬ್ಯುಸಿನೆಸ್ ಬ್ರಾಡ್‌ಕಾಸ್ಟ್ ನ್ಯೂಸ್ ಹೋಲ್ಡಿಂಗ್ಸ್ ಲಿಮಿಟೆಡ್ ಮತ್ತು ರಿಲಯನ್ಸ್ ಬಿಗ್ ಎಂಟರ್‌ಟೇನ್‌ಮೆಂಟ್ ಪ್ರೈವೆಟ್ ಲಿಮಿಟೆಡ್ ಕಂಪನಿಗಳಿಗೆ ತಲಾ ₹25 ಕೋಟಿ ದಂಡ ವಿಧಿಸಿದೆ.

ಷೇರು ಮೌಲ್ಯ ಕುಸಿತ: ಸೆಬಿ ನಿರ್ಬಂಧದ ಪರಿಣಾಮ ಅನಿಲ್ ಅಂಬಾನಿ ಒಡೆತನದ ಕಂಪನಿಗಳ ಷೇರು ಮೌಲ್ಯ ಶುಕ್ರವಾರ ಕುಸಿತ ಕಂಡಿದೆ. ರಿಲಯನ್ಸ್ ಇನ್‌ಫ್ರಾಸ್ಟ್ರಕ್ಚರ್ ಷೇರು ಮೌಲ್ಯ ಶೇ 10.07ರಷ್ಟು ಇಳಿದಿದೆ. ಕಂಪನಿಯ ಷೇರಿನ ಬೆಲೆ ಬಿಎಸ್‌ಇನಲ್ಲಿ ₹211.70 ಹಾಗೂ ಎನ್‌ಎಸ್‌ಇಯಲ್ಲಿ ₹209.99 ಆಗಿದೆ. ರಿಲಯನ್ಸ್ ಹೋಮ್ ಫೈನಾನ್ಸ್ ಮತ್ತು ರಿಲಯನ್ಸ್ ಪವರ್ ಕಂಪನಿಗಳ ಷೇರು ಮೌಲ್ಯ ಶೇ 5 ರಷ್ಟು ಇಳಿಕೆ ಕಂಡಿವೆ.

ಏನಿದು ಪ್ರಕರಣ?

ಆರ್‌ಎಚ್‌ಎಫ್‌ಎಲ್‌ನ ಹಣವನ್ನು ಬೇರೆಡೆ ವರ್ಗಾಯಿಸಲಾಗಿದೆ ಎಂಬ ಬಗ್ಗೆ ಹಲವು ದೂರುಗಳನ್ನು ಸ್ವೀಕರಿಸಿದ್ದ ಸೆಬಿ, ಅಕ್ರಮ ನಡೆದಿರುವುದನ್ನು ಖಚಿತಪಡಿಸಿಕೊಳ್ಳಲು 2018–2019ರ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿದೆ.

ಅನಿಲ್ ಅಂಬಾನಿ, ಆರ್‌ಎಚ್‌ಎಫ್‌ಎಲ್‌ನ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ ಅಮಿತ್ ಬಾಪ್ನಾ, ರವೀಂದ್ರ ಸುಧಾಲ್ಕರ್ ಮತ್ತು ಪಿಂಕೇಶ್ ಆರ್. ಶಾ ಅವರು ಹಣ ವಂಚಿಸಲು ಯೋಜನೆ ರೂಪಿಸಿದ್ದರು ಎಂಬುದು ತನಿಖೆಯಲ್ಲಿ ದೃಢಪಟ್ಟಿದೆ.

ಅನಿಲ್ ಅಂಬಾನಿ ಹಾಗೂ ಇತರರು ಆರ್‌ಎಚ್‌ಎಫ್‌ಎಲ್‌ನ ಹಣವನ್ನು 'ಸಾಲ' ಎಂದು ಹೇಳಿ ತಮಗೆ ಸಂಬಂಧಿಸಿದ ಕಂಪನಿಗಳಿಗೆ ವರ್ಗಾಯಿಸಿಕೊಂಡಿದ್ದಾರೆ ಎಂದು ಸೆಬಿ ಶುಕ್ರವಾರ ಬಿಡುಗಡೆಗೊಳಿಸಿದ ತನ್ನ 222 ಪುಟಗಳ ಆದೇಶದಲ್ಲಿ ಹೇಳಿದೆ.

ಅಂಬಾನಿ ಅವರ ಪ್ರಭಾವದ ಅಡಿಯಲ್ಲಿ ಕೆಲವು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ ಈ ಅಕ್ರಮದಲ್ಲಿ ಭಾಗಿಯಾಗಿರುವುದು ಪತ್ತೆಯಾಗಿದೆ. ಮಾತ್ರವಲ್ಲ, ಉಳಿದ ಕಂಪನಿಗಳು ಅಕ್ರಮವಾಗಿ ವರ್ಗಾಯಿಸಿದ ಸಾಲವನ್ನು ಸ್ವೀಕರಿಸುವ ಪಾತ್ರವನ್ನು ನಿರ್ವಹಿಸಿವೆ ಅಥವಾ ಆರ್‌ಎಚ್‌ಎಫ್‌ಎಲ್‌ನಿಂದ ಹಣವನ್ನು ಬೇರೆಡೆಗೆ ವರ್ಗಾಯಿಸಲು ಅನುವು ಮಾಡಿಕೊಟ್ಟಿವೆ ಎಂದು ಸೆಬಿ ಉಲ್ಲೇಖಿಸಿದೆ.

ಆರ್‌ಎಚ್‌ಎಫ್‌ಎಲ್‌ನ ನಿರ್ದೇಶಕ ಮಂಡಳಿಯು, ಈ ರೀತಿ ಸಾಲ ನೀಡುವುದನ್ನು ನಿಲ್ಲಿಸುವಂತೆ ನಿರ್ದೇಶನ ನೀಡಿತ್ತು. ಆದರೂ ಕಂಪನಿಯ ಆಡಳಿತ ಮಂಡಳಿ ಈ ನಿರ್ದೇಶಗಳನ್ನು ನಿರ್ಲಕ್ಷಿಸಿತ್ತು.

ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ–ಅಧಿಕೃತವಾಗಿ ಒಪ್ಪಿಗೆ

ತಾಯಿಯನ್ನು ನೆನೆದ ಕಮಲಾ

ಕಮಲಾ ಹ್ಯಾರಿಸ್

ಶಿಕಾಗೋ (ಪಿಟಿಐ): 'ತಾಯಿ ಶ್ಯಾಮಲಾ ಗೋಪಾಲನ್ ನನ್ನ ಜೀವನದಲ್ಲಿ ಮೌಲ್ಯಗಳನ್ನು ತುಂಬಿದ್ದು, ಅವರನ್ನು ಪ್ರತಿ ದಿನವೂ ನೆನಪಿಸಿಕೊಳ್ಳುತ್ತೇನೆ' ಎಂದು ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಕಮಲಾ ಹ್ಯಾರಿಸ್ ತಿಳಿಸಿದ್ದಾರೆ.

ಡೆಮಾಕ್ರಟಿಕ್ ಪಕ್ಷವು ಅಧ್ಯಕ್ಷೀಯ ಅಭ್ಯರ್ಥಿಯಾಗಿ ತಮ್ಮನ್ನು ನಾಮನಿರ್ದೇಶನ ಮಾಡಿರುವುದನ್ನು ಕಮಲಾ ಅವರು ಶಿಕಾಗೋದಲ್ಲಿ ಅಧಿಕೃತವಾಗಿ ಒಪ್ಪಿಕೊಂಡ ಬೆನ್ನಲ್ಲೇ ತಾಯಿಯ ನೆನಪು ಮಾಡಿಕೊಂಡಿದ್ದಾರೆ.

ಜುಲೈ ತಿಂಗಳಲ್ಲಿ ಜೋ ಬೈಡನ್ ಅವರು ಅಧ್ಯಕ್ಷ ಸ್ಥಾನಕ್ಕೆ ಪುನಾರಾಯ್ಕೆಯಿಂದ ಹಿಂದೆ ಸರಿದ ಬಳಿಕ ಡೆಮಾಕ್ರಟಿಕ್ ಪಕ್ಷದಿಂದ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದು 'ಅನಿರೀಕ್ಷಿತ' ಎಂದು ಬಣ್ಣಿಸಿದ ಹ್ಯಾರಿಸ್, 'ಇಂತಹ ಅನಿಶ್ಚಿತ ಪ್ರಯಾಣಗಳು ಹೊಸತೇನಲ್ಲ' ಎಂದರು.

'ತಾಯಿ ಶ್ಯಾಮಲಾ ಅವರು ತಮ್ಮದೇ ಆದ ವ್ಯಕ್ತಿತ್ವ ಹೊಂದಿದ್ದರು. ಇಂದು ಅವರು ಮೇಲಿನಿಂದ ನೋಡುತ್ತಿದ್ದು, ನಗೆ ಬೀರುತ್ತಿದ್ದಾರೆ. ಅವರು ಐದು ಅಡಿ ಎತ್ತರದ ಬೂದು ಬಣ್ಣದ ಅಸಾಧಾರಣ ಮಹಿಳೆಯಾಗಿದ್ದರು' ಎಂದು ವಿವರಿಸಿದರು.

'19ನೇ ವಯಸ್ಸಿಗೆ ಭಾರತದಿಂದ ಕ್ಯಾಲಿಫೋರ್ನಿಯಾಕ್ಕೆ ಏಕಾಂಗಿಯಾಗಿ ಬಂದಿಳಿದ ಅವರು, ಸ್ತನ ಕ್ಯಾನ್ಸರ್ ಗುಣಪಡಿಸುವ ವಿಜ್ಞಾನಿಯಾಗುವ ದೃಢಸಂಕಲ್ಪ ತೊಟ್ಟಿದ್ದರು. ಅನ್ಯಾಯವಾದಾಗ ಯಾವಾಗಲೂ ದೂರುತ್ತಾ ಕೂರಬೇಡ. ಅದನ್ನು ಸರಿಪಡಿಸಲು ಪ್ರಯತ್ನಿಸು ಎಂದು ತಿಳಿಸಿಕೊಟ್ಟಿದ್ದರು' ಎಂದು ಹೇಳುವ ಮೂಲಕ ಹ್ಯಾರಿಸ್ ಭಾವುಕರಾದರು.

'ರೋಮಾಂಚನ ಮತ್ತು ಖುಷಿಯಾಗಿದೆ'

ಚೆನ್ನೈ: 'ನಾವೆಲ್ಲರೂ ತುಂಬಾ ರೋಮಾಂಚನಗೊಂಡಿದ್ದು, ಸಂತೋಷಪಡುತ್ತಿದ್ದೇವೆ. ಕಮಲಾ ಹ್ಯಾರಿಸ್ ಸಾಧನೆಗೆ ನಮ್ಮ ಕುಟುಂಬವು ಹೆಮ್ಮೆಪಡುತ್ತಿದೆ. ಯಾವತ್ತಿದ್ದರೂ ನಮ್ಮ ಕುಟುಂಬದ ಮಗಳು' ಎಂದು ಅವರ ಚಿಕ್ಕಮ್ಮ ಸರಳ ಗೋಪಾಲನ್ ಸಂತಸ ವ್ಯಕ್ತಪಡಿಸಿದ್ದಾರೆ.

ಡೆಮಾಕ್ರಟಿಕ್ ಅಧ್ಯಕ್ಷೀಯ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರ ತಾಯಿ ಡಾ. ಶ್ಯಾಮಲಾ ಗೋಪಾಲನ್ ತಮಿಳುನಾಡಿನ ಮೂಲದವರು. ಕಮಲಾ ಅವರ ಅಜ್ಜ ಪಿ.ವಿ. ಗೋಪಾಲನ್ ಅವರು ಚೆನ್ನೈನ ಬೆಸಂತ್‌ನಗರದಲ್ಲಿ ವಾಸಿಸುತ್ತಿದ್ದರು. ಬಾಲ್ಯದಲ್ಲಿ ಕಮಲಾ ಚೆನ್ನೈಗೆ ಭೇಟಿ ನೀಡಿದ್ದ ವೇಳೆ ಎಲಿಯಟ್ ಬೀಚ್‌ಗೆ ತೆರಳಿದ್ದನ್ನು ಈ ಹಿಂದೆ ನೆನಪಿಸಿಕೊಂಡಿದ್ದರು.

ಸರಳ ಗೋಪಾಲನ್ ಅವರು ಶ್ಯಾಮಲಾ ಅವರ ತಂಗಿ.

'ನಾನು ಕಮಲಾಳ ಜತೆ ಮಾತನಾಡಿ, ಶುಭಾಶಯ ತಿಳಿಸಿದ್ದೇನೆ. ಆಕೆಯು ನನ್ನ ಬಗ್ಗೆ ಹೆಚ್ಚು ಕಾಳಜಿ ಹೊಂದಿದ್ದು, ಯಾವತ್ತಿಗೂ ಕರೆ ಮಾಡುವುದನ್ನು ಮರೆಯುವುದಿಲ್ಲ' ಎಂದು 'ಪ್ರಜಾವಾಣಿ' ಜತೆ ಸಂತಸ ಹಂಚಿಕೊಂಡರು.

'ಅಕ್ಕನ ಮಕ್ಕಳು ಅತ್ಯಂತ ಹೋರಾಟದಿಂದ ಜೀವನ ರೂಪಿಸಿಕೊಂಡಿದ್ದು, ಯಾವತ್ತಿಗೂ ಮೂಲವನ್ನು ಮರೆತಿಲ್ಲ. ಕಮಲಾ ಕೂಡ ಕೌಟುಂಬಿಕ ಮೌಲ್ಯಗಳಿಗೆ ಒತ್ತು ನೀಡುತ್ತಾಳೆ. ಶ್ಯಾಮಲಾ ಬೆಳೆಸಿದ್ದ ಸ್ಥಿತಿಯೇ ಕಮಲಾ ಇಂದು ಈ ಸ್ಥಿತಿಗೆ ತಲುಪುವಂತಾಗಿದೆ. ಅವಳ ಸಾಧನೆಯು ನಮಗೆಲ್ಲರಿಗೂ ಹೆಮ್ಮೆ ತಂದಿದೆ. ಸಹೋದರಿಯು ಪ್ರಗತಿಪರ ವಿಚಾರದ ಜತೆ ಧೈರ್ಯಶಾಲಿಯಾಗಿದ್ದಳು. ಹೀಗಾಗಿಯೇ 60 ವರ್ಷದ ಹಿಂದೆಯೇ ಏಕಾಂಗಿಯಾಗಿ ಅಮೆರಿಕಕ್ಕೆ ತೆರಳಿ ವಿದ್ಯಾಭ್ಯಾಸ ಪಡೆದಿದ್ದಳು' ಎಂದು ನೆನಪಿಸಿಕೊಂಡರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸುದ್ದಿ 2 ನಿಮಿಷ

ಇನ್ಫೊಸಿಸ್‌ಗೆ ₹33,539 ಕೋಟಿ ಜಿಎಸ್‌ಟಿ: ವಿನಾಯಿತಿ ಸಾಧ್ಯತೆ

ನವದೆಹಲಿ (ರಾಯಿಟರ್ಸ್): ದೇಶದ ಎರಡನೇ ಅತಿದೊಡ್ಡ ಮಾಹಿತಿ ತಂತ್ರಜ್ಞಾನ ಕಂಪನಿ ಇನ್ಫೊಸಿಸ್ ₹33,539 ಕೋಟಿ ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) ವಂಚನೆ ಆರೋಪ ಪ್ರಕರಣವನ್ನು ಕೇಂದ್ರ ಸರ್ಕಾರವು ಕೈಬಿಡುವ ಸಾಧ್ಯತೆ ಇದೆ ಎಂದು ವರದಿಯಾಗಿದೆ.

ತನ್ನ ಸಾಗರೋತ್ತರ ಶಾಖೆಗಳ ಸೇವೆಗೆ ಸಂಬಂಧಿಸಿದಂತೆ ಇನ್ಫೊಸಿಸ್ ಕಂಪನಿಯು ಜಿಎಸ್‌ಟಿ ವಂಚನೆ ಎಸಗಿದ ಆರೋಪ ಹೊತ್ತಿದೆ. ಈ ಸಂಬಂಧ ಕರ್ನಾಟಕದ ಜಿಎಸ್‌ಟಿ ವಿಭಾಗದಿಂದ ಕಂಪನಿಗೆ ನೋಟಿಸ್ ನೀಡಲಾಗಿತ್ತು. ಈ ಪ್ರಕರಣವನ್ನು ಕೇಂದ್ರ ಮಟ್ಟದ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯಕ್ಕೆ (ಡಿಜಿಜಿಐ) ವರ್ಗಾಯಿಸಲಾಗಿತ್ತು.

ಕೇಂದ್ರ ಸರ್ಕಾರವು ತೆರಿಗೆ ರಿಯಾಯಿತಿ ಸೌಲಭ್ಯ ನೀಡುವ ಸಾಧ್ಯತೆ ತೀರಾ ಕಡಿಮೆಯಿದೆ ಎಂದು ಈ ಹಿಂದೆ ಹೇಳಲಾಗಿತ್ತು. ಆದರೆ ಸರ್ಕಾರದ ಈ ಕ್ರಮ ಕುರಿತು ಉದ್ಯಮದಿಂದ ವಿರೋಧ ವ್ಯಕ್ತವಾಗಿತ್ತು.

ಸರ್ಕಾರದ ನಿರ್ಧಾರವನ್ನು 'ಅತಿರೇಕ' ಹಾಗೂ 'ತೆರಿಗೆ ಭಯೋತ್ಪಾದನೆಗೆ ಉದಾಹರಣೆ' ಎಂದು ಇನ್ಫೊಸಿಸ್‌ನ ಆಡಳಿತ ಮಂಡಳಿ ಸದಸ್ಯ ಹಾಗೂ ಮುಖ್ಯ ಹಣಕಾಸು ಅಧಿಕಾರಿ ಮೋಹನದಾಸ್ ಪೈ ಜರೆದಿದ್ದರು.

ಕಂಪನಿಯ ಹಣಕಾಸು ವಿಭಾಗದ ಉಪಾಧ್ಯಕ್ಷ ಸುನಿಲ್ ಕುಮಾರ್ ಧಾರೇಶ್ವರ್ ಅವರು ಕಳೆದ ವಾರ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

ಇನ್ಫೊಸಿಸ್‌ನ ಈ ವಿಷಯದಲ್ಲಿ ಮಧ್ಯ ಪ್ರವೇಶಿಸುವಂತೆ ತಂತ್ರಾಂಶ ಮತ್ತು ಸೇವಾ ವಲಯದ ರಾಷ್ಟ್ರೀಯ ಒಕ್ಕೂಟವು ಒತ್ತಾಯಿಸಿತ್ತು. ಜತೆಗೆ, ಇಂಥ ನೋಟಿಸ್‌ಗಳು ಉದ್ಯಮದಲ್ಲಿ ಅಸ್ಥಿರತೆ ಸೃಷ್ಟಿಸಬಾರದು ಹಾಗೂ ಭಾರತದ ಉದ್ಯಮ ವಲಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುವಂತಿರಬಾರದು ಎಂದಿತ್ತು.

ಈ ಸಂಬಂಧ ಕೇಂದ್ರ ಹಣಕಾಸು ಸಚಿವರ ಅಧ್ಯಕ್ಷತೆಯಲ್ಲಿ ಜಿಎಸ್‌ಟಿ ಸಮಿತಿಯ ಸಭೆ ನಡೆದಿದ್ದು, ಇದರ ತೀರ್ಮಾನವನ್ನು ಅಧಿಕೃತವಾಗಿ ಸೆಪ್ಟೆಂಬರ್ 9ರಂದು ಘೋಷಿಸುವ ಸಾಧ್ಯತೆ ಇದೆ ಎಂದು ಸುದ್ದಿಸಂಸ್ಥೆ ರಾಯಿಟರ್ಸ್ ವರದಿ ಮಾಡಿದೆ.

₹1,200 ಕೋಟಿ ಹೂಡಿಕೆ ಮಾಡಿದ ಫಾಕ್ಸ್‌ಕಾನ್

ನವದೆಹಲಿ (ಪಿಟಿಐ): ಐಫೋನ್ ತಯಾರಿಕಾ ಕಂಪನಿ ಫಾಕ್ಸ್‌ಕಾನ್ ತನ್ನ ಅಂಗಸಂಸ್ಥೆಯಾದ ಫಾಕ್ಸ್‌ಕಾನ್ ಹಾನ್ ಹೈ ಟೆಕ್ನಾಲಜಿ ಇಂಡಿಯಾ ಮೆಗಾ ಡೆವಲಪ್‌ಮೆಂಟ್ ಪ್ರೈವೆಟ್ ಲಿಮಿಟೆಡ್‌ನಲ್ಲಿ ಸುಮಾರು ₹1,200 ಕೋಟಿ (14.4 ಕೋಟಿ ಡಾಲರ್) ಹೂಡಿಕೆ ಮಾಡಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಫಾಕ್ಸ್‌ಕಾನ್ ಆಗಸ್ಟ್ 21ರಂದು ಫಾಕ್ಸ್‌ಕಾನ್ ಹಾನ್ ಹೈ ಟೆಕ್ನಾಲಜಿ ಇಂಡಿಯಾ ಮೆಗಾ ಡೆವಲಪ್‌ಮೆಂಟ್ ಪ್ರೈವೆಟ್ ಲಿಮಿಟೆಡ್‌ನ 120 ಕೋಟಿ ಷೇರುಗಳನ್ನು ಪ್ರತಿ ಷೇರಿಗೆ ₹10ರಂತೆ ಖರೀದಿಸಿದೆ.

ದೊಡ್ಡಬಳ್ಳಾಪುರದ ಬಳಿ ಬೃಹತ್ ಐಫೋನ್ ತಯಾರಿಕಾ ಘಟಕವನ್ನು ಸ್ಥಾಪಿಸಲು ಫಾಕ್ಸ್‌ಕಾನ್ ₹25 ಸಾವಿರ ಕೋಟಿ ಹೂಡಿಕೆ ಮಾಡಲು ಯೋಜಿಸಿದೆ. ಈ ಘಟಕದಿಂದ 40 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಕರ್ನಾಟಕ ಸರ್ಕಾರ ಕಳೆದ ವಾರ ತಿಳಿಸಿತ್ತು.

ಈ ಹೂಡಿಕೆಯು ಸೇರಿ ಕಂಪನಿಯು ಒಟ್ಟು ಕರ್ನಾಟಕದ ಘಟಕಕ್ಕಾಗಿ ₹13,800 ಕೋಟಿ ಹೂಡಿಕೆ ಮಾಡಿದಂತಾಗಿದೆ.

ಏರ್ ಇಂಡಿಯಾಗೆ ₹90 ಲಕ್ಷ ದಂಡ

ನವದೆಹಲಿ (ಪಿಟಿಐ): ಅರ್ಹತೆಯಿಲ್ಲದ ಪೈಲಟ್‌ಗಳಿಂದ ವಿಮಾನ ಚಾಲನೆ ಮಾಡಿಸಿದ ಕಾರಣಕ್ಕೆ ಟಾಟಾ ಗ್ರೂಪ್ ಮಾಲೀಕತ್ವದ ಏರ್ ಇಂಡಿಯಾಗೆ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ₹90 ಲಕ್ಷ ದಂಡ ವಿಧಿಸಿದೆ.

ಅಲ್ಲದೆ, ಇದೇ ಕಾರಣಕ್ಕೆ ವಿಮಾನಯಾನ ಸಂಸ್ಥೆಯ ತರಬೇತಿ ನಿರ್ದೇಶಕರನ್ನು ಆರು ತಿಂಗಳವರೆಗೆ ಅಮಾನತುಗೊಳಿಸಿದೆ.

ಅದರ ಜತೆಗೆ, ಕರ್ತವ್ಯ ಲೋಪಕ್ಕಾಗಿ ಏರ್ ಇಂಡಿಯಾದ ಕಾರ್ಯಾಚರಣೆಯ ನಿರ್ದೇಶಕ ಪಂಕುಲ್ ಮಾಥುರ್ ಅವರಿಗೆ ₹6 ಲಕ್ಷ ಮತ್ತು ತರಬೇತಿ ನಿರ್ದೇಶಕ ಮನೀಶ್ ವಾಸವಾಡ ಅವರಿಗೆ ₹3 ಲಕ್ಷ ದಂಡವನ್ನು ಡಿಜಿಸಿಎ ವಿಧಿಸಿದೆ.

ವಿಮಾನ ಚಲಾಯಿಸಿದ ಪೈಲಟ್‌ಗಳಿಗೆ ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು ಎಂದು ನಿರ್ದೇಶನಾಲಯ ಎಚ್ಚರಿಕೆ ನೀಡಿದೆ ಎಂದು ಪ್ರಕಟಣೆ ತಿಳಿಸಿದೆ.

'ಮುದ್ದುಕೃಷ್ಣ' ಪಂಜಾಬ್‌ನ ಅಮೃತ್‌ಸರದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ನಿಮಿತ್ತ ನಡೆದ ಕಾರ್ಯಕ್ರಮದಲ್ಲಿ ಮಕ್ಕಳು ಶ್ರೀಕೃಷ್ಣನ ವೇಷ ಧರಿಸಿ ಗಮನ ಸೆಳೆದರು–ಎಎಫ್‌ಪಿ ಚಿತ್ರ

ಇಬ್ಬರು ಪ್ರಮುಖ ನಕ್ಸಲರು ಶರಣು

ಸುಕ್ಮಾ (ಪಿಟಿಐ): ಭದ್ರತಾ ಸಿಬ್ಬಂದಿ ಮೇಲೆ ನಡೆದ ದಾಳಿಗಳಲ್ಲಿ ಭಾಗಿಯಾಗಿದ್ದ ಇಬ್ಬರು ನಕ್ಸಲರು ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಶುಕ್ರವಾರ ಪೊಲೀಸರಿಗೆ ಶರಣಾಗಿದ್ದಾರೆ.

ಈ ಇಬ್ಬರೂ ನಕ್ಸಲರ ಪತ್ತೆಗೆ ಶೋಧ ನಡೆಸುತ್ತಿದ್ದ ಪೊಲೀಸರು ಅವರ ಬಗ್ಗೆ ಸುಳಿವು ನೀಡಿದವರಿಗೆ ತಲಾ ₹8 ಲಕ್ಷದಂತೆ ಒಟ್ಟು ₹16 ಲಕ್ಷ ಬಹುಮಾನ ಘೋಷಿಸಿದ್ದರು.

ಟೊಳ್ಳು ವಿಚಾರಗಳಿಂದ ಪ್ರೇರಿತರಾಗಿ ತಾವು ಎಸಗಿದ ಕೃತ್ಯಗಳ ಬಗ್ಗೆ ಬೇಸರಗೊಂಡ ನಕ್ಸಲರು, ಕೇಂದ್ರೀಯ ಮೀಸಲು ಪೊಲೀಸ್ ಪಡೆ ಮತ್ತು ಹಿರಿಯ ಅಧಿಕಾರಿಗಳ ಬಳಿ ಪಶ್ಚಾತ್ತಾಪ ವ್ಯಕ್ತಪಡಿಸಿದ್ದಾರೆ.

ದಕ್ಷಿಣ ಬಸ್ತಾರ್‌ನಲ್ಲಿ ಸಕ್ರಿಯವಾಗಿದ್ದ 'ಪಿಎಲ್‌ಜಿಎ' ನಕ್ಸಲ್ ಗುಂಪಿನ ಸದಸ್ಯರಾಗಿದ್ದ ಮದ್ಕಮ್ ಸನ್ನಾ (35) ಮತ್ತು ಮದ್ಕಮ್ ಮುಯಾ (22) ಶರಣಾದ ನಕ್ಸಲರು.

ಸಂಕ್ಷಿಪ್ತ ಸುದ್ದಿ

ಹಸೀನಾ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು

ಢಾಕಾ (ಪಿಟಿಐ): ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಅವರ ಆಗಿನ ಸಚಿವ ಸಂಪುಟದಲ್ಲಿ ಇದ್ದ ಎಲ್ಲಾ ಸದಸ್ಯರ ರಾಜತಾಂತ್ರಿಕ ಪಾಸ್‌ಪೋರ್ಟ್ ಅನ್ನು ರದ್ದುಗೊಳಿಸಿದೆ.

ಮಾಜಿ ಪ್ರಧಾನಿ, ಪ್ರಧಾನಿಯ ಮಾಜಿ ಸಲಹೆಗಾರರು, ಮಾಜಿ ಕ್ಯಾಬಿನೆಟ್ ಸದಸ್ಯರು ಮತ್ತು ಇತ್ತೀಚೆಗೆ ವಿಸರ್ಜಿಸಲಾದ ರಾಷ್ಟ್ರೀಯ ಸಂಸದ್ (ಸಂಸತ್)ನ ಎಲ್ಲಾ ಸದಸ್ಯರು ಮತ್ತು ಅವರ ಸಂಗಾತಿಗಳು ಸ್ವೀಕರಿಸಿದ ರಾಜತಾಂತ್ರಿಕ ಪಾಸ್‌ಪೋರ್ಟ್‌ಗಳನ್ನು ತಕ್ಷಣವೇ ಹಿಂಪಡೆಯಲಾಗಿದೆ ಎಂದು ಗೃಹ ಸಚಿವಾಲಯದ ಭದ್ರತಾ ಸೇವೆಗಳ ವಿಭಾಗವು ಗುರುವಾರ ಹೇಳಿಕೆಯಲ್ಲಿ ತಿಳಿಸಿದೆ ಎಂದು ಬಿಎಸ್‌ಎಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಭಾರತೀಯ ವೀಸಾ ನೀತಿಯ ಪ್ರಕಾರ, ರಾಜತಾಂತ್ರಿಕ ಅಥವಾ ಅಧಿಕೃತ ಪಾಸ್‌ಪೋರ್ಟ್‌ಗಳನ್ನು ಹೊಂದಿರುವ ಬಾಂಗ್ಲಾದೇಶದ ನಾಗರಿಕರು ವೀಸಾಮುಕ್ತ ಪ್ರವೇಶ ಪಡೆಯಲು ಮತ್ತು 45 ದಿನಗಳವರೆಗೆ ದೇಶದಲ್ಲಿ ಇರಲು ಅರ್ಹರಾಗಿರುತ್ತಾರೆ ಎಂದು 'ಡೈಲಿ ಸ್ಟಾರ್' ಪತ್ರಿಕೆ ಹೇಳಿದೆ.

ಹಸೀನಾ ಅವರು ತಮ್ಮ ಹೆಸರಿನಲ್ಲಿ ನೀಡಲಾದ ರಾಜತಾಂತ್ರಿಕ ಪಾಸ್‌ಪೋರ್ಟ್ ಹೊರತುಪಡಿಸಿ ಯಾವುದೇ ಪಾಸ್‌ಪೋರ್ಟ್ ಹೊಂದಿಲ್ಲ. ಆಕೆಯ ರಾಜತಾಂತ್ರಿಕ ಪಾಸ್‌ಪೋರ್ಟ್ ಮತ್ತು ಅದಕ್ಕೆ ಸಂಬಂಧಿಸಿದ ವೀಸಾ ಸವಲತ್ತುಗಳನ್ನು ರದ್ದುಗೊಳಿಸುವುದರಿಂದ ಆಕೆಯನ್ನು ಹಸ್ತಾಂತರದ ಅಪಾಯಕ್ಕೆ ಸಿಲುಕಿಸಬಹುದು ಎಂದು ಸರ್ಕಾರಿ ಮೂಲಗಳನ್ನು ಉಲ್ಲೇಖಿಸಿ ಪತ್ರಿಕೆ ಬರೆದಿದೆ.

'ಬಾಂಗ್ಲಾದೇಶೀಯರಿಗೆ ಕೋಪವಿಲ್ಲ, ನೋವಿದೆ'

ಢಾಕಾ (ಪಿಟಿಐ): 'ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರು ಭಾರತದಲ್ಲಿ ಇರುವ ಕುರಿತು ಬಾಂಗ್ಲಾದೇಶೀಯರಿಗೆ ಕೋಪವಿಲ್ಲ, ನೋವಿದೆ' ಎಂದು ಮಾಜಿ ಕ್ಯಾಬಿನೆಟ್ ಸಚಿವ ಅಬ್ದುಲ್ ಮೊಯೀನ್ ಖಾನ್ ಹೇಳಿದ್ದರು.

ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಖಾನ್ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದರು. ಭಾರತದಲ್ಲಿ ಹಸೀನಾ ಇರುವ ಕಾರಣ ಬಾಂಗ್ಲಾ–ಭಾರತದ ಸಂಬಂಧದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಅದು ಭಾರತದ ನಿರ್ಧಾರದ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/-. ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 9008835841, 9900859248

ಇಂಜಿನಿಯರಿಂಗ್ ಕಂಪನಿ ಸಿರ್ಸಿ, ಬನವಾಸಿ ರಸ್ತೆ ಅಗತ್ಯವಿರುವ ಡಿಪ್ಲೊಮಾ/ ಐಟಿಐ ಮತ್ತು ಬಿ.ಇ. ಅಭ್ಯರ್ಥಿಗಳುಸಂಬಳ ರೂ.14000- 16000 ಜೊತೆಗೆ ಕ್ಯಾಂಟೀನ್ ಸೌಲಭ್ಯಗಳು ಲಭ್ಯವಿರುತ್ತವೆ. ವಯಸ್ಸು 18 ರಿಂದ 28 ವರ್ಷಗಳು. ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವವಿವರವನ್ನು ಇಮೇಲ್ : Pavan.kumar@yashaswigroup.in ಗೆ ಕಳುಹಿಸಿ . ಮೊಬೈಲ್ ಸಂಖ್ಯೆ : 8660437112/ 9902676144

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ . ಟಯೋಟಾ,TVS, ಬ್ರಿಟಾನಿಯಾ,ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 9663542555

ಮನೆಯಲ್ಲಿವರ್ಕ್ ಫ್ರಮ್ ಹೋಮ್ ಕೆಲಸಮಾಡಿ 4000- 20,000/- ಪಡೆಯಿರಿ.ವಯೋಮಿತಿ ಇರುವುದಿಲ್ಲ.ಮೊದಲುಬಂದವರಿಗೆ ಆದ್ಯತೆ. 8861041526, 9945791526.

ಪ್ರವಾಸ

Travel

ಶಿವನಂದಿ ಟ್ರಾವೆಲ್ಸ್.(ರಿ) ಹನುಮಂತನಗರ, ಬೆಂಗಳೂರು. ಚಾರ್`ಧಾಮ್ ಯಾತ್ರಾ 14ದಿನ 12.9.24.ದೆಹಲಿ, ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್, ಹೃಷಿಕೇಶ್,ಹರಿದ್ವಾರ್. 9036056352, 9481027363.

ವಿಮಾನ ಎಸಿ ಬಸ್ಸಿನಲ್ಲಿ 17.10.2024 ದ್ವಾರಕಾ,ಸೋಮನಾಥ್ ನಿಷ್ಕಳಂಕ ಮಹಾದೇವ ಮಹಾಕಾಳೇಶ್ವರ ಓಂಕಾರೇಶ್ವರ್ 23.09.2024 23.10.2024 ಚಾರ್‌ಧಾಮ್ ಪ್ರವಾಸ 19.09.2024 ಪಿತ್ರಪಕ್ಷ ಪ್ರಯುಕ್ತ ಕಾಶಿ,ಬುದ್ಧಗಯಾ ಅಯೋಧ್ಯಾ 26.09.2024 ನೇಪಾಳ,ಮುಕ್ತಿನಾಥ ಪೋಕ್ರಾ,ಲುಂಬಿನಿ. ದಕ್ಷಿಣ ಮತ್ತು ಮಧ್ಯಭಾರತ ಅಂದ್ರ ಪ್ರವಾಸಗಳಿಗೆ ಸಂಪರ್ಕಿಸಿ ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 8431888138 8262573686 8317446683

16 ದಿನಗಳ ಅಯೋಧ್ಯೆ,ಕಾಶಿ ಅಮೃತಸರ್`ಪ್ರವಾಸ ಮತ್ತು 11ದಿನಗಳ ಅಯೋಧ್ಯೆ,ನೇಪಾಳ ಪ್ರವಾಸ 18.11.24. 14ದಿನಗಳ ಚಾರ್ಧಾಮ್`ಪ್ರವಾಸ 28.9.24 Twite`Holidays. Contact: 8088559962.

9.9.2024, 23.9.2024, 30.9.2024 ರಿಂದ 6ದಿನಗಳ ಕಾಶಿ ಅಯೋಧ್ಯಾ, ಅಲಹಾಬಾದ್, ಗಯಾ ವಿಮಾನ ಪ್ರವಾಸ ರೂ.27,000/- ಒಬ್ಬರಿಗೆ ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ 9902008056

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI
ALL KARNATAKA, ON ALL DAYS
@ 500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ಉಕ್ರೇನ್‌ನಲ್ಲಿ ಪ್ರಧಾನಿ ಮೋದಿ ಹೇಳಿಕೆ ● ಹಸ್ತಲಾಘವ ನೀಡಿ, ಆಲಿಂಗಿಸಿ ಸ್ವಾಗತಿಸಿದ ಝೆಲೆನ್‌ಸ್ಕಿ

‘ಶಾಂತಿ ಸ್ಥಾಪನೆಗೆ ಸ್ನೇಹಿತನಾಗಿ ನೆರವು’

ಕೀವ್ (ಪಿಟಿಐ): ‘ಶಾಂತಿ ಸ್ಥಾಪನೆಯ ಯತ್ನವಾಗಿ ಉಕ್ರೇನ್ ಮತ್ತು ರಷ್ಯಾ ಅಧ್ಯಕ್ಷರು ಪರಸ್ಪರ ಕುಳಿತು ಚರ್ಚಿಸಬೇಕು. ‘ಸ್ನೇಹಿ ರಾಷ್ಟ್ರ’ವಾಗಿ ಭಾರತವು ಈ ನಿಟ್ಟಿನಲ್ಲಿ ಎಲ್ಲ ಅಗತ್ಯ ಸಹಕಾರ ನೀಡಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇಲ್ಲಿ ಶುಕ್ರವಾರ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಜೊತೆಗೆ ಚರ್ಚಿಸಿದ ವೇಳೆ ಮೋದಿ ಈ ಮಾತು ಹೇಳಿದ್ದು, ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗಗಳಿಂದಲೇ ಶಾಂತಿ ಸ್ಥಾಪನೆ ಅಗತ್ಯ ಎಂದು ಪುನರುಚ್ಚರಿಸಿದ್ದಾರೆ.

ಭೇಟಿಯ ಬಳಿಕ ಉಭಯ ಮುಖಂಡರು ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಿದ್ದು, ‘ನಾನು ಶಾಂತಿ ಸಂದೇಶದೊಂದಿಗೆ ಕೀವ್‌ಗೆ ಬಂದಿದ್ದೇನೆ. ಗುರಿ ಸಾಧನೆಗಾಗಿ ಆದಷ್ಟು ಶೀಘ್ರ ಉಭಯ ದೇಶಗಳ ನಾಯಕರು ಮುಖಾಮುಖಿ ಕುಳಿತು ಚರ್ಚಿಸಬೇಕು’ ಎಂದು ಹೇಳಿದ್ದಾರೆ.

‘ಪರಿಹಾರವನ್ನು ಚರ್ಚೆ ಮತ್ತು ರಾಜತಾಂತ್ರಿಕ ಮಾರ್ಗಗಳಿಂದ ಮಾತ್ರ ಕಂಡುಕೊಳ್ಳಹುದು. ನಾವು ಸಮಯ ವ್ಯರ್ಥ ಮಾಡದೇ ಅದೇ ಮಾರ್ಗದಲ್ಲಿ ಸಾಗಬೇಕು. ಪರಸ್ಪರ ಚರ್ಚಿಸಿ ಬಿಕ್ಕಟ್ಟಿಗೆ ಪರಿಹಾರ ಹುಡುಕಿಕೊಳ್ಳಬೇಕು’ ಎಂದು ಪ್ರತಿಪಾದಿಸಿದರು.

‘ಶಾಂತಿ ಸ್ಥಾಪನೆಗೆ ಅಗತ್ಯವಿರುವ ಎಲ್ಲ ಸಹಕಾರವನ್ನು ಭಾರತ ನೀಡಲಿದೆ ಎಂದು ನಾನು ಭರವಸೆ ನೀಡುತ್ತೇನೆ. ವ್ಯಕ್ತಿಗತವಾಗಿ ಈ ಹೊಣೆ ನಿಭಾಯಿಸಲು ನಾನು ಸಿದ್ಧ’ ಎಂದರು.

‘ಮೋದಿ ಅವರ ಭೇಟಿಯು ಐತಿಹಾಸಿಕವಾದುದು’ ಉಭಯ ಮುಖಂಡರು ಬಣ್ಣಿಸಿದ್ದಾರೆ.

ಕೀವ್‌ಗೆ ಭೇಟಿ ನೀಡಿರುವ ಪ್ರಧಾನಿ ಮೋದಿ ಅವನ್ನು ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸ್ವಾಗತಿಸಿದರು —ಪಿಟಿಐ ಚಿತ್ರ

> ಶಾಂತಿ ಸ್ಥಾಪನೆಗೆ ಭಾರತ ಸಹಕರಿಸಲಿದೆ ಎಂದು ಪ್ರಧಾನಿ ಪುನರುಚ್ಚರಿಸಿದ್ದಾರೆ. ಪುಟಿನ್ ಜೊತೆಗಿನ ಚರ್ಚೆಯ ವಿವರಗಳನ್ನು ಭೇಟಿ ವೇಳೆ ಹಂಚಿಕೊಂಡಿದ್ದಾರೆ
>
> **ಎಸ್.ಜೈಶಂಕರ್**
> ವಿದೇಶಾಂಗ ವ್ಯವಹಾರಗಳ ಸಚಿವ

> ಭಾರತದ ಪ್ರಧಾನಿ ನರೇಂದ್ರ ಮೋದಿ ಅವರದ್ದು ಸ್ನೇಹಪರವಾದ ಭೇಟಿ. ಎಲ್ಲ ಉಕ್ರೇನಿಯನ್ನರ ದೃಷ್ಟಿಯಿಂದ ಇದು ಮಹತ್ವವಾದುದು
>
> **ವೊಲೊಡಿಮಿರ್ ಝೆಲೆನ್‌ಸ್ಕಿ**
> ಉಕ್ರೇನ್ ಅಧ್ಯಕ್ಷ

ಮಹತ್ವ ಪಡೆದ ಮೋದಿ ಭೇಟಿ: ರಷ್ಯಾಗೆ ಭೇಟಿ ನೀಡಿದ್ದ ಆರು ವಾರಗಳ ತರುವಾಯ ಪ್ರಧಾನಿ ಮೋದಿ ಉಕ್ರೇನ್‌ಗೆ ಭೇಟಿ ನೀಡಿದ್ದು, ಇದೇ ಕಾರಣದಿಂದ ಈ ಭೇಟಿಯು ಮಹತ್ವ ಪಡೆದುಕೊಂಡಿತ್ತು.

ಉಕ್ರೇನ್ 1991ರಲ್ಲಿ ಸ್ವತಂತ್ರ ರಾಷ್ಟ್ರವಾದ ಬಳಿಕ ಭಾರತದ ಪ್ರಧಾನಿಯ ಪ್ರಥಮ ಭೇಟಿ ಇದಾಗಿದೆ.

ಪೋಲೆಂಡ್‌ನಿಂದ ರೈಲಿನಲ್ಲಿ ಸತತ 10 ಗಂಟೆ ಪ್ರಯಾಣಿಸಿ ಬಂದಿಳಿದ ಮೋದಿ ಅವರನ್ನು ಸ್ಥಳೀಯ ಹೋಟೆಲ್‌ನಲ್ಲಿ ಭಾರತೀಯ ಸಮುದಾಯದವರು ಬರಮಾಡಿಕೊಂಡರು.

ನಂತರ ಉಕ್ರೇನ್‌ನಲ್ಲಿನ ರಾಷ್ಟ್ರೀಯ ಸಂಗ್ರಹಾಲಯಕ್ಕೆ ಪ್ರಧಾನಿ ಮೋದಿ ತೆರಳಿದ್ದರು. ಅಲ್ಲಿ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಹಸ್ತಲಾಘವ ನೀಡಿ, ಆಲಿಂಗಿಸಿ, ಬರಮಾಡಿಕೊಂಡರು.

ಗಾಂಧೀಜಿ ಶಾಂತಿ ಸಂದೇಶದ ಮಹತ್ವ ಉಲ್ಲೇಖಿಸಿದ ಮೋದಿ

ಉಕ್ರೇನ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ, ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಜೊತೆಗಿನ ಮಾತುಕತೆಗೂ ಮುನ್ನ ಸೌಹಾರ್ದ ಸಮಾಜ ನಿರ್ಮಿಸಲು ಗಾಂಧೀಜಿ ಅವರ ಶಾಂತಿ ಸಂದೇಶದ ಪ್ರಸ್ತುತತೆಯನ್ನು ಉಲ್ಲೇಖಿಸಿದ್ದಾರೆ.

ಉಕ್ರೇನ್ ಪ್ರವಾಸದ ಆರಂಭದಲ್ಲಿಯೇ ಕೀವ್‌ನ ‘ಓಯಸಿಸ್ ಆಫ್ ಪೀಸ್’ ಉದ್ಯಾನದಲ್ಲಿ ಇರುವ ಗಾಂಧೀಜಿ ಪ್ರತಿಮೆಗೆ ಪುಷ್ಪಗುಚ್ಛ ಅರ್ಪಿಸಿ ಗೌರವ ಸಲ್ಲಿಸಿದರು.

‘ಕೀವ್‌ನಲ್ಲಿ ಗಾಂಧೀಜಿ ಪ್ರತಿಮೆಗೆ ನಮಿಸಿದೆ. ಗಾಂಧೀಜಿ ಅವರ ಚಿಂತನೆಗಳು ಜಾಗತಿಕವಾಗಿದ್ದು, ಕೋಟ್ಯಂತರ ಜನರ ಭರವಸೆಯಾಗಿವೆ. ಅವರು ತೋರಿದ ಮಾನವೀಯತೆಯ ಹಾದಿಯಲ್ಲಿ ನಾವು ಹೆಜ್ಜೆ ಹಾಕಬೇಕಾಗಿದೆ’ ಎಂದು ‘ಎಕ್ಸ್’ನಲ್ಲಿ ಸಂದೇಶ ಹಂಚಿಕೊಂಡಿದ್ದಾರೆ.

‘ಸೌಹಾರ್ದ ಸಮಾಜ ನಿರ್ಮಾಣ ಮತ್ತು ಸದ್ಯದ ಜಾಗತಿಕ ಸವಾಲುಗಳನ್ನು ಎದುರಿಸಲು ಗಾಂಧೀಜಿಯವರ ಸಂದೇಶ, ಚಿಂತನೆ ಎಷ್ಟು ಪ್ರಸ್ತುತ ಎಂದು ಪ್ರಧಾನಿ ಅವರು ಕೀವ್‌ನಲ್ಲಿ ಒತ್ತಿ ಹೇಳಿದ್ದಾರೆ’ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ್ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ರಷ್ಯಾ–ಉಕ್ರೇನ್ ಬಿಕ್ಕಟ್ಟು ಅಂತ್ಯಗೊಳಿಸಲು ಪರಿಹಾರ ಕ್ರಮಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಧಾನಿ ಅವರು ಉಕ್ರೇನ್ ಅಧ್ಯಕ್ಷರ ಜೊತೆಗೆ ಚರ್ಚಿಸುವರು ಎಂದು ಜೈಸ್ವಾಲ್ ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಝೆಲೆನ್‌ಸ್ಕಿ ಅವರ ಜೊತೆಗಿನ ಭೇಟಿಗೂ ಮುನ್ನ ಪ್ರಧಾನಿ, ಉಕ್ರೇನ್ ರಾಜಧಾನಿಯಲ್ಲಿರುವ ಮಹಾತ್ಮ ಗಾಂಧಿ ಅವರ ಪ್ರತಿಮೆಗೂ ಗೌರವ ವಂದನೆ ಸಲ್ಲಿಸಿದರು. ಪ್ರಧಾನಿ ಇತ್ತೀಚೆಗೆ ಮಾಸ್ಕೊಗೆ ಭೇಟಿ ನೀಡಿದ್ದು ಹಲವು ಪಾಶ್ಚಿಮಾತ್ಯ ರಾಷ್ಟ್ರಗಳ ಕೆಂಗಣ್ಣಿಗೆ ಗುರಿಯಾಗಿತ್ತು. ಹೀಗಾಗಿ ರಾಜತಾಂತ್ರಿಕ ಸಂಬಂಧಗಳಲ್ಲಿ ಸಮತೋಲನ ಸಾಧಿಸುವುದು ಈ ಭೇಟಿಯ ಉದ್ದೇಶ ಎನ್ನಲಾಗಿದೆ. ಜೂನ್ ತಿಂಗಳಲ್ಲಿ ಇಟಲಿಯಲ್ಲಿ ಜಿ7 ಶೃಂಗಸಭೆ ಸಂದರ್ಭದಲ್ಲಿ ಝೆಲೆನ್‌ಸ್ಕಿ ಅವರೊಂದಿಗೆ ಮೋದಿ ಮಾತನಾಡಿದ್ದರು.

ನೇಪಾಳ: ನದಿಗೆ ಉರುಳಿದ ಬಸ್– 27 ಭಾರತೀಯರ ಸಾವು

ಕಠ್ಮಂಡು (ಪಿಟಿಐ): ಭಾರತ ಮೂಲದ ಪ್ರವಾಸಿ ಬಸ್ ಶುಕ್ರವಾರ ನೇಪಾಳದ ತನಹುನ್ ಜಿಲ್ಲೆಯ ಆಯಿನಾ ಪಹಾರದ ಹೆದ್ದಾರಿಯಲ್ಲಿ ಚಾಲಕನ ನಿಯಂತ್ರಣ ತಪ್ಪಿ, 150 ಅಡಿ ಆಳದ ಮಾರ್ಸ್ಯಾಂಗಡಿ ನದಿಗೆ ಉರುಳಿದ್ದು, ಒಟ್ಟು 27 ಮಂದಿ ಮೃತಪಟ್ಟಿದ್ದಾರೆ.

ಬಸ್‌ನಲ್ಲಿದ್ದ ಉಳಿದವರು ಗಾಯಗೊಂಡಿದ್ದಾರೆ. ಬಸ್‌ನಲ್ಲಿದ್ದವರು ಪೋಖರಾ ಪಟ್ಟಣದ ರೆಸಾರ್ಟ್‌ನಿಂದ ರಾಜಧಾನಿ ಕಠ್ಮಂಡುವಿಗೆ ತೆರಳುತ್ತಿದ್ದರು. ಬಸ್‌ನಲ್ಲಿ ಚಾಲಕ, ಸಹ ಚಾಲಕ ಸೇರಿ 43 ಜನರಿದ್ದರು. ಈ ಬಸ್ ಉತ್ತರ ಪ್ರದೇಶದಲ್ಲಿ ನೋಂದಣಿ ಆಗಿದೆ.

ಭಾರತೀಯ ರಾಯಭಾರ ಕಚೇರಿ ಈ ಬಗ್ಗೆ ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿದೆ. ಪರಿಹಾರ ಮತ್ತು ರಕ್ಷಣಾ ಕಾರ್ಯ ಕುರಿತಂತೆ ಸ್ಥಳೀಯ ಅಧಿಕಾರಿಗಳ ಜೊತೆಗೆ ಸಂಪರ್ಕದಲ್ಲಿ ಇರುವುದಾಗಿ ತಿಳಿಸಿದೆ.

ಪೊಲೀಸ್ ಅಧಿಕಾರಿ ಶೈಲೇಂದ್ರ ಥಾಪಾ ಅವರು, ‘ಅಪಘಾತ ಸ್ಥಳದಿಂದ 27 ಶವಗಳನ್ನು ಹೊರತೆಗೆದಿದ್ದು, ರಕ್ಷಣೆಗೆ ಸೇನೆ ಎಂ.ಐ 17 ಹೆಲಿಕಾಪ್ಟರ್ ನೆರವು ಪಡೆಯಲಾಗಿದೆ’ ಎಂದರು.

ಹಿಮಾಲಯ ಪರ್ವತ ಶ್ರೇಣಿ ವ್ಯಾಪ್ತಿಯ ನೇಪಾಳದಲ್ಲಿ ಸಾಮಾನ್ಯವಾಗಿ ನದಿಗಳಲ್ಲಿ ನೀರು ಹರಿವಿನ ವೇಗ ಹೆಚ್ಚಿರುತ್ತದೆ. ಜೂನ್–ಸೆಪ್ಟೆಂಬರ್ ಮಳೆಗಾಲವಾಗಿದ್ದು, ಈ ಅವಧಿಯಲ್ಲಿ ನೀರಿನ ಹರಿವು ಸಾಮಾನ್ಯಕ್ಕಿಂತಲೂ ಹೆಚ್ಚಿರುತ್ತದೆ.

ಅಧಿಕಾರಿಯನ್ನು ನಿಯೋಜಿಸಿದ ಉತ್ತರ ಪ್ರದೇಶ: ಅಪಘಾತ ಸ್ಥಳದಲ್ಲಿದ್ದು, ಪರಿಹಾರ ಕಾರ್ಯಗಳಿಗೆ ನೆರವಾಗಲು ಉತ್ತರ ಪ್ರದೇಶ ಸರ್ಕಾರವು ಉಪ ವಿಭಾಗೀಯ ಅಧಿಕಾರಿ (ಎಸ್‌ಡಿಎಂ) ದರ್ಜೆಯ ಒಬ್ಬರನ್ನು ನಿಯೋಜಿಸಿದೆ.

ಉತ್ತರ ಪ್ರದೇಶದ ಪರಿಹಾರ ಆಯುಕ್ತರು ಈ ಕುರಿತು ಹೇಳಿಕೆ ನೀಡಿದ್ದು, ಎಸ್‌ಡಿಎಂ ಮಹಾರಾಜ್‌ಗಂಜ್ ಅವರನ್ನು ನೆರವು ಕಾರ್ಯಕ್ಕೆ ನಿಯೋಜಿಸಲಾಗಿದೆ. ವಿದೇಶಾಂಗ ಸಚಿವಾಲಯವು ನೇಪಾಳದ ಸ್ಥಳೀಯ ಅಧಿಕಾರಿಗಳ ಜೊತೆ ಸಂಪರ್ಕದಲ್ಲಿದೆ ಎಂದು ತಿಳಿಸಿದ್ದಾರೆ.

ನೇಪಾಳದ ತನಹುನ್ ಜಿಲ್ಲೆಯಲ್ಲಿ ನದಿಗೆ ಉರುಳಿರುವ ಬಸ್‌ನ ಅವಶೇಷ —ಪಿಟಿಐ ಚಿತ್ರ

ಭೂಕುಸಿತದಲ್ಲಿ ಮೃತಪಟ್ಟ ನೇಪಾಳಿ ಕಾರ್ಮಿಕರ ಶವವನ್ನು ರಕ್ಷಣಾ ಕಾರ್ಯಕರ್ತರು ಅವಶೇಷಗಳಿಂದ ಹೊರತಂದರು — ಪಿಟಿಐ ಚಿತ್ರ

ಉತ್ತರಾಖಂಡ: ಭೂಕುಸಿತದಲ್ಲಿ ನಾಲ್ವರು ನೇಪಾಳಿಗರ ಸಾವು

ರುದ್ರಪ್ರಯಾಗ (ಪಿಟಿಐ): ಉತ್ತರಾಖಂಡದ ಫಾಟಾ ಗ್ರಾಮದಲ್ಲಿ ಭಾರಿ ಮಳೆಯಿಂದ ಉಂಟಾದ ಭೂಕುಸಿತದಲ್ಲಿ ನೇಪಾಳದ ನಾಲ್ವರು ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಭೂಕುಸಿತದ ಅವಶೇಷಗಳಿಂದ ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಕಾರ್ಮಿಕರ ಮೃತದೇಹಗಳನ್ನು ಹೊರತೆಗೆದಿದೆ ಎಂದು ಅವರು ಹೇಳಿದ್ದಾರೆ.

ತುಲ ಬಹಾದುರ್, ಪೂರ್ಣ ನೇಪಾಳಿ, ಕಿಶ್ಣ ಪರಿಹಾರ್ ಮತ್ತು ಚಿಕು ಬುರ ಮೃತರು. ‘ಗುರುವಾರ ರಾತ್ರಿ ಭಾರಿ ಮಳೆ ಸುರಿದಿದೆ. ತಡರಾತ್ರಿ 1.20ರ ವೇಳೆಗೆ ಭೂಕುಸಿತ ಸಂಭವಿಸಿದೆ. ರಕ್ಷಣಾ ತಂಡ ವಿಷಯ ತಿಳಿದೊಡನೆ ಸ್ಥಳಕ್ಕೆ ಬಂದಿತು’ ಎಂದು ರುದ್ರಪ್ರಯಾಗ ವಿಪತ್ತು ನಿರ್ವಹಣಾ ಅಧಿಕಾರಿ ನಂದನ್ ಸಿಂಗ್ ರಾಜ್ವಾರ್ ಮಾಹಿತಿ ನೀಡಿದ್ದಾರೆ.

ಕಾಂಗ್ರೆಸ್ ಶಾಸಕ ಜಿಗ್ನೇಶ್ ಉಚ್ಚಾಟನೆ

ಗಾಂಧಿನಗರ (ಪಿಟಿಐ): ಗುಜರಾತ್ ವಿಧಾನಸಭೆಯಲ್ಲಿ ಮುಂಗಾರು ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ಸ್ಪೀಕರ್ ಪೀಠದ ಮುಂಭಾಗಕ್ಕೆ ನುಗ್ಗಿ, ಗದ್ದಲ ಸೃಷ್ಟಿಸಿದರೆಂಬ ಕಾರಣ ನೀಡಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಜಿಗ್ನೇಶ್ ಮೆವಾನಿ ಅವರನ್ನು ಸದನ ದಿಂದ ಉಚ್ಚಾಟಿಸಲಾಗಿದೆ.

ಜಿಗ್ನೇಶ್ ಮೆವಾನಿ

ಸ್ಪೀಕರ್ ಶಂಕರ್ ಚೌಧರಿ ಅವರು ಜಿಗ್ನೇಶ್ ಅವರನ್ನು ಉಚ್ಚಾಟಿಸಿ ಆದೇಶ ನೀಡಿದರು.

ಗುಜರಾತ್ ಪೊಲೀಸರು ಮಾದಕ ವಸ್ತುವನ್ನು ವಶಪಡಿಸಿಕೊಂಡ ಕುರಿತು ಸದನದಲ್ಲಿ ಚರ್ಚೆ ನಡೆಯುತ್ತಿದ್ದ ವೇಳೆ ಜಿಗ್ನೇಶ್ ಅವರು ಮೇಜಿನ ಮೇಲೆ ನಿಂತು ‘ಅತ್ಯಾಚಾರದಂತಹ ಜ್ವಲಂತ ಸಮಸ್ಯೆ ಬಗ್ಗೆ ಚರ್ಚಿಸಿ’ ಎಂದು ಬಿಜೆಪಿ ಸರ್ಕಾರಕ್ಕೆ ಸವಾಲು ಹಾಕುತ್ತ ಕೂಗಾಡಿದರು. ಅಲ್ಲದೇ ಸ್ಪೀಕರ್ ಪೀಠದ ಮುಂಭಾಗಕ್ಕೆ ಧಾವಿಸಿದರು. ಸಭ್ಯತೆ ಕಾಯ್ದುಕೊಳ್ಳುವಂತೆ ಜಿಗ್ನೇಶ್ ಅವರಿಗೆ ಸ್ಪೀಕರ್ ತಿಳಿಹೇಳಿದರೂ ಅವರು ವಾಗ್ವಾದ ಮುಂದುವರಿಸಿದರು.

ಜೆಎನ್‌ಯು: ಶಿಕ್ಷಣ ಸಚಿವಾಲಯಕ್ಕೆ ಮೆರವಣಿಗೆ

ನವದೆಹಲಿ (ಪಿಟಿಐ): ವಿದ್ಯಾರ್ಥಿವೇತನ ಹೆಚ್ಚಳ ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಜವಾಹರಲಾಲ್ ನೆಹರೂ (ಜೆಎನ್‌ಯು) ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಸದಸ್ಯರು ಶುಕ್ರವಾರ ಶಿಕ್ಷಣ ಸಚಿವಾಲಯಕ್ಕೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಆದರೆ ಪ್ರತಿಭಟನಕಾರರನ್ನು ಪೊಲೀಸರು ಕ್ಯಾಂಪಸ್‌ನ ಹೊರಭಾಗದಲ್ಲೇ ತಡೆದರು.

ವಿಶ್ವವಿದ್ಯಾಲಯದ ಆವರಣದಿಂದ ವಿದ್ಯಾರ್ಥಿಗಳು ಹೊರಹೋಗದಂತೆ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಿ, ಬ್ಯಾರಿಕೇಡ್ ಹಾಕಲಾಗಿತ್ತು.

ತ್ರಿಪುರಾ: ₹40 ಕೋಟಿ ಬಿಡುಗಡೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಭೀಕರ ಪ್ರವಾಹಕ್ಕೆ ತುತ್ತಾಗಿರುವ ತ್ರಿಪುರಾಕ್ಕೆ ₹40 ಕೋಟಿ ಬಿಡುಗಡೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಯಲ್ಲಿ ರಾಜ್ಯ ಸರ್ಕಾರಕ್ಕೆ ಸಹಾಯ ಮಾಡಲು ರಾಷ್ಟ್ರೀಯ ನಿರ್ವಹಣಾ ಪಡೆಯ (ಎನ್‌ಡಿಆರ್ ಎಫ್) 11 ತಂಡಗಳು, ಸೇನೆಯ ಮೂರು ತುಕಡಿಗಳು ಮತ್ತು ಭಾರತೀಯ ನೌಕಾಪಡೆಯ ನಾಲ್ಕು ಹೆಲಿಕಾಪ್ಟರ್‌ಗಳನ್ನು ಕೇಂದ್ರವು ನಿಯೋಜಿಸಿದೆ ಎಂದು ಶುಕ್ರವಾರ ಶಾ ಹೇಳಿದರು.

‘ಏನೇ ಆಗಲಿ, ತ್ರಿಪುರಾದಲ್ಲಿರುವ ನಮ್ಮ ಸಹೋದರಿಯರು ಮತ್ತು ಸಹೋದರರು ಈ ಕಷ್ಟದ ಸಮಯದಲ್ಲಿ ಹೋರಾಡಲು ಮೋದಿ ಸರ್ಕಾರ ತಮ್ಮೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುತ್ತದೆ’ ಎಂದು ಶಾ ‘ಎಕ್ಸ್’ನಲ್ಲಿ ಬರೆದಿದ್ದಾರೆ. ಶಾ ಅವರು ಗುರುವಾರ ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸಹಾ ಅವರಿಗೆ ಕರೆ ಮಾಡಿ ರಾಜ್ಯದಲ್ಲಿನ ಪರಿಸ್ಥಿತಿಯ ಕುರಿತು ಮಾಹಿತಿ ಪಡೆದಿದ್ದು, ಎಲ್ಲಾ ನೆರವು ನೀಡುವುದಾಗಿ ಭರವಸೆ ನೀಡಿದರು.

> ಪ್ರವಾಹದ ನಡುವೆಯೂ ಆಹಾರ ಪದಾರ್ಥಗಳ ಕೊರತೆಯಿಲ್ಲ. ಆಹಾರ ಪದಾರ್ಥಗಳ ಕೃತಕ ಬಿಕ್ಕಟ್ಟು ಸೃಷ್ಟಿಸದಂತೆ ವ್ಯಾಪಾರಿಗಳಿಗೆ ಸೂಚಿಸಿದ್ದೇವೆ
>
> **ಸುಶಾಂತ ಚೌಧರಿ**
> ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ

ತ್ರಿಪುರಾ ಸಿ.ಎಂ ಮಾಣಿಕ್ ಸಹಾ ಅವರು ಗೋಮತಿ ಜಿಲ್ಲೆಯಲ್ಲಿನ ಪರಿಹಾರ ಶಿಬಿರದಲ್ಲಿದ್ದ ಪ್ರವಾಹ ಪೀಡಿತ ಜನರೊಂದಿಗೆ ಸಂವಾದ ನಡೆಸಿದರು —ಪಿಟಿಐ ಚಿತ್ರ

ಪ್ಯಾರಾಲಿಂಪಿಕ್ಸ್‌ನ 1500 ಮೀ. ಓಟದಲ್ಲಿ ಭಾಗವಹಿಸಲಿರುವ ಭಾರತದ ಮೊದಲ ಮಹಿಳಾ ಅಥ್ಲೀಟ್

ಅಂಧಕಾರ ಹಿಂದಿಕ್ಕಿ ಬೆಳಕಿನೆಡೆ ಮುನ್ನುಗ್ಗಿದ ರಕ್ಷಿತಾ

● ಗಿರೀಶ ದೊಡ್ಡಮನಿ

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನಲ್ಲಿ ಬಾಳೂರು ಗುಡ್ನಳ್ಳಿ ಎಂಬ ಪುಟ್ಟ ಗ್ರಾಮವಿದೆ. ಈ ಊರಿನ ರಕ್ಷಿತಾಗೆ ಹುಟ್ಟಿನಿಂದಲೇ ಅಂಧತ್ವ ಕಾಡಿತು. ಎರಡು ವರ್ಷ ತುಂಬು ವಷ್ಯರಲ್ಲಿ ಅಮ್ಮ ನಿಧನರಾದರು. ಅಕ್ಕರೆಯಿಂದ ಬೆಳೆಸುತ್ತಿದ್ದ ಅಪ್ಪನೂ ಸಾವನ್ನಪ್ಪಿದಾಗ ಈ ಹುಡುಗಿಗೆ 11 ವರ್ಷ ಅಷ್ಟೇ.

ಬೆಳಕೆಂದರೆ ಏನು ಎಂಬುದೇ ಗೊತ್ತಿಲ್ಲದ ಬಾಲಕಿಯ ಜೀವನ ಮತ್ತಷ್ಟು ಅಂಧಕಾರದಲ್ಲಿ ಮುಳುಗಿತ್ತು. ಶ್ರವಣದೋಷವಿದ್ದ ಅಜ್ಜಿಯು ರಕ್ಷಿತಾ ಮತ್ತು ಅವರ ತಮ್ಮನ ಪೋಷಣೆ ಮಾಡಿದರು.

ಇದೀಗ ಅದೇ ರಕ್ಷಿತಾ ಪ್ಯಾರಿಸ್ ನಗರಿಯಲ್ಲಿ ನಡೆಯಲಿರುವ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲು ಸಿದ್ಧರಾಗಿದ್ದಾರೆ. ಅಂಧರ ಟಿ 11 ವಿಭಾಗದ 1500 ಮೀಟರ್ಸ್ ಓಟದಲ್ಲಿ ಸ್ಪರ್ಧಿಸಲಿದ್ದಾರೆ. ಈ ವಿಭಾಗದಲ್ಲಿ ಸ್ಪರ್ಧೆ ಮಾಡುತ್ತಿರುವ ಭಾರತದ ಮೊಟ್ಟಮೊದಲ ಅಂಧ ಮಹಿಳಾ ಅಥ್ಲೀಟ್ ಇವರಾಗಿದ್ದಾರೆ.

‘ನನಗೆ ಹುಟ್ಟಿನಿಂದಲೇ ಶೇ 100ರಷ್ಟು ಅಂಧತ್ವ ಇದೆ. ಅಜ್ಜಿ ಮತ್ತು ಆಂಟಿ ನನ್ನನ್ನು ನೋಡಿಕೊಂಡಿದ್ದಾರೆ. ಚಿಕ್ಕಮಗಳೂರಿನ ಆಶಾಕಿರಣ ಅಂಧರ ಶಾಲೆಗೆ ನನ್ನನ್ನು ಸೇರಿಸಿದ್ದರು. ಅಲ್ಲಿ ಶವಾದ್ ಎಂಬ ನನ್ನ ಸೀನಿಯರ್ ವಿದ್ಯಾರ್ಥಿ ಅಂಧರ ಕ್ರೀಡಾಕೂಟದಲ್ಲಿ ಸ್ಪರ್ಧಿಸುತ್ತಿದ್ದರು. ಅವರ ಬಗ್ಗೆ ತಿಳಿದು ನನಗೂ ಓಡುವ ಆಸೆ ಚಿಗುರಿತು. ಶವಾದ್ ಅವರಿಗೆ ರಾಹುಲ್ ಸರ್ ಗೈಡ್ ರನ್ನರ್ ಆಗಿದ್ದರು. ಪಿ.ಟಿ (ದೈಹಿಕ ಶಿಕ್ಷಣ) ಸರ್ ಗೋಪಾಲ್ ಅವರು ನನ್ನ ಪ್ರತಿಭೆ ಗುರುತಿಸಿದರು. ನಾನೂ ಚೆನ್ನಾಗಿ ಓಡುವುದನ್ನು ನೋಡಿ ರಾಹುಲ್ ಸರ್ ಬೆಂಗಳೂರಿಗೆ ಕರೆದುಕೊಂಡು ಬಂದರು. ಅಲ್ಲಿಂದ ನನ್ನ ಜೀವನದ ದಿಕ್ಕು ಬದಲಾಯಿತು. ಡೆಲ್ಲಿ ನ್ಯಾಷನಲ್ಸ್‌ನಲ್ಲಿ 400 ಮೀ ಓಟದಲ್ಲಿ ಚಿನ್ನದ ಪದಕ ಜಯಿಸಿದೆ. ಅದರ ನಂತರ ನಾನು 1500 ಮೀ ಓಟ ಆಯ್ಕೆ ಮಾಡಿಕೊಂಡೆ. ನನಗೆ ರಾಹುಲ್ ಸರ್ ಗೈಡ್ ರನ್ನರ್ ಮತ್ತು ಕೋಚ್ ಕೂಡ ಆಗಿದ್ದಾರೆ’ ಎಂದು ರಕ್ಷಿತಾ ತಮ್ಮ ಜೀವನಕ್ಕೆ ಲಭಿಸಿದ ತಿರುವಿನ ಕುರಿತು ಹೆಮ್ಮೆಯಿಂದ ಹೇಳುತ್ತಾರೆ.

ರಕ್ಷಿತಾ ರಾಜು (ಬಲ) ಮತ್ತು ಗೈಡ್ ರನ್ನರ್ ರಾಹುಲ್

ಗೈಡ್ ರನ್ನರ್ ಮತ್ತು ಟೆಥರ್

ಅಂಧರ ಓಟದ ವಿಭಾಗದಲ್ಲಿ ಅಥ್ಲೀಟ್ ಜೊತೆಗೆ ಒಬ್ಬ ಗೈಡ್ ರನ್ನರ್ ಇರುತ್ತಾರೆ. ಅವರಿಬ್ಬರಿಗೂ ಒಂದು ಟೆಥರ್ (ಬೆಲ್ಟ್ ಮಾದರಿಯ ಸಲಕರಣೆ) ನೀಡಲಾಗಿರುತ್ತದೆ. ಇಬ್ಬರೂ ಅದನ್ನು ಹಿಡಿದು ಓಡಬೇಕು.

‘ಟೆಥರ್ ನಮ್ಮಿಬ್ಬರ ಸಂಪರ್ಕಕ್ಕೆ ನೀಡಲಾಗಿರುತ್ತದೆ. ಇದರಿಂದ ಒಂದೇ ವೇಗದಲ್ಲಿ ಓಡಲು ಇಬ್ಬರಿಗೂ ಅನುಕೂಲ. ಲೇನ್ ಶಿಸ್ತು ನಿರ್ವಹಿಸಲೂ ಸಾಧ್ಯವಾಗುತ್ತದೆ. ಟೆಥರ್‌ನ ಒಂದು ತುದಿಯು ಅಥ್ಲೀಟ್ ಇನ್ನೊಂದು ಗೈಡ್ ರನ್ನರ್ ಕೈಯಲ್ಲಿರುತ್ತದೆ. ಏಷ್ಯನ್ ಗೇಮ್ಸ್‌ನಲ್ಲಿ ಬಳಸಿದ್ದ ಟೆಥರ್ ಅನ್ನು ರಕ್ಷಿತಾ ಅವರು ಪ್ರಧಾನಿ ನರೇಂದ್ರ ಮೋದಿಯವರಿಗೆ ಕಾಣಿಕೆಯಾಗಿ ನೀಡಿದ್ದರು’ ಎಂದು ಕೋಚ್ ರಾಹುಲ್ ವಿವರಿಸಿದರು.

ಕಳೆದ ಆರು ವರ್ಷಗಳಿಂದ ಅವರು ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಹೋದ ವರ್ಷ ಪ್ಯಾರಿಸ್‌ನಲ್ಲಿ ನಡೆದಿದ್ದ ಪ್ಯಾರಾ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಐದನೇ ಸ್ಥಾನ ಪಡೆದಿದ್ದರು. 2022ರಲ್ಲಿ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ, 2023ರ ಇಂಡಿಯನ್ ಓಪನ್ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಬೆಳ್ಳಿ, ಅದೇ ವರ್ಷ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ 400 ಮೀ ಮತ್ತು 1500 ಮೀ ವಿಭಾಗಗಳಲ್ಲಿ ಚಿನ್ನ, ಶಾರ್ಜಾ ಅಂತರರಾಷ್ಟ್ರೀಯ ಓಪನ್ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಬೆಳ್ಳಿ, 2021ರಲ್ಲಿ ದುಬೈ ಪ್ಯಾರಾ ಗ್ರ್ಯಾನ್‌ಪ್ರೀ ಅಥ್ಲೆಟಿಕ್ಸ್‌ನಲ್ಲಿ ಕಂಚು, 2019ರಲ್ಲಿ ಸ್ವಿಟ್ಜರ್‌ಲೆಂಡ್‌ನಲ್ಲಿ ನಡೆದಿದ್ದ ಜೂನಿಯರ್ ವಿಶ್ವ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಚಿನ್ನ, 2019ರಲ್ಲಿ ಜಕಾರ್ತದಲ್ಲಿ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿಯೂ ಚಿನ್ನದ ಪದಕ ಜಯಿಸಿದ್ದರು.

'ನಾನು ಮತ್ತು ನನ್ನ ಪತ್ನಿ ಸೌಮ್ಯ ಸೇರಿ ರಕ್ಷಿತಾ ರಾಜು ಅವರಿಗೆ ತರಬೇತಿ ನೀಡುತ್ತಿದ್ದೇವೆ. ಸೌಮ್ಯ ಕೂಡ ಅಥ್ಲೀಟ್ ಆಗಿದ್ದವರು. ಅವರು ಅರಣ್ಯ ಇಲಾಖೆಯ ಉದ್ಯೋಗಿಯೂ ಹೌದು. ಟ್ರ್ಯಾಕ್ ವಿಭಾಗದಲ್ಲಿ ಅಂಧರಿಗೆ ತಾಲೀಮು ನೀಡುವುದು ಸವಾಲಿನ ಕಾರ್ಯ. ಅವರು ಓಡುವ ವೇಗಕ್ಕೆ ತಕ್ಕಂತೆ ನನ್ನ ಓಟ ಇರಬೇಕು. ಅವರಿಗಿಂತ ಮುಂದೆ ಹೋದರೆ ಅಥವಾ ಹಿಂದೆ ಉಳಿದುಬಿಟ್ಟರೆ ಅನರ್ಹರಾಗುತ್ತೇವೆ. ಲೇನ್ ಪಾಲನೆಯೂ ಕಡ್ಡಾಯ. ಹೋದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ರಕ್ಷಿತಾ 5 ನಿಮಿಷ 16 ಸೆಕೆಂಡುಗಳಲ್ಲಿ ಗುರಿ ತಲುಪಿದ್ದರು. ಈಚೆಗೆ ಇಲ್ಲಿ ಟ್ರಯಲ್ಸ್ ನಡೆದಾಗ 5ನಿಮಿಷ, 7.3ಸೆಕೆಂಡುಗಳಲ್ಲಿ ಗುರಿ ಸಾಧಿಸಿದ್ದರು. ಪ್ಯಾರಾಲಿಂಪಿಕ್ಸ್‌ನಲ್ಲಿ ಕಠಿಣ ಪೈಪೋಟಿ ಇರುತ್ತದೆ. ಅವರಿಗೆ ಅಲ್ಲಿ ನಾನು, ಸೌಮ್ಯ, ತಬ್ರೇಜ್ ಮತ್ತು ಗೋವಿಂದ್ ಅವರು ಗೈಡ್ ರನ್ನರ್ ಆಗಿ ಹೋಗುತ್ತಿದ್ದೇವೆ’ ಎಂದು ಕೋಚ್ ರಾಹುಲ್ ‘ಪ್ರಜಾವಾಣಿ’ಗೆ ವಿವರಿಸಿದರು.

‘ಆರಂಭಿಕ ದಿನಗಳಲ್ಲಿ ಬಹಳ ಕಷ್ಟಪಟ್ಟಿದ್ದೇವೆ. ಸಾಯ್, ಗೋ ಸ್ಪೋರ್ಟ್ಸ್ ಮತ್ತು ಲೈಫ್‌ಲೈನ್‌ನ ಕಿಶೋರ್ ಹೆಗಡೆ ಅವರ ನೆರವು ರಕ್ಷಿತಾಗೆ ಲಭಿಸಿದೆ. ಅದರಿಂದಾಗಿ ಉನ್ನತ ಸಾಧನೆ ಸಾಧ್ಯವಾಗಿದೆ’ ಎಂದು ರೈಲ್ವೆಯ ಉದ್ಯೋಗಿಯೂ ಆಗಿರುವ ರಾಹುಲ್ ಹೇಳುತ್ತಾರೆ. ಇದೇ 28ರಿಂದ ಪ್ಯಾರಿಸ್‌ನಲ್ಲಿ ಪ್ಯಾರಾಲಿಂಪಿಕ್ಸ್ ಆರಂಭವಾಗಲಿದೆ. ಮೂರು ದಿನ ಮೊದಲೇ ರಕ್ಷಿತಾ ಅವರು ಭಾರತ ತಂಡದೊಂದಿಗೆ ಪ್ಯಾರಿಸ್‌ಗೆ ಪಯಣಿಸಲಿದ್ದಾರೆ.

ಸಿಂಕ್ವೆಫೀಲ್ಡ್ ಚೆಸ್: ಹೆಚ್ಚಿನ ಪಂದ್ಯ ಡ್ರಾ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ವಿಶ್ವ ಚಾಂಪಿಯನ್‌ಗೆ ಸವಾಲುಹಾಕುವ ಅರ್ಹತೆ ಸಂಪಾದಿಸಿರುವ ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಸಿಂಕ್ವೆಫೀಲ್ಡ್ ಕಪ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಫ್ರಾನ್ಸ್‌ನ ಅಲಿರೇಜಾ ಫಿರೋಜ್ ಜೊತೆಗಿನ ಪಂದ್ಯವನ್ನು ‘ಡ್ರಾ’ ಮಾಡಿಕೊಂಡರು.

ಹಾಲೆಂಡ್‌ನ ಅನಿಶ್ ಗಿರಿ

ಜಂಟಿ ಅಗ್ರಸ್ಥಾನದಲ್ಲಿರುವ ಫಿರೋಜ್ ವಿರುದ್ಧ ಗುರುವಾರ ನಡೆದ ಪಂದ್ಯದಲ್ಲಿ ಭಾರತದ ಆಟಗಾರ ಸ್ವಲ್ಪ ಅನುಕೂಲಕರ ಸ್ಥಿತಿಯಲ್ಲಿದ್ದರೂ ಗೆಲುವು ಸಾಧಿಸಲು ಆಗಲಿಲ್ಲ. ಇನ್ನೊಂದೆಡೆ ಅಲಿರೇಜಾ ‘ಡ್ರಾ’ ಮಾಡಲು ಕಷ್ಟಪಡಬೇಕಾಯಿತು.

ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಹಾಲೆಂಡ್‌ನ ಅನೀಶ್ ಗಿರಿ ಜೊತೆಗಿನ ಪಂದ್ಯವನ್ನು ‘ಡ್ರಾ’ ಮಾಡಿಕೊಂಡರು.

10 ಆಟಗಾರರು ಭಾಗವಹಿಸುತ್ತಿರುವ ಈ ಟೂರ್ನಿಯಲ್ಲಿ ಇನ್ನು ಐದು ಸುತ್ತುಗಳು ಉಳಿದಿವೆ. ಗುಕೇಶ್, ಪ್ರಜ್ಞಾನಂದ ಅವರು ಇದುವರೆಗೆ ಆಡಿದ ನಾಲ್ಕೂ ಪಂದ್ಯಗಳನ್ನು ‘ಡ್ರಾ’ ಮಾಡಿಕೊಂಡಿದ್ದಾರೆ.

ಅಲಿರೇಜಾ ಮತ್ತು ವೆಸ್ಲಿ ಸೊ ತಲಾ ಎರಡೂವರೆ ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಆರು ಮಂದಿ ಆಟಗಾರರು (ಫ್ಯಾಬಿಯಾನೊ ಕರುವಾನಾ, ಮ್ಯಾಕ್ಸಿಂ ವೇಷಿಯರ್ ಲಗ್ರಾವ್, ಇಯಾನ್ ನಿಪೊಮ್‌ನಿಯಾಷಿ, ಡಿಂಗ್ ಲಿರೆನ್, ಪ್ರಜ್ಞಾನಂದ ಮತ್ತು ಡಿ.ಗುಕೇಶ್) ತಲಾ ಎರಡು ಪಾಯಿಂಟ್ಸ್ ಗಳಿಸಿದ್ದು, ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಡಚ್ ಆಟಗಾರ ಅನಿಶ್ ಗಿರಿ ಮತ್ತು ಉಜ್ಬೇಕ್ ಆಟಗಾರ ನಾಡಿರ್ಬೆಕ್ ಅಬ್ದುಸತ್ತಾರೋವ್ ತಲಾ ಒಂದೂವರೆ ಅಂಕ ಸಂಗ್ರಹಿಸಿ ಕೊನೆಯ ಸ್ಥಾನದಲ್ಲಿದ್ದಾರೆ.

ದಿನದ ಐದು ಪಂದ್ಯಗಳ ಪೈಕಿ ನಾಲ್ಕು ‘ಡ್ರಾ’ ಆದವು. ನಿರ್ಣಾಯಕ ಫಲಿತಾಂಶ ಕಂಡ ಏಕೈಕ ಪಂದ್ಯದಲ್ಲಿ ಅಮೆರಿಕದ ವೆಸ್ಲಿ ಸೊ ಅವರು ಫಿಡೆಯನ್ನು ಪ್ರತಿನಿಧಿಸುತ್ತಿರುವ ರಷ್ಯಾದ ಆಟಗಾರ ಇಯಾನ್ ನಿಪೊಮ್‌ನಿಯಾಷಿ ಅವರನ್ನು ಸೋಲಿಸಿದರು.

ಇತರ ಪಂದ್ಯಗಳಲ್ಲಿ ಲಿರೆನ್, ಕರುವಾನಾ ಜೊತೆ, ಲಗ್ರಾವ್ ಅವರು ಅಬ್ದುಸತ್ತಾರೋವ್ ಜೊತೆ ಡ್ರಾ ಮಾಡಿಕೊಂಡರು.

ಪ್ರಜ್ಞಾನಂದ ಅವರು ಕಪ್ಪುಕಾಯಿಗಳಲ್ಲಿ ಆಡಿದ್ದು, ಅನಿಶ್ ಗಿರಿ ಜೊತೆಗಿನ ಪಂದ್ಯ ಡ್ರಾ ಮಾಡಿಕೊಳ್ಳಲು ಅಷ್ಟೇನೂ ಕಷ್ಟಪಡಲಿಲ್ಲ. ಈ ಪಂದ್ಯದಲ್ಲಿ ಗಿರಿ ಒಂದೆರಡು ಬಾರಿ ಕೊಂಚ ಮೇಲುಗೈ ಪಡೆದಂತೆ ಕಂಡರೂ, ಪ್ರಜ್ಞಾನಂದ ಅವರು ಎದುರಾಳಿಯ ಗೆಲುವಿನ ಯತ್ನಗಳು ಬಲಗೊಳ್ಳದಂತೆ ತಡೆಯುವಲ್ಲಿ ಯಶಸ್ವಿ ಆದರು.

ಅಮೆರಿಕಕ್ಕೆ ಫಿರೋಜ್?: ಈ ಮಧ್ಯೆ ಇರಾನ್‌ನಲ್ಲಿ ಹುಟ್ಟಿಬೆಳೆದು ಗ್ರ್ಯಾಂಡ್‌ಮಾಸ್ಟರ್ ಆದ ಮೇಲೆ ಅಲಿರೇಜಾ ಫಿರೋಜ್ ಕೆಲವು ವರ್ಷಗಳ ಹಿಂದೆ ಫ್ರಾನ್ಸ್‌ನ ಪೌರತ್ವ ಪಡೆದು ಪ್ಯಾರಿಸ್‌ನಲ್ಲಿ ನೆಲೆಸಿದ್ದಾರೆ. ಅವರಿಗೆ ಅಮೆರಿಕ ಪರ ಆಡಲು ಆಹ್ವಾನ ನೀಡಲಾಗಿದೆ ಎಂದು ಕೆಲವು ಮೂಲಗಳು ತಿಳಿಸಿವೆ. ಇದುವರೆಗೆ ಇದು ಅಧಿಕೃತಗೊಂಡಿಲ್ಲ.

ದೈಹಿಕ ಶಿಕ್ಷಣ ಶಿಕ್ಷಕರಿಗೆ ಚೆಸ್ ಕಾರ್ಯಾಗಾರ

ಶಿವಮೊಗ್ಗ: ಇಲ್ಲಿನ ಯಾದವ್ ಸ್ಕೂಲ್ ಆಫ್ ಚೆಸ್, ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿರುವ ದೈಹಿಕ ಶಿಕ್ಷಣ ಶಿಕ್ಷಕರಿಗೆ ಒಂದು ದಿನದ ಉಚಿತ ಚೆಸ್ ತರಬೇತಿ ಕಾರ್ಯಾಗಾರ ನಡೆಸಲು ಉದ್ದೇಶಿಸಿದೆ.

ಚೆಸ್‌ನ ಪರಿಷ್ಕೃತ ನಿಯಮಗಳ ಬಗ್ಗೆ ಮಾಹಿತಿ ನೀಡುವುದು, ಚೆಸ್ ತಳಕು (ಟೈ) ಹಾಕುವ ಬಗ್ಗೆ ತರಬೇತಿ ನೀಡಲಾಗುವುದು. ಅನುಭವಿ ಆರ್ಬಿಟರ್ ಪ್ರಾಣೇಶ್ ಯಾದವ್ ತರಬೇತಿ ನಡೆಸಿಕೊಡುವರು. ವಿವರಗಳಿಗೆ ಮೊ: 9242401702/ 9743819678 ಸಂಪರ್ಕಿಸಬಹುದು.

ವಿಶ್ವ ಜೂನಿಯರ್ ಸ್ನೂಕರ್ ಇಂದಿನಿಂದ

ಬೆಂಗಳೂರು: ಉದ್ಯಾನನಗರಿಯಲ್ಲಿ ಸ್ನೂಕರ್ ಮತ್ತು ಬಿಲಿಯರ್ಡ್ಸ್ ಕ್ರೀಡೆಗಳಿಗೆ ಪರಂಪರೆ ಇದೆ. ಈಗ ಮತ್ತೊಂದು ಮಹತ್ವದ ಟೂರ್ನಿಯೊಂದಕ್ಕೆ ನಗರವು ಆತಿಥ್ಯ ವಹಿಸುತ್ತಿದೆ.

ಶನಿವಾರ ಇಲ್ಲಿ ಐಬಿಎಸ್‌ಎಫ್ ವಿಶ್ವ ಜೂನಿಯರ್ ಸ್ನೂಕರ್ (17 ವರ್ಷ ಮತ್ತು 21 ವರ್ಷದೊಳಗಿನವರು) ಪುರುಷ ಮತ್ತು ಮಹಿಳಾ ವಿಭಾಗದ ಟೂರ್ನಿ ಆರಂಭವಾಗಲಿದೆ. ಇಲ್ಲಿ ಫೈನಲ್ ತಲುಪುವವರು ನವೆಂಬರ್‌ನಲ್ಲಿ (ಕತಾರ್) ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯುವರು

ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ಇದೇ 31ರವರೆಗೆ ಟೂರ್ನಿ ನಡೆಯಲಿದೆ. 11 ದೇಶಗಳ ಆಟಗಾರರು ಸ್ಪರ್ಧಿಸಲಿದ್ದಾರೆ. ಪಾಕಿಸ್ತಾನದ ಆಟಗಾರರು ಮತ್ತು ತೈವಾನ್‌ನ ಒಬ್ಬರಿಗೆ ವೀಸಾ ಸಿಗದ ಕಾರಣ ಸ್ಪರ್ಧಿಸಲು ಸಾಧ್ಯವಾಗಿಲ್ಲ.

ಈಜು: ಶ್ರೀಹರಿ, ಅನೀಶ್ ದಾಖಲೆ; ಬಿಎಸಿಗೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಲಿಂಪಿಯನ್ ಶ್ರೀಹರಿ ನಟರಾಜ್ ಅವರು ಬಸವನಗುಡಿ ಈಜುಕೇಂದ್ರದಲ್ಲಿ ಶುಕ್ರವಾರ ಮುಕ್ತಾಯಗೊಂಡ ಎನ್‌ಆರ್‌ಜೆ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನ ಎರಡು ವಿಭಾಗಗಳ ಸ್ಪರ್ಧೆಯಲ್ಲಿ ಕೂಟ ದಾಖಲೆ ನಿರ್ಮಿಸಿದರು. ಆತಿಥೇಯ ಬಿಎಸಿ ತಂಡವು ಸಮಗ್ರ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಡಾಲ್ಫಿನ್ ಅಕ್ವಾಟಿಕ್ಸ್‌ನ 23 ವರ್ಷ ವಯಸ್ಸಿನ ಶ್ರೀಹರಿ ಇಲ್ಲಿ ಪುರುಷರ 50 ಮೀ. ಫ್ರೀಸ್ಟೈಲ್‌ನಲ್ಲಿ 23.42 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಈ ಮೂಲಕ 2023ರಲ್ಲಿ ತನೀಷ್ ಜಾರ್ಜ್ ಮ್ಯಾಥ್ಯೂ (23.71ಸೆ) ಅವರ ದಾಖಲೆಯನ್ನು ಹಿಂದಿಕ್ಕಿದರು. 100 ಮೀ. ಫ್ರೀಸ್ಟೈಲ್‌ನಲ್ಲಿ ಅವರು 50.67 ಸೆಕೆಂಡ್ ಸಾಧನೆಯೊಂದಿಗೆ 2021ರಲ್ಲಿ ತಾವೇ ನಿರ್ಮಿಸಿದ್ದ ದಾಖಲೆಯನ್ನು (51.36 ಸೆ) ಉತ್ತಮ ಪಡಿಸಿಕೊಂಡರು.

ವೈಯಕ್ತಿಕ ಚಾಂಪಿಯನ್‌ಷಿಪ್ ಪ್ರಶಸ್ತಿ ಪಡೆದ ಬಿಎಸಿಎ ಅನೀಶ್ ಎಸ್. ಗೌಡ ಮತ್ತು ಶಿರಿನ್

ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಬಿಎಸಿಯ ಅನೀಶ್ ಎಸ್. ಗೌಡ ಅವರು ಪುರುಷರ 400 ಮೀಟರ್ ಫ್ರೀಸ್ಟೈಲ್‌ನಲ್ಲಿ 4 ನಿ.01.89 ಸೆಕೆಂಡ್‌ನಲ್ಲಿ ಗುರಿ ಮುಟ್ಟಿ, 2021ರಲ್ಲಿ ಅವರೇ ನಿರ್ಮಿಸಿದ್ದ ದಾಖಲೆಯನ್ನು (4 ನಿ.04.76ಸೆ) ಬಲಪಡಿಸಿಕೊಂಡರು.

ಬಿಎಸಿಯ ಅನೀಶ್ ಎಸ್. ಗೌಡ ಮತ್ತು ಶಿರಿನ್ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವೈಯಕ್ತಿಕ ಚಾಂಪಿಯನ್‌ಷಿಪ್ ಪ್ರಶಸ್ತಿ ಗೆದ್ದರು. ಟೂರ್ನಿಯಲ್ಲಿ ಪ್ರಾಬಲ್ಯ ಸಾಧಿಸಿದ ಬಿಎಸಿ 507 ಪಾಯಿಂಟ್ಸ್ ಗಳಿಸಿದರೆ, ಡಾಲ್ಫಿನ್ 253 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆಯಿತು.

ಫಲಿತಾಂಶ (ಚಿನ್ನ ಗೆದ್ದವರು ಮಾತ್ರ): ಪುರುಷರು: 50 ಮೀ. ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಡಿಎ, 23.42 ಸೆ. ಕೂಟ ದಾಖಲೆ). 100 ಮೀ. ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಡಿಎ, 50.67 ಸೆ. ಕೂಟ ದಾಖಲೆ). 400 ಮೀ. ಫ್ರೀಸ್ಟೈಲ್: ಅನೀಶ್ ಎಸ್. ಗೌಡ (ಬಿಎಸಿ, 4 ನಿ.01.89 ಸೆ, ಕೂಟ ದಾಖಲೆ). 50 ಮೀ. ಬ್ಯಾಕ್‌ಸ್ಟ್ರೋಕ್: ಆಕಾಶ್ ಮಣಿ (ಬಿಎಸಿ, 26.29 ಸೆ). 100 ಮೀ. ಬ್ಯಾಕ್‌ಸ್ಟ್ರೋಕ್: ಆಕಾಶ್ ಮಣಿ (ಬಿಎಸಿ, 56.95 ಸೆ). 200 ಮೀ. ಬ್ಯಾಕ್‌ಸ್ಟ್ರೋಕ್:ಮಣಿಕಂಠ ಎಲ್ (ಬಿಎಸಿ, 2 ನಿ.23.50 ಸೆ). 100 ಮೀ. ಬಟರ್‌ಫ್ಲೈ: ಕಾರ್ತಿಕೇಯನ್ ನಾಯರ್ (ಡಿಎ, 55.78 ಸೆ). 200 ಮೀ. ಮಿಡ್ಲೆ: ಶಿವ ಎಸ್ (ಬಿಎಸಿ, 2ನಿ. 10.73 ಸೆ). 4x100 ಮೀ. ಮೆಡ್ಲೆ ರಿಲೆ: ಡಾಲ್ಫಿನ್ ಅಕ್ವಾಟಿಕ್ಸ್ (3 ನಿ.52.57ಸೆ., ಕೂಟ ದಾಖಲೆ)

ಮಹಿಳೆಯರು: 50 ಮೀ. ಫ್ರೀಸ್ಟೈಲ್: ಶಾಲಿನಿ ಆರ್. ದೀಕ್ಷಿತ್ (ಡಿಎ, 27.72 ಸೆ). 100 ಮೀ. ಫ್ರೀಸ್ಟೈಲ್: ಶಿರಿನ್ (ಬಿಎಸಿ, 1 ನಿ.00.22 ಸೆ). 400 ಮೀ. ಫ್ರೀಸ್ಟೈಲ್: ಶಿರಿನ್ (ಬಿಎಸಿ (4 ನಿ.34.92 ಸೆ). 50 ಮೀ. ಬ್ಯಾಕ್ ಸ್ಟ್ರೋಕ್: ವಿಹಿತಾ ನಯನಾ (ಬಿಎಸಿ, 31.18 ಸೆ). 100 ಮೀ. ಬ್ಯಾಕ್ ಸ್ಟ್ರೋಕ್: ವಿಹಿತಾ ನಯನಾ (ಬಿಎಸಿ, 1 ನಿ.07.46 ಸೆ). 200 ಮೀ. ಬ್ಯಾಕ್ ಸ್ಟ್ರೋಕ್: ಎಸ್. ಲಕ್ಷ್ಯಾ (ಐಐಎಸ್, 2 ನಿ.46.31 ಸೆ). 100 ಮೀ. ಬಟರ್‌ಫ್ಲೈ: ಸುಹಾಸಿನಿ ಘೋಷ್ (ಡಿಎ, 1 ನಿ.06.77 ಸೆ). 200 ಮೀ. ಬಟರ್‌ಫ್ಲೈ: ಮಾನವಿ ವರ್ಮ (ಡಿಎ, 2 ನಿ.27.14 ಸೆ). 4x400 ಮೀ. ಮಿಡ್ಲೆ ರಿಲೆ: ಡಾಲ್ಫಿನ್ ಅಕ್ವಾಟಿಕ್ಸ್ (4ನಿ. 37.28ಸೆ)

ವೈಯಕ್ತಿಕ ಚಾಂಪಿಯನ್‌ಷಿಪ್: ಪುರುಷರು: ಅನೀಶ್ ಎಸ್. ಗೌಡ (ಬಿಎಸಿ, 40 ಪಾಯಿಂಟ್ಸ್), ಮಹಿಳೆಯರು: ಶಿರಿನ್ (ಬಿಎಸಿ, 33 ಪಾಯಿಂಟ್ಸ್)

ಮಯೂರ
ಕೊಂಡು ಓದಿ, ಓದಿಸಿ
ಸೆಪ್ಟೆಂಬರ್ 2024
ಮಯೂರ ವಿಶೇಷ
ಹರಿಶ್ಚಂದ್ರ ಮತ್ತು ಹಾರ್ವರ್ಡ್ –ಕೃಷ್ಣಮೂರ್ತಿ ಹನೂರು
ಕಮಲಾ ಹಂಪನಾ ವಾತ್ಸಲ್ಯಪಥ –ಕಡಿದಾಳ್ ಪ್ರಕಾಶ್
ಅಂಕಣಗಳು
ಆರಿಫ್ ರಾಜಾ ಅವರ ಕಾವ್ಯಸಂಕದಲ್ಲಿ ಟ್ಯುನಿಷಿಯಾದ ಫಾತ್ಮಾ ಕ್ರೌಮಾ
ಕಾಡಿಗೆ ಕಣ್ಣು ಕಲೀಮ್ ಉಲ್ಲಾ ಫ್ರೇಮಿಗೆ ಸಿಕ್ಕದ ಬಾಲದಂಡೆ ಹಕ್ಕಿ
ಪರಿಣ ಕುತೂಹಲ ಎಂ.ಎಸ್. ಶ್ರೀರಾಮ್ ಜೂರಿಯಂಚಿನ ಬದುಕು
ಮಾತುಕತೆ
‘ಕವಿತೆಯೆಂದರೆ ದುಷ್ಟಶಕ್ತಿಗಳಿಗೆ ಕೊಡುವ ಶಾಪ
ಹಿಂದಿಯ ಪ್ರಸಿದ್ಧ ಕವಿ ಅರುಣ್ ಕಮಲ್ ಸಂದರ್ಶನ
-ವಿಕ್ರಮ ವಿಸಾಜಿ
ಲಲಿತ ಮಂಟಪ
‘ನೀವು ಧ್ಯಾನದ ಸ್ಥಿತಿಯಲ್ಲಿ ಇದ್ದೀರಿ ಎಂದರೆ ಹುಡುಕಾಟದಲ್ಲಿ ಇದ್ದೀರಿ ಎಂದರ್ಥ
ಭರತನಾಟ್ಯ ಗುರು ರಮಾ ವೈದ್ಯನಾಥನ್ ಸಂದರ್ಶನ
ಕವಿತಾಯಾನ
● ಕಮಲಾಕರ ಕಡವೆ
● ಪ್ರೊ.ಟಿ.ಯಲ್ಲಪ್ಪ
● ಶಿಲ್ಪಾ ಮ್ಯಾಗೇರಿ
● ಫಣಿರಾಜ್
● ನಾ. ಮೊಗಸಾಲೆ
● ಚಿಂತಾಮಣಿ ಕೊಡ್ಲೆಕೆರೆ
● ಸುಧೀಂದ್ರ ಕುಮಾರ್
ನನ್ನ ಓದು
ಕರಾವಳಿಕಥನಗಳು: ತುಳು ಮಾತೃಕೆಗಳ ತಾತ್ವಿಕ ಓದು -ರಾಜಶೇಖರ ಹಳೆಮನೆ
ಪ್ರಬಂಧಗಳು
ಒಂದು ಸೊಳ್ಳೆಯ ಸ್ವಗತ -ವೆಂಕಟೇಶ ಮಾಚಕನೂರು
ಗ್ಯಾರಂಟಿ ಕೊಸರು ಕವಿಗೋಷ್ಠಿಯಲ್ಲಿ ಹೆಸರು -ಪ್ರಭಾಮಣಿ ನಾಗರಾಜ
ಕಥಾಕಾಲ
● ಮೊಗ್ಗಿ ಗಣೇಶ್
● ಪಾಲಗುಮ್ಮಿ ಪದ್ಮರಾಜು/ ಸ. ರಘುನಾಥ
● ಅನುರಾಧ ಪಿ.ಎಂ.
● ವಿನಾಯಕ ಅರಳಸುರಳಿ
● ಎಸ್. ಶೇಷಾದ್ರಿ ಕಿನಾರ
● ಗೀತಾ ಕುಂದಾಪುರ
● ಶೈಲಜಾ ವಿಜಯ್‌ಕುಮಾರ್
● ರವಿ ಮಡೋಡಿ
₹15
editormy@mayura.co.in
mayuraezine.com
/mayuramonthly
080-45557333/264

ಲುಸಾನ್ ಡೈಮಂಡ್ ಲೀಗ್ ಕೂಟ ● ಆ್ಯಂಡರ್ಸನ್ ಪೀಟರ್ಸ್ ಪ್ರಥಮ

ನೀರಜ್‌ಗೆ ಎರಡನೇ ಸ್ಥಾನ

ಲುಸಾನ್ (ಪಿಟಿಐ): ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ, ಗುರುವಾರ ನಡೆದ ಲುಸಾನ್ ಡೈಮಂಡ್ ಲೀಗ್ ಕೂಟದಲ್ಲಿ 89.49 ಮೀಟರ್ ಎಸೆತದೊಡನೆ ಎರಡನೇ ಸ್ಥಾನ ಪಡೆದರು. ಫಿಟ್ನೆಸ್ ಸಂದೇಹಗಳ ಹೊರತಾಗಿಯೂ ಅವರು ಛಲದ ಪ್ರದರ್ಶನ ನೀಡಿ ಅಂತಿಮ ಯತ್ನದಲ್ಲಿ ಎರಡನೇ ಸ್ಥಾನ ಒಲಿಸಿಕೊಂಡರು.

ಇದು 26 ವರ್ಷ ವಯಸ್ಸಿನ ನೀರಜ್ ಈ ಋತುವಿನಲ್ಲಿ ದಾಖಲಿಸಿದ ಉತ್ತಮ ಥ್ರೊ ಎನಿಸಿತು. ನಾಲ್ಕನೇ ಯತ್ನದವರೆಗೆ ಅವರು ನಾಲ್ಕನೇ ಸ್ಥಾನದಲ್ಲಿದ್ದರು. ಐದನೇ ಪ್ರಯತ್ನದಲ್ಲಿ 85.58 ಮೀ. ಎಸೆದರು. ಅಂತಿಮ ಯತ್ನದಲ್ಲಿ 89.49 ಮೀ. ಎಸೆದು ಎರಡನೇ ಸ್ಥಾನಕ್ಕೆ ಜಿಗಿದರು. ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡೆಗಳಲ್ಲಿ ಅವರು ಭರ್ಚಿಯನ್ನು 89.45 ಮೀ. ಎಸೆದಿದ್ದು, ಇಲ್ಲಿ ಸ್ವಲ್ಪ ಸುಧಾರಣೆ ಕಂಡಿದ್ದಾರೆ.

ಅವರಿಗೆ ಆರನೇ ಯತ್ನ ಕೈತಪ್ಪುವ ಭೀತಿಯಿತ್ತು. ಆದರೆ ಐದನೇ ಎಸೆತದಲ್ಲಿ 85.58 ಮೀ. ದಾಖಲಿಸಿದ್ದು ಅವರಿಗೆ ನೆರವಾಯಿತು. ಐದು ಯತ್ನಗಳ ಬಳಿಕ ಮೊದಲ ಮೂರು ಸ್ಥಾನದಲ್ಲಿರುವವರು ಮಾತ್ರ ಅಂತಿಮ (ಆರನೇ) ಥ್ರೊ ಅವಕಾಶ ಪಡೆಯುತ್ತಾರೆ.

ಎರಡು ಬಾರಿಯ ವಿಶ್ವ ಚಾಂಪಿಯನ್ ಹಾಗೂ ಪ್ಯಾರಿಸ್ ಕ್ರೀಡೆಗಳ ಕಂಚಿನ ಪದಕ ವಿಜೇತ ಆ್ಯಂಡರ್ಸನ್ ಪೀಟರ್ಸ್ (ಗ್ರೆನೆಡಾ) ಅವರು 90.61 ಮೀ. ಗಳ ದೈತ್ಯ ಥ್ರೊದೊಡನೆ ಅಗ್ರಸ್ಥಾನ ಪಡೆದರು. ಜರ್ಮನಿಯ ಜೂಲಿಯನ್ ವೇಬರ್ (87.08 ಮೀ.) ಮೂರನೇ ಸ್ಥಾನ ಗಳಿಸಿದರು.

‘ಆರಂಭದಲ್ಲಿ ಅಳುಕು ಇತ್ತು. ಆದರೆ ಥ್ರೊಗಳ ಬಗ್ಗೆ ಸಮಾಧಾನ ಇದೆ. ಅದರಲ್ಲೂ ಕೊನೆಯ ಯತ್ನದಲ್ಲಿ ನನ್ನ ಎರಡನೇ ಅತಿ ಉತ್ತಮ ಸಾಧನೆ ದಾಖಲಾಯಿತು. ಕಠಿಣ ಆರಂಭ. ಆದರೆ ಉತ್ತಮ ಪುನರಾಗಮನ. ಹೋರಾಟದ ಮನೋಭಾವ ಖುಷಿ ಮೂಡಿಸಿದೆ’ ಎಂದು ಚೋಪ್ರಾ ಸ್ಪರ್ಧೆಯ ಬಳಿಕ ಪ್ರತಿಕ್ರಿಯಿಸಿದರು.

ಕಳೆದ ವರ್ಷದುದ್ದಕ್ಕೂ ಲಯ ಕಂಡುಕೊಳ್ಳಲು ಪರದಾಡಿದ್ದ ಪೀಟರ್ಸ್ ಆರಂಭದಿಂದಲೇ ಅಗ್ರಸ್ಥಾನ ಕಾಪಾಡಿಕೊಂಡಿದ್ದರು. ಅಂತಿಮ ಯತ್ನದಲ್ಲಿ 90 ಮೀ.ಗೂ ಹೆಚ್ಚು ದೂರ ದಾಖಲಿಸಿದರು. ಆದರೆ ಅವರ ಅತ್ಯುತ್ತಮ ಸಾಧನೆ (2022ರಲ್ಲಿ 93.07 ಮೀ.) ಮೀರಿನಿಲ್ಲಲು ಆಗಲಿಲ್ಲ.

ಗುರುವಾರ ಎರಡನೇ ಸ್ಥಾನಕ್ಕೆ ದೊರೆತ ಏಳು ಪಾಯಿಂಟ್ಸ್ ಒಳಗೊಂಡಂತೆ ಚೋಪ್ರಾ ಡೈಮಂಡ್ ಲೀಗ್ ಪಟ್ಟಿಯಲ್ಲಿ ಈಗ ವೇಬರ್ ಜೊತೆ ತಲಾ 15 ಪಾಯಿಂಟ್‌ಗಳೊಡನೆ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ. ಪೀಟರ್ಸನ್ 21 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನದಲ್ಲಿದ್ದಾರೆ. 16 ಪಾಯಿಂಟ್ಸ್ ಕಲೆಹಾಕಿರುವ ಝೆಕ್ ರಿಪಬ್ಲಿಕ್‌ನ ಜೇಕಬ್ ವಾಡ್ಲೇಚ್ ಎರಡನೇ ಸ್ಥಾನದಲ್ಲಿದ್ದಾರೆ. ವಾಡ್ಲೇಚ್ ಇಲ್ಲಿ 82.03 ಥ್ರೊದೊಡನೆ ಏಳನೇ ಸ್ಥಾನಕ್ಕೆ ಸರಿದಿದ್ದರು.

ಒಲಿಂಪಿಕ್ಸ್‌ನಲ್ಲಿ 92.97 ಮೀ. ಥ್ರೊದೊಡನೆ ದಾಖಲೆ ಸ್ಥಾಪಿಸಿ ಚಿನ್ನ ಗೆದ್ದಿದ್ದ ಪಾಕಿಸ್ತಾನದ ಅರ್ಷದ್ ನದೀಮ್ ಇಲ್ಲಿ ಭಾಗವಹಿಸಿರಲಿಲ್ಲ. ಚೋಪ್ರಾ 2022 ಮತ್ತು 2023ರ ಲುಸಾನ್ ಲೆಗ್‌ನಲ್ಲಿ ಜಯಶಾಲಿಯಾಗಿದ್ದರು. 2023ರಲ್ಲಿ ಅವರು ಡೈಮಂಡ್ ಲೀಗ್ ಸರಣಿಯಲ್ಲಿ ರನ್ನರ್ ಅಪ್ ಆಗಿದ್ದರು. ಈ ವರ್ಷದ ಡೈಮಂಡ್ ಲೀಗ್ ಫೈನಲ್ ಸೆ. 14ರಂದು ಬ್ರಸೆಲ್ಸ್‌ನಲ್ಲಿ ನಡೆಯಲಿದೆ. ಅದಕ್ಕಿಂತ ಮುನ್ನ ಜ್ಯೂರಿಕ್‌ನಲ್ಲಿ ಡೈಮಂಡ್ ಲೀಗ್ ಕೂಡ ನಡೆಯಲಿದ್ದು, ಅಲ್ಲಿನ ಸ್ಪರ್ಧಾಪಟ್ಟಿಯಲ್ಲಿ ಪುರುಷರ ಜಾವೆಲಿನ್ ಥ್ರೊ ಕೂಡ ಇದೆ.

ಈ ವರ್ಷ ಇದುವರೆಗಿನ ಮೂರು ಡೈಮಂಡ್ ಲೀಗ್ ಕೂಟಗಳಲ್ಲಿ ನೀರಜ್ ಒಮ್ಮೆಯೂ ಅಗ್ರಸ್ಥಾನ ಪಡೆದಿಲ್ಲ.

ಕಳೆದ ವರ್ಷ ಬುಡಾಪೆಸ್ಟ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ನಂತರ ಅವರು ತೊಡೆಯ ಸ್ನಾಯು ನೋವಿನಿಂದ ಬಳಲುತ್ತಿದ್ದಾರೆ. ಆ ಕೂಟದಲ್ಲಿ ಅವರು ಚಿನ್ನ ಗೆದ್ದಿದ್ದರು.

ಲುಸಾನ್ ಡೈಮಂಡ್ ಲೀಗ್ ಕೂಟದಲ್ಲಿ ನೀರಜ್ ಚೋಪ್ರಾ ಜಾವೆಲಿನ್ ಎಸೆಯುತ್ತಿರುವುದು –ಎಎಫ್‌ಪಿ ಚಿತ್ರ

3 ಸೂಪರ್ ಓವರ್; ಹುಬ್ಬಳ್ಳಿ ವಿನ್ನರ್!

ರೋಚಕ ರಸದೌತಣ ಉಣಬಡಿಸಿದ ಪಂದ್ಯ ● ಬೆಂಗಳೂರು ದಿಟ್ಟ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಕ್ರವಾರ ರಾತ್ರಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರೋಚಕತೆ ಮುಗಿಲುಮುಟ್ಟಿತ್ತು. ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ‘ಟ್ರಿಪಲ್ ಸೂಪರ್ ಓವರ್’ ನಲ್ಲಿ ಪಂದ್ಯ ಫಲಿತಾಂಶ ನಿರ್ಧಾರವಾಗಿದ್ದೇ ಇದಕ್ಕೆ ಕಾರಣ. ಈ ಜಿದ್ದಾಜಿದ್ದಿಯಲ್ಲಿ ‘ಹಾಲಿ ಚಾಂಪಿಯನ್’ ಹುಬ್ಬಳ್ಳಿ ಟೈಗರ್ಸ್ ಜಯಿಸಿತು. ದಿಟ್ಟ ಹೋರಾಟ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ ಮನಗೆದ್ದಿತು.

ಮೂಲತಃ ಮೈಸೂರಿನವರಾದ ಮನ್ವಂತ್ ಕುಮಾರ್ ಅವರು ಹುಬ್ಬಳ್ಳಿ ಬಳಗದ ವಿಜಯದ ರೂವಾರಿಯಾದರು. ಬೌಲಿಂಗ್‌ನಲ್ಲಿಯೂ ಮಿಂಚಿದ್ದ ಅವರು ಮೂರನೇ ಸೂಪರ್ ಓವರ್‌ನಲ್ಲಿ ಎರಡು ಬೌಂಡರಿ ಹೊಡೆಯುವ ಮೂಲಕ ತಂಡವನ್ನು ಗೆಲ್ಲಿಸಿದರು.

ಮಧ್ಯಾಹ್ನ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ಬೆಂಗಳೂರು ಬ್ಲಾಸ್ಟರ್ಸ್ ತಂಡದ ನಾಯಕ ಮಯಂಕ್ ಅಗರವಾಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಹುಬ್ಬಳ್ಳಿ ತಂಡವು 20 ಓವರ್‌ಗಳಲ್ಲಿ 164 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಗುರಿ ಬೆನ್ನಟ್ಟಿದ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 164 ರನ್ ಗಳಿಸಿತು. ಮಯಂಕ್ (54; 34ಎಸೆತ, 4X9) ಅರ್ಧಶತಕ ಗಳಿಸಿದರು. ಬಲಗೈ ಮಧ್ಯಮವೇಗಿ ಮನ್ವಂತ್ (32ಕ್ಕೆ4) ಮತ್ತು ವಿದ್ವತ್ ಕಾವೇರಪ್ಪ (35ಕ್ಕೆ2) ಅವರು ಉತ್ತಮ ಬೌಲಿಂಗ್ ಮಾಡಿದರು. ಪಂದ್ಯ ಟೈ ಆಯಿತು.

ಮೊದಲ ಸೂಪರ್ ಓವರ್‌ನಲ್ಲಿ ಬೆಂಗಳೂರು ತಂಡವು 1 ವಿಕೆಟ್‌ಗೆ 10 ರನ್ ಗಳಿಸಿತು. ಅದರಲ್ಲಿ ಅನಿರುದ್ಧ ಜೋಶಿ ಒಂದು ಸಿಕ್ಸರ್ ಹೊಡೆದರು. ಅದಕ್ಕುತ್ತರವಾಗಿ ಹುಬ್ಬಳ್ಳಿ ತಂಡವೂ ಅಷ್ಟೇ ರನ್ ಗಳಿಸಿತು. ಮನೀಷ್ ಪಾಂಡೆ ಒಂದು ಸಿಕ್ಸರ್ ಗಳಿಸಿದರು. ಇದರಿಂದಾಗಿ ಈ ಓವರ್ ಟೈ ಆಯಿತು.

ಎರಡನೇ ಸೂಪರ್ ಓವರ್ ಆಡಿಸಲಾಯಿತು. ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ 8 ರನ್ ಮಾತ್ರ ಗಳಿಸಿತು. ಆದರೆ ಗುರಿ ಬೆನ್ನಟ್ಟಿದ ಬೆಂಗಳೂರು ತಂಡಕ್ಕೆ ವಿದ್ವತ್ ಅಡ್ಡಿಯಾದರು. ಮೊದಲ ಎಸೆತದಲ್ಲಿ ಚೇತನ್ ಅವರು ಬೌಂಡರಿ ಗಳಿಸಿದರು. ಆದರೆ ನಂತರ ಐದು ಎಸೆತಗಳಲ್ಲಿ ಕೇವಲ ನಾಲ್ಕು ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಇದರಿಂದಾಗಿ ಮತ್ತೆ ಸಮಬಲವಾಯಿತು.

ಮೂರನೇ ಸೂಪರ್ ಓವರ್ ಮತ್ತಷ್ಟು ರೋಚಕವಾಯಿತು. ಏಕೆಂದರೆ ಈ ಓವರ್ ಶುರುವಾದಾಗ ರಾತ್ರಿ 7.30 ದಾಟಿತ್ತು. 7ಕ್ಕೆ ಆರಂಭವಾಗಬೇಕಿದ್ದ ದಿನದ ಇನ್ನೊಂದು ಪಂದ್ಯ ವಿಳಂಬವಾಗಿತ್ತು. ಆದ್ದರಿಂದ ಜಯಿಸಲು ಉಭಯ ತಂಡಗಳಿಗೆ ಇದು ಕೊನೆ ಅವಕಾಶವಾಗಿತ್ತು. ಇಲ್ಲದಿದ್ದರೆ ಪಂದ್ಯ ಟೈ ಎಂದು ಘೋಷಿಸುವ ಸಾಧ್ಯತೆ ಇತ್ತು.

ಅದರೆ ಮನ್ವಂತ್ ಇದಕ್ಕೆ ಅವಕಾಶ ಕೊಡಲಿಲ್ಲ. ಈ ಓವರ್ ಬೌಲಿಂಗ್ ಮಾಡಿದ ಅವರು ಮೊದಲ ಐದು ಎಸೆತಗಳಲ್ಲಿ ಆರು ರನ್ ಕೊಟ್ಟಿದ್ದರು. ಒಂದು ವಿಕೆಟ್ ಕೂಡ ಪಡೆದಿದ್ದರು. ಆದರೆ ಕೊನೆಯ ಎಸೆತದಲ್ಲಿ ಶುಭಾಂಗ್ ಸಿಕ್ಸರ್‌ಗೆತ್ತಿದರು. ಇದರಿಂದಾಗಿ 12 ರನ್‌ಗಳ ಮೊತ್ತ ದಾಖಲಾಯಿತು. ಮನೀಷ್ ಜೊತೆಗೆ ಬ್ಯಾಟಿಂಗ್‌ಗೆ ಬಂದ ಮನ್ವಂತ್ ಎರಡನೇ ಎಸೆತ ಮತ್ತು ಕೊನೆಯ ಎಸೆತದಲ್ಲಿ ಒಂದೊಂದು ಬೌಂಡರಿ ಗಳಿಸಿ ಗೆಲುವಿನ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 164 (ಮೊಹಮ್ಮದ್ ತಹಾ 31, ಮನೀಷ್ ಪಾಂಡೆ 33, ಅನೀಶ್ವರ್ ಗೌತಮ್ 30, ಮನ್ವಂತ್ ಕುಮಾರ್ 27, ಲವೀಶ್ ಕುಮಾರ್ 17ಕ್ಕೆ5, ಕ್ರಾಂತಿಕುಮಾರ್ 33ಕ್ಕೆ2) **ಬೆಂಗಳೂರು ಬ್ಲಾಸ್ಟರ್ಸ್:** 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 164 (ಮಯಂಕ್ ಅಗರವಾಲ್ 54, ನಿರಂಜನ್ ನಾಯಕ 19, ಸೂರಜ್ ಅಹುಜಾ 26, ನವೀನ್ ಎಂ.ಜಿ 23, ವಿದ್ವತ್ ಕಾವೇರಪ್ಪ 35ಕ್ಕೆ2, ಎಲ್. ಮನ್ವಂತ್ ಕುಮಾರ್ 32ಕ್ಕೆ4, ಎಲ್. ಆರ್. ಕುಮಾರ್ 33ಕ್ಕೆ1) **ಫಲಿತಾಂಶ:** ಪಂದ್ಯ ಟೈ. ಹುಬ್ಬಳ್ಳಿ ಟೈಗರ್ಸ್‌ಗೆ 3ನೇ ಸೂಪರ್ ಓವರ್‌ನಲ್ಲಿ ಜಯ. **ಪಂದ್ಯದ ಆಟಗಾರ:** ಮನ್ವಂತ್ ಕುಮಾರ್.

ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 7ಕ್ಕೆ 150 (ಮ್ಯಾಕ್ನೀಲ್ ನೊರೊನ್ಹಾ 32, ಕೃಷ್ಣಮೂರ್ತಿ ಸಿದ್ಧಾರ್ಥ್ 29, ಶ್ರೇಯಸ್ ಗೋಪಾಲ್ 25; ಪೃಥ್ವಿರಾಜ್ ಶೇಖಾವತ್ 20ಕ್ಕೆ 1, ಪ್ರವೀಣ್ ದುಬೆ 34ಕ್ಕೆ 1). **ಗುಲ್ಬರ್ಗ ಮಿಸ್ಟಿಕ್ಸ್:** 19.3 ಓವರ್‌ಗಳಲ್ಲಿ 5ಕ್ಕೆ 152 (ಲವನೀತ್ ಸಿಸೋಡಿಯಾ 26, ಆರ್. ಸ್ಮರಣ್ ಔಟಾಗದೇ 40, ಪ್ರವೀಣ್ ದುಬೆ ಔಟಾಗದೇ 47; ಮ್ಯಾಕ್ನೀಲ್ ನೊರೊನ್ಹಾ 21ಕ್ಕೆ2). **ಪಂದ್ಯದ ಆಟಗಾರ:** ಪ್ರವೀಣ್ ದುಬೆ

ಇಂದಿನ ಪಂದ್ಯಗಳು
ಗುಲ್ಬರ್ಗ ಮಿಸ್ಟಿಕ್ಸ್– ಮೈಸೂರು ವಾರಿಯರ್ಸ್ (ಮಧ್ಯಾಹ್ನ 3)
ಶಿವಮೊಗ್ಗ ಲಯನ್ಸ್– ಹುಬ್ಬಳ್ಳಿ ಟೈಗರ್ಸ್ (ರಾತ್ರಿ 7)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ತಂಡದ ಜಯದ ರೂವಾರಿಯಾದ ಮನ್ವಂತ್‌ಕುಮಾರ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಪ್ರಜಾವಾಣಿ ಚಿತ್ರ:ಕೃಷ್ಣಕುಮಾರ್ ಪಿ.ಎಸ್.

ತಂಡಗಳು	ಪಂದ್ಯ	ಗೆಲುವು	ಸೋಲು	ಅಂಕ	ನೆಟ್ ರನ್‌ರೇಟ್
ಹುಬ್ಬಳ್ಳಿ ಟೈಗರ್ಸ್	6	5	1	10	-0.009
ಮೈಸೂರು ವಾರಿಯರ್ಸ್	6	4	2	8	1.048
ಬೆಂಗಳೂರು ಬ್ಲಾಸ್ಟರ್ಸ್	6	4	2	8	0.911
ಗುಲ್ಬರ್ಗ ಮಿಸ್ಟಿಕ್ಸ್	6	3	2	7	-0.078
ಮಂಗಳೂರು ಡ್ರ್ಯಾಗನ್ಸ್	6	1	4	3	-0.247
ಶಿವಮೊಗ್ಗ ಲಯನ್ಸ್	6	0	6	0	-2.246

ಗುಲ್ಬರ್ಗಕ್ಕೆ ಜಯ

ಪ್ರವೀಣ್ ದುಬೆ (ಔಟಾಗದೇ 47; 24ಎ) ಮತ್ತು ಆರ್.ಸ್ಮರಣ್ (ಔಟಾಗದೇ 40; 30ಎ) ಅವರ ಬ್ಯಾಟಿಂಗ್ ಬಲದಿಂದ ಗುಲ್ಬರ್ಗ ಮಿಸ್ಟಿಕ್ಸ್, ದಿನದ ಮತ್ತೊಂದು ಪಂದ್ಯದಲ್ಲಿ ಮಂಗಳೂರು ಡ್ರ್ಯಾಗನ್ಸ್ ವಿರುದ್ಧ ಐದು ವಿಕೆಟ್‌ಗಳ ಜಯ ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಮಂಗಳೂರು ತಂಡವು 20 ಓವರ್‌ಗಳಲ್ಲಿ ಏಳು ವಿಕೆಟ್‌ಗೆ 150 ರನ್ ಗಳಿಸಿತು. ಈ ಗುರಿಯನ್ನು ಬೆನ್ನತ್ತಿದ ಗುಲ್ಬರ್ಗ ತಂಡವು ಮೂರು ಎಸೆತ ಬಾಕಿ ಇರುವಂತೆ ಗೆಲುವಿನ ದಡ ಸೇರಿತು. 75 ರನ್‌ಗೆ ಐದು ವಿಕೆಟ್ ಕಳೆದುಕೊಂಡು ಸಂಕಷ್ಟದ ಸ್ಥಿತಿಯಲ್ಲಿದ್ದ ತಂಡಕ್ಕೆ ಪ್ರವೀಣ್ ಮತ್ತು ಸ್ಮರಣ್ ಆರನೇ ವಿಕೆಟ್‌ಗೆ ಮುರಿಯದ 77 ರನ್ ಸೇರಿಸಿ ಗೆಲುವಿನ ರೂವಾರಿಗಳಾದರು.

ಸಂಕ್ಷಿಪ್ತ ಸುದ್ದಿ

ಟೆಸ್ಟ್ ಉಳಿವಿಗಾಗಿ ಐಸಿಸಿ ವಿಶೇಷ ಯೋಜನೆ; ಚಿಂತನೆ

ಸಿಡ್ನಿ (ಪಿಟಿಐ): ಟೆಸ್ಟ್ ಕ್ರಿಕೆಟ್ ಮಾದರಿಯನ್ನು ಉಳಿಸಿ ಬೆಳೆಸುವ ಉದ್ದೇಶಕ್ಕಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ₹ 125 ಕೋಟಿಯನ್ನು ಮೀಸಲಿಡಲು ಯೋಜಿಸಿದೆ.

ಟೆಸ್ಟ್ ಆಟಗಾರರ ಪಂದ್ಯ ಶುಲ್ಕ ಮತ್ತಿತರ ಸೌಲಭ್ಯಗಳನ್ನು ಹೆಚ್ಚಿಸಲು ಹಾಗೂ ಆಟಗಾರರು ಟಿ20 ಫ್ರ್ಯಾಂಚೈಸಿ ಲೀಗ್‌ಗಳತ್ತ ವಲಸೆ ಹೋಗುವುದನ್ನು ತಡೆಯಲು ಈ ನಿಧಿ ಬಳಕೆಯಾಗಬೇಕು ಎಂಬ ಪ್ರಸ್ತಾವವನ್ನು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಸಲ್ಲಿಸಿದೆ. ಐಸಿಸಿಯ ಅಧ್ಯಕ್ಷ ಹುದ್ದೆಗೇರಲು ಸ್ಪರ್ಧೆಯಲ್ಲಿರುವ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರ ಬೆಂಬಲವು ಇದಕ್ಕೆ ಇದೆ ಎಂದು ‘ದ ಸಿಡ್ನಿ ಮಾರ್ನಿಂಗ್ ಹೆರಾಲ್ಡ್’ ಪ್ರಕಟಿಸಿದೆ.

ಈ ಯೋಜನೆಯಲ್ಲಿ ಆಟಗಾರರು ಈಗ ಪಡೆಯುತ್ತಿರುವ ಪಂದ್ಯದ ಶುಲ್ಕದಲ್ಲಿ ಹೆಚ್ಚಳವಾಗುವುದು. ವಿದೇಶ ಪ್ರವಾಸಗಳಿಗೆ ಹೆಚ್ಚು ಸೌಲಭ್ಯಗಳು ನೀಡಲಾಗುವುದು. ಆರ್ಥಿಕ ಸಂಕಷ್ಟದಲ್ಲಿರುವ ವೆಸ್ಟ್ ಇಂಡೀಸ್‌ನಂತಹ ರಾಷ್ಟ್ರೀಯ ಕ್ರಿಕೆಟ್ ಮಂಡಳಿಗಳಿಗೆ ಇದರಿಂದ ಅನುಕೂಲವಾಗಲಿದೆ.

‘ಈ ಯೋಜನೆ ಕಾರ್ಯಗತವಾದರೆ ಟೆಸ್ಟ್ ಆಡುವ ಎಲ್ಲ ಆಟಗಾರರಿಗೂ ಕನಿಷ್ಠ ಸಂಭಾವನೆ ಲಭಿಸಲಿದೆ. ಟೆಸ್ಟ್ ಕ್ರಿಕೆಟ್ ಉಳಿವಿಗಾಗಿ ಮಹತ್ವದ ಹೆಜ್ಜೆ ಇಡುತ್ತಿರುವುದು ಸಂತಸವಾಗಿದೆ’ ಎಂದು ಕ್ರಿಕೆಟ್ ಆಸ್ಟ್ರೇಲಿಯಾದ ಚೇರ್ಮನ್ ಮೈಕ್ ಬೇರ್ಡ್ ಹೇಳಿದ್ದಾರೆ. ಅವರೇ ಕಳೆದ ಜನವರಿಯಲ್ಲಿ ಈ ಪ್ರಸ್ತಾವ ಸಲ್ಲಿಸಿದ್ದರು.

ಯುವ ಫುಟ್‌ಬಾಲ್: ಸೆಮಿಫೈನಲ್‌ಗೆ ಭಾರತ

ಕಠ್ಮಂಡು (ಪಿಟಿಐ): ಮಂಗ್ಲೆಂನ್‌ತಾಂಗ್ ಕಿಪ್ಜೆನ್ ಅವರು ಕೊನೆಗಳಿಗೆಯಲ್ಲಿ ಗಳಿಸಿದ ಗೋಲಿನ ನೆರವಿನಿಂದ ಭಾರತ ತಂಡ 1–0 ಯಿಂದ ಮಾಲ್ಡೀವ್ಸ್ ತಂಡವನ್ನು ಸೋಲಿಸಿ ಸ್ಯಾಫ್ 20 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್ ಫೈನಲ್ ತಲುಪಿತು.

ಶುಕ್ರವಾರ ನಡೆದ ‘ಬಿ’ ಗುಂಪಿನ ಈ ಅಂತಿಮ ಪಂದ್ಯದ 95ನೇ ನಿಮಿಷ ಕಿಪ್ಜೆನ್ ಅಮೋಘ ರೀತಿ ಗೋಲು ಹೊಡೆದರು. ಇದರಿಂದ ‘ಬ್ಲೂ ಕೋಲ್ಟ್ಸ್’ ತಂಡ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಸೋಮವಾರ ನಡೆಯುವ ಪಂದ್ಯದಲ್ಲಿ ಭಾರತ ಕಿರಿಯರ ತಂಡ, ‘ಎ’ ಗುಂಪಿನಲ್ಲಿ ರನ್ನರ್ ಅಪ್ ಆಗಿರುವ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ಕುಸ್ತಿ: ಕಾಜಲ್‌ಗೆ ಚಿನ್ನ

ಅಮ್ಮಾನ್ (ಜೋರ್ಡಾನ್), (ಪಿಟಿಐ): ಇಲ್ಲಿ ನಡೆಯುತ್ತಿರುವ ವಿಶ್ವ 17 ವರ್ಷದೊಳಗಿನವರ ಕುಸ್ತಿ ಚಾಂಪಿಯನ್ ಷಿಪ್‌ನಲ್ಲಿ ಭಾರತದ ಮಹಿಳಾ ಸ್ಪರ್ಧಿಗಳ ಪ್ರಾಬಲ್ಯ ಮುಂದುವರಿದಿದೆ. ಶುಕ್ರವಾರ 69 ಕೆಜಿ ವಿಭಾಗದಲ್ಲಿ ಕಾಜಲ್ ಚಿನ್ನದ ಪದಕ ಗೆದ್ದರು.

ಫೈನಲ್‌ನಲ್ಲಿ ಕಾಜಲ್ 9–2ರಿಂದ ಉಕ್ರೇನ್‌ನ ಒಲೆಕ್ಸಾಂಡ್ರಾ ರೈಬಾಕ್ ಅವರನ್ನು ಮಣಿಸಿದರು. ಈ ಮೂಲಕ ಟೂರ್ನಿಯಲ್ಲಿ ಚಿನ್ನ ಗೆದ್ದ ಐದನೇ ಮಹಿಳಾ ಕುಸ್ತಿಪಟು ಎನಿಸಿಕೊಂಡರು.

ಭಾರತದ ಮತ್ತೊಬ್ಬ ಸ್ಪರ್ಧಿ ಶ್ರುತಿಕಾ (46 ಕೆಜಿ) ಬೆಳ್ಳಿಗೆ ತೃಪ್ತಿಪಟ್ಟರು. ಅವರು ಫೈನಲ್‌ನಲ್ಲಿ ಜಪಾನ್‌ನ ಯುಯು ಕಟ್ಸುಮೆ ಅವರಿಗೆ ಮಣಿದರು. ರಾಜ್ ಬಾಲಾ (40 ಕೆಜಿ) ಮತ್ತು ಮುಸ್ಕಾನ್ (53 ಕೆಜಿ) ಕಂಚಿನ ಪದಕ ಗೆದ್ದರು.

ಪುರುಷರ ಫ್ರೀಸ್ಟೈಲ್ ವಿಭಾಗದಲ್ಲಿ ಭಾರತದ ಕುಸ್ತಿಪಟುಗಳು ಶುಕ್ರವಾರ ನಿರಾಸೆ ಮೂಡಿಸಿದರು. ಐದು ಸ್ಪರ್ಧೆಗಳಲ್ಲಿ ಯಾರಿಗೂ ಸೆಮಿಫೈನಲ್ ತಲುಪಲು ಸಾಧ್ಯವಾಗಲಿಲ್ಲ.

ಅದಿತಿ ಕುಮಾರಿ (43 ಕೆಜಿ), ನೇಹಾ (57 ಕೆಜಿ), ಪುಲ್ಕಿತ್ (65 ಕೆಜಿ) ಮತ್ತು ಮಾನ್ಸಿ ಲಾಥರ್ (73 ಕೆಜಿ) ಗುರುವಾರ ಚಿನ್ನದ ಪದಕ ಗೆದ್ದಿದ್ದರು.

ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿ

ಸೆಮಿಗೆ ಬಿಎಫ್‌ಸಿ, ಮೋಹನ್ ಬಾಗನ್

ಕೋಲ್ಕತ್ತ (ಪಿಟಿಐ): ಅರ್ಜೆಂಟೀನಾದವರಾದ ಜಾರ್ಜ್ ಪೆರೀರಾ ಡಯಾಝ್ ಅವರು ಇಂಜುರಿ ಅವಧಿಯಲ್ಲಿ ಗಳಿಸಿದ ಗೋಲಿನಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡ, ಡುರಾಂಡ್ ಕಪ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ತಂಡವನ್ನು 1–0ರಿಂದ ಸೋಲಿಸಿತು.

ಯುವಭಾರತಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಈ ಪಂದ್ಯ ಶೂಟೌಟ್‌ಗೆ ಹೋಗುವಂತೆ ಕಾಣುವಾಗಲೇ 90+4ನೇ ನಿಮಿಷ ಪೆರೀರಾ ಗಳಿಸಿದ ಗೋಲು ಸುನಿಲ್ ಚೆಟ್ರಿ ಬಳಗದ ಪಾಲಿಗೆ ನಿರ್ಣಾಯಕವಾಯಿತು. ಕಾರ್ನರ್‌ನಲ್ಲಿ ಚೆಟ್ರಿ ಅವರಿಂದ ಚೆಂಡನ್ನು ಪಡೆದ ಪೆರೀರಾ ಗುರಿತಲುಪಿಸುವಲ್ಲಿ ಎಡವಲಿಲ್ಲ.

ಬಾಗನ್‌ಗೆ ಜಯ: ಇದಕ್ಕೆ ಮೊದಲು ಜಮ್ಷೆಡ್‌ಪುರದ ಜೆಆರ್‌ಡಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಕ್ವಾರ್ಟರ್‌ಫೈನಲ್ ಪಂದ್ಯ ‘ಸಡನ್ ಡೆತ್’ವರೆಗೆ ಬೆಳೆದು, ಕಳೆದ ಸಲದ ವಿಜೇತ ಮೋಹನ್ ಬಾಗನ್ ತಂಡ 6–5 ರಿಂದ ಪಂಜಾಬ್ ಎಫ್‌ಸಿ ತಂಡದ ಮೇಲೆ ಗೆಲುವು ಪಡೆದು ಸೆಮಿಗೆ ಮುನ್ನಡೆಯಿತು.

ನಿಗದಿ ಅವಧಿಯ ಆಟ ಮುಗಿದಾಗ ಸ್ಕೋರ್ 3–3ರಲ್ಲಿ ಸಮನಾಯಿತು. ಶೂಟೌಟ್‌ನಲ್ಲೂ 3–3 ಸಮಬಲ ಆಯಿತು. ಹೀಗಾಗಿ ಸಡನ್ ಡೆತ್ ಮೊರೆಹೋಗಬೇಕಾಯಿತು. ಲುಕಾ ಮೇಸೆನ್ (17ನೇ ನಿಮಿಷ, ಪೆನಾಲ್ಟಿ ಮೂಲಕ) ಪಂಜಾಬ್‌ಗೆ ಮುನ್ನಡೆ ಒದಗಿಸಿದ್ದರು. ಆದರೆ ವಿರಾಮಕ್ಕೆ ಕೆಲವೇ ಕ್ಷಣಗಳ ಮೊದಲು ಸುಹೇಲ್ ಭಟ್ ಬಾಗನ್ ಪರ ಸಮ ಮಾಡಿದರು. ವಿರಾಮದ ವೇಳೆ ಸ್ಕೋರ್ 1–1 ರಲ್ಲಿ ಸಮನಾಗಿತ್ತು.

ಮನ್ವೀರ್ ಸಿಂಗ್ 48ನೇ ನಿಮಿಷ ಬಾಗನ್‌ಗೆ ಮುನ್ನಡೆ ಒದಗಿಸಿದರು. ಆದರೆ 71 ನಿಮಿಷಗಳಾಗುವಷ್ಟರಲ್ಲಿ ಪಂಜಾಬ್ 3–2 ಮುನ್ನಡೆ ಪಡೆಯಿತು. 63ನೇ ನಿಮಿಷ ಫಿಲಿಪ್ ಮ್ರಿಲ್‌ಜಾಕ್, 71ನೇ ನಿಮಿಷ ನಾರ್ಬರ್ಟೊ ಎಝೆಕಿಲ್ ವಿಡಾಲ್ ಪಂಜಾಬ್‌ಗೆ ಮೇಲುಗೈ ಒದಗಿಸಿದರು. ಆದರೆ ಎಂಟು ನಿಮಿಷಗಳ ನಂತರ ಆಸ್ಟ್ರೇಲಿಯಾದ ಆಟಗಾರ ಜೇಸನ್ ಕಮಿಂಗ್ಸ್ ಬಾಗನ್ ತಂಡ 3–3 ಸಮಮಾಡಿಕೊಳ್ಳಲು ನೆರವಾದರು.

ಆಗಸ್ಟ್ 25ರಂದು ನಡೆಯುವ ಮೊದಲ ಸೆಮಿಫೈನಲ್‌ನಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ, ಶಿಲ್ಲಾಂಗ್ ಲಜಾಂಗ್ ಎಫ್‌ಸಿ ತಂಡವನ್ನು ಎದುರಿಸಲಿದೆ. 27ರಂದು ನಡೆಯುವ ಇನ್ನೊಂದು ಸೆಮಿಫೈನಲ್‌ನಲ್ಲಿ ಬೆಂಗಳೂರು ಎಫ್‌ಸಿ, ಮೋಹನ್ ಬಾಗನ್ ವಿರುದ್ಧ ಆಡಲಿದೆ.

ಬಿಎಫ್‌ಸಿಯ ಸುರೇಶ್ ವಾಂಗ್ಜಮ್ (ಬಲ) ಮತ್ತು ಕೇರಳ ಬ್ಲಾಸ್ಟರ್ಸ್‌ನ ಆಟಗಾರನ ಮಧ್ಯೆ ಚೆಂಡಿಗಾಗಿ ಪೈಪೋಟಿ –ಪಿಟಿಐ ಚಿತ್ರ

ಮೊದಲ ಟೆಸ್ಟ್: ಬಾಂಗ್ಲಾ ಹೋರಾಟ

ರಾವಲ್ಪಿಂಡಿ (ಎಎಫ್‌ಪಿ): ಆರಂಭ ಆಟಗಾರ ಶಾದ್ಮನ್ ಇಸ್ಲಾಂ ಅವರು ಕೇವಲ ಏಳು ರನ್‌ಗಳಿಂದ ಶತಕ ತಪ್ಪಿಸಿಕೊಂಡರೂ, ಬಾಂಗ್ಲಾದೇಶ ತಂಡ, ಮೊದಲ ಕ್ರಿಕೆಟ್ ಟೆಸ್ಟ್‌ನ ಮೂರನೆ ದಿನವಾದ ಶುಕ್ರವಾರ ಪಾಕಿಸ್ತಾನದ ಎದುರು ದಿಟ್ಟ ಹೋರಾಟ ಪ್ರದರ್ಶಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಪಾಕಿಸ್ತಾನ 6 ವಿಕೆಟ್‌ಗೆ 448 ರನ್ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಾಕಿಸ್ತಾನ: 6 ವಿಕೆಟ್‌ಗೆ 448 ಡಿಕ್ಲೇರ್; ಬಾಂಗ್ಲಾದೇಶ: 92 ಓವರುಗಳಲ್ಲಿ 5 ವಿಕೆಟ್‌ಗೆ 316 (ಶಾದ್ಮನ್ ಇಸ್ಲಾಂ 93,, ಮುಷ್ಫಿಕುರ್ ರಹೀಂ ಔಟಾಗದೇ 55; ಖುರ್ರಂ ಶಹಜಾದ್ 47ಕ್ಕೆ2).